# ಜಯಕರವಾದ
# ಕ್ರೈಸ್ತ ಜೀವನ



ನಮ್ಮನ್ನು ಕ್ರಿಸ್ತನ ಸಮೀಪಕ್ಕೆ ನಡೆಸುವ ಸತ್ಯವೇದ ಆಧಾರಿತ ಪ್ರಾರ್ಥನೆಗಳು

# ಹಕ್ಕು ಸ್ವಾಮ್ಯ

Scripture quotations are from The Holy Bible, Kannada - O.V. Published by: The Bible Society of India. Used by permission. All rights reserved.

ದೇವರ ವಾಕ್ಯಗಳ ಉಲ್ಲೇಖನದ ಹಕ್ಕು ಸ್ವಾಮ್ಯವನ್ನು ಮಾತ್ರ ಪಡೆದುಕೊಂಡಿದೆ. ಉಳಿದ ಸಾಹಿತ್ಯಗಳು ಉಚಿತ ಹಕ್ಕು ಸ್ವಾಮ್ಯವನ್ನು ಹೊಂದಿರುತ್ತದೆ.

ಈ ಸಾಹಿತ್ಯದ ರಚನೆಕಾರರು, ಮುದ್ರಣಕಾರರು ಮತ್ತು ವಿತರಕರು ಯಾವುದೇ ವೈದ್ಯಕೀಯ ಅಥವಾ ಮಾನಸಿಕ ಸೇವೆಯನ್ನು ಒದಗಿಸುವುದಿಲ್ಲ. ಈ ಪ್ರತಿಯಲ್ಲಿರುವ ಸಾಹಿತ್ಯವು ವೈದ್ಯಕೀಯ ಮತ್ತು ಮಾನಸಿಕ ಸಮಸ್ಯೆಗಳನ್ನು ಗುರುತಿಸುವ ಮಾರ್ಗದರ್ಶಿಯಾಗಿರುತ್ತದೆ. ಓದುಗರ ಶಾರೀರಿಕ ಹಾಗೂ ಮಾನಸಿಕ ಸಮಸ್ಯೆಗಳಿಗೆ ಚಿಕಿತ್ಸೆಯ ಅಗತ್ಯವಿದ್ದಲ್ಲಿ ವೈದ್ಯರ ಸಹಾಯ ಪಡೆಯಲಿ.

ರಚನೆಕಾರರು: ಎ.ಮತ್ತು ಜೆ.ಎಸ್. ಡೇವಿಡ್‌ಸನ್

ಕನ್ನಡ ಭಾಷೆಗೆ ಭಾಷಾಂತರಿಸಿದವರು – ಫಿಲಿಪ್ ಬೆಂಜಮಿನ್

ಜಯಕರವಾದ ಕ್ರೈಸ್ತ ಜೀವನ – ಕನ್ನಡ 1ನೇ ಮುದ್ರಣ – 2017
Victorious Christian Life - Kannada version - 2017

# ವಿಷಯಾನುಕ್ರಮ

| | ಪುಟ ಸಂಖ್ಯೆ |
|---|---|
| **ಕೃತಜ್ಞಾರ್ಪಣೆಗಳು** | 4 |
| **ಈ ಪುಸ್ತಕದ ಹಿನ್ನೆಲೆ** | 5 |
| **ಪೀಠಿಕೆ** | 7 |
| **ಮಾನಸಾಂತರ** | 14 |
| **ಕ್ಷಮಿಸುವಿಕೆ** | 25 |
| **ಪಶ್ಚಾತ್ತಾಪ ಹಾಗೂ ಕ್ಷಮಾಪಣೆಗಳ ಆಳಕ್ಕೆ ಇಳಿಯುವಿಕೆ** | 33 |
| ಆತ್ಮೀಕವಲ್ಲದ ಸಂಬಂಧಗಳಿಂದ ಬಿಡುಗಡೆ | 34 |
| ಖಂಡನಾತ್ಮಕವಾದ ತೀರ್ಪುಗಳಿಂದ ವಿಮುಕ್ತಿ | 39 |
| ನಕಾರಾತ್ಮಕ ಮಾತುಗಳಿಂದ ಬಿಡುಗಡೆ | 45 |
| ಹಣಕಾಸಿನ ಸಮಸ್ಯೆಗಳಿಂದ ವಿಮುಕ್ತಿ | 51 |
| ದೈವೀಕ ಸ್ವಾಸ್ಥ್ಯತೆಗೆ ತಿರುಗಿ ಬಾಧ್ಯಸ್ಥರಾಗುವುದು | 56 |
| **ದೀಕ್ಷಾಸ್ನಾನಗಳು** | 65 |
| **ದೇವರಿಂದ ಕೇಳಿಸಿಕೊಂಡು ಅದಕ್ಕೆ ವಿಧೇಯರಾಗುವಿಕೆ** | 70 |
| **ಪ್ರಾರ್ಥನಾ ಸೇವೆಗಾಗಿ ಗಮನಿಸಬೇಕಾದ ಪ್ರಾಯೋಗಿಕ ವಿಷಯಗಳು** | 77 |
| ಪ್ರಾರ್ಥನಾ ಸೇವೆಯ ಬಗ್ಗೆ ಮಾರ್ಗಸೂಚಿಗಳು | 77 |
| ಮಕ್ಕಳ ಮಧ್ಯದ ಸೇವೆಗೆ ಅಗತ್ಯವಿರುವ ಇತರೆ ಮಾರ್ಗಸೂಚಿಗಳು | 80 |
| ಬಿಡುಗಡೆಗಾಗಿನ ಇತರೆ ಮಾರ್ಗದರ್ಶಿಗಳು | 81 |
| ಸೇವೆಯ ಕಾಲಾವಧಿಯ ಕುರಿತು ಸಲಹೆಗಳು | 83 |
| **ಇತರೆ ವಿಷಯಗಳು** | 86 |
| ಪಶ್ಚಾತ್ತಾಪದ ಪಟ್ಟಿ – ಹೊಸ ಒಡಂಬಡಿಕೆ | 87 |
| ಪಶ್ಚಾತ್ತಾಪ ಪಡಬೇಕಿರುವ ಕೆಲವು ಸಾಮಾನ್ಯ ವಿಷಯಗಳು | 89 |
| ನಮ್ಮ ಕುಟುಂಬ ಚರಿತ್ರೆಯ ಬಗ್ಗೆ ಚಿತ್ರಪಟವನ್ನು ರೂಪಿಸುವುದು | 95 |
| ಪೂರ್ವಜರಿಗಾಗಿನ ಆಶೀರ್ವಾದಗಳ ಹೊಂದುವಿಕೆಗಾಗಿನ ಪ್ರಾರ್ಥನೆ | 99 |
| ನಾನೀಗ ಕ್ರಿಸ್ತನಲ್ಲಿ ಯಾರಾಗಿರುವೆನು | 102 |
| ಸತ್ಯವೇದವನ್ನು ಅಧ್ಯಯನ ಮಾಡುವ ಕ್ರಮ | 105 |
| ಸೌಖ್ಯಕ್ಕಾಗಿನ ಪ್ರಾರ್ಥನೆ | 107 |
| ಇತರರೊಂದಿಗೂ ದೇವರೊಂದಿಗೂ ಸರಿಯಾದ ಸಂಬಂಧ ಹೊಂದುವಿಕೆ | 111 |
| ಹಣದ ಬಗ್ಗೆ ಸತ್ಯವೇದ ಹೇಳುತ್ತಿರುವದೇನು | 112 |

# ಕೃತಜ್ಞತಾರ್ಪಣೆಗಳು

ಲೇಖಕರು ಬಹಳಷ್ಟು ಕರಡು ಪ್ರತಿಗಳನ್ನು ಸಂಗ್ರಹಿಸಿ ಆ ಮೂಲಕ ಈ ಮಹತ್ವಾಕಾಂಕ್ಷೆಯ ಅತ್ಯುತ್ತಮವಾದ ಪುಸ್ತಕವನ್ನು ಈ ವಿಧಾನದಲ್ಲಿ ಹೊರತರಲು ಅಗತ್ಯವಿದ್ದ ಎಲ್ಲಾ ರೀತಿಯ ಪ್ರೇರೇಪಣೆ –ಪ್ರೋತ್ಸಾಹವನ್ನು ದಯಪಾಲಿಸಿದ ಸರ್ವಶಕ್ತನಾದ ದೇವರಿಗೆ ಪ್ರಥಮವಾಗಿ ಚಿರಋಣಿಗಳಾಗಿರುವರು.

ಈ ಶ್ರೇಷ್ಠ ಕಾರ್ಯಕ್ಕಾಗಿ ಅವರನ್ನು ಪ್ರೇರೇಪಿಸಿದ ಎಲ್ಲೆನ್ ಮಿನಿಸ್ಟ್ರೀಸ್‌ರವರಿಗೂ ಇವರೊಂದಿಗೆ ಎಲೈಜಾ ಹೌಸ್ ಸೇವೆಯ ಸ್ಥಾಪಕರಾಗಿರುವ ಜಾನ್ ಹಾಗೂ ಪೌಲಾ ಸ್ಯಾಂಡ್‌ಫೋರ್ಡ್‌ರವರಿಗೂ ವಂದನೆಗಳು. ಅವರು ಆರಂಭಿಸಿರುವ ಸೇವೆಯೂ ಸಹ ನಮಗೆ ಬಹಳಷ್ಟು ಪ್ರೋತ್ಸಾಹ ಹಾಗೂ ನಿರ್ದೇಶನಗಳನ್ನು ಕೊಟ್ಟಿರುತ್ತದೆ.

# ಈ ಪುಸ್ತಕದ ಹಿನ್ನೆಲೆ

ನಾನು 11 ವರ್ಷದವಳಾಗಿದ್ದಾಗ ಹೊಸದಾಗಿ ಹುಟ್ಟಿದ ಅನುಭವವನ್ನು ಹೊಂದಿದೆನು. ಆನಂತರದ ಕೆಲವು ವರ್ಷಗಳಲ್ಲೇ ಪವಿತ್ರಾತ್ಮನಿಂದ ತುಂಬಿಸಲ್ಪಟ್ಟವಳಾಗಿ ನಾನಾ ರೋಗಗಳನ್ನು ವಾಸಿಮಾಡುವ ವರವನ್ನೂ ಹೊಂದಿದವಳಾದ ನಾನು ಕರ್ತನಿಗಾಗಿ ಜೀವಿಸುವವಳಾಗಿದ್ದೆನು. ಆದರೆ ದುಃಖಕರವಾದ ವಿಷಯವೆಂದರೆ ನಾನು ಶಾಲೆಯನ್ನು ಬಿಡುವ ಕಾಲದಲ್ಲಾಗಲೇ ಯೇಸುವಿನ ಮೇಲಣ ನನ್ನ ಪ್ರೀತಿಯು ಕ್ಷೀಣವಾಗಿ ಕುಗ್ಗಿ ಹೋಗಿತ್ತು. ನಂತರದ ಮೂರು ದಶಕಗಳನ್ನು ಕ್ರಿಸ್ತನಿಂದ ದೂರವಾದ, ಉಗುರು ಬೆಚ್ಚಗಿನ ಅನುಭವದವಳೂ, ಬಗೆಹರಿಸಲಾಗದ ಅನೇಕ ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಂಡು ನಿರಾಶಳಾಗಿ ಜೀವಿಸಿದೆನು. ಅದು ಕಾನಾನಿಗೆ ಪ್ರಯಾಣಿಸುತ್ತಿದ್ದ ಇಸ್ರಾಯೇಲ್ಯರಂತೆ ವಾಗ್ದಾನ ದೇಶವನ್ನು ಸೇರಲಾರದೆ ಕೇವಲ ಮರುಭೂಮಿಯನ್ನು ಸುತ್ತುವವಳಂತಿತ್ತು. ನನ್ನನ್ನು ಒಬ್ಬ ಪಾಪಿಯೆಂದು ಮನವರಿಕೆ ಮಾಡಿಕೊಡಲು ಸಾಕಷ್ಟು ಸಾಕ್ಷ್ಯಾಧಾರಗಳೇ ಇರಲಿಲ್ಲ. ಆದರೆ ನನ್ನೊಳಗೆ ಈ ವಿಷಯದಲ್ಲಿ ಕೆಲವು ಸನ್ನಿವೇಶಗಳಲ್ಲಿ ತಪ್ಪಿನ ಪ್ರಜ್ಞೆ ಇದ್ದರೂ ಅನೇಕ ಬಾರಿ ಅದರ ಬಗ್ಗೆ ನಿರ್ಲಕ್ಷ್ಯವಹಿಸಿದ್ದೆನು. ಆದರೆ ನನ್ನ ತಂದೆ ತೀರಿಕೊಂಡ ನಂತರವಷ್ಟೇ ಮರಣಾನಂತರದ ಜೀವಿತದ ಬಗ್ಗೆಯೂ ಒಬ್ಬ ವ್ಯಕ್ತಿಯು ಯಾವ ಆಧಾರದ ಮೇಲೆ ಪರಲೋಕವನ್ನು ಪ್ರವೇಶಿಸಬಲ್ಲ ಎಂಬುದನ್ನೂ ಚಿಂತಿಸಲಾರಂಭಿಸಿದೆನು. ಇದು ಮತ್ತೊಮ್ಮೆ ನನ್ನನ್ನು ಯೇಸುವಿನಲ್ಲಿ ಆಸಕ್ತಿಯನ್ನು ಹುಟ್ಟಿಸಿತ್ತು. ಆದರೆ ನಾನು ಈಗಾಗಲೇ ಪಾಪದಲ್ಲೇ ಜೀವಿಸುವವಳಾಗಿದ್ದು ಅಲ್ಲಿಂದ ಹೊರಬರುವ ಮಾರ್ಗವನ್ನು ಅರಿಯದವಳಾಗಿದ್ದೆನು.

ನಾಮದೇಯ ಕ್ರೈಸ್ತನೊಬ್ಬನನ್ನು ಮದುವೆಯಾಗಿದ್ದ ನಾನು ಆರಂಭದಿಂದಲೇ ವೈವಾಹಿಕ ಜೀವನದಲ್ಲಿ ಸಂಕಟದಲ್ಲಿದ್ದೆ ಆದರೆ ಕ್ರಿಸ್ತನ ಬಳಿಗೆ ಹಿಂತಿರುಗಿ ಬರುವುದಕ್ಕಾಗಿ ದೇವರು ಈ ಸನ್ನಿವೇಶವನ್ನು ಉಪಯೋಗಿಸಿದನು. ನಂತರದ ದಿನಗಳಲ್ಲಿ ಸತ್ಯವೇದದ ಅಧ್ಯಯನ ಹಾಗೂ ಪ್ರಾರ್ಥನೆಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟೆನು. ಸಂಕಷ್ಟದ ಸಮಯದಲ್ಲಿ ನಮ್ಮ ವೈವಾಹಿಕ ಜೀವನದ ಸಂರಕ್ಷಣೆಗಾಗಿ ಪ್ರಾರ್ಥನೆಗಳಲ್ಲಿ ಕಾಲ ಕಳೆದೆನು. ಈ ಸನ್ನಿವೇಶದಲ್ಲೇ ಈ ಮೊದಲು ನನ್ನನ್ನು ವೇದನೆಪಡಿಸಿದ್ದ ನನ್ನ ಪೋಷಕರು, ನನ್ನ ಶಿಕ್ಷಕರು, ನನ್ನ ಗಂಡ .... ಹಾಗೂ ಇತರರನ್ನು ಕ್ಷಮಿಸುವಂತೆಯೂ ಹಾಗೂ ನನ್ನ ಸ್ವಂತ ಪಾಪಗಳ ಬಗ್ಗೆ ಪಶ್ಚಾತ್ತಾಪ ಪಡಲೂ ಸಾಧ್ಯವಾಯಿತು.

ನಂತರದ ವರ್ಷಗಳಲ್ಲೇ ಪಶ್ಚಾತ್ತಾಪ ಹಾಗೂ ಕ್ಷಮಾಪಣೆಗಳ ಬಗ್ಗೆ ಅಧಿಕವಾಗಿ ಕಲಿತು ನನ್ನ ಜೀವಿತದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಯಿತು. ಈ ರೀತಿಯಾಗಿ ಅಳವಡಿಸಿಕೊಂಡ ಪ್ರತಿಯೊಂದು ಪಾಠವೂ ನನ್ನ ಜೀವಿತದಲ್ಲಿ ಅಧಿಕವಾದ ಸ್ವಾತಂತ್ರ ಹಾಗೂ ಬಿಡುಗಡೆಯನ್ನು ತಂದುಕೊಟ್ಟಿತು. ನನ್ನಲ್ಲಿ ವ್ಯತ್ಯಾಸವೂ ಪ್ರಕಾಶವೂ ಉಂಟಾಗಲು ನಾನು ಮತ್ತೆ ಯೇಸುವನ್ನೂ ಪವಿತ್ರಾತ್ಮನನ್ನೂ ಪ್ರೀತಿಸುವವಳಾಗಿ ಮಾರ್ಪಟ್ಟೆನು. ಅನೇಕ ವರ್ಷಗಳ ನಂತರದಲ್ಲಿ ನನ್ನ ದೀಕ್ಷಾಸ್ನಾನದ ನಂತರ ನನ್ನ ಪತಿಗೂ ಸಹ ಹೊಸದಾಗಿ ಹುಟ್ಟಿದ ಅನುಭವವುಂಟಾಗಲು ಅವರೂ ಸಹ ಪವಿತ್ರಾತ್ಮನಲ್ಲಿಯೂ ನೀರಿನಲ್ಲಿಯೂ ದೀಕ್ಷಾಸ್ನಾನ ಹೊಂದಿದರು.

ಈಗ ಅವರಿಗೂ ಸಹ ಪ್ರಾರ್ಥನಾ ಸೇವೆ, ಆಂತರಿಕ ಸೌಖ್ಯ ಹಾಗೂ ಬಿಡುಗಡೆಯ ಸೇವೆಗಳ ಬಗ್ಗೆ ಆಸಕ್ತಿಯುಂಟಾಗಲು ನಾವು ಆ ಸೇವೆಗಾಗಿ ತವಕಪಟ್ಟೆವು, ಪ್ರಾರ್ಥನಾ ವೀರರ ಸಹಾಯ ಪಡೆದೆವು ಹಾಗೂ ಈ ಸೇವೆಗೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನೂ ಸಹ ಓದಿದೆವು. ಈ ವಿಧದ ಸಂಪೂರ್ಣ ಸಮಯದ ಸೇವೆಗಾಗಿ ನಮ್ಮನ್ನೇ ಸಮರ್ಪಿಸಿಕೊಂಡು ವರ್ಷಗಳು ದಾಟುವ ಮೊದಲೇ ಆಘಾತವೊಂದು ನಮಗೆ ಬಂದೊದಗಲು ಕೆಲಸ, ಸೇವೆ ಯಾವುದೂ ಇಲ್ಲವಾಯಿತು. ಆ ದಿನಗಳಲ್ಲಿ ನಾವೇನು ಮಾಡಬೇಕೆಂದು ಕರ್ತನ ಚಿತ್ತವಾಗಿದೆಯೆಂದು ಹಾಗೂ ಕರ್ತನಿಂದ ಕೇಳಿಸಿಕೊಳ್ಳಲು ಹಾಗೂ ಸೇವೆಗೆ ಹೋಗಲು ನಮ್ಮನ್ನು ತಡೆಯೊಡ್ಡುವ ಕಾರ್ಯಗಳು ಯಾವುದೆಂಬುದು ನಮಗೆ ತಿಳಿದಿರಲಿಲ್ಲ. ಆದ್ದರಿಂದ ಆ ದಿನಗಳನ್ನು ಸತ್ಯವೇದದ ಅಧ್ಯಯನ ಹಾಗೂ ಪ್ರಾರ್ಥನೆಗಳಲ್ಲೇ ಕಳೆದೆವು.

ಆ ದಿನಗಳಲ್ಲಿ ಪ್ರಾರ್ಥನೆಗೆ ಸಂಬಂಧಿಸಿದ ಕೆಲವು ಸಾಹಿತ್ಯಗಳು[1] ಮಾತ್ರ ನಮ್ಮಲ್ಲಿದ್ದದ್ದರಿಂದ ಅವುಗಳನ್ನೇ ಅಧಿಕವಾಗಿ ಎಲ್ಲಾ ಸನ್ನಿವೇಶಗಳಲ್ಲೂ ಉಪಯೋಗಿಸುತ್ತಿದ್ದೆವು. ಒಬ್ಬರು ಪ್ರಾರ್ಥಿಸುತ್ತಿದ್ದಾಗ ಇನ್ನೊಬ್ಬರು ಕೇಳಿಸಿಕೊಳ್ಳುತ್ತಿದ್ದೆವು. ಒಬ್ಬರು ಕೇಳಿಸಿಕೊಳ್ಳುತ್ತಿರುವಾಗಲೇ ಪವಿತ್ರಾತ್ಮನ ಸಹಾಯದಿಂದ ತಾವಿನ್ನೂ ಪ್ರಾರ್ಥಿಸಿ ಬಿಟ್ಟುಬಿಡಬೇಕಾದ ಅನೇಕ ವಿಷಯಗಳು ತಮ್ಮಲ್ಲಿರುವುದಾಗಿ ಜ್ಞಾಪಿಸಿಕೊಂಡೆವು. ಈ ಕಾರ್ಯವು ವಾರಗಟ್ಟಲೆ ನಡೆದ ನಂತರ ಇನ್ನೂ ಪ್ರಾರ್ಥಿಸಬೇಕಾದ ವಿಷಯಗಳು ಇಲ್ಲದ್ದರಿಂದ ಅಲ್ಲಿಗೇ ಮುಕ್ತಾಯಗೊಳಿಸಿದೆವು. ನಮ್ಮನ್ನು ಬಂಧಿಸಿಡಬಹುದಾದ ಬೇರಾವುದೇ ವಿಷಯಗಳಿದ್ದಲ್ಲಿ ಅವುಗಳಿಂದ ನಮ್ಮನ್ನು ವಿಮುಕ್ತಗೊಳಿಸೆಂದು ದೇವರಿಗೆ ಮೊರೆಯಿಟ್ಟೆವು. ಆಗ ಆತನು ಸ್ಪಷ್ಟವಾಗಿ ನಮ್ಮೊಂದಿಗೆ "ನಾನೀಗ ನಿಮ್ಮನ್ನು ಉಪಯೋಗಿಸಲಿರುವೆ" ಎಂಬ ಶಬ್ದವನ್ನೂ ಹಾಗೂ "ಬನ್ನಿರಿ ಆಚರಿಸೋಣ" ಎಂಬ ಹಳೆಯ ಹಾಡಿನ ಸಾಲುಗಳನ್ನೂ ಕೇಳಿಸಿಕೊಂಡೆವು. ನಾವು ಯಾವ ಕಾರ್ಯಕ್ಕಾಗಿ ಕರೆಯಲ್ಪಟ್ಟಿರುವೆವೆಂಬ ವಿಷಯವನ್ನು ಕೆಲವೇ ದಿನಗಳಲ್ಲಿ ದೇವರು ನಮಗೆ ತಿಳಿಸಿಕೊಟ್ಟು ಅದಕ್ಕಾಗಿ ನಮ್ಮನ್ನು ಮುಕ್ತರನ್ನಾಗಿಸಿದನು.

ಇದುವರೆಗಿನ ಸೇವೆಯಲ್ಲಿನ ಪ್ರಾರ್ಥನಾ ವಿಷಯಗಳ ಹಿನ್ನೆಲೆಯಲ್ಲೇ ಈ ಪುಸ್ತಕವನ್ನು ರಚಿಸಲಾಗಿದೆ. ಪ್ರಾರ್ಥನೆಗಳಿಗೆ ಸಂಬಂಧಿಸಿದಂತೆ ಸತ್ಯವೇದದ ಕಲಿಸುವಿಕೆಗಳಿಗನುಗುಣವಾಗಿ ನಾವು ಇದನ್ನು ವಿವರಿಸಿರುತ್ತೇವೆ. ಆ ಮೂಲಕವಾಗಿ ಓದುಗರು ಪವಿತ್ರಾತ್ಮನ ಸಹಾಯದಿಂದ ಗ್ರಹಿಸಿಕೊಂಡು ಪ್ರಾರ್ಥಿಸಲು ಶಕ್ತರಾಗುವರು.

ಈ ಪುಸ್ತಕವು ವಿಶ್ವಾಸಿಗಳನ್ನು ಕರ್ತನ ಹಾಗೂ ಸಭೆಯ ಸೇವೆಯಿಂದ "ಬಂಧಿಸಲ್ಪಟ್ಟಿರುವ ವಿಷಯಗಳಿಂದ ವಿಮುಕ್ತರಾಗಿಸಲು" ಸಹಾಯಿಸಲು ದೇವರು ಉಪಯೋಗಿಸಲಿರುವನೆಂದು ಖಂಡಿತವಾಗಿಯೂ ನಾವು ಭರವಸೆಯುಳ್ಳವರಾಗಿದ್ದೇವೆ. ನಮ್ಮನ್ನು ವಿಮುಕ್ತರನ್ನಾಗಿಸಲು ದೇವರು ಇದನ್ನು ಉಪಯೋಗಿಸಿರುವನು. ಇದನ್ನು ಬೆರಳಚ್ಚು ಮಾಡಿದವರನ್ನೂ, ಭಾಷಾಂತರಿಸಿದವರನ್ನೂ ಹಾಗೂ ಪುನರಾವಲೋಕನ ಮಾಡಿದವರನ್ನೂ ಸಹ ದೇವರು ಸ್ವತಂತ್ರರನ್ನಾಗಿಸಿರುವನು. ನೀವು ಇಷ್ಟಪಟ್ಟಲ್ಲಿ ನಿಮ್ಮನ್ನೂ ಸಹ ಸ್ವತಂತ್ರಗೊಳಿಸಲು ದೇವರು ಇದನ್ನು ಉಪಯೋಗಿಸಲಿರುವನು. ಜಯಕರವಾದ ಕ್ರೈಸ್ತ ಜೀವನವನ್ನು ಉಚಿತವಾಗಿ ಅನುಭವಿಸಿರಿ.

---

[1] *ಪೆನ್ನಾಂಟ್ ಜಾನ್ಸ್‌ರವರ, 'ಬೇಸಿಕ್ ಮಿನಿಸ್ಟ್ರೀ ಪ್ರೇಯರ್ಸ್', 1996 (ಪ್ರಕಟಗೊಳಿಸಲಾಗಿಲ್ಲ). ವ್ಯಕ್ತಿಗತ ಟಿಪ್ಪಣಿಗಳು ಗ್ಲೆಂಡ್ಲಿ ಮ್ಯಾನೋರ್ ಮಿನಿಸ್ಟ್ರೀಸ್, ಯು.ಕೆ. ಅನುಮತಿಯೊಂದಿಗೆ.*

# ಪೀಠಿಕೆ

## ಜಯಕರವಾದ ಕ್ರೈಸ್ತ ಜೀವನ

ದೇವರು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ತನ್ನ ಮಕ್ಕಳಾದ ನಮಗೆ ಲಭಿಸುವಂತೆ ಮಾಡಿದ್ದಾನೆ ***(ಎಫೆಸ 1:3)***. ನಾವು ಸಮೃದ್ಧಿಯಾಗಿ ಜೀವಿಸಬೇಕೆನ್ನುವುದು ದೇವರ ಬಯಕೆಯಾಗಿದೆ ***(ಯೋಹಾನ 10:10)***. ನಾವು ಆತನಿಗಿಂತ ಮಹತ್ತಾದ ಕ್ರಿಯೆಗಳನ್ನು ನಡೆಸಲಿರುವವೆಂದು ಯೇಸು ಹೇಳಿರುವನು ***(ಯೋಹಾನ 14:12–14)***. ದೇವಜನರಾದ ನಾವು ಅಪೇಕ್ಷಿಸುವಷ್ಟು ಸುಲಭವಾಗಿ ನಮ್ಮ ಜೀವನವು ಸಾಗುವುದಿಲ್ಲ, ಆದರೆ ಅತ್ಯಂತ ಕಠಿಣ ಸನ್ನಿವೇಶಗಳಲ್ಲಿಯೂ ನಾವು ಆಂತರಿಕ ಸಮಾಧಾನ ಹಾಗೂ ಕರುಣೆಯೊಂದಿಗೆ ಅವುಗಳನ್ನು ಎದುರಿಸಬೇಕು. ಇದನ್ನೇ ಜಯಕರವಾದ ಕ್ರೈಸ್ತ ಜೀವನವೆಂದು ಕರೆಯಲಾಗಿದೆ. ನಮ್ಮ ಜೀವನದ ಪ್ರತಿಯೊಂದು ಹಂತದಲ್ಲಿಯೂ ಈ ವಿಧದ ಜಯಕರವಾದ ಜೀವನವನ್ನು ನಡೆಸದಿದ್ದಲ್ಲಿ ದೇವರು ನಮಗೆ ಕೊಟ್ಟಿರುವ ಆಶೀರ್ವಾದಗಳನ್ನು ಸೈತಾನನು ಕೊಲ್ಲುವವನೂ, ಕದಿಯುವವನೂ, ನಾಶಪಡಿಸುವವನೂ ***(ಯೋಹಾನ 10:10)*** ಆಗಿರುವನು. ಹೀಗಾಗುವುದನ್ನು ದೇವರು ನಮ್ಮಿಂದ ಬಯಸುತ್ತಿಲ್ಲ.


> ಆಂತರಿಕ ಸೌಖ್ಯವು ಪ್ರತಿಯೊಬ್ಬರಿಗೂ, ಪ್ರತಿಯೊಂದು ದೇಶಕ್ಕೂ ಹಾಗೂ ಸಂಪೂರ್ಣ ಭೂಲೋಕದ ಉಜ್ಜೀವನಕ್ಕೊಂದು ದೊಡ್ಡ ಬೀಗದ ಕೈ ಆಗಿದೆ.
> (ರಾಬರ್ಟ್ ಫೆಟ್‌ವೈಟ್
> ಎಲೈಜಾ ಹೌಸ್, 2014)

ಜಯಕರವಾದ ಕ್ರೈಸ್ತ ಜೀವಿತದ ಉದ್ದೇಶವು ಪ್ರಾರ್ಥನೆ ಹಾಗೂ ಬೋಧನೆಗಳ ಮೂಲಕವಾಗಿ ಜನರು ದೇವರೊಂದಿಗೆ ಸರಿಯಾದ ಸಂಬಂಧವನ್ನು ಹೊಂದಿದವರಾಗುವ ಮೂಲಕವಾಗಿ ಪವಿತ್ರಾತ್ಮನ ಬಲವನ್ನು ಹೊಂದಿದವರಾಗಿ ಯೇಸು ನೆರವೇರಿಸಿದ ಅದ್ಭುತಗಳನ್ನು ಮಾಡಲು ಸಹಾಯಿಸುವುದಾಗಿದೆ ***(ಲೂಕ 24:46–49; ಎಫೆಸ 4:11–16; ಫಿಲಿಪ್ಪಿ 3:10–11; ಅ.ಕೃ 3:19–20 ಹಾಗೂ 4:29–30)***.

ಈ ವಿಧಾನದ ಸೇವೆಯನ್ನು "ಆಂತರ್ಯದಲ್ಲಿನ ಸೌಖ್ಯಪಡಿಸುವಿಕೆ" ಎಂದೂ ಸಹ ಕರೆಯಲಾಗಿದೆ, ಕಾರಣ ಇದನ್ನು ನಮ್ಮ ಹೃದಯಕ್ಕಾಗಿರುವ ಗಾಯಗಳನ್ನು ಗುಣಪಡಿಸಲು ಉಪಯೋಗಿಸಲಾಗಿದೆ. ಇದು ಶಾರೀರಿಕ ಅಸ್ವಸ್ಥತೆ ಹಾಗೂ ದುರಾತ್ಮಪೀಡಿತರನ್ನೂ ವಿಮೋಚಿಸಲು ಶಕ್ತವಾಗಿದೆ. ಈ ರೀತಿಯ ಸೇವೆಯನ್ನು "ಕೆಲವರು ಆತ್ಮೀಕ ಆಲೋಚನೆ ಕೊಡುವಿಕೆ", "ಪ್ರಾರ್ಥನೆ ಸೇವೆ" ಅಥವಾ ಹೃದಯವನ್ನು ತಲುಪಿಸುವ ಸುವಾರ್ತೀಕರಣವೆಂದು ಕರೆಯುವುದುಂಟು. ಶಾರೀರಿಕ ಸೌಖ್ಯದ ಬಗ್ಗೆ ಕೊನೆಯ ಭಾಗದ ಇತರೆ ವಿಭಾಗದಲ್ಲಿ ವಿವರಿಸಲಾಗಿದೆ.

ಪರಿಸಾಯರೊಂದಿಗೆ ಮಾತನಾಡುತ್ತಾ ಯೇಸು ಹೇಳಿದ್ದೇನೆಂದರೆ – "*ಮರ ಒಳ್ಳೇದೆಂದರೆ ಅದರ ಫಲವೂ ಒಳ್ಳೇದೆನ್ನಿರಿ, ಮರ ಹುಳುಕು ಅಂದರೆ ಅದರ ಫಲವೂ ಹುಳುಕು ಅನ್ನಿರಿ, ಫಲದಿಂದಲೇ ಮರದ ಗುಣವು ಗೊತ್ತಾಗುವುದು*" ***(ಮತ್ತಾಯ 12:33)***.

ನಾವು ಜಯಕರವಾಗಿ ಜೀವಿಸುತ್ತಿಲ್ಲವೆಂಬುದಕ್ಕೆ ನಮ್ಮ ಜೀವನದಲ್ಲಿನ ಫಲಗಳನ್ನು ನೋಡಿದರೆ ಸಾಕಾಗುತ್ತದೆ. ಅದು ಗಲಾತ್ಯ 5:22–23 ಕ್ಕೆ ತದ್ವಿರುದ್ಧವಾಗಿ 5:19–21 ರ ಪ್ರಕಾರವಾಗಿದ್ದಲ್ಲಿ ನಾನು ಜಯಶಾಲಿಯಾಗಿರದೆ ಪಾಪಕ್ಕೆ ಗುಲಾಮನಾಗಿರುವೆನಷ್ಟೆ ***(ಯೋಹಾನ 8:34).*** ಕೃಷಿಗೆ ಸಂಬಂಧಿಸಿದಂತೆ ಹೇಳುವುದಾದಲ್ಲಿ ಮರವೊಂದರ ಫಲವು ಒಳ್ಳೆಯದಿರದಿದ್ದಲ್ಲಿ ಅದರ ಬೇರುಗಳಿಗೆ ಹುಳದ ಬಾಧೆಯೋ ಅಥವಾ ಗೊಬ್ಬರದ (ಸರಿಯಾದ ಪಾಲನೆ) ಕೊರತೆಯೋ ಇರಬಹುದಷ್ಟೆ ***(ಲೂಕ 13:6–9).*** ಆದರೆ ಬೇರುಗಳು ಒಳ್ಳೆಯದಾಗಿದ್ದಲ್ಲಿ ಅದರ ಫಲಗಳೂ ಸಹ ಒಳ್ಳೆಯದಾಗಿರುತ್ತವೆ. ನಾವು ಯೇಸುವಿನಲ್ಲಿ ಬೇರೂರಿಕೊಂಡು ಆತನಲ್ಲಿದ್ದವರಾಗಿ ಜೀವಿಸಬೇಕೆಂದು ಅಪೋಸ್ತಲನಾದ ಪೌಲನು ನಮ್ಮನ್ನು ಪ್ರೋತ್ಸಾಹಪಡಿಸಿರುವನು ***(ಕೊಲೊಸ್ಸೆ 2:7).*** ಹೀಗಾಗುವಾಗ ಮಾತ್ರ ನಾವು ಅಂತ್ಯದವರೆಗೂ ನಿಲ್ಲುವ ಫಲಗಳನ್ನು ನೀಡಲು ಸಾಧ್ಯವಾಗುವುದು ***(ಯೋಹಾನ 15:16).***




ಆದ್ದರಿಂದ ನಮ್ಮ ಜೀವಿತದಲ್ಲಿ ಫಲವು ಒಳ್ಳೆಯದಾಗಿರದಿದ್ದಲ್ಲಿ ನಮ್ಮ ಆತ್ಮೀಕ ಬೇರುಗಳಿಗೆ ಸಮಸ್ಯೆಗಳಿರಬಹುದು. ಉದಾ: ನಾವು ಹಿಂದೆ ಅರಿಕೆ ಮಾಡಿ ಬಿಟ್ಟು ಬಿಡದಿರುವ ಪಾಪವು ನಮ್ಮಲ್ಲಿನ್ನೂ ಇರಬಹುದು ಅಥವಾ ನಮ್ಮನ್ನು ವೇದನೆಪಡಿಸಿರುವವರನ್ನು ಅನೇಕ ವರ್ಷಗಳ ನಂತರವೂ ಯಥಾರ್ಥವಾಗಿ ಕ್ಷಮಿಸಿರಲಿಕ್ಕಿಲ್ಲ. ಅದು ಬಹುಕಾಲಗಳ ಹಿಂದೆ ಸಂಭವಿಸಿರುವುದರಿಂದ ನಾವದನ್ನು ಮರೆತಿದ್ದೇವೆಂದು ಅನೇಕರು ಹೇಳಿಕೊಳ್ಳುತ್ತಾರೆ. ಅದು ಕ್ಷಮಿಸುವಿಕೆಯಾಗಿರದೆ ಕೇವಲ ಮರೆಯುವಿಕೆಯಾಗಿದೆ. ಕ್ಷಮಿಸುವಿಕೆಯು ನಮ್ಮ ಸ್ವಂತ ಆಯ್ಕೆಯಾಗಿದೆ ಕಾರಣ – ಕರ್ತನು ನಿಮ್ಮನ್ನು ಕ್ಷಮಿಸಿರುವುದರಿಂದ ***(ಕೊಲೊಸ್ಸೆ 3:13)*** ನಾವೂ ಸಹ ಕ್ಷಮಿಸುವವರಾಗಿರಬೇಕು. ನಮ್ಮ ಜೀವಿತದಲ್ಲಿನ ಕೆಟ್ಟ ಫಲಗಳನ್ನು ಅರಿತು ಅದಕ್ಕೆ ಮೂಲಕಾರಣ ಏನೆಂದು ಗ್ರಹಿಸಲು ಈ ಅಧ್ಯಯನವು ನಮಗೆ ಸಹಾಯಿಸುತ್ತದೆ. ಹಾಗಾದಲ್ಲಿ ಮಾತ್ರವೇ ನಾವು ಯೇಸುವಿನ ರಕ್ತದ ಮೂಲಕವಾಗಿ ಪಶ್ಚಾತ್ತಾಪವನ್ನೂ ಕ್ಷಮಾಪಣೆಯನ್ನೂ ಹೊಂದಿದವರಾಗಿ ಸೌಖ್ಯವುಳ್ಳವರಾಗಿ ಹೆಚ್ಚು ಸ್ವತಂತ್ರರಾಗಿರಲು ಸಾಧ್ಯ.

ದೇವರ ಮಕ್ಕಳು ಅನೇಕ ಬಾರಿ ತಾವು ಮಾಡುತ್ತಿರುವ ಪಾಪದಿಂದ ವಿಮುಕ್ತರಾಗಲು ಪ್ರಯತ್ನಿಸಿದರೂ ಮತ್ತೆ ಅದೇ ಪಾಪದಲ್ಲೇ ಸಿಕ್ಕಿಹಾಕಿಕೊಳ್ಳುವವರಾಗಿದ್ದಾರೆ. ಅನೇಕರು ತಮ್ಮನ್ನು ಉರ್ಲಿನಂತೆ ಬಂಧಿಸಿರುವ ಕೆಲವು ವಿಶಿಷ್ಟವಾದ ಪಾಪ ಸ್ವಭಾವಗಳಿಂದ ಬಿಡುಗಡೆ ಹೊಂದಲು ಅನೇಕಾವರ್ತಿ ಪ್ರಯತ್ನಿಸಿದರೂ ವಿಫಲರಾಗಿದ್ದಾರೆ. ಇಂತಹ ಸನ್ನಿವೇಶಗಳಲ್ಲಿ ದೇವರ ಮಕ್ಕಳಾದ ಕ್ರೈಸ್ತ ಸಹೋದರ ಸಹೋದರಿಯರು ಅವರ ಸಹಾಯಕ್ಕೆ ಲಭ್ಯವಿರುತ್ತಾರೆ ***(ಗಲಾತ್ಯ 6:1).***

ಸ್ವಾತಂತ್ರ್ಯವೆಂದರೆ ನಾವೇನು ಮಾಡಬೇಕೆಂದು ಬಯಸುತ್ತೇವೋ ಅದನ್ನು ಮಾಡಲಿಕ್ಕಿರುವ ಹಕ್ಕಾಗಿರದೆ ದೇವರು ನಮ್ಮಿಂದ ಮಾಡಲು ಇಚ್ಚಿಸುವುದನ್ನು ಮಾಡಲಿಕ್ಕಿರುವ ಬಲವಾಗಿದೆ.

ನೂತನ ಜನನದ ಅನುಭವವಿರುವ ಸಾಧಾರಣ ವಿಶ್ವಾಸಿಗಳೂ ಸಹ ಇತರರನ್ನು ಕ್ರಿಸ್ತನ ಮಾರ್ಗದಲ್ಲಿ ನಡೆಯುವಂತೆ ಮಾಡುವ ಅಮೂಲ್ಯವಾದ ಜವಾಬ್ದಾರಿಕೆಯನ್ನು ತಾವು ಪ್ರದರ್ಶಿಸಬೇಕಿರುತ್ತದೆ ***(ಎಫೆಸ 4:12)*** ಇದು ಸಭಾ ನಾಯಕರ ಜವಾಬ್ದಾರಿಕೆಯೆಂದು ಸುಮ್ಮನಿರಬಾರದು. ಸಾಧಾರಣ ವಿಶ್ವಾಸಿಗಳ ಜವಾಬ್ದಾರಿಕೆಯನ್ನು ನೋಡುವುದಾದಲ್ಲಿ ಅವರು ಯೆಹೋಶುವನ ಸುತ್ತಲೂ ***(ಜೆಕರ್ಯ 3:4)*** ನಿಂತಿದ್ದು ಅವನ ಕೊಳೆಯಾದ ಬಟ್ಟೆಗಳನ್ನು ಬದಲಿಸಲು ದೂತನಿಂದ ಅಪ್ಪಣೆ ಹೊಂದಿದವರಾಗಿದ್ದಾರೆ. ಅವರು ಯೇಸು ಲಾಜರನನ್ನು ಎಬ್ಬಿಸಿದರೂ ಅದನ್ನು ನೋಡುತ್ತಿದ್ದ ಸಾಮಾನ್ಯ ಜನರಿಗೂ ಹೋಲಿಕೆಯಾಗಿದ್ದಾರೆ ***(ಯೋಹಾನ 11:43–44).*** ಅವನು ದೇವರಿಂದ ಹೊಂದಿದ ಪುನರುಜ್ಜೀವನವನ್ನು ಸಮೃದ್ಧಿಯಾಗಿ ಅನುಭವಿಸಲು ಅವನಿಗೆ ಸುತ್ತಲ್ಪಟ್ಟಿದ್ದ ಸಮಾಧಿಯ ಬಟ್ಟೆಗಳನ್ನು ಬಿಚ್ಚಿಹಾಕುವಂತೆ ಯೇಸು ಕೊಟ್ಟ ಅಪ್ಪಣೆಯನ್ನು ಅವರು ನೆರವೇರಿಸಿದರು.



ಕೆಲವು ಬಾರಿ ನಮ್ಮನ್ನು ಉರ್ಲಿನಂತೆ ಬಂಧಿಸಿರುವ ಪಾಪಗಳಿಗೆ ನಾವು ಜವಾಬ್ದಾರರಾಗಿರುವುದಿಲ್ಲ, ಅದು ನಮ್ಮ ಹಿಂದಿನ ತಲೆಮಾರಿನವರಿಂದ ನಮಗೆ ಕೊಡೋಣವಾಗಿರುತ್ತದೆ. ಪಶ್ಚಾತ್ತಾಪದಿಂದ ಅರಿಕೆ ಮಾಡುವ ಮೂಲಕವಾಗಿ ನಮ್ಮನ್ನೂ ನಮ್ಮ ಕುಟುಂಬಗಳನ್ನೂ ಆ ವಿಧದ ಪಾಪದ ಬಂಧನಗಳಿಂದ ಬಿಡುಗಡೆ ಹೊಂದಿ ದೇವರು ಕೊಟ್ಟಿರುವ ಸಂತುಷ್ಟವಾದ ಕುಟುಂಬ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತದೆ, (***ನೆಹೆಮಿಯ 9:2***) ಅದೇ ರೀತಿಯಲ್ಲಿ ಖಂಡನಾತ್ಮಕ ತೀರ್ಪು ಮಾಡುವಿಕೆ ದೈವಿಕವಲ್ಲದ ಸಂಬಂಧಗಳು ಹಾಗೂ ನಕಾರಾತ್ಮಕವಾದ ಮಾತುಗಳು ಹಾಗೂ ಹಣಕಾಸಿನ ವಿಷಯಗಳ ಮೂಲಕವಾಗಿ ಕ್ರಿಸ್ತನಲ್ಲಿ ನಮಗೆ ಲಭ್ಯವಿರುವ ಆಶೀರ್ವಾದಗಳನ್ನು ನಾವು ತಡೆಯುವವರಾಗಿರುತ್ತೇವೆ. ಇವುಗಳನ್ನು ಮುಂದಿನ ಅಧ್ಯಾಯಗಳಲ್ಲಿ ಹೆಚ್ಚಾಗಿ ವಿವರಿಸಿರುತ್ತೇವೆ.

ಈ ಎಲ್ಲಾ ವಿಷಯಗಳಿಗಾಗಿ ಲೇಖಕರು ಪ್ರಾರ್ಥಿಸಿದಾಗ ದೇವರು ಅವರಿಗೆ ವಿಸ್ಮಯರೂಪವಾಗಿ ಉತ್ತರಿಸಿರುವನು. ಅಂದಿನಿಂದ ಈ ಬೋಧನಾ ಸಾಮುಗ್ರಿಗಳನ್ನು ವಿವಿಧ ಸನ್ನಿವೇಶ, ಸಂಸ್ಕೃತಿ ಹಾಗೂ ವಿದ್ಯಾವಂತರು – ಅವಿದ್ಯಾವಂತರೆಲ್ಲರ ಮಧ್ಯದಲ್ಲಿ ಉಪಯೋಗಿಸಿರುತ್ತಾರೆ. ಹಾಗೂ ದೇವರು ಸಾಧಾರಣ ಜನರನ್ನೂ ಹಾಗೂ ಆತನ ಸಮೀಪಕ್ಕೆ ಬರಲು ತವಕಪಡುವವರನ್ನು ಅದ್ಭುತವಾಗಿ ಉಪಯೋಗಿಸುವುದನ್ನು ಕಂಡು ವಿಸ್ಮಿತರಾಗಿರುವರು. ಈ ಸಾಮುಗ್ರಿಗಳನ್ನು ಓದುವ ನೀವು ಇವುಗಳಿಂದ ವೈಯಕ್ತಿಕವಾಗಿ ಆಶೀರ್ವದಿಸಲ್ಪಟ್ಟು ಇತರರಿಗೂ ಆಶೀರ್ವಾದವಾಗಲಿರುವಿರೆಂದು ನಾವು ಭರವಸೆಯಿಂದ

ಪ್ರಾರ್ಥಿಸುವವರಾಗಿದ್ದೇವೆ. ಪ್ರತಿಯೊಬ್ಬರೂ ಪ್ರತಿಯೊಂದು ಸ್ಥಳಗಳಲ್ಲಿಯೂ ಜಯಕರವಾದ ಕ್ರೈಸ್ತ ಜೀವನವನ್ನು ಸಾಗಿಸಬೇಕೆನ್ನುವುದೇ ಅವರ ಆಸೆಯಾಗಿದೆ.

# ಪಾಪ ಹಾಗೂ ಶುದ್ಧೀಕರಣ

ದೇವರು ಪರಿಶುದ್ಧನಾಗಿದ್ದಾನೆ, ಅದರರ್ಥ ದೇವರಲ್ಲಿ ಪಾಪವಿಲ್ಲವೆಂಬುದಾಗಿದೆ. ದೇವರು ಪವಿತ್ರನಾಗಿದ್ದಾನೆ ಹಾಗೂ ಎಲ್ಲಾ ವಿಧಾನಗಳಲ್ಲೂ ನಮ್ಮಿಂದ ಸಂಪೂರ್ಣವಾದ ವಿಭಿನ್ನತೆಯುಳ್ಳವನಾಗಿದ್ದಾನೆ. ಆತನು "ಪರಲೋಕದಲ್ಲಿರುವವನೂ" "ಮಹಿಮೆಯುಳ್ಳವನೂ" ಆಗಿರುವುದರಿಂದ ಆತನ ಸನ್ನಿಧಿಯಲ್ಲಿ ಪಾಪಕ್ಕೆ ಅವಕಾಶವೇ ಇಲ್ಲದಾಗಿದೆ. ನಾವು ಆತನ ಸನ್ನಿಧಿಗೆ ಬರಬೇಕಾಗಿದ್ದಲ್ಲಿ ನಾವೂ ಸಹ ಪವಿತ್ರರಾಗಿ ಮಾರ್ಪಡಬೇಕು. ಇದು ನಮ್ಮಿಂದ ಅಸಾಧ್ಯ, ಆದರೆ ದೇವರಿಂದ ಎಲ್ಲವೂ ಸಾಧ್ಯ.

ನಾವು ಕ್ರಿಸ್ತನಲ್ಲಿ "ಹೊಸದಾಗಿ ಹುಟ್ಟಿ" "ನೂತನ ಸೃಷ್ಟಿಯಾಗಿ" ಮಾರ್ಪಡುವಾಗ ದೇವರು ಇದನ್ನು ನಮ್ಮಲ್ಲಿ ನೆರವೇರಿಸುವನು, ಆದರೆ ರಕ್ಷಣೆ ಹೊಂದಿದವರಾಗಿದ್ದರೂ ಅನೇಕ ಕ್ರೈಸ್ತರು ಇನ್ನೂ ಪಾಪದಲ್ಲೇ ಜೀವನ ನಡೆಸುವವರಾಗಿದ್ದಾರೆ ಹಾಗೂ ಕೆಲವರು ಇನ್ನೂ ತಮ್ಮ ಹಳೆಯ ಜೀವನದ ಪಾಪದ ಪ್ರಭಾವದಲ್ಲೇ ಇದ್ದಾರೆ.

ಸತ್ಯವೇದದಲ್ಲಿನ ಎಲ್ಲಾ ಪುಸ್ತಕ (ವಿಷಯ) ಗಳನ್ನು ವಿಶ್ವಾಸಿಗಳಿಗೂ ಬರೆಯಲ್ಪಟ್ಟಿರುತ್ತದೆ. ವಿಶ್ವಾಸಿಗಳಲ್ಲಿನ ಪಾಪ ಜೀವಿತವು ವಿಶ್ವಾಸಿಗಳ ಮಧ್ಯದಲ್ಲಿಯೇ ಒಡಕನ್ನುಂಟು ಮಾಡುವುದರೊಂದಿಗೆ ಅವಿಶ್ವಾಸಿಗಳನ್ನು ಕ್ರಿಸ್ತನಿಂದ ದೂರವಿರಿಸುತ್ತದೆ. ಈ ಕಾರಣಕ್ಕಾಗಿಯೇ ವಿಶ್ವಾಸಿಗಳನ್ನು ಪಾಪದ ಗೊಡವೆಗೆ ಹೋಗದಂತೆ ಎಚ್ಚರಿಸಲಾಗಿದೆ. ಇದು ಇಂದಿಗೂ ನಿಜವಾಗಿದ್ದು ಪಾಪದಿಂದ ದೂರವಿದ್ದು ದೈವೀಕ ಗುಣಸ್ವಭಾವಗಳನ್ನು ಬೆಳೆಸಿಕೊಳ್ಳುವ ಪ್ರಯತ್ನವು ನಮ್ಮ ಜೀವಮಾನದಲ್ಲೆಲ್ಲಾ ಮುಂದುವರೆಯುತ್ತಿರುತ್ತದೆ. ಇದು ದೈವೀಕ ಗುಣಸ್ವಭಾವ ಅಥವಾ ನಿತ್ಯತ್ವಕ್ಕಾಗಿನ ನಮ್ಮ ಪ್ರಯಾಣದಲ್ಲಿ ನಾವು ಹೊರಡಿಸುವ "ಫಲವೂ" ಆಗಿರುತ್ತದೆ ***(ಮತ್ತಾಯ 7:17–23; 2 ಕೊರಿ 5:10; ಗಲಾತ್ಯ 5:19–26; ಪ್ರಕ 22:14–15).***

*"ತಮ್ಮ ನಿಲುವಂಗಿಗಳನ್ನು ತೊಳೆದುಕೊಂಡವರು ಧನ್ಯರು, ಅವರಿಗೆ ಜೀವ ವೃಕ್ಷದಲ್ಲಿ ಹಕ್ಕು ಇರುವುದು. ಅವರು ಬಾಗಿಲುಗಳಿಂದ ಆ ಪಟ್ಟಣದೊಳಕ್ಕೆ ಸೇರುವರು. ನಾಯಿಗಳಂತಿರುವವರೂ, ಮಾಟಗಾರರೂ, ಜಾರರೂ, ಕೊಲೆಗಾರರೂ, ವಿಗ್ರಹಾರಾಧಕರೂ, ಸುಳ್ಳಾದದ್ದನ್ನು ಪ್ರೀತಿಸಿ ನಡೆಸುವವರೆಲ್ಲರೂ ಹೊರಗಿರುವರು. ಯೇಸುವೆಂಬ ನಾನು ನನ್ನ ಸಭೆಗಳ ಪ್ರಯೋಜನಾರ್ಥವಾಗಿ ಈ ಸಂಗತಿಗಳ ವಿಷಯದಲ್ಲಿ ನಿಮಗೆ ಸಾಕ್ಷಿ ಹೇಳುವುದಕ್ಕೋಸ್ಕರ ನನ್ನ ದೂತನನ್ನು ಕಳುಹಿಸಿಕೊಟ್ಟೆನು"* ***(ಪ್ರಕ 22:14–16).***

ಮಾನವ ಕುಲವು ಆದಾಮ – ಹವ್ವರಿಂದ ಆರಂಭವಾಯಿತೆಂದು ಸತ್ಯವೇದವು ತಿಳಿಸುತ್ತದೆ. ಮಾನವರು ತನ್ನೊಂದಿಗೆ ಅನ್ಯೋನ್ಯವಾಗಿರಬೇಕೆಂದು ದೇವರು ಅವರನ್ನು ಸೃಷ್ಟಿಸಿದ್ದಾನೆ, ಆದರೆ ಆದಾಮ – ಹವ್ವರು ಪಾಪ ಮಾಡಿದ್ದರ

> ಮಾನವನ ಪಾಪದ ಫಲವಾಗಿ ಉಂಟಾದ ಸಂಪೂರ್ಣ ಅವನತಿ ಹಾಗೂ ಯೇಸುಕ್ರಿಸ್ತನ ಮೂಲಕ ದೇವರು ಉಂಟುಮಾಡಿದ ಸಂಪೂರ್ಣ ಪರಿಹಾರದ ಸಂಗ್ರಹಣವೇ ಸತ್ಯವೇದವಾಗಿದೆ.
> (ಚಾರ್ಲ್ಸ್ ಸ್ಪರ್ಜನ್)

ಫಲವಾಗಿ ಮಾನವರೆಲ್ಲರೂ ಪಾಪಿಗಳಾಗಿ ದೇವರಿಂದ ಬೇರ್ಪಡಿಸಲ್ಪಟ್ಟರು ***(ಆದಿ 3).*** ಆದಾಮ – ಹವ್ವರ ಅವಿಧೇಯತ್ವವೆಂಬ ಏಕ ಪಾಪವು ನಮ್ಮ ಪವಿತ್ರತ್ವವನ್ನು ಶಾಶ್ವತವಾಗಿ ನಾಶಪಡಿಸಿತು. ಆ ಸಮಯದಲ್ಲೇ ಸತ್ಯವೇದದ ಪ್ರಪ್ರಥಮ ಪ್ರವಾದನಾ ವಾಕ್ಯವನ್ನು ಸೈತಾನನಿಗೆ ವಿರುದ್ಧವಾಗಿ ದೇವರು ಉಚ್ಚರಿಸಿರುವನು – **"**ಸ್ತ್ರೀಯ ಸಂತತಿಯಿಂದ ಸರ್ಪದ ತಲೆಯು ಜಜ್ಜಲ್ಪಡುವುದೆಂಬ**"** ಮಾತೇ ಹಳೆಯ ಒಡಂಬಡಿಕೆಯ ಮುಖ್ಯ ವಿಷಯವಾಗಿದೆ ***(ಆದಿ 3:15).*** ಇದು ಯೇಸುವಿನ ಜೀವನ, ಮರಣ – ಪುನರುತ್ಥಾನ ಮಾತ್ರವಲ್ಲದೆ ಪಾಪ ಹಾಗು ಮರಣಗಳ ಮೇಲೆ ಆತನು ಸಾಧಿಸಿದ ಸಂಪೂರ್ಣ ವಿಜಯದ ಮೂಲಕವಾಗಿ ಮಾನವರು ದೇವರೊಂದಿಗೆ ಮತ್ತೆ ಅನ್ಯೋನ್ಯತೆ (ಸಾಮರಸ್ಯ) ಹೊಂದುವ ಅವಕಾಶದ ಬಾಗಿಲನ್ನು ತೆರೆಯಿತು.

ನಾವು ದೇವರಿಂದ ಶಾಶ್ವತವಾಗಿ ಬೇರ್ಪಟ್ಟಿರಬಾರದೆಂಬುದನ್ನು ಬಯಸಿದ ದೇವರು ನಮ್ಮ ಅವಿಧೇಯತ್ವದ ಮೂಲಕವಾಗಿ ಉಂಟಾದ ಪಾಪದ ಪರಿಹಾರಕ್ಕಾಗಿ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಆತನು ಶಿಲುಬೆಯ ಮೇಲೆ ಸಾಯುವುದರ ಮೂಲಕವಾಗಿ ಪಾಪ ಪರಿಹಾರದ ಬೆಲೆಯನ್ನು ಕಟ್ಟಿ ನಮ್ಮನ್ನು ದೇವರೊಂದಿಗೆ ಪುನಃ ಒಂದಾಗಿ ಮಾರ್ಪಡಿಸಿರುವನು. ದೇವಕುಮಾರನಾದ ಯೇಸು ತಾನು ಹೊಂದಿದ್ದ ಮಹಿಮೆಯೆಲ್ಲವನ್ನೂ ತ್ಯಜಿಸಿ ಈ ಲೋಕಕ್ಕೆ ಬಂದನು. ಪಾಪವೊಂದನ್ನು ಹೊರತುಪಡಿಸಿ ಬೇರೆಲ್ಲಾ ವಿಷಯಗಳಲ್ಲಿ ನಮ್ಮಂತೆಯೇ ಶೋಧಿತನಾದನು ***(ಇಬ್ರಿಯ 4:15, 7:26).*** ತಂದೆಯಾದ ದೇವರು ಹೇಳಲು ಹಾಗು ಮಾಡಲು ಇಚ್ಛಿಸಿದವುಗಳನ್ನು ಮಾತ್ರವೇ ಯೇಸು ಹೇಳಿ (ಮಾಡಿ)ದನು. ಇದು ಯೇಸುವಿನ ಜೀವಿತವನ್ನೇ ನಾವು ಪರಿಪೂರ್ಣ ಮಾದರಿ ವ್ಯಕ್ತಿಯನ್ನಾಗಿಸಲು ಸಹಾಯಿಸುತ್ತದೆ.

ಯೇಸು ಒಬ್ಬ ಅಪರಾಧಿಯಂತೆ ಶಿಲುಬೆಯ ಮೇಲೆ ನಮಗಾಗಿ ಪ್ರಾಣಕೊಟ್ಟನು. ಆತನು ನಮ್ಮೆಲ್ಲರ ಪಾಪಗಳ ಪರಿಹಾರಕ್ಕಾಗಿ ಸಮರ್ಪಿಸಲ್ಪಟ್ಟ ಸಾರ್ವಕಾಲಿಕ ಯಜ್ಞವಾಗಿದ್ದಾನೆ. ಆತನೆಂದಿಗೂ ಪಾಪ ಮಾಡಿರಲಿಲ್ಲ, ಆದರೆ ನಮ್ಮನ್ನು ತಿರುಗಿ ದೇವರ ಬಳಿಗೆ ಸೇರಿಸುವುದಕ್ಕಾಗಿ ಆತನು ಪ್ರಾಣ ಕೊಟ್ಟನು ***(1 ಪೇತ್ರ. 3:18).*** ಯೇಸು ಯಜ್ಞಾರ್ಪಿತನಾದದ್ದು ನಮಗೋಸ್ಕರವೆಂದೂ ಹಾಗೂ ನಮ್ಮ ಪಾಪಗಳ ನಿವಾರಣೆಗಾಗಿ ಆತನಲ್ಲೇ ಭರವಸೆಯುಳ್ಳವರಾಗಿರಬೇಕೆಂದು ತಿಳಿದವರಾಗಿರುವ ಮೂಲಕವಾಗಿ ನಾವು ದೇವರೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿ ನಿತ್ಯಜೀವ ಹಾಗೂ ಅದರ ಮೂಲಕ ಲಭ್ಯವಿರುವ ಇತರೆಲ್ಲಾ ಆಶೀರ್ವಾದಗಳನ್ನು ಅನುಭವಿಸಬಹುದಾಗಿದೆ. ಇದರ ಫಲವಾಗಿ ನಾವು ಬದಲಾದ ಹೃದಯವುಳ್ಳವರಾಗಿ ದೇವರೆಡೆಗೂ ಇತರ ವಿಶ್ವಾಸಿಗಳೆಡೆಗೂ ಸರಿಯಾದ ಮನೋಭಾವ (ನಡವಳಿಕೆ) ಉಳ್ಳವರಾಗುತ್ತೇವೆ. ಆ ಮೂಲಕವಾಗಿ ನಮ್ಮಲ್ಲಿ ಆಂತರಿಕವಾಗಿಯೂ, ಬಾಹ್ಯವಾಗಿಯೂ ಬದಲಾವಣೆಗಳಾಗುವುವು. ಇದನ್ನೇ ಸತ್ಯವೇದವು **"**ಹೊಸದಾಗಿ ಹುಟ್ಟುವಿಕೆ**"** ಯೆಂದು ಕರೆದಿರುತ್ತದೆ ***(ಯೋಹಾನ 3:3).***

> ಸತ್ಯವೇದವು ನಿಮ್ಮನ್ನು ಪಾಪದಿಂದ ದೂರವಿರಿಸುತ್ತದೆ. ಇಲ್ಲದಿದ್ದಲ್ಲಿ ಪಾಪವು ನಿಮ್ಮನ್ನು ಸತ್ಯವೇದದಿಂದ ದೂರವಿರಿಸುತ್ತದೆ.
>
> (ಡಿ.ಎಲ್.ಮೂಡಿ)

ನಾವು ನಮ್ಮನ್ನೇ ಪರಿಶುದ್ಧರಾಗಿಸುವುದು ಅಸಾಧ್ಯವಾಗಿದೆ, ಅದು ದೇವರ ಕೃಪೆಯಿಂದ ಮಾತ್ರ ಸಾಧ್ಯ. ಆದರೆ ನಾವು ಹೊಸದಾಗಿ ಹುಟ್ಟುವಾಗ ನೂತನ ಸೃಷ್ಠಿಯಾಗಿ ಮಾರ್ಪಡುವೆವು. ನಾವು ಯೇಸುವನ್ನೇ ಕರ್ತನೆಂದೂ, ರಕ್ಷಕನೆಂದೂ ಅಂಗೀಕರಿಸಿಕೊಳ್ಳುವಾಗ ನಮ್ಮ ಹಳೆಯ ಸ್ವಭಾವ ಹಾಗು ಹವ್ಯಾಸಗಳೆಲ್ಲವೂ ನೂತನವಾಗಿ ಮಾರ್ಪಡುತ್ತವೆ. ನಾವು ಪಾಪದ ಪಾಲಿಗೆ ಸತ್ತವರೂ ಕ್ರಿಸ್ತನಿಗಾಗಿ ಜೀವಿಸುವವರೂ ಆಗಿರುತ್ತೇವೆ, ಹಾಗಿದ್ದರೂ ಹಳೆಯ ಹವ್ಯಾಸಗಳಲ್ಲಿ ಕೆಲವು ಅಳಿದು ಹೋಗಲಾರದೆಂದು ಅನುಭವಗಳು ಹೇಳುತ್ತವೆ. ನಾವು ಪಕ್ವತೆ ಹೊಂದಿದ ಕ್ರೈಸ್ತರಾಗಿ ಮಾರ್ಪಡುವಾಗ ಪ್ರತಿದಿನವೂ ಯೇಸುವಿನ ಸಾರೂಪ್ಯವನ್ನು ಹೊಂದಿದವರಾಗಿರಬೇಕು. ಅಪೋಸ್ತಲನಾದ ಪೌಲನು ಈ ಕ್ರಮವನ್ನು ಕಾದಾಟವೆಂದು ಕರೆದಿದ್ದಾನೆ ***(ರೋಮಾ 7:14–25).*** ಈ ವಿಧದ ಹೋರಾಟಗಳನ್ನು ಯಾವಾಗಲೂ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿನ ಪ್ರಾರ್ಥನೆಯಿಂದ ಮಾತ್ರ ಗೆಲ್ಲಲು ಸಾಧ್ಯ. ಯೇಸು ಹೊಂದಿದ್ದ ಆ ಜಯವನ್ನು ನಾವು ನಮ್ಮ ಸ್ವ –ಪ್ರಯತ್ನಗಳಿಂದ ಒಳ್ಳೆಯವರಾಗಿರಲು ಪ್ರಯತ್ನಿಸುವ ಮೂಲಕ ಸಾಧ್ಯವಾಗದು. ನಾವು ಯೇಸುವಿನಂತಾಗಲು ಪವಿತ್ರಾತ್ಮನ ಸಹಾಯವನ್ನು ಬಯಸುವವರಾಗಿರಬೇಕೆಂದು ಅನೇಕ ವಾಕ್ಯ ಭಾಗಗಳು ನಮ್ಮನ್ನು ಪ್ರೋತ್ಸಾಹಿಸುತ್ತಿವೆ.

*"ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶಮಾಡುವುದಾದರೆ ಜೀವಿಸುವಿರಿ, ಯಾರಾರು ದೇವರ ಆತ್ಮನಿಂದ ನಡೆಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು"* ***(ರೋಮಾ 8:13–14).***

*"ನೀವು ನೂತನ ಮನುಷ್ಯನನ್ನು ಧರಿಸಿಕೊಂಡವರಾಗಿದ್ದೀರಿ. ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇ ದಿನೇ ಅವನು ನೂತನವಾಗುತ್ತಾನೆ"* ***(ಕೊಲೊಸ್ಸೆ 3:10).***

*"ಆದ ಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವುದರಿಂದ ಮೇಲಿರುವವುಗಳನ್ನೇ ಹುಡುಕಿರಿ, ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ"* ***(ಕೊಲೊಸ್ಸೆ 3:1).***

ನಮ್ಮಲ್ಲಿರುವ ಪೂರ್ವ ಸ್ವಭಾವಗಳನ್ನು ಸಾಯಿಸಲು ಆತ್ಮೀಯ ಪರಿಪಕ್ವತೆಯ ಅಗತ್ಯತೆಯಿದೆ. ನಮ್ಮಲ್ಲಿರುವ ನಾನತ್ವ, ಗರ್ವ, ಅಹಂಭಾವ, ಸ್ವ – ಚಿತ್ತ ಹಾಗೂ ಅವಿಧೇಯತ್ವಗಳನ್ನು ಬಿಟ್ಟು ಅರಿಕೆ ಮಾಡುವಾಗ ದೇವರು ನಮ್ಮನ್ನು ಕ್ಷಮಿಸಿ ಬದಲಾಯಿಸುವನು. ನಮ್ಮಲ್ಲಿರುವ ನಾನತ್ವಗಳಿಗೆ ಬದಲಾಗಿ ಕ್ರಿಸ್ತನೇ ನಮ್ಮ ಜೀವನದ ಸರ್ವಸ್ವವೂ ಆಗಿರಲಿ. ಅವಿವೇಕತನ ಹಾಗೂ ತಪ್ಪುಗಳನ್ನು ನಾವಿನ್ನೂ ಮಾಡುವವರಾಗಿದ್ದರೂ ಕ್ರಿಸ್ತನ ಸಾರೂಪ್ಯವನ್ನು ಹೊಂದಿ ಆತನೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಬೇಕೆನ್ನುವುದೇ ಜಯಶಾಲಿಗಳಾಗಿ ಜೀವಿಸಬಯಸುವವರ ಬಯಕೆ ಆಗಿರುತ್ತದೆ.

ಒಂದು ರೀತಿಯಲ್ಲಿ ಹೇಳುವುದಾದರೆ ನಾವು ತೋಯಿಸಲ್ಪಟ್ಟ ಪಾಚಿ (ಸ್ಪಂಜು) ಯೋಪಾದಿಯಲ್ಲಿದ್ದು ನಮ್ಮ ಸುತ್ತಮುತ್ತಲನ್ನು ತೋಯಿಸುವವರಾಗಿದ್ದೇವೆ. ನಾವು ಯಾರೊಂದಿಗೆ ಹೆಚ್ಚು ಕಾಲವನ್ನು ಕಳೆಯುತ್ತೇವೋ ನಾವೂ ಅವರಂತೆಯೇ ಆಗಿರುತ್ತೇವೆ. ನಾವು ದೇವರ ಸನ್ನಿಧಾನದಲ್ಲಿ ಪ್ರಾರ್ಥನೆ ಹಾಗೂ ದೇವರ ವಾಕ್ಯದ ಧ್ಯಾನದಲ್ಲಿ ಹೆಚ್ಚು ಕಾಲವನ್ನು ಕಳೆಯುವವರಾಗಿದ್ದು ನಮ್ಮ ಹೃದಯಗಳಲ್ಲಿ ರೂಪಾಂತರವನ್ನು ತರುವಂತೆ ಯೇಸುವಿಗೂ ಪವಿತ್ರಾತ್ಮನಿಗೂ ಹೆಚ್ಚು ಕಾಲಾವಕಾಶಗಳನ್ನು ಕೊಡುವಾಗ ನಾವು ಹೆಚ್ಚೆಚ್ಚಾಗಿ ಕ್ರಿಸ್ತನಂತಾಗಿ ಮಾರ್ಪಡುವೆವು. ನಂತರ ನಮ್ಮ ಜೀವನದಲ್ಲಿ ಬರುವ ಶೋಧನೆ ಹಾಗು ಸಂಕಟಗಳಿಂದ ಹೊಯ್ದಾಡಲ್ಪಡುವಾಗ ನಾವು ದೇವರಾತ್ಮನಿಂದ ಉಂಟಾಗುವ ಫಲಗಳಾದ

– ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಕ್ಷಮೆದಮೆಗಳನ್ನೇ ಪ್ರದರ್ಶಿಸುವವರಾಗಿರುತ್ತೇವೆ ***(ಗಲಾತ್ಯ 5:22–23).*** ಆದರೆ ಅದಕ್ಕೆ ವ್ಯತಿರಿಕ್ತವಾಗಿ ಲೌಕಿಕವಾದ ಆಸೆ–ಆಕಾಂಕ್ಷೆಗಳಿಗಾಗಿ ನಾವು ಹೆಚ್ಚು ಗಮನ ಕೊಡುವುದಾದಲ್ಲಿ ನಮ್ಮ ಸ್ವಭಾವವೂ ಸಹ ಅದೇ ರೀತಿಯಾಗಿ ಮಾರ್ಪಡುತ್ತದೆ ಹಾಗೂ ನಮ್ಮೊಳಗಿರುವ ಪವಿತ್ರಾತ್ಮನನ್ನು ನೋಯಿಸುವವರಾಗಿರುತ್ತೇವೆ.



ಪವಿತ್ರಾತ್ಮನು ನಮ್ಮ ಸಹಾಯಕ್ಕಾಗಿ ಎಲ್ಲಾ ಕಾಲಗಳಲ್ಲಿಯೂ ಲಭ್ಯವಿರುವನು, ಆತನನ್ನೇ ಆಯ್ದುಕೊಳ್ಳುವ ಮುಕ್ತ ಮನಸ್ಸನ್ನು ಆತನು ನಮಗೆ ಕೊಟ್ಟಿರುವನು ಹಾಗೂ ಆತನ ನಡೆಸುವಿಕೆಯ ಸಹಾಯವನ್ನು ನಾವು ಕೇಳಿಕೊಳ್ಳುವಾಗ ಮಾತ್ರವೇ ಆತನಿಂದ ಸಹಾಯವನ್ನು ಪಡೆಯಬಹುದಾಗಿದೆ ***(ಗಲಾತ್ಯ 5:16–17).***

ನಮ್ಮ ಮೇಲೆ ಆತನಿಗಿರುವ ಕರ್ತತ್ವವನ್ನು ಈ ಕೆಳಗಿನ ಪ್ರಾರ್ಥನೆಯೊಂದಿಗೆ ಗಟ್ಟಿಯಾಗಿ ಘೋಷಿಸಬಹುದಾಗಿದೆ:

**ಕರ್ತೃತ್ವದ ಪ್ರಾರ್ಥನೆ**




"ಕರ್ತನಾದ ಯೇಸುವೇ ನನ್ನ ಜೀವನದಲ್ಲಿ ನಿನ್ನ ಅಗತ್ಯತೆಯನ್ನು ಅರಿತವನಾಗಿ ನಿನ್ನನ್ನೇ ನನ್ನ ಕರ್ತನೂ, ರಕ್ಷಕನೂ ಹಾಗೂ ವಿಮೋಚಕನಾಗಿ ಅಂಗೀಕರಿಸಿಕೊಳ್ಳುವೆನು. ನನ್ನ ಜೀವನದ ಸಂಪೂರ್ಣ ಒಡೆಯನಾಗಿರುವುದಕ್ಕೆ ನಿನ್ನನ್ನೇ ಆಹ್ವಾನಿಸುತ್ತಿದ್ದೇನೆ ...

- ನನ್ನ ಆತ್ಮದ ಒಡೆಯನೂ ನನ್ನೆಲ್ಲಾ ಆರಾಧನೆಗಳಿಗೆ ಯೋಗ್ಯನೂ,
- ನನ್ನ ಮನಸ್ಸಿನ, ಮನೋಭಾವದ ಹಾಗೂ ಆಲೋಚನೆಗಳ ಒಡೆಯನೂ,
- ನನ್ನ ಭಾವನೆ ಹಾಗೂ ಅನಿಸಿಕೆಗಳ ಒಡೆಯನೂ,
- ನನ್ನ ತೀರ್ಮಾನ ಹಾಗೂ ತೀರ್ಮಾನಗಳಿಗೆ ಒಡೆಯನೂ,
- ನನ್ನ ಶರೀರ ಹಾಗೂ ಶಾರೀರಿಖ ಆರೋಗ್ಯಗಳ ಒಡೆಯನೂ,
- ನನ್ನಲ್ಲಿನ ಲೈಂಗಿಕತ್ವ ಹಾಗೂ ಅದರ ತೋರ್ಪಡಿಕೆಯ ಒಡೆಯನೂ,
- ನನ್ನ ಕುಟುಂಬದ ಹಾಗೂ ಬಂಧು ಬಾಂಧವರೆಲ್ಲರ ಒಡೆಯನೂ,
- ನನ್ನ ಕೆಲಸ ಹಾಗೂ ನಿನಗಾಗಿ ಮಾಡುತ್ತಿರುವ ಸೇವೆಗಳಿಗೆ ಒಡೆಯನೂ,
- ನನ್ನಲ್ಲಿರುವ ಸಾಮಾನು ಸರಂಜಾಮು ಹಾಗೂ ನನ್ನ ಅಗತ್ಯತೆಗಳ ಒಡೆಯನೂ,
- ನನ್ನೆಲ್ಲಾ ಹಣಕಾಸು ವಿಚಾರಗಳ ಒಡೆಯನೂ,
- ನನ್ನ ಮರಣದ ವಿಧಾನ ಹಾಗೂ ಕಾಲಾವದಿಯ ಒಡೆಯನೂ ಆಗಿರು.

ನನ್ನನ್ನು ವಿಮೋಚಿಸಿ ಸ್ವತಂತ್ರನನ್ನಾಗಿಸುವುದಕ್ಕಾಗಿ ನಿನ್ನ ರಕ್ತವನ್ನೇ ಸುರಿಸಿದ್ದಕ್ಕಾಗಿ ವಂದನೆಗಳು, ಯೇಸುವಿನ ನಾಮದಲ್ಲಿ ಬೇಡಿಕೊಳ್ಳುತ್ತೇನೆ, ಆಮೆನ್".

# ಮಾನಸಾಂತರ



*"ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ"* ***(ಮಾರ್ಕ 1:15)***

ಯೇಸು ತನ್ನ ಸೇವೆಯ ಆರಂಭದಲ್ಲಿ ಸಾರಿದ ಈ ಪ್ರಮುಖ ಸಂದೇಶವೇ ಜಯಕರವಾದ ಕ್ರೈಸ್ತ ಜೀವನಕ್ಕಿರುವ ಮೂಲವಾಗಿದೆ.

## ಮಾನಸಾಂತರಪಡುವಿಕೆ

ನಾವು ಮಾಡುತ್ತಿರುವ ಪಾಪದ ಕೃತ್ಯಗಳನ್ನು ಬಿಟ್ಟುಬಿಟ್ಟು ದೇವರ ಕಡೆಗೆ ತಿರುಗಿಕೊಳ್ಳುವುದೇ ಮಾನಸಾಂತರ ಪಡುವಿಕೆಯಾಗಿದೆ. ಅದೊಂದು ತೀರ್ಮಾನವಾಗಿದೆ, ನಾವು **ಮಾನಸಾಂತರ ಪಡಲು** ತೀರ್ಮಾನಿಸದಿದ್ದಲ್ಲಿ ಅದರರ್ಥವು ನಾವು **ಮಾನಸಾಂತರ ಪಡದಿರಲು** ತೀರ್ಮಾನಿಸಿದ್ದೇವೆ ಎನ್ನುವುದಾಗಿದೆ. ಮಾನಸಾಂತರ ಪಡುವುದೆಂದರೆ ಕೇವಲ ಮನಸ್ಸಿನಲ್ಲಿ ಪರಿತಾಪ ಪಡುವುದಾಗಲೀ ಅಥವಾ 'ನನ್ನನ್ನು ಕ್ಷಮಿಸಿ' ಎಂದು ಕೇಳಿಕೊಳ್ಳುವುದಲ್ಲ. ಕೆಲವೊಮ್ಮೆ ನಾವು ಮಾಡಿದ ಕೃತ್ಯಗಳಿಗಾಗಿ ತಪ್ಪಿನ ಅರಿವಾಗಿ ಕೇವಲ ಇಸ್ಕರಿಯೋತ ಯೂದನ ಹಾಗೆ ಕಣ್ಣೀರಿಟ್ಟು ಗೋಳಾಡುವುದು ಯಾವ ಪ್ರಯೋಜನಕ್ಕೂ ಬಾರದು (ಮತ್ತಾಯ 27:3). ಆದರೆ ನಾವು ಮಾಡಿದ ತಪ್ಪುಗಳನ್ನು ದೇವರ ಸನ್ನಿಧಿಯಲ್ಲಿ ಒಪ್ಪಿಕೊಂಡು ನಮ್ಮನ್ನು ಕ್ಷಮಿಸುವಂತೆ ಆತನನ್ನು ಜಕ್ಕಾಯನಂತೆ ***(ಲೂಕ 19:1–10)*** ಬೇಡಿಕೊಳ್ಳಬೇಕು. ನಾವು ಪಾಪ ಮಾಡುವಾಗಲೆಲ್ಲಾ ದೇವರನ್ನೇ ದುಃಖಪಡಿಸುತ್ತಿರುವೆ ಎಂಬುದನ್ನು ಅರಿತಿರಲೇಬೇಕಾಗಿದೆ. ಈ ರೀತಿಯ ಪಾಪಕೃತ್ಯಗಳನ್ನು ನಾವು ಪುನರಾವರ್ತಿಸದಂತೆ ನಮಗೆ ದೇವರ ಸಹಾಯ ಅತ್ಯಗತ್ಯ.

> **ಸಾಕ್ಷಿ**
> **ಕ್ರಿಸ್ತನೊಂದಿಗಿನ ನನ್ನ ಪ್ರಥಮ ಮುಖಾಮುಖಿ**
>
> *"ನಾನೊಬ್ಬ ಯೌವನಸ್ಥನಾಗಿದ್ದು ರಕ್ಷಣೆಯ ಬಗ್ಗೆ ಭರವಸೆ ಇಲ್ಲದವನಾಗಿದ್ದು ಅದನ್ನು "ನಂಬಿಕೆ" ಯಿಂದ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದ್ದೆನು. ನಾನು ಮಾಡಿದ ತಪ್ಪುಗಳ ವಿಷಯದಲ್ಲಿ ಪಶ್ಚಾತ್ತಾಪಪಟ್ಟ ಕ್ಷಣದಲ್ಲೇ ನನ್ನನ್ನು ಪೀಡಿಸುತ್ತಿದ್ದ ವಿಷಯಗಳಿಂದ ಬಿಡುಗಡೆ ಹಾಗೂ ದೈವೀಕ ಸಮಾಧಾನ ಹೊಂದಿ "ನಾನು ನಿನ್ನನ್ನು ಎಂದಿಗೂ ಕೈ ಬಿಡೆನು, ತಿರಸ್ಕರಿಸೆನು" ಎಂಬ ದೈವೀಕ ಶಬ್ದವನ್ನು ಅಂತರ್ಯದಲ್ಲಿ ಕೇಳಿಸಿಕೊಂಡೆನು."*

ಪ್ರತಿಯೊಬ್ಬ ಕ್ರೈಸ್ತನೂ ತನ್ನ ಜೀವಿತದಲ್ಲಿ ಒಮ್ಮೆಯಾದರೂ ಮಾನಸಾಂತರ ಪಡಬೇಕಾಗಿರುತ್ತದೆ. ಆದರೆ ಶ್ರೇಷ್ಠ ರೀತಿಯ ಜಯಕರವಾದ ಜೀವನವನ್ನು ನಡೆಸಬೇಕಾಗಿದ್ದಲ್ಲಿ ನಾವು ಸತತವಾಗಿ ಮಾನಸಾಂತರ ಪಡುತ್ತಿರಲೇಬೇಕಾಗುತ್ತದೆ. "ಅನೇಕ ಕ್ರೈಸ್ತರ

ಮಾನಸಾಂತರವು ಅವರನ್ನು ಕೇವಲ ದೇವರ ರಾಜ್ಯಕ್ಕೆ ಸೇರಿಸುವಷ್ಟು ಮಾತ್ರ ಶಕ್ತ್ಯವಾಗಿದೆಯೇ ಹೊರತು ದೇವರ ರಾಜ್ಯದ ಬಲವನ್ನು ಕಾಣುವಷ್ಟು ಬಲವಾಗಿಲ್ಲ" (ರ್‍ಯಾಂಡಿ ಕ್ಲಾರ್ಕ್). ಪಶ್ಚಾತ್ತಾಪಪಟ್ಟು ಅರಿಕೆ ಮಾಡಿ ಬಿಟ್ಟುಬಿಡದ ಪಾಪವು ಜನರನ್ನು ದುರಾತ್ಮಗಳ ದಬ್ಬಾಳಿಕೆಗೂ ಪೀಡನೆಗಳಿಗೂ ನಡೆಸುತ್ತದೆ.

ನಮ್ಮಲ್ಲಿರುವ ನ್ಯೂನ್ಯತೆಗಳೆಲ್ಲವನ್ನು ದೇವರು ಬಲ್ಲವನಾಗಿದ್ದಾನೆ. "ನಾವು ಯಾವಾತನಿಗೆ ಲೆಕ್ಕ ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ, ಬಯಲಾದದ್ದಾಗಿಯೂ ಆಗಿದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯು ಒಂದೂ ಇಲ್ಲ" ***(ಇಬ್ರಿಯ 4:13).*** ನಾವು ಗುಪ್ತವಾಗಿ ಮಾಡುವ ಪಾಪಗಳನ್ನೂ ದೇವರು ಬಲ್ಲವನಾಗಿದ್ದಾನೆ. ಕೀರ್ತನೆಗಾರನಾದ ಮೋಶೆಯು ದೇವರೊಂದಿಗೆ ಹೇಳಿದ್ದೇನೆಂದರೆ – *"ನಮ್ಮ ದ್ರೋಹಗಳನ್ನು ನಿನ್ನ ಮುಂದೆಯೂ ನಮ್ಮ ಗುಪ್ತಪಾಪಗಳನ್ನು ನಿನ್ನ ತೇಜೋದೃಷ್ಟಿಯಲ್ಲಿಯೂ ಇಟ್ಟುಕೊಂಡಿದ್ದೀ"* ***(ಕೀರ್ತನೆ 90:8).*** ಇದರರ್ಥವು ದೇವರು ತನ್ನಲ್ಲಿಟ್ಟಿರುವ ಜ್ಞಾಪಕಾರ್ಥದ ಪುಸ್ತಕದಲ್ಲಿ ಈ ಎಲ್ಲಾ ತಪ್ಪುಗಳನ್ನು ತೆರೆದಿಟ್ಟವನಾಗಿ ನಾವು ಕ್ಷಮಾಪಣೆಗಾಗಿ ಪಶ್ಚಾತ್ತಾಪ ಹೊಂದಲು ಆತನ ಬಳಿಗೆ ಬರುವುದನ್ನೇ ಕಾಯುತ್ತಿದ್ದಾನೆಂಬುದಾಗಿದೆ. ನಾವು ಪಶ್ಚಾತ್ತಾಪ ಪಡುವಾಗ ಆತನು ತನ್ನಲ್ಲಿರುವ ಲೇಖನಿಯನ್ನು ಯೇಸುಕ್ರಿಸ್ತನ ರಕ್ತದಲ್ಲಿ ಮುಳುಗಿಸಿದವನಾಗಿ ನಮ್ಮ ಪಾಪಗಳೆನ್ನೆಲ್ಲಾ ಅಳಿಸಿಬಿಡುವನು.

*"ಯಾರ ಅಪರಾಧಗಳು ಪರಿಹಾರವಾಗಿದೆಯೋ ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು, ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವುದಿಲ್ಲವೋ ಆ ಮನುಷ್ಯನೇ ಧನ್ಯನು"* ***(ಕೀರ್ತನೆ 32:1–2; ರೋಮಾ 4:7–8).***

*"ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನೂ ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು"* ***(1 ಯೋಹಾನ 1:9).***

1 ಯೋಹಾನ 1:9 ರ ಪ್ರಕಾರ – ತಮ್ಮ ಪಾಪಗಳನ್ನು ಒಪ್ಪಿಕೊಂಡು ಆತನಿಗೆ ಅರಿಕೆ ಮಾಡಿದರೆ ಮಾತ್ರ ಕ್ಷಮಿಸುವನೆಂಬುದೇ ಆತನ ವಾಗ್ದಾನವಾಗಿದೆ.

# ನಂಬುವಿಕೆ

ನಾವು ನಂಬಬೇಕೆಂದು ಯೇಸು ಬಯಸುವ ಸುವಾರ್ತೆಯಲ್ಲಿನ 3 ಸತ್ಯಾರ್ಥಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ;

1. ಯೇಸು ದೇವರ ಕುಮಾರನೂ, ಅಭಿಷಿಕ್ತನಾದ ಕ್ರಿಸ್ತನೂ ಅಥವಾ ಮೆಸ್ಸೀಯನಾಗಿದ್ದಾನೆ;
2. ನಮ್ಮ ಪಾಪಗಳಿಗಾಗಿ ಯೇಸು ಸತ್ತನು,
3. ಯೇಸು ಮೂರನೇ ದಿನದಲ್ಲಿ ಪುನರುತ್ಥಾನ ಹೊಂದಿದ್ದಾನೆ.

ಪುನರುತ್ಥಾನ ಹೊಂದಿದ ಯೇಸು 500 ಕ್ಕಿಂತ ಹೆಚ್ಚು ಜನರಿಗೆ ಪ್ರತ್ಯಕ್ಷನಾಗಿದ್ದಾನೆ, ಯೇಸು ಕ್ರಿಸ್ತನು ಹಿಂತಿರುಗಿ ಬರುವಾಗ ಆತನವರೂ ಸಹ ಪುನರುತ್ಥಾನ ಹೊಂದುವರು. ಈ ಸತ್ಯಾರ್ಥಗಳನ್ನು ಸತ್ಯವೇದದ ಅನೇಕ ಕಡೆಗಳಲ್ಲಿ ಉಲ್ಲೇಖಿಸಲಾಗಿದೆ, ಮುಖ್ಯವಾಗಿ

1 ಕೊರಿ 15:1–6, 23. ಈ ಸತ್ಯಾರ್ಥಗಳನ್ನು ನಾವು ಅಂಗೀಕರಿಸುವುದಾದರೆ ನಾವು ನಂಬಿಕೆಯುಳ್ಳವರಾಗಿದ್ದೇವೆ. ನಮ್ಮಲ್ಲಿರುವ **ವಿಶಿಷ್ಟವಾದ** ಪಾಪಗಳನ್ನು ನೀಗಿಸುವಂತೆ ಆತನಿಗೆ ಒಪ್ಪಿಸುವ ಮೂಲಕವಾಗಿ ನಮ್ಮ ನಂಬಿಕೆಯನ್ನು ಕಾರ್ಯರೂಪಗೊಳಿಸಿರುವವರಾಗಿರುತ್ತೇವೆ. ನಮ್ಮನ್ನು ನಿಂದೆಗೆ ಒಳಪಡಿಸಿರುವ ಅಥವಾ ದೇವರನ್ನೇ ವೇದನೆಪಡಿಸಿರುವ, ಆತನಿಂದ ನಮ್ಮನ್ನು ಬೇರ್ಪಡಿಸಿರುವ ಹಾಗೂ ಆತನಲ್ಲಿರುವ ಜೀವಭಾದ್ಯರ ಪಟ್ಟಿಯಿಂದ ನಮ್ಮ ಹೆಸರನ್ನು ಅಳಿಸಿಹಾಕಬಹುದಾದ ಕಾರ್ಯಗಳನ್ನು ನಿಮಗೆ ತೋರಿಸಿಕೊಡುವಂತೆ ಈಗಲೇ ದೇವರನ್ನು ಬೇಡಿಕೊಳ್ಳಿರಿ.

# ನಮ್ಮ ಪಾಪಗಳ ಬಗ್ಗೆ ತಿಳುವಳಿಕೆ ಉಳ್ಳವರಾಗಿರುವುದು

ನಮ್ಮ ಪಾಪಗಳ ಬಗ್ಗೆ ತಿಳುವಳಿಕೆಯುಳ್ಳವರಾಗಿರುವುದೇ ಮಾನಸಾಂತರ ಪಡುವಿಕೆಯ ಪ್ರಥಮ ಹೆಜ್ಜೆಯಾಗಿದೆ. ದೈವೀಕ ತರಗತಿಯನ್ನು (ಪ್ರಮಾಣ) ಪಾಲಿಸಲಾಗದಿರುವುದೇ ಪಾಪವಾಗಿದೆ. ನಮ್ಮ ಆಲೋಚನೆಗಳು ಕ್ರಿಯೆಗಳೂ ಯೇಸುವಿನದಲ್ಲವೆಂದು ನಾವು ಗ್ರಹಿಸಿಕೊಳ್ಳುವಾಗಲೆಲ್ಲಾ ಪಶ್ಚಾತ್ತಾಪ ಪಡಬೇಕಾಗಿರುತ್ತದೆ. ಸತ್ಯವೇದವು ಪಾಪವೆಂದು ಹೇಳಿರುವ ವಿಷಯಗಳನ್ನು ನಾವಿರುವ ಸಂಸ್ಕೃತಿಯು ಒಪ್ಪಲಿಕ್ಕಿಲ್ಲ. ನಾವು ಮಾನಸಾಂತರ ಪಡಬೇಕಾಗಿರುವ ಅನೇಕ ವಿಷಯಗಳನ್ನೂ ವಾಕ್ಯಾಧಾರಗಳನ್ನೂ ಮುಂದಿನ ಪುಟಗಳಲ್ಲಿ ತಿಳಿಸಲಾಗಿದೆ. ನಾವು ವಿಮೋಚನಾಕಾಂಡ 20 ನ್ನು ಮಾನಸಾಂತರ ಪಡಬೇಕಿರುವ ವಿಷಯಗಳ ಪಟ್ಟಿಯನ್ನು ಹೋಲಿಸಿ ನೋಡಿದವರಾಗಿ ಪಾಪಮಯವಾದ ನಮ್ಮ ಗುಣ–ಸ್ವಭಾವಗಳನ್ನೂ ನಡವಳಿಕೆಗಳನ್ನೂ ತೋರಿಸಿಕೊಡುವಂತೆ ದೇವರನ್ನು ಬೇಡಿಕೊಳ್ಳೋಣ.

> ಪಾಪದ ಬಗ್ಗೆ ವಿವೇಚನೆಗಿರುವ ಸುಲಭ ವಿಧಾನ – ಆ ಘಟನೆ (ಕ್ರಿಯೆ) ಯು ಉಗಮಗೊಂಡಿದ್ದು ಬೆಳಕಿನ ರಾಜ್ಯದೊಳಗೋ ಅಥವಾ ಅಂಧಕಾರದ ರಾಜ್ಯದೊಳಗೋ ಎಂಬುದಾಗಿ ತಿಳಿದುಕೊಳ್ಳುವುದಾಗಿದೆ.
>
> (ವಿಕ್ಟರ್ ಡಿ'ಮೋಂಟೆ)

ನಮ್ಮಲ್ಲಿ ಅನೇಕರು ದೇವರಿಗಿಂತ ಇತರ ವಿಷಯಗಳಿಗೇ ಹೆಚ್ಚಿನ ಪ್ರಾಧಾನ್ಯತೆ ಕೊಡುವುದುಂಟು ***(1 ಯೋಹಾನ 5:21).*** ನಾವು ಇತರ ದೇವರುಗಳನ್ನು ಪೂಜಿಸುವವರೋ ಅಥವಾ ಕುಟುಂಬ ಸದಸ್ಯರನ್ನೋ – ಕ್ರೀಡಾ ವ್ಯಕ್ತಿಗಳನ್ನೋ – ಸಭಾಪಾಲಕರನ್ನೋ ಯೇಸುವಿಗಿಂತ ಹೆಚ್ಚಾಗಿ ಗೌರವಿಸುವುದುಂಟು. ನಮ್ಮ ಹೃದಯದಲ್ಲಿ ಇತರರ ಬಗ್ಗೆ ದುರ್ಮೋಹವುಳ್ಳವರೋ ಅಥವಾ ಕೆಟ್ಟ ಚಿತ್ರಗಳನ್ನು (ಬ್ಲೂ ಫಿಲಂ) ನೋಡಿದವರೋ ಆಗಿರಬಹುದು. ಇತರರನ್ನು ಗುಣಪಡಿಸಲು ಯೇಸುವಿನಿಂದ ಲಭ್ಯವಿರುವ ಸಮಾಧಾನ, ಸ್ವಸ್ಥತೆ, ಆಶೀರ್ವಾದಗಳಿಗೆ ಬದಲಾಗಿ ಅಂಧಕಾರದ ಬಲವನ್ನು ಉಪಯೋಗಿಸಿರಬಹುದು. ನಮ್ಮನ್ನು ವೇದನೆಪಡಿಸಿರುವವರನ್ನು ನಾವು ಕ್ಷಮಿಸದೆ ಅವರನ್ನು ಬಾಯಿ ಹಾಗೂ ಹೃದಯದ ಮೂಲಕ ಖಂಡಿಸುವವರೂ – ತೀರ್ಪು ಮಾಡುವವರೂ ಆಗಿರಬಹುದು. ನಮ್ಮ ಕುಟುಂಬದವರ (ಗಂಡ–ಹೆಂಡತಿ–ಮಕ್ಕಳು) ವಿಷಯದಲ್ಲಿ ಬಹಳ ಕೋಪಿಷ್ಟರಾಗಿ ಹೊಡೆದಾಡುವವರೂ. ಇತರರ ಬಗ್ಗೆ ಗೊಡ್ಡು ಹರಟೆಯವರೂ ಆಗಿದ್ದಿರಬಹುದು. ದೇವರು

**ಹೇಳದಿರುವ** “ಒಳ್ಳೆಯ ಕಾರ್ಯ” ಗಳನ್ನು ಮಾಡುವುದೂ ಸಹ ಪಾಪವಾಗಿದ್ದು ಇದರ ಬಗ್ಗೆ ಇಬ್ರಿಯ 6:1 ರಲ್ಲಿ ಹೆಚ್ಚಿನ ಮಾಹಿತಿ ಕೊಡಲಾಗಿದೆ. ಪ್ರತಿಯೊಂದು ಅಪರಾಧವೂ ಪಾಪವಾಗಿದ್ದು ಎಷ್ಟು ಸಾರಿ ಪುನರಾವರ್ತಿಸಿದರೂ ಅಥವಾ ಅದೆಷ್ಟು ಗಂಭೀರ ಸ್ವರೂಪದ್ದಾಗಿದ್ದರೂ ನಾವು ಪಶ್ಚಾತ್ತಾಪದಿಂದ ಕ್ಷಮೆಯಾಚಿಸುವಾಗ ದೇವರು ಕ್ಷಮಿಸುತ್ತಾನೆಂಬುದೇ ಶುಭಸಮಾಚಾರ (ಸುವಾರ್ತೆ) ವಾಗಿದೆ.

**ಸಾಕ್ಷಿ**

***ಯೇಸು ನನ್ನ ಸಂಸಾರವನ್ನು ಕ್ಷಣಾರ್ಧದಲ್ಲಿ ಸರಿಪಡಿಸಿದನು***

*“ಹೊಸದಾಗಿ ಜನಿಸಿದ ಅನುಭವವುಳ್ಳ ನಾನು ಆ ಅನುಭವ ಹೊಂದಿರದ ವ್ಯಕ್ತಿಯನ್ನು ಮದುವೆಯಾದೆ. ಅನೇಕ ವರ್ಷಗಳ ಕಾಲ ನಮ್ಮ ವೈವಾಹಿಕ ಜೀವನ ದುಸ್ಥಿತಿಯಲ್ಲಿತ್ತು. ಅನೇಕ ವರ್ಷಗಳ ನಂತರ ಅವಿಶ್ವಾಸಿಯನ್ನು ಮದುವೆಯಾಗಿದ್ದಕ್ಕೆ ಪಶ್ಚಾತ್ತಾಪ ಪಟ್ಟೆನು. ದೇವರು ನನ್ನ ಗಂಡನ ಜೀವನದಲ್ಲಿ ಕಾರ್ಯ ಮಾಡಿ ಅವರ ಪಾಪಗಳ ಬಗ್ಗೆ ಅರಿವನ್ನು ಹುಟ್ಟಿಸಲಾಗಿ ಅವರು ಪಶ್ಚಾತ್ತಾಪಪಟ್ಟು ನೂತನ ಜನನ ಹೊಂದಿದರು ಹಾಗೂ ದೇವರು ನಮ್ಮ ವೈವಾಹಿಕ ಜೀವನವನ್ನು ಸರಿಪಡಿಸಿದನು.”*

*“ಮನುಷ್ಯನೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆ ಮಾಡುವುದು: ಒಳಗಿನಿಂದ ಅಂದರೆ ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ, ಕಳ್ಳತನ, ಕೊಲೆ, ಹಾದರ, ದ್ರವ್ಯಾಶೆ, ಕೆಡುಕುತನ, ಮೋಸ, ಭಂಡುತನ, ಹೊಟ್ಟೆಕಿಚ್ಚು, ಬೈಗಳು, ಸೊಕ್ಕು, ಬುದ್ಧಿಗೇಡಿತನ ಇವೇ ಮೊದಲಾದ ಕೆಟ್ಟ ಆಲೋಚನೆಗಳು ಹೊರಡುತ್ತವೆ. ಈ ಕೆಟ್ಟ ವಿಷಯಗಳೆಲ್ಲಾ ಒಳಗಿನಿಂದ ಹೊರಟು ಮನುಷ್ಯನನ್ನು ಹೊಲೆ ಮಾಡುತ್ತದೆ”* (***ಮಾರ್ಕ 7:20–23,*** ಯೇಸುವಿನ ಮಾತುಗಳು).

*“ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಇವೆ; ಯಾವುವೆಂದರೆ – ಜಾರತ್ವ, ಭಂಡುತನ, ನಾಚಿಕೆಗೇಡಿತನ, ವಿಗ್ರಹಾರಾಧನೆ, ಮಾಟ, ಹಗೆತನ, ಹೊಟ್ಟೇಕಿಚ್ಚು, ಸಿಟ್ಟು, ಕಕ್ಷಭೇದ, ಭಿನ್ನಮತ, ಮತ್ಸರ, ಕುಡಿಕತನ, ದುಂದೌತನ, ಇಂಥವುಗಳೇ. ಇವುಗಳ ವಿಷಯದಲ್ಲಿ – ಇಂಥಾ ಕಾರ್ಯಗಳನ್ನು ನಡೆಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ. ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ – ಪ್ರೀತಿ, ಸಂತೋಷ, ಸಮಾಧಾನ, ಧೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ, ಇಂತವುಗಳೇ. ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವುದಿಲ್ಲ” **(ಗಲಾತ್ಯ 5:19–23).***

[ದೇವರು ‘ಕ್ಷಮಿಸದಿರುವ ಪಾಪ’ ವೂ ಸಹ ಒಂದುಂಟು ***(ಮತ್ತಾಯ 12:32; 1 ಯೋಹಾನ 5:16)*** ಆದರೆ ನಾವು ದೇವರೆಡೆಗೆ ಬರಬೇಕಾಗಿದ್ದಲ್ಲಿ ನಾವದನ್ನು ಮಾಡಿದವರಾಗಿರಬಾರದು]

ನಮ್ಮ ಪಾಪಗಳನ್ನು ದೇವರು ದ್ವೇಷಿಸುತ್ತಿದ್ದು ನಾವೂ ಸಹ ಅದನ್ನು ದ್ವೇಷಿಸುವವರಾಗಿರಬೇಕೆಂದು ದೇವರು ಬಯಸುವವನೂ ಆಗಿದ್ದಾನೆ. ಹಾಗಾಗುವಾಗ ಮಾತ್ರ ನಾವದನ್ನು ಬಿಟ್ಟು ಬಿಡಲು ಇಷ್ಟಪಡುತ್ತೇವೆ.

ನಮ್ಮನ್ನು ನಿಂದನೆಗೆ ಒಳಪಡಿಸಿರುವ ಅಥವಾ ದೇವರನ್ನೇ ವೇದನೆಪಡಿಸಿ ಆತನಿಂದ ನಮ್ಮನ್ನು ಬೇರ್ಪಡಿಸಿರುವ ಹಾಗೂ ಆತನಲ್ಲಿರುವ ಜೀವಬಾಧ್ಯರ ಪಟ್ಟಿಯಿಂದ ನಮ್ಮ ಹೆಸರನ್ನು ಅಳಿಸಿ ಹಾಕಬಹುದಾದ ಕಾರ್ಯಗಳನ್ನು ತೋರಿಸಿಕೊಡುವಂತೆ ಈಗಲೇ ದೇವರನ್ನು ಬೇಡಿಕೊಳ್ಳೋಣ.

*"ದೇವಾ ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೋ, ನನ್ನನ್ನು ಶೋಧಿಸಿ ನನ್ನ ಆಲೋಚನೆಗಳನ್ನು ಗೊತ್ತುಮಾಡು, ನಾನು ಕೇಡಿನ ಮಾರ್ಗದಲ್ಲಿರುತ್ತೇನೋ ನೋಡಿ ಸನಾತನ ಮಾರ್ಗದಲ್ಲಿ ನನ್ನನ್ನು ನಡೆಸು"* ***(ಕೀರ್ತನೆ 139:23–24).***


ಈ ಪ್ರಾರ್ಥನೆಯು ನಿಮಗೆ ಸಹಕಾರಿಯಾಗಿರಬಲ್ಲುದು.

"ಪರಲೋಕದಲ್ಲಿರುವ ತಂದೆಯೇ – ನನ್ನಿಂದ ಈಗಲೇ ತೆಗೆದುಹಾಕಲು ನೀನು ಬಯಸುತ್ತಿರುವ ಆ ನಿರ್ದಿಷ್ಟವಾದ ಪಾಪಗಳನ್ನು ದಯವಿಟ್ಟು ನನಗೆ ತೋರಿಸಿಕೊಡಿರಿ".



[ನಿರ್ದಿಷ್ಟವಾದ ಆಲೋಚನೆಗಳು, ಅನುಭವಗಳು ಅಥವಾ ತಿಳುವಳಿಕೆಗಾಗಿ ಕಾಯಿರಿ.]

## *ನಮ್ಮ ಪಾಪಗಳ ಅರಿಕೆ ಮಾಡುವಿಕೆ*



ನಮ್ಮಲ್ಲಿರುವ ಪಾಪಮಯವಾದ ನಡವಳಿಕೆ ಅಥವಾ ಮನೋಭಾವವನ್ನು ನಾವು ಗ್ರಹಿಸಿದ ನಂತರ ಆ ವಿಶಿಷ್ಟವಾದ ಪಾಪವನ್ನು ಅರಿಕೆ ಮಾಡಿ ಅದರಿಂದ ವಿಮುಕ್ತರಾಗಲು ತೀರ್ಮಾನಿಸಬೇಕಾಗಿದೆ. ನಮ್ಮ ಮನಸ್ಸಿನ ಮೇಲೆ ಪುನರಾವರ್ತಿಸುತ್ತಿರುವ ಪಾಪಗಳಿದ್ದಲ್ಲಿ ಅವುಗಳ ಮೇಲೆ ಜಯಹೊಂದಿ ಅವುಗಳಿಂದ ಬೇರ್ಪಟ್ಟು ಜೀವಿಸಲು ಸಹಾಯಿಸುವಂತೆ ದೇವರಲ್ಲಿ ಮತ್ತೆ ಮತ್ತೆ ಕೇಳಿಕೊಳ್ಳಬೇಕು. ನಮ್ಮ ಪಾಪಗಳನ್ನು **ಸೂಕ್ಷ್ಮವಾಗಿ** ಹೇಳಿಕೊಂಡು ಅರಿಕೆಮಾಡಬೇಕಾಗಿರುವುದು ಅತ್ಯಗತ್ಯವಾಗಿದೆ.

ನಮ್ಮ ನಿರ್ದಿಷ್ಟವಾದ ಪಾಪಗಳನ್ನು ದೇವರಿಗೆ ಅರಿಕೆ ಮಾಡಿದ ನಂತರ ಆ ಪಾಪದಿಂದ ವಿಮೋಚಿಸಲ್ಪಟ್ಟು ಸಂಪೂರ್ಣವಾಗಿ ದೇವರೆಡೆಗೆ ತಿರುಗಿಕೊಳ್ಳಲಾಗುವಂತೆ ಆತನೇ ನಮ್ಮನ್ನು ಕ್ಷಮಿಸಿ ಬದಲಾಯಿಸುವಂತೆ ಬೇಡಿಕೊಳ್ಳಬೇಕಿದೆ.

ಜನರು ತಮ್ಮ ಪಾಪಾಪರಾಧಗಳನ್ನು ಸೂಕ್ಷ್ಮವಾಗಿ ವಿವರಿಸಿರುವ ಬಗ್ಗೆ ಅನೇಕ ಉದಾಹರಣೆಗಳಿವೆ. ಉದಾ – ಅರಸನಾದ ದಾವೀದನ ವ್ಯಭಿಚಾರ, ಮೋಸಗಾರಿಕೆ ಹಾಗೂ ಕೊಲೆಗಾರಿಕೆ ***(2 ಸಮು 11–12).*** ದಾವೀದನ ಪಾಪಗಳನ್ನು ದೇವರು ನಾತಾನನಿಗೆ ಅದೇ ವಿಧಾನದಲ್ಲೇ ತಿಳಿಸಿದ್ದನು ***(2 ಸಮು 12:9–10).*** ನಾವು ಮಾಡಿರುವ ಪಾಪಗಳನ್ನು ದೇವರು ಸೂಕ್ಷ್ಮವಾಗಿ ಬಲ್ಲವನಾಗಿರುವುದರಿಂದ ನಮ್ಮ ಹೃದಯ–ಮನಸ್ಸು–ದೃಷ್ಟಿ–ಆಲೋಚನೆ ಯಾವುದೂ ಆತನಿಗೆ ಮರೆಯಾಗಿಲ್ಲ. ಆದ್ದರಿಂದ ಸಂಪೂರ್ಣವಾಗಿ ಎಲ್ಲವನ್ನೂ ಬಲ್ಲ ದೇವರ ಮುಂದೆ ಯಥಾರ್ಥವಾಗಿ ಅರಿಕೆ ಮಾಡಬೇಕು ಹಾಗೂ ನಮ್ಮ ಪಾಪಗಳ ಬಗ್ಗೆ ನಾವೇ ಜವಾಬ್ದಾರಿಕೆಯನ್ನು ವಹಿಸಬೇಕೆಂದು ದೇವರು ಬಯಸುತ್ತಿದ್ದಾನೆ ***(ಪ್ರಕ 2:23).***


ನಮ್ಮ ಪಾಪಗಳನ್ನು ನಾವು ಅರಿಕೆ ಮಾಡುವಾಗ ನಾವು ಪಾಪಿಗಳೆಂದು ದೇವರ ಮುಂದೆ ಬಹಿರಂಗವಾಗಿ ಒಪ್ಪಿಕೊಳ್ಳುತ್ತಿದ್ದೇವೆ. ನಾವು ಅರಿಕೆ ಮಾಡುತ್ತಿರುವ ಪಾಪಗಳು ಯಾವುದೆಂದು ಮುಕ್ತವಾಗಿ ಕರ್ತನಿಗೆ ತಿಳಿಸಬೇಕು. ಅರಿಕೆಮಾಡುವುದೆಂದರೆ "ಬಹಿರಂಗವಾಗಿ ಒಪ್ಪಿಕೊಳ್ಳುವುದಾಗಿದೆ". ಜೋರಾಗಿ ಅರಿಕೆ ಮಾಡುವುದರ ಮೂಲಕವಾಗಿ ದೈವೀಕ ಶಕ್ತಿಯು ಪ್ರಕಟಗೊಳ್ಳುತ್ತದೆ. ಗಟ್ಟಿಯಾಗಿ ಅರಿಕೆ ಮಾಡುವಿಕೆಯು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ, ಇಲ್ಲದಿದ್ದಲ್ಲಿ ಧ್ಯಾನಿಸುವಂತಿರುತ್ತದೆಯಷ್ಟೆ. ಸತ್ಯವೇದದಲ್ಲೆಲ್ಲೂ ಗುಪ್ತವಾಗಿ (ಮೌನವಾಗಿ) ಅರಿಕೆ ಮಾಡಿರುವ ಉದಾಹರಣೆಗಳಿಲ್ಲ. ನಾವು ಗಟ್ಟಿಯಾಗಿ *"ಯೇಸುವನ್ನೇ ಕರ್ತನೆಂದು ಅರಿಕೆ ಮಾಡಿದರೆ ..."* ***(ರೋಮಾ 10:9–10)*** *ಗಟ್ಟಿಯಾಗಿ ಅರಿಕೆ ಮಾಡುವ ಮೂಲಕ ದೈವೀಕ ಶಕ್ತಿಯು ಪ್ರಕಟವಾಗುತ್ತದೆ.*

ನಾವಾತನಿಗೆ ಅರಿಕೆ ಮಾಡದಿರುವ ಪಾಪಗಳನ್ನು ಕ್ಷಮಿಸುವೆನೆಂದು ದೇವರು ವಾಗ್ದಾನ ಮಾಡಿಲ್ಲ – *"ಆದರೆ ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ಥನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು"* ***(1 ಯೋಹಾನ 1:9; ಜ್ಞಾನೋ 28:13).***

*"ಆದುದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯ ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ"* ***(ಇಬ್ರಿಯ 4:16).***

# ನಮ್ಮನ್ನು ಕ್ಷಮಿಸಿ ಬದಲಾಯಿಸುವಂತೆ ದೇವರಲ್ಲಿ ಬೇಡಿಕೊಳ್ಳುವುದು

ನಮ್ಮ ಪಾಪಗಳನ್ನು ಅರಿಕೆ ಮಾಡಿದ ನಂತರ ಕ್ಷಮಿಸುವಂತೆ ದೇವರನ್ನು ಬೇಡಿಕೊಳ್ಳಬಹುದು. ನಮ್ಮನ್ನೂ ನಮ್ಮಿಂದ ಇತರರಿಗಾಗಿರುವ ದೋಷಗಳನ್ನೂ ಕ್ಷಮಿಸುವಂತೆ ದೇವರನ್ನು ಬೇಡಿಕೊಳ್ಳೋಣ ***(1 ಯೋಹಾನ 1:9)***. ನಮ್ಮನ್ನು ಯಾರಾದರೂ ವೇದನೆಪಡಿಸಿದವರಿದ್ದಲ್ಲಿ ಅವರನ್ನೂ ಸಹ ಕ್ಷಮಿಸಲು ಸಹಾಯಿಸುವಂತೆ ಬೇಡಿಕೊಳ್ಳೋಣ. ನಮ್ಮನ್ನು ಯೇಸುಕ್ರಿಸ್ತನ ಸ್ವರೂಪದಲ್ಲೇ ಬದಲಾಯಿಸುವಂತೆ ಬೇಡಿಕೊಳ್ಳೋಣ. ಆನಂತರ ಯೇಸುವನ್ನು ನಮ್ಮ ಹೃದಯಾಂತರಾಳಕ್ಕೂ ಹಾಗೂ ಆತನ ಪವಿತ್ರಾತ್ಮನ ಮೂಲಕ ನಮ್ಮನ್ನು ಸಂಪೂರ್ಣವಾಗಿ ತುಂಬಿಸುವಂತೆಯೂ ವಿಜ್ಞಾಪಿಸಿಕೊಳ್ಳಬೇಕಿದೆ.



**ನೀವು ಪಾಪಿಯೆಂದು ಒಪ್ಪಿಕೊಳ್ಳುತ್ತಿದ್ದಲ್ಲಿ ಪ್ರಾರ್ಥನಾ ಮಾರ್ಗದರ್ಶಿ**

- ನೀವು ಮಾಡಿರುವ ತಪ್ಪನ್ನು ವ್ಯಕ್ತವಾಗಿ ಒಪ್ಪಿಕೊಳ್ಳಿರಿ
- ನಿಮ್ಮನ್ನು ಕ್ಷಮಿಸಿ ಬದಲಾಯಿಸುವಂತೆ ಯಥಾರ್ಥವಾಗಿ ಬೇಡಿಕೊಳ್ಳಿರಿ
- ಕಾರ್ಯಗಳನ್ನು ಹೇಗೆ ಕ್ರಮಪಡಿಸಿಕೊಳ್ಳಬೇಕೆಂದು ತೋರಿಸಿ ಕೊಡಲು ಕೇಳಿಕೊಳ್ಳಿರಿ
- ಯೇಸುವನ್ನು ಮತ್ತೊಮ್ಮೆ ನಿಮ್ಮ ಹೃದಯದೊಳಕ್ಕೆ ಆಹ್ವಾನಿಸಿ ಪವಿತ್ರಾತ್ಮನಿಂದ ಸಂಪೂರ್ಣವಾಗಿ ತುಂಬಿಸುವಂತೆ ಕೇಳಿಕೊಳ್ಳಿರಿ

ಇತರರ ಮಧ್ಯದಲ್ಲಿ ಸೇವೆ ಮಾಡುವಾಗ ಜನರು ತಮ್ಮ ಗಟ್ಟಿಯಾದ ಧ್ವನಿಯಲ್ಲಿ ತಮ್ಮ ಸ್ವಂತ ಮಾತುಗಳಲ್ಲಿ ಅರಿಕೆ ಮಾಡಿ ಬೇಡಿಕೊಳ್ಳುವಂತೆ ಪ್ರೋತ್ಸಾಹಿಸಿರಿ ಹಾಗು ತಾವು ಕ್ಷಮಿಸಲ್ಪಟ್ಟಿರುವಿರೆಂಬ ಭರವಸೆಯನ್ನು ಅವರಿಗೆ ಕೊಡಿರಿ. ತಾವು ಕ್ಷಮಿಸಲ್ಪಟ್ಟಿದ್ದೇವೆಂಬ ಅನುಭವವು ಅವರ ಅಂತರಾಳದಲ್ಲಿ ಉಂಟಾಗುತ್ತದೆ, *"ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆಮಾಡಿರಿ"* ***(ಯಾಕೋಬ 5:16).***

ಪಶ್ಚಾತ್ತಾಪದ ಪ್ರಾರ್ಥನೆಯೊಂದಿಗೆ ದೇವರೆಡೆಗೆ ಬರುವ ಸರಳವಾದ ಪ್ರಾರ್ಥನೆಯನ್ನು ಕೆಳಗೆ ಕೊಡಲಾಗಿದೆ. ಹೃದಯದಿಂದ ಬರುವ ನಮ್ಮದೇ ಆದ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸುವುದು ಅತ್ಯಂತ ಪರಿಣಾಮಕಾರಿಯಾಗಿರುತ್ತದೆ.

**ಪಶ್ಚಾತ್ತಾಪದ ಪ್ರಾರ್ಥನೆ**



"ಪರಲೋಕದ ತಂದೆಯೇ, ನಾನು ನಿನಗೆ ವಿರುದ್ಧವಾಗಿ ತಪ್ಪು ಮಾಡಿರುವೆನೆಂದು ಅರಿಕೆ ಮಾಡಿಕೊಳ್ಳುತ್ತೇನೆ. ನನ್ನ ಪಾಪಗಳ ಪರಿಹಾರಕ್ಕಾಗಿ ಯೇಸುವಿನ ರಕ್ತವು ಸುರಿಸಲ್ಪಟ್ಟಿರುವುದರಿಂದ ನಿನಗೆ ವಂದನೆಗಳು. ನಾನು ತಪ್ಪು ಮಾಡಿರುವುದನ್ನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ."

"ನಾನು ಮಾಡಿರುವ ಈ ಮುಂದಿನ **ವಿಶಿಷ್ಟವಾದ** ಪಾಪಗಳನ್ನು ***(... ಒಂದೊಂದನ್ನೂ ಗಟ್ಟಿಯಾದ ಧ್ವನಿಯಲ್ಲಿ ಯಥಾರ್ಥವಾಗಿಯೂ, ವಿವರವಾಗಿಯೂ ಆತನಿಗೆ ಅರಿಕೆ ಮಾಡಿರಿ).*** ಆ ತಪ್ಪುಗಳಿಗಾಗಿ ಪಶ್ಚಾತ್ತಾಪಪಟ್ಟು ಅವುಗಳನ್ನು ಬಿಟ್ಟುಬಿಡುತ್ತಿದ್ದೇನೆ. ಆ ಪಾಪಗಳನ್ನು ಬಿಟ್ಟು ನಿನ್ನ ಕಡೆಗೆ ತಿರುಗಿಕೊಳ್ಳುತ್ತಿದ್ದೇನೆ."

"ದಯವಿಟ್ಟು ನನ್ನನ್ನು ಕ್ಷಮಿಸಿರಿ ಹಾಗೂ ಯೇಸುವಿನ ರಕ್ತದ ಮೂಲಕ ನನ್ನನ್ನು ತೊಳೆದು ಶುದ್ಧೀಕರಿಸಿರಿ. ನನಗೆ ಬದಲಾವಣೆಯ ಅಗತ್ಯತೆ ಇರುವುದರಿಂದ ನನ್ನನ್ನು ಬದಲಾಯಿಸಿ ನೂತನ ಹೃದಯವನ್ನು ದಯಪಾಲಿಸಿರಿ. ನನ್ನ ಹೃದಯದೊಳಕ್ಕೆ ಬಂದು ನನ್ನನ್ನು ಸಂಪೂರ್ಣವಾಗಿ ನಿನ್ನಾತ್ಮನಿಂದ ತುಂಬಿಸು."

"ನನ್ನ ಪಾಪಗಳಿಂದ ನನಗೂ ಇತರರಿಗೂ ಆಗಬಹುದಾದ ನಕಾರಾತ್ಮಕವಾದ ಪರಿಣಾಮಗಳನ್ನು ತಡೆಯಿರಿ. ತಂದೆಯೇ, ನನ್ನಿಂದ ವೇದನೆಗೊಳಗಾದವರನ್ನೂ ಸಹ ಆಶೀರ್ವದಿಸಬೇಕೆಂದು ಪಾರ್ಥಿಸುತ್ತಿದ್ದೇನೆ. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ತಪ್ಪಿಸು. ಕೃತಜ್ಞತೆಗಳು, ಯೇಸುವಿನ ನಾಮದಲ್ಲಿ ತಂದೆಯೇ, ಆಮೆನ್."

ಮಾನಸಾಂತರದ ಪ್ರಾರ್ಥನೆಯ ನಂತರ ಈ ಮುಂದಿನ ವಾಕ್ಯಭಾಗವನ್ನು ಪ್ರಾರ್ಥನೆಯ ಮೂಲಕವಾಗಿ ಘೋಷಿಸುವುದು ಒಳ್ಳೆಯದು.

**ದೈವೀಕ ಕ್ಷಮಾಪಣೆಯ ಬಗ್ಗೆ ಭರವಸೆಯಿಂದಿರುವುದು**

**1 ಯೋಹಾನ 1:8–10** ನ್ನು ಗಟ್ಟಿಯಾಗಿ ಹೇಳಿರಿ

"ಕರ್ತನಾದ ದೇವರೇ – ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡುವಾಗ ನೀನು ನಂಬಿಗಸ್ತನೂ, ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧೀಕರಿಸುವಿಯೆಂದು ನಿನ್ನ ವಾಕ್ಯದಲ್ಲಿ ವಾಗ್ದಾನ ಮಾಡಿರುವುದಕ್ಕಾಗಿ ಸ್ತೋತ್ರ, ವಂದನೆಗಳು, ಯೇಸುವಿನ ನಾಮದಲ್ಲಿ. ಆಮೆನ್."

ಕ್ಷಮಿಸುವುದರೊಂದಿಗೆ ಆ ಪಾಪಗಳನ್ನು ದೇವರು ನಮ್ಮಿಂದ ತೆಗೆದು ಹಾಕುವನು. ಆ ನಂತರ ಖಾಲಿಯಾಗಿರುವ ನಮ್ಮ ಹೃದಯಗಳನ್ನು ತುಂಬಿಸುವುದಕ್ಕಾಗಿ ಯೇಸುವನ್ನೂ ಪವಿತ್ರಾತ್ಮನನ್ನೂ ನಾವು ಆಹ್ವಾನಿಸುವಾಗ ಮಾತ್ರ ಬಂದು ತುಂಬಿಸುವನು ***(ಪ್ರಕ 3:20).***

ಇದು ಹೃದಯವೆಂಬ ಮನೆಯ ಬಾಗಿಲನ್ನು ತೆಗೆಯುಲು ಒಳಗಿನಿಂದ ಮಾತ್ರ ಸಾಧ್ಯವಿರುವಂತಿದ್ದು ನಮ್ಮ ಹೃದಯದ ಬಾಗಿಲನ್ನು ನಾವೇ ತೆರೆಯಬೇಕಿದೆ. ನಾವು ಯೇಸುವನ್ನೂ ಪವಿತ್ರಾತ್ಮನನ್ನೂ ಎಷ್ಟು ಅಧಿಕವಾಗಿ ಆಹ್ವಾನಿಸುತ್ತೇವೋ ಅಷ್ಟು ಹೆಚ್ಚಾಗಿ ನಮ್ಮಲ್ಲಿ ಆತನು ವಾಸಿಸಬಲ್ಲನು ***(ಕೊಲೊಸ್ಸೆ 1:27)***. ನಾವು ಎಷ್ಟು ಅಧಿಕವಾಗಿ ಆತನ ಹಾಗೆ ಮಾರ್ಪಡುತ್ತೇವೋ ಅಷ್ಟು ಹೆಚ್ಚಾಗಿ ಆತ್ಮನ ಫಲಗಳನ್ನು ನಮ್ಮ ಜೀವನದಲ್ಲಿ ಹೊರಡಿಸಲು ಸಾಧ್ಯವುಂಟು ***(ಗಲಾತ್ಯ 5:22)***. ಇದೊಂದು "ಆತ್ಮೀಕ ಶ್ವಾಸೋಚ್ಚಾರಣೆ" ಯ ಕ್ರಮದಲ್ಲಿದೆ. ನಮ್ಮಿಂದ ಪಾಪ ಹಾಗೂ ಸ್ವಾರ್ಥತೆಗಳನ್ನು ದೂರಮಾಡಿದ ನಂತರ ಕ್ರಿಸ್ತ ಯೇಸುವಿನಿಂದಲೂ ಪವಿತ್ರಾತ್ಮ ಹಾಗೂ ದೈವೀಕ ಪ್ರೀತಿಯಿಂದಲೂ ಸಂಪೂರ್ಣವಾಗಿ ತುಂಬಿಸುವಂತೆ ಬೇಡಿಕೊಳ್ಳೋಣ ***(ರೋಮಾ 5:5)***.

ನಾವು ನಮ್ಮ ಸ್ವಂತ ಪರಿಶ್ರಮಗಳಿಂದ ಬದಲಾಗಲು ಅಸಾಧ್ಯವೆಂಬುದನ್ನು ಮರೆಯದಿರಿ: ನಮ್ಮನ್ನು ಬದಲಾವಣೆಗೊಳಿಸೆಂದು ದೇವರನ್ನು ಆಹ್ವಾನಿಸುವಾಗ ಮಾತ್ರ ಅದು ಸಾಧ್ಯ.

**ಸಾಕ್ಷಿ**

***ನಾನು ಮಾನಸಾಂತರಪಟ್ಟ ನಂತರ ಕ್ರಿಸ್ತನು ಸೊಂಟದ ಗಾಯವನ್ನು ನೀಗಿಸಿದನು***

*"ಸೊಂಟದಲ್ಲಿ ನೋವಿದ್ದ ವ್ಯಕ್ತಿಗಾಗಿ ಪ್ರಾರ್ಥಿಸುತ್ತಾ ಪ್ರತಿಯೊಂದು ಅಂಗಾಂಗಗಳಲ್ಲಿನ ಸೌಖ್ಯಕ್ಕಾಗಿ ಆಜ್ಞಾಪಿಸಿದೆನು. ಕೆಲವೇ ನಿಮಿಷಗಳಲ್ಲಿ ಅವರ ಸೊಂಟದಲ್ಲಿನ ನೋವೆಲ್ಲವೂ ಬಿಡುಗಡೆಯಾಯಿತು, ಆದರೆ ತೋಳಿನಲ್ಲಿ ನೋವಿನ್ನೂ ಇರಲಾಗಿ ಆ ನೋವಿನ ನಿವಾರಣೆಗಾಗಿ ಪ್ರಾರ್ಥಿಸುತ್ತಾ – ನಿಮ್ಮನ್ನು ವೇದನೆ ಪಡಿಸಿರಬಹುದಾದ ಯಾರಿಗಾದರೂ ನೀವು ಕ್ಷಮಿಸಬೇಕಿದೆಯೇ ಎಂದು ಅವರನ್ನು ಕೇಳಲು "ಇಲ್ಲ" ವೆಂದರು. ಆದರೆ ತಾನು ವ್ಯಭಿಚಾರ ಎಂಬ ಪಾಪದಲ್ಲಿ ಸಿಕ್ಕಿಹಾಕಿ ಕೊಂಡಿರುವುದನ್ನು ಬಹಿರಂಗವಾಗಿ ಒಪ್ಪಿಕೊಂಡನು. ಅವನು ಆ ಪಾಪವನ್ನು ದೇವರಿಗೆ ಅರಿಕೆ ಮಾಡಿ ಯೇಸುವನ್ನು ಅವನ ಹೃದಯದೊಳಕ್ಕೆ ಆಹ್ವಾನಿಸಲು ನಾನವರಿಗೆ ಸಹಾಯಿಸಿದೆನು, ಇದಾದ ಕೆಲವೇ ನಿಮಿಷಗಳಲ್ಲಿ ಹೃದಯಾಂತರಾಳದಲ್ಲಿ ಸ್ವತಂತ್ರವನ್ನು ಅನುಭವಿಸಿದ ಅವನು ಭುಜದ ನೋವಿನಿಂದಲೂ ಸೌಖ್ಯ ಹೊಂದಿದನು."*

# *ಇತರರೊಂದಿಗೆ ಸೇರಿ ಪ್ರಾರ್ಥಿಸುವುದು*

ನೀವು ಈಗಾಗಲೇ ಮಾಡಿದ ಪಶ್ಚಾತ್ತಾಪದ ಪ್ರಾರ್ಥನೆಯಿಂದ ಪಾಪದ ಮೇಲೆ ನಿಮಗೆ ಜಯವು ಸಿಕ್ಕದಿದ್ದಲ್ಲಿ ನಿಮ್ಮಲ್ಲಿನ ನಿಜವಾದ "ಮೂಲ" ಪಾಪವನ್ನು ನೀವು ಗ್ರಹಿಸಿ ಅರಿಕೆ ಮಾಡಲಿಲ್ಲವೆನ್ನುವುದೇ ಸತ್ಯಾರ್ಥವಾಗಿದೆ. ನೀವೀಗ ನಿಮ್ಮ ಜೊತೆ ವಿಶ್ವಾಸಿಗಳ ಸಂಗಡ ಸೇರಿ ಪ್ರಾರ್ಥಿಸುವಾಗ ಅವರು ಅದರ ಮೂಲವನ್ನು ಗ್ರಹಿಸಲು ಸಹಾಯಿಸುವರು. ಅನಂತರ ಆ ವ್ಯಕ್ತಿಯು ಪಾಪದ ಬಗ್ಗೆ ಮಾನಸಾಂತರ ಪಡಬಹುದು, (ಆಥವಾ ತನ್ನನ್ನು ಗಾಯ ಪಡಿಸಿರುವವರು ಇದ್ದಲ್ಲಿ ಅವರನ್ನು ಕ್ಷಮಿಸಬಹುದಾಗಿದೆ) ಅನಂತರ ಪ್ರಾರ್ಥನಾ ಸಹಾಯಕರು ಪ್ರಾರ್ಥನೆಯೊಂದಿಗೆ ದೇವರು ಮಾಡುತ್ತಿರುವ ಕಾರ್ಯಗಳ ಬಗ್ಗೆ ಸಮ್ಮತಿಯೊಂದಿಗೆ ಸಾಕ್ಷಿಯಾಗಿರುವರು ***(ಮತ್ತಾಯ 18:19–20)*** ಹಾಗೂ ದೇವರು ಅವರನ್ನು ಕ್ಷಮಿಸಿರುವೆನೆಂಬ ಭರವಸೆಯನ್ನು ಅವರಿಗೆ ನೀಡುವನು. ತಮ್ಮ ಭಾರಗಳು ಇಳಿಸಲ್ಪಟ್ಟು ಸ್ವತಂತ್ರರಾಗಿರುವುದಾಗಿ ಹೃದಯಾಂತರಾಳದಿಂದ ಅವರು ಮನನ ಮಾಡಿಕೊಳ್ಳುವುದರ ಮೂಲಕವಾಗಿ ತಾವು ಕ್ಷಮಿಸಲ್ಪಟ್ಟಿರುವುದಾಗಿ ಗ್ರಹಿಸಿಕೊಳ್ಳುವರು.


ಜನರೊಳಗೆ ಸೇವೆ ಮಾಡುತ್ತಾ ದೇವರು ಅವರ ಹಳೆಯ ಪಾಪಗಳನ್ನೆಂದಿಗೂ ಜ್ಞಾಪಕಕ್ಕೆ ತಾರನೆಂಬ ದೈವೀಕ ವಾಗ್ದಾನವನ್ನು ಅವರ ನೆನಪಿಗೆ ತನ್ನಿರಿ – "ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ" ***(ಯೆರೆ 31:34; ಇಬ್ರಿಯ 8:12, 10:17).*** ನಾವು ಹೃದಯಾಂತರಾಳದಿಂದ ಮಾನಸಾಂತರ ಪಟ್ಟಿದ್ದಲ್ಲಿ ಆ ಪಾಪಗಳು ಮತ್ತೆ ನಮ್ಮ ಮನಸ್ಸಿನಲ್ಲಿ ಯಾವುದೇ ವೇದನೆಯನ್ನು ಹುಟ್ಟುಹಾಕಲಾರದು, ಕಾರಣ ನಾವು ಕ್ಷಮಿಸಲ್ಪಟ್ಟವರೆಂಬ ಭರವಸೆ ನಮ್ಮಲ್ಲಿರುತ್ತದೆ ***(1 ಯೋಹಾನ 1:8–10, 5:15; ಕೊಲೊಸ್ಸೆ 1:21–23).***

# ನಾವು ಪಶ್ಚಾತ್ತಾಪಪಟ್ಟಿರುವುದನ್ನು ತೋರ್ಪಡಿಸುವುದು

ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರೆಡೆಗೆ ತಿರುಗಿಕೊಂಡಿರುವುದನ್ನು ನಮ್ಮ ಕ್ರಿಯೆಗಳ ಮೂಲಕ ಸಾಬೀತುಪಡಿಸಬೇಕು – ಅದರರ್ಥ *"ಹಾಗಾದರೆ ನಿಮ್ಮ ಮನಸ್ಸು ದೇವರೆಡೆಗೆ ತಿರುಗಿತೆಂಬುದನ್ನು ತಕ್ಕ ಫಲದಿಂದ ತೋರಿಸಿರಿ"* ***(ಮತ್ತಾಯ 3:8).*** ಅಂದರೆ, ನಮ್ಮ ಮೇಲೆ ದೊರೆತನ ಮಾಡುತ್ತಿದ್ದ ಪಾಪ ಕಾರ್ಯಗಳನ್ನು ನಿಲ್ಲಿಸಿಬಿಡಲು ದೈವೀಕ ಸಹಾಯವನ್ನು ಪಡೆಯುವೆನೆಂದು ತೀರ್ಮಾನಿಸುವುದಾಗಿದೆ. ಕೆಲವೊಮ್ಮೆ ಅದೊಂದು ಪಾಪಯುಕ್ತವಾದ ಆಲೋಚನೆ, ಮಾತು ಅಥವಾ ಕ್ರಿಯೆಯಾಗಿದ್ದರೂ ಅವುಗಳ ಬಗ್ಗೆ ಪಶ್ಚಾತ್ತಾಪಪಟ್ಟು ಪಾಪದಿಂದ **ದೂರವಾಗಿ** ಯೇಸುವಿನ **ಬಳಿಗೆ** ಬರೋಣ. ನಾವಿದನ್ನು ನಮ್ಮ ಸ್ವಬಲದಿಂದಲ್ಲ ಯೇಸುವಿನ ಸಹಾಯದಿಂದ ಜಯಿಸಲಾಗುವಂತೆ ಪ್ರಾರ್ಥಿಸಿರಿ. ದೇವರ ವಾಗ್ದಾನಗಳು ಯಾವಾಗಲೂ *"ಹೌದು"* ಮತ್ತು *"ಆಮೆನ್"* ***(2 ಕೊರಿ 1:20)*** ಆಗಿರುವುದರಿಂದ ನಾವೆಷ್ಟೋ ಸಾರಿ ಪಾಪದಲ್ಲಿ ಬಿದ್ದರೂ ಪಶ್ಚಾತ್ತಾಪದೊಂದಿಗೆ ಆತನ ಬಳಿಗೆ ಬರುವಾಗ ಆತನು ಕ್ಷಮಿಸಬಲ್ಲನೆಂಬುದನ್ನು ಮರೆಯದಿರಿ.

# ಹಿಂದಕ್ಕೆ ಕೊಡುವುದು (ನಷ್ಟ ಪರಿಹಾರ)

ಪ್ರತಿಯೊಂದು ಪಾಪಕ್ಕೂ ಅದರ ಪ್ರತಿಫಲವನ್ನು ಅನುಭವಿಸಲೇಬೇಕು. ಉದಾ: ನಾವು ಯಾರನ್ನಾದರೂ ನಿಂದಿಸಿರುವುದಾದಲ್ಲಿ ನಾವು ಕ್ಷಮಿಸಿದ್ದರೂ ಸಹ ಅವರು ನಿಂದಿಸಲ್ಪಟ್ಟವರಾಗಿಯೇ ಇರುವರು. ಕೆಲವು ಸನ್ನಿವೇಶಗಳಲ್ಲಿ ನಾವು ಮಾಡಿರುವುದಕ್ಕೆ ಪ್ರತಿಯಾಗಿ ದಂಡವನ್ನು ಕಟ್ಟಬೇಕೆಂದು ದೇವರು ಬಯಸುತ್ತಿದ್ದಾನೆ ***(ಅರಣ್ಯ 5:6–8).*** ನಾವೇನಾದರೂ ಕದ್ದು ತೆಗೆದುಕೊಂಡಿದ್ದಲ್ಲಿ ಆ ವಸ್ತುವಿನ ಯಜಮಾನನ ಮುಂದೆ ನಮ್ಮ ತಪ್ಪನ್ನು ಅರಿಕೆ ಮಾಡುವುದಲ್ಲದೆ ದಂಡಸಹಿತವಾಗಿ ಹಿಂತಿರುಗಿಸಬೇಕಾಗುತ್ತದೆ (ಉದಾ: ಜಕ್ಕಾಯನು ***ಲೂಕ 19:8***). ನಾವು ಯಾರಿಗಾದರೂ ಕರುಣೆ



ತೋರಿಸದವರಾಗಿದ್ದರೆ ಇನ್ನು ಮುಂದೆ ಕರುಣೆ ತೋರಿಸುವವರಾಗಿರೋಣ. ಸಾಂದರ್ಭಿಕವಾಗಿ ಅವರಿಗೆ ಮತ್ತೆ ಮತ್ತೆ ಅರಿಕೆ ಮಾಡಿರಿ, ಕ್ಷಮಾಪಣೆಯನ್ನು ಬೇಡಿಕೊಂಡು ಅವರೊಂದಿಗಿನ ಸಂಬಂಧವನ್ನು ಉತ್ತಮ ಪಡಿಸಿಕೊಳ್ಳಿರಿ.

ನಾವು ಮಾಡಿರುವ ಅಪರಾಧವು ಆ ದೇಶದ ಕಾನೂನಿಗೆ ವಿರುದ್ಧವಾಗಿದ್ದಲ್ಲಿ ನಾವು ಪ್ರಾರ್ಥನೆಯೊಂದಿಗೆ ಆ ಕಾರ್ಯವನ್ನು ದೇವರಿಗೆ ಒಪ್ಪಿಸಬೇಕು. ಆನಂತರ ನ್ಯಾಯಾಧಿಪತಿಗಳ ಬಳಿಯಲ್ಲಿ ನಾವು ಮಾಡಿರುವುದನ್ನು ಒಪ್ಪಿಕೊಳ್ಳೋಣ. ಕಾನೂನು ತನ್ನ ಕಾರ್ಯವನ್ನು ಮಾಡಲಿ ***(ರೋಮಾ 13:1–7).***

## ಸಾಕ್ಷಿ

### *ಯೇಸು ಆರ್ಥಿಕ ಪಾಪ ಬಂಧನದಿಂದ ಬಿಡಿಸಿದನು*

*"ಅನೇಕ ವರ್ಷಗಳ ಹಿಂದೆ ನನ್ನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದ ವ್ಯಕ್ತಿಯೊಂದಿಗಿನ ಹಣಕಾಸಿನ ವಿಷಯದಲ್ಲಿನ ಪಾಪ (ಅನ್ಯಾಯ) ದ ವಿಷಯದಲ್ಲಿ ನಾನು ಪಶ್ಚಾತ್ತಾಪ ಪಟ್ಟಿದ್ದರೂ ನಷ್ಟ ಪರಿಹಾರ ಮಾಡಿರಲಿಲ್ಲ. ಈ ತಪ್ಪಿನ ವಿಷಯದಲ್ಲಿ ನನಗೆ ಮನವರಿಕೆಯಾಗಲು ಗಂಡನೊಂದಿಗೆ ಪ್ರಾರ್ಥಿಸುತ್ತಿರುವಾಗ ಜಕ್ಕಾಯನ ಹಾಗೆ ಹಿಂದಿರುಗಿಸಬೇಕೋ ಎಂಬ ಪ್ರಶ್ನೆ ಉದ್ಭವವಾಯಿತು. ನಷ್ಟ ಪರಿಹಾರ ಮಾಡಬೇಕು ಎಂಬ ಕರ್ತನ ಶಬ್ಧವನ್ನು ನನ್ನ ಗಂಡನು ಕೇಳಿಸಿಕೊಂಡನು. ಈ ವಿಷಯದಲ್ಲಿ ನಮಗೆ ಗಲಿಬಿಲಿಯುಂಟಾಗಿ ಯೇಸು ನನ್ನ ಪಾಪಗಳನ್ನೆಲ್ಲಾ ತಾನೇ ನೀಗಿಸಿದ್ದರೂ ನಾನು ನಷ್ಟ ಪರಿಹಾರ ಮಾಡಬೇಕೆಂಬುದನ್ನು ನಿರೀಕ್ಷಿಸುತ್ತಿರುವನೆಂಬುದು ನನಗರ್ಥವಾಯಿತು. ನಾನು ಅವರಿಗೆ ಪತ್ರವೊಂದನ್ನು ಬರೆದು ಮೊದಲು ನಾನು ಮಾಡಿದ್ದ ಕಳವಿಗಾಗಿ ಕ್ಷಮೆಯಾಚಿಸಿದೆನು ಹಾಗೂ ಸಾಕಷ್ಟು ಹಣ (ಬಡ್ಡಿಯನ್ನೂ ಸೇರಿಸಿ) ವನ್ನು ಕಳುಹಿಸಿಕೊಟ್ಟೆನು. ಅದಕ್ಕೆ ಪ್ರತಿಕ್ರಿಯಿಸಿದ ಅವರು 'ಅಲ್ಪ ತಡವಾದರೂ ನೀವು ಯಥಾರ್ಥರಾಗಿರುವುದಕ್ಕಾಗಿ ವಂದನೆ' ಗಳೆಂದು ಬರೆದು ಕಳುಹಿಸಿರುವರು."*

# ಕ್ಷಮಿಸುವಿಕೆ

*"ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನು ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದಿದ್ದರೆ ನಿಮ್ಮ ತಂದೆಯೂ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸಲಾರನು."* ***(ಮತ್ತಾಯ 6:14–15).***

ನಮ್ಮ ಹೃದಯದಲ್ಲಿ ದೇವರೊಂದಿಗೆ ಸರಿಯಾದ ಸಂಬಂಧದ ಸರಿಪಡಿಸುವಿಕೆಯ ನಿಮಿತ್ತದಿಂದ ದೇವರು ತನ್ನ ದಾನವಾದ ಕ್ಷಮಾಪಣೆಯನ್ನು ದಯಪಾಲಿಸ ಬಯಸುತ್ತಿದ್ದಾನೆ ***(ರೋಮಾ 5:15–16).*** ದೇವರು ತನ್ನ ಪ್ರೀತಿಯ ನಿಮಿತ್ತ ವ್ಯಕ್ತಪಡಿಸುತ್ತಿರುವ ಕ್ಷಮಾಪಣೆಯೇ ಸುವಾರ್ತೆಯಾಗಿದೆ. ದೈವೀಕ ಸ್ವಭಾವದ ಒಂದು ಭಾಗವೇ ಕ್ಷಮಿಸುವಿಕೆಯಾಗಿದೆ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ, ದೇವರು ನಮ್ಮನ್ನು ಕ್ಷಮಿಸಿ ಶುದ್ಧೀಕರಿಸುವನು ***(1 ಯೋಹಾನ 1:8–10).*** ಇದು ನಾವು ನಮ್ಮನ್ನು ನೆನೆಸದಿದ್ದ ಶ್ರೇಷ್ಠವಾದ **"ಕೃಪೆಯ ಹಂತ"** ಕ್ಕೆ[2] ಒಯ್ದು ದೇವರೊಂದಿಗೆ ಸರಿಯಾದ ಸಂಬಂಧದೆಡೆಗೆ ನಡೆಸುತ್ತದೆ.

### ಸಾಕ್ಷಿ

#### ಹೃದಯಾಂತರಾಳದಿಂದ ಕ್ಷಮಿಸಲು ಯೇಸು ನನಗೆ ಸಹಾಯಿಸಿದನು

*"ಸ್ನೇಹಿತನೊಬ್ಬನ ನಿಮಿತ್ತ ಪೋಲೀಸರಿಗೊಪ್ಪಿಸಲ್ಪಟ್ಟ ನಾನು ಜೈಲು ಪಾಲಾದೆನು. ನನ್ನ ಸ್ನೇಹಿತನು ನನಗೆ ಮಾಡಿದ ಈ ಮೋಸದ ನಿಮಿತ್ತ ನನ್ನ ಕುಟುಂಬ, ನನ್ನ ಮಕ್ಕಳೊಂದಿಗಿನ ಸಂಬಂಧ, ನನ್ನ ಉದ್ಯೋಗ ಹಾಗೂ ಗೌರವ ಎಲ್ಲವನ್ನೂ ಕಳಕೊಂಡೆನು. ನನ್ನ ಮಾಜಿ ಸ್ನೇಹಿತನ ಬಗ್ಗೆ ನನ್ನಲ್ಲಿ ಕಹಿಯಾದ ಅನುಭವ ಉಕ್ಕಿ ಬರಲು ನಾನವನನ್ನು ದ್ವೇಷಿಸಲಾರಂಭಿಸಿದೆನು. ಸೆರೆಮನೆಯಿಂದ ತಿರುಗಿ ಬಂದಾಗ ನನ್ನ ಸ್ನೇಹಿತರಲ್ಲಿ ಕೆಲವರು ಅವನನ್ನು ಕ್ಷಮಿಸಲೇಬೇಕೆಂದು ಹೇಳಲಾರಂಭಿಸಿದರು. ಅವನನ್ನು ಕ್ಷಮಿಸಲು ಬಹಳಷ್ಟು ಪ್ರಯತ್ನಿಸಿದ್ದಾಗ್ಯೂ ಸಾಧ್ಯವಾಗದಿದ್ದಾಗ ಮುಂದೊಂದು ದಿನ ಅವನನ್ನು ಕ್ಷಮಿಸಲು ಸಹಾಯಿಸುವಂತೆ ಯೇಸುವನ್ನು ಕೇಳಿಕೊಂಡೆನು. ಕೆಲವೇ ನಿಮಿಷಗಳಲ್ಲೇ "ಅವನನ್ನು ಕ್ಷಮಿಸಿರುವೆನೆಂದು" ಹೃದಯಾಂತರಾಳದಿಂದ ಮನವರಿಕೆಯೊಂದಿಗೆ ಗಟ್ಟಿಯಾಗಿ ಹೇಳಿಕೊಳ್ಳಲು ಸಾಧ್ಯವಾಯಿತು. ಅದಾದ ಕೆಲವೇ ನಿಮಿಷಗಳಲ್ಲಿ ನನ್ನ ಮಗಳನ್ನು ಭೇಟಿಯಾಗುತ್ತಿರುವ ಕನಸನ್ನೂ ಸಹ ಕಂಡೆನು ಹಾಗೂ ಅದಕ್ಕನುಗುಣವಾಗಿ ಅವಳನ್ನು ಭೇಟಿಯಾಗುವಂತೆಯೂ ಅವಳೊಂದಿಗೆ ನಿರಂತರವಾದ ಸಂಪರ್ಕದಲ್ಲಿರುವಂತೆಯೂ ಸಾಧ್ಯವಾಯಿತು."*

---

*[2] ಜಾನ್ ಹಾಗೂ ಕರೋಲ್ ಅರ್ನೋಟ್‌ರವರ, ಗ್ರೇಸ್ ಎಂಡ್ ಫಾರ್ಗಿವನೆಸ್, 2009, ನ್ಯೂ ವೈನ್ ಮಿನಿಸ್ಟ್ರೀಸ್. ಅನುಮತಿಯೊಂದಿಗೆ.*

# ಇತರರನ್ನು ಕ್ಷಮಿಸುವುದು

ಕೃಪೆಯ ಹಂತದಲ್ಲೇ ನಾವೂ ಮುಂದುವರಿಯಬೇಕಾಗಿದ್ದಲ್ಲಿ ನಮಗೆ ತಪ್ಪು ಮಾಡುವವರನ್ನೂ ಸಹ ನಾವು ಕ್ಷಮಿಸಬೇಕಿದೆ. ಶಿಲುಬೆಯ ಮೇಲಿರುವಾಗಲೂ ತನ್ನನ್ನು ಶಿಲುಬೆಗೆ ಹಾಕಿದವರನ್ನು ಕ್ಷಮಿಸಿದ ಯೇಸುವೇ ನಮಗೆ ಮಾದರಿಯಾಗಿದ್ದಾನೆ ***(ಲೂಕ 23:34).*** ನಮಗೆ ಮಾದರಿ ಪುರುಷನಾಗಿರುವ ಕರ್ತನು ತನ್ನನ್ನು ಹಿಂಸೆಪಡಿಸುವುದನ್ನು ನಿಲ್ಲಿಸಲಿ ಅಥವಾ ತಮ್ಮನ್ನು ಕ್ಷಮಿಸುವಂತೆ ಅವರೇನಾದರೂ ಕೇಳಿಕೊಳ್ಳುವರೆಂಬುದನ್ನು ಯೋಚಿಸದೇ ತನ್ನನ್ನು ಅವರು ಮರಣಕ್ಕೆ ಒಪ್ಪಿಸುತ್ತಿರುವಾಗಲೇ ಆತನು ಅವರನ್ನು ಕ್ಷಮಿಸಿದಂತೆಯೇ ನಾವೂ ಕ್ಷಮಿಸುವವರಾಗಿರಬೇಕು.


**ಸಾಕ್ಷಿ**

***ಯೇಸು ನನ್ನನ್ನು ಸ್ವತಂತ್ರನಾಗಿಸಿದನು!***

*“ನನ್ನೊಂದಿಗೆ ಮಾತನಾಡಲೂ ಸಹ ಬಯಸದಿದ್ದವರನ್ನು ಕ್ಷಮಿಸಿ ಅವರಿಗೆ ವಿರುದ್ದವಾಗಿ ನಾನಿಟ್ಟುಕೊಂಡಿದ್ದ ದ್ವೇಷವನ್ನು ಬಿಟ್ಟು ಅವರನ್ನು ಕ್ಷಮಿಸಲಾಗಿ ನಾನೀಗ ವಿಮುಕ್ತನಾಗಿ ಸ್ವತಂತ್ರನಾಗಿರುವ ಅನುಭವ ಹೊಂದಿರುವೆನು.”*

ನಾವು ಹೃದಯಾಂತರಾಳದಿಂದ ಕ್ಷಮಿಸದಿದ್ದಲ್ಲಿ ‘ಕೃಪೆಯ’ ಹಂತದಿಂದ ‘ತೀರ್ಪಿನ’ ಹಂತವನ್ನು ತಲುಪುತ್ತಾ ಪಾಪದ ಫಲವನ್ನು (ಶಿಕ್ಷೆ) ಅನುಭವಿಸಲಿದ್ದೇವೆ. ನಾವು ಕ್ಷಮಿಸದೇ ಹೋದಲ್ಲಿ ದೇವರ ಕೃಪೆಯ ಮೂಲಕ ಲಭ್ಯವಿರುವ ಅನೇಕ ಆಶೀರ್ವಾದಗಳನ್ನೂ ಸಹ ಕಳೆದುಕೊಳ್ಳಲಿದ್ದೇವೆ. ಉದಾಹರಣೆಗೆ – ನಾವು ಕ್ಷಮಿಸದಿದ್ದಲ್ಲಿ ಪ್ರಾರ್ಥನೆಗೆ ಉತ್ತರ ಸಿಕ್ಕದು ಹಾಗೂ ಸೌಖ್ಯವೂ ಸಿಕ್ಕದು ***(ಯಾಕೋಬ 5:16)*** ಹಾಗೂ ಅದಕ್ಕಿಂತಲೂ ಹೆಚ್ಚಿನ (ಗಂಭೀರ) ಪರಿಣಾಮಗಳುಂಟಾಗಬಹುದಾಗಿದೆ ***(ಮತ್ತಾಯ 6:15).*** ಆದರೆ ‘ದೈವೀಕ ನೀತಿಯ’ ಫಲವೇನೆಂದರೆ ನಾವದಕ್ಕೆ ಶಿಕ್ಷೆಯನ್ನು ಹೊಂದುವುದಾಗಿದೆ ***(ಯೋಹಾನ 3:36).*** ಆದರೆ ನಮ್ಮನ್ನು ಪೀಡಿಸುವವರನ್ನು ನಾವು ಕ್ಷಮಿಸದಿದ್ದಲ್ಲಿ ***(ಮತ್ತಾ 18:23–35)*** ರಲ್ಲಿನ ಶಿಕ್ಷೆಗೆ ಗುರಿಯಾಗುತ್ತೇವೆ. ಇತರರಿಗೆ ಕರುಣೆ (ದಯೆ) ತೋರಿಸುವಾಗ ನಾವೂ ಸಹ ಕೊರ್ನೆಲ್ಯನಂತೆ ದಯೆಗೆ ಪಾತ್ರರಾಗುತ್ತೇವೆ ***(ಅ.ಕೃ 10).*** ಇದು ನೀವೇನು ಬಿತ್ತುತ್ತಿರೋ ಅದನ್ನೇ ಕೊಯ್ಯುವಿರೆಂಬ ಪ್ರಮಾಣದ ಸಕಾರಾತ್ಮಕ ವಿಧಾನವಾಗಿದೆ ***(ಲೂಕ 6:37–38).***

ನಮ್ಮನ್ನು ಪೀಡಿಸುವವರನ್ನು ನಾವು ಸಂಪೂರ್ಣವಾಗಿ ಕ್ಷಮಿಸಲು ತೀರ್ಮಾನಿಸುವಾಗ ಕ್ಷಮಿಸಲು ಬೇಕಾದ ಬಲವನ್ನು ದೇವರು ನಮಗೆ ಕೊಡುವನು. ಪ್ರಥಮ ಬಾರಿ ನಮ್ಮಿಂದ ಸಂಪೂರ್ಣವಾಗಿ ಕ್ಷಮಿಸಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ, ಆದ್ದರಿಂದ ಅದಕ್ಕಾಗಿ ಪ್ರಾರ್ಥಿಸಬೇಕು. ಇತರರು ನಮ್ಮನ್ನು ಆಳವಾಗಿ ಗಾಯಪಡಿಸಿದ್ದರೆ ಅನೇಕ ಬಾರಿ ಕ್ಷಮಿಸುವ ಅಗತ್ಯತೆಯುಂಟು. ಈ ಕ್ರಮವು ಈರುಳ್ಳಿಯ ಸಿಪ್ಪೆಯನ್ನು ಒಂದೊಂದಾಗಿ ಸುಲಿಯುವ ಅಂದರೆ ಅಂತಿಮವಾಗಿ ಏನೂ ಇಲ್ಲದ ಹಾಗೆ ಮಾರ್ಪಡುವ ವಿಧಾನವಾಗಿದೆ. ಕ್ರಮೇಣವಾಗಿ ನಾವು ಅವರನ್ನು ನಿಜವಾಗಲೂ



ಕ್ಷಮಿಸಿದ್ದೇವೆಂದೂ ಅವರ ವಿಷಯದಲ್ಲಿದ್ದ ವೇದನೆ ನೀಗಿಸಲ್ಪಟ್ಟಿರುವುದಾಗಿಯೂ ಅವರನ್ನು ಕುರಿತು ಚಿಂತಿಸುವ ಅಥವಾ ಭೇಟಿ ಮಾಡುವ ಸಮಯದಲ್ಲಿ ನಮಗೇನೂ ಸಂಕೋಚವಿಲ್ಲವೆಂಬುದನ್ನು ತಿಳಿದವರಾಗಿರುತ್ತೇವೆ. ಹೀಗಾಗಿ ನಾವು ಮತ್ತೆ 'ಕೃಪೆಯ' ಹಂತಕ್ಕೆ ಹಿಂತಿರುಗಿ ಬಂದವರಾಗಿರುತ್ತೇವೆ.

> ನನ್ನೊಂದಿಗೆ ಮಾತನಾಡಲು ಇಚ್ಛಿಸದ ವ್ಯಕ್ತಿಯನ್ನು ಕ್ಷಮಿಸಲು ಹಾಗೂ ಅವನ ಮೇಲಿದ್ದ ದ್ವೇಷವನ್ನು ಬಿಟ್ಟುಬಿಟ್ಟ ನಂತರ ಈಗ ಸಂತುಷ್ಟನೂ ಸ್ವತಂತ್ರನೂ ಆಗಿರುವೆನು. ನಿನ್ನನ್ನು ಕ್ಷಮಿಸಿರುವೆನೆಂದು ಇತರರಿಗೆ ಹೇಳುವುದು ಸಾಮಾನ್ಯವಾಗಿ ಅಚಾತುರ್ಯವಾಗಿರುತ್ತದೆ. ಹಾಗೆ ಇತರರಿಗೆ ಹೇಳುವುದು ಪ್ರಥಮವಾಗಿ ಅವರು ಗಲಿಬಿಲಿಯಲ್ಲಿರುವುದರಿಂದ ಅವರದನ್ನು ಇಷ್ಟ ಪಡುತ್ತಿಲ್ಲ. ಎರಡನೆಯದಾಗಿ ನೀನೊಬ್ಬ ನೈಜ ಕ್ರೈಸ್ತನಾಗಿರುವುದು ಅವನಿಗಿಷ್ಟವಿಲ್ಲ. ಅವರ ವಿಷಯದಲ್ಲಿ ನಿಮಗಿಷ್ಟವಿಲ್ಲದ್ದು ಈಗ ಇಷ್ಟ ಉಳ್ಳದ್ದಾಗಿರುತ್ತದೆ ಎಂಬುದನ್ನು ವಿವಿಧ ರೀತಿಯಲ್ಲಿ ತೋರಿಸಿ ಕೊಡಬಹುದಷ್ಟೇ.
>
> (ಆಗ್ನೆಸ್ ಸ್ಯಾನ್‌ಫೋರ್ಡ್, ಕ್ರಿಯೇಷನ್ ವೈಟ್ಸ್, 1977, ಬ್ರಿಡ್ಜ್ ಲೋಗೊಸ್ ಪಬ್ಲಿಷಿಂಗ್)

"ಪೇತ್ರನು ಯೇಸುವಿನ ಬಳಿಗೆ ಬಂದು *'ಸ್ವಾಮಿ ನನ್ನ ಸಹೋದರನು ನನಗೆ ತಪ್ಪುಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ'* ಎಂದು ಕೇಳಲು, ಯೇಸು ಅವನಿಗೆ *'ಏಳು ಸಾರಿ ಎಂದಲ್ಲ ಏಳೆಪ್ಪತ್ತು ಸಾರಿ' ಎಂದು ನಿನಗೆ ಹೇಳುತ್ತೇನೆ"* ***(ಮತ್ತಾಯ 18:21–22)*** ಅಂದನು.

ಇದು ದೈವೀಕ ಕ್ರಮವಾಗಿ ಇರುವುದರಿಂದ ನಾವೂ ಹೀಗೇ ಮಾಡಬೇಕೆಂದು ದೇವರು ಬಯಸುತ್ತಿದ್ದಾನೆ. ನಾವೆಷ್ಟು ಸಾರಿ ತಪ್ಪುಗಳನ್ನು ಪುನರಾವರ್ತಿಸಿ ಮತ್ತೆ ಕರ್ತನ ಬಳಿಗೆ ಬಂದು ಹೃದಯಾಂತರಾಳದಿಂದ ಕ್ಷಮಿಸುವಂತೆ ಕೇಳಿಕೊಂಡರೆ ದೇವರು ಕ್ಷಮಿಸುತ್ತಾನೆ. ಅದರಂತೆಯೇ ನಮಗೆ ವಿರುದ್ಧವಾಗಿ ಇತರರು ಎಷ್ಟೇ ಸಾರಿ ತಪ್ಪುಗಳನ್ನು ಮಾಡಿದರೂ ನಾವು ಕ್ಷಮಿಸುವವರಾಗಿರಬೇಕು.

ನಮ್ಮನ್ನು ಯಾರಾದರು ತೊಂದರೆ (ಗಾಯ) ಪಡಿಸಿದಾಗ ಅದಕ್ಕೆ ಪ್ರತಿಯಾಗಿ ನಾವು ಪಾಪ ಮಾಡುವವರಾಗಿರುತ್ತೇವೆ. ಉದಾ: ನಾವು ಇತರರಿಂದ ಅನುಭವಿಸುತ್ತಿರುವ ಸಂಕಟಗಳಿಗೆ ಪ್ರತಿಯಾಗಿ ನಾವು ಕೋಪದಿಂದ ಅವರನ್ನು ಮೂರ್ಖರೆಂದು ತೀರ್ಪುಮಾಡಿರಬಹುದಾಗಿದೆ. ಈ ರೀತಿಯ ಪ್ರತಿಕ್ರಿಯೆಗಳು ಪಾಪಕ್ಕೆ ಆಸ್ಪದವಾಗಿರುವುದರಿಂದ ಇವುಗಳನ್ನು ಅರಿಕೆ ಮಾಡಿ ಪಶ್ಚಾತ್ತಾಪ ಪಡಬೇಕಿದೆ. ಈ ರೀತಿಯ ಅನುಭವಗಳು ಉತ್ತಮವೂ, ನ್ಯಾಯಯುತವೂ ಅಲ್ಲವೆಂದು ನಮಗನಿಸಿದರೂ ಈ ವೇದನೆಗಳಿಂದ ನಾವು ಮುಕ್ತರಾಗಬೇಕಿದೆ. ಇಂತಹ ಸನ್ನಿವೇಶಗಳಲ್ಲಿ ನಾವೇನು ಮಾಡಬೇಕೆಂಬುದನ್ನು ತೀರ್ಮಾನಿಸಬೇಕಾದವನು ದೇವರೊಬ್ಬನೇ ಆಗಿರುವನು. "ಅದು ಉತ್ತಮ ವಿಧಾನವಲ್ಲ" ಅಥವಾ "ಅದಕ್ಕಿಂತ ಹೆಚ್ಚಿನದನ್ನು ಮಾಡಬೇಕು" ಎನ್ನುವುದಾದಲ್ಲಿ ನಾವು ದೈವೀಕ ತೀರ್ಪಿನ ಅಧೀನದಲ್ಲಿರುತ್ತೇವೆಯೇ ಹೊರತು ದೇವರ 'ಕೃಪೆಯ' ಅಧೀನದಲ್ಲಲ್ಲ. ನಾವು ಅವರನ್ನು ಕ್ಷಮಿಸಿದ್ದೇವೋ ಎಂದು ಪರೀಕ್ಷಿಸಿ ನೋಡಬೇಕಾಗಿದ್ದಲ್ಲಿ ನಾವು ಅವರನ್ನು ನಮ್ಮ ಹೃದಯಾಂತರಾಳದಿಂದ ಪ್ರೀತಿಸುವವರೂ ಹಾಗೂ ದೇವರಿಂದ ಆಶೀರ್ವದಿಸಲ್ಪಟ್ಟಿರುವರು ಎಂಬುದನ್ನು ಸಂತೋಷದಿಂದ ಸ್ವೀಕರಿಸುವವರೂ ಆಗಿರಬೇಕು.

ಯೇಸು ಹೇಳಿದ್ದೇನೆಂದರೆ *"ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ"* ***(ಲೂಕ 6:28).***

ಒಬ್ಬನನ್ನು ಪರಿಪೂರ್ಣವಾಗಿ ಕ್ಷಮಿಸುವುದೆಂದರೆ ನಮ್ಮನ್ನು ವೇದನೆಪಡಿಸಿದ ವ್ಯಕ್ತಿಯನ್ನು ನಾವು ನಂಬಲೇಬೇಕು ಅಥವಾ ಅವರೊಂದಿಗೆ ಸಂಬಂಧ ಹೊಂದಲೇಬೇಕೆಂಬ ಅರ್ಥವಲ್ಲ. ಕಾಲಾಂತರದಲ್ಲಿ ಅದು ಸಂಭವಿಸಲೂಬಹುದು. ಸತ್ಯವೇದದ ಕೀರ್ತನೆ 118:8 ರಲ್ಲಿ ಹೀಗೆ ಹೇಳಲಾಗಿದೆ *"ಮನುಷ್ಯರಲ್ಲಿ ಭರವಸೆವಿಡುವುದಕ್ಕಿಂತ ಯೆಹೋವನನ್ನು ಆಶ್ರಯಿಸುವುದು ಒಳ್ಳೆಯದು".* ಕ್ರಿಸ್ತನೂ ಸಹ ಯಾರನ್ನೂ ಆಶ್ರಯಿಸಿರಲಿಲ್ಲ ***(ಯೋಹಾನ 2:24–25).*** ಆದರೆ ಪ್ರತಿಯೊಬ್ಬರನ್ನೂ ಅಂದರೆ ವೈರಿಗಳನ್ನೂ ಸಹ ಪ್ರೀತಿಸುವಂತೆ ಆತನು ಆಜ್ಞಾಪಿಸಿರುವನು ***(ಮತ್ತಾಯ 5:44–46).***

ಮತ್ತಾಯ 18:23–35 ರಲ್ಲಿ ಯೇಸು ಕ್ಷಮಿಸುವಿಕೆಯ ಕ್ರಮವನ್ನು ಸಾಲ ಹಾಗು ಸಾಲದ ಬಿಟ್ಟುಬಿಡುವಿಕೆಯ ಉದಾಹರಣೆಯ ಮೂಲಕ ವಿವರಿಸಿದ್ದಾನೆ. ಶಿಲುಬೆಯ ಮೇಲೆ ನೇತಾಡುವಾಗಲೂ ಆತನು ಹೇಳಿದ್ದೇನೆಂದರೆ **"*ತೀರಿತು*"** ***(ಯೋಹಾನ 19:30).*** ತೀರಿಸಬೇಕಾಗಿರುವ ಹಣವನ್ನು ಸಂಪೂರ್ಣವಾಗಿ ಕೊಟ್ಟುಬಿಡುವ ವಿಷಯದಲ್ಲೇ **"*ತೀರಿತು*"** ಎಂಬ ಪದಪ್ರಯೋಗವನ್ನು ಆ ಕಾಲದಲ್ಲಿ ಬಳಕೆ ಮಾಡುತ್ತಿದ್ದರಷ್ಟೆ. ಇನ್ನೊಂದರ್ಥದಲ್ಲಿ ಹೇಳುವುದಾದಲ್ಲಿ ಯೇಸು ನಮ್ಮ ಸಾಲ (ಪಾಪ) ಗಳ ಬೆಲೆಯನ್ನು ತಾನೇ ಸಂಪೂರ್ಣವಾಗಿ ತೆತ್ತು ನಮ್ಮ ಶಿಕ್ಷೆಯನ್ನು ತಾನೇ ವಹಿಸಿಕೊಂಡಿರುವನು. ಯೇಸು ನಮಗೋಸ್ಕರ ನೆರವೇರಿಸಿರುವ ಕಾರ್ಯವನ್ನು ನಾವು ನಿಜವಾಗಲೂ ಗ್ರಹಿಸಿಕೊಂಡಾಗ ಮಾತ್ರವೇ ನಮಗೆ ವಿರುದ್ಧವಾಗಿ ತಪ್ಪುಗಳನ್ನು ಮಾಡುವವರನ್ನು ಯಾಕೆ ಮತ್ತು ಹೇಗೆ ಕ್ಷಮಿಸಬೇಕೆಂಬ ವಿಷಯದಲ್ಲಿ ನಾವು ಹೆಮ್ಮೆಪಡುವವರಾಗಿರುತ್ತೇವೆ.

> ## ಸಾಕ್ಷಿ
> ### ಯೇಸು ನನ್ನ ವ್ಯವಹಾರಗಳನ್ನು ಆಶೀರ್ವದಿಸಿದನು
>
> *"ನನ್ನ ಕಕ್ಷೀದಾರರು ನನಗೆ ಯಾವುದೇ ಹಣ ಪಾವತಿ ಮಾಡದಿದ್ದರಿಂದ ನಾನು ತುಂಬಾ ಸಂಕಷ್ಟದಲ್ಲಿದ್ದೆ. ಒತ್ತೆಯಿಡಲೂ ಸಹ ಯಾವುದೇ ವಸ್ತುಗಳು ಉಳಿಯದೇ ಹೋದದ್ದರಿಂದ ನನ್ನ ಹಾಗೂ ನನ್ನ ಕುಟುಂಬದವರ ಹಣಕಾಸಿನ ಸ್ಥಿತಿಗತಿಯು ತುಂಬಾ ಶೋಚನೀಯವಾಗಿತ್ತು. ನನ್ನ ಸ್ಥಿತಿಗತಿಯನ್ನು ಅರಿತ ನನ್ನ ಸಭಾಪಾಲಕರು ನನ್ನ ಕಕ್ಷೀದಾರರನ್ನು ಮನ್ನಿಸುವ ಹಾಗೂ ಅವರು ನನಗೆ ಕೊಡಬೇಕಿರುವ ಹಣವನ್ನು ಬಿಟ್ಟುಬಿಡುವಂತೆ ಪ್ರೋತ್ಸಾಹಿಸಿದರು. ಖಂಡಿತವಾಗಿಯೂ ಅದೊಂದು ಕಠಿಣ ಹೋರಾಟವಾಗಿದ್ದರೂ ಅವರನ್ನು ಕ್ಷಮಿಸಿದೆನು. ಇದಾದ ಅಲ್ಪ ಕಾಲಾವಧಿಯಲ್ಲೇ ತಕ್ಕ ಕಾಲದಲ್ಲೇ ಹಣಪಾವತಿ ಮಾಡುವ ಕಕ್ಷೀದಾರರ ಪರಿಚಯ ನನಗಾಯಿತು."*

ಕೆಲವು ಸನ್ನಿವೇಶಗಳಲ್ಲಿ ಒಬ್ಬರು ಇನ್ನೊಬ್ಬರಿಗೆ ವಿರುದ್ಧವಾಗಿ ಮಾಡಿರುವ ತಪ್ಪು (ಪಾಪ) ಗಳು ಬಹಳಷ್ಟು ಗಂಭೀರ ಹಾಗೂ ಆಳವಾದ ಪರಿಣಾಮಗಳನ್ನು ಉಂಟುಮಾಡುತ್ತಿರುವುದರಿಂದ ಆ ವ್ಯಕ್ತಿಯನ್ನು ಕ್ಷಮಿಸುವ ಅಗತ್ಯವಿಲ್ಲವೆಂದು ಹೇಳುವುದುಂಟು. ಇಂತಹ ತಪ್ಪುಗಳಲ್ಲಿ ಭೂಗಳ್ಳತನ ಅಥವಾ ಅತ್ಯಾಚಾರ (ಲೈಂಗಿಕ ಶೋಷಣೆ) ಗಳೂ ಸೇರಿವೆ. ನೊಂದವರ ಪ್ರತಿಕ್ರಿಯೆಯನ್ನು ನಾವು ಗ್ರಹಿಸಶಕ್ತರಾದರೂ ಸಹ ಸತ್ಯವೇದದ ಪ್ರಕಾರ ಅಲ್ಲಿ ನಡೆದಿರುವ ತಪ್ಪನ್ನು ಅಂಗೀಕರಿಸಿ ಕ್ಷಮಿಸಲೇಬೇಕು ***(ಮತ್ತಾಯ 6:14–15; ಎಫೆಸ 4:31–32; 1 ಕೊರಿ 6:7).***

ಈ ರೀತಿಯ ಸನ್ನಿವೇಶಗಳಲ್ಲಿ ಕ್ಷಮಿಸುವಿಕೆಯು ಅಷ್ಟೊಂದು ಸುಲಭವಲ್ಲ, ಕೆಲವೊಮ್ಮೆ ಅದಕ್ಕೆ ಹೆಚ್ಚಿನ ಸಮಯಾವಕಾಶವೂ ಬೇಕಾಗುವುದರಿಂದ ದೈವೀಕ ಸಹಾಯದಿಂದ ಮಾತ್ರವೇ ಕ್ಷಮಿಸಲು ಸಾಧ್ಯ. ನಮ್ಮನ್ನು ಬಹಳ ಗಂಭೀರವಾಗಿ ವೇದನೆಪಡಿಸಿರುವವರನ್ನು ಸ್ನೇಹಿತರನ್ನಾಗಿಸಿಕೊಳ್ಳುವ ಅಗತ್ಯತೆ ಇಲ್ಲದಿದ್ದರೂ ನಮ್ಮ ಹೃದಯದ ಅಂತರಾಳದಿಂದ ಅವರನ್ನು ಕ್ಷಮಿಸಲೇಬೇಕಿದೆ.

ನಿನ್ನ ಜೀವಿತದಲ್ಲಿ ಇತರರಿಂದ ನಿನಗುಂಟಾದ ಗಾಯ – ವೇದನೆಗಳಿಗೆ ನೀನು ಪ್ರತಿಕ್ರಿಯಿಸಿದ ವಿಧಾನಕ್ಕೆ ಅನುಗುಣವಾಗಿ ನೀನು ಯಾರನ್ನಾದರೂ ಯಾವುದಾದರೂ ವಿಷಯದಲ್ಲಿ ಕ್ಷಮಿಸಬೇಕಾಗಿದ್ದಲ್ಲಿ ಅಂತಹವರನ್ನು ನಿನಗೆ ತೋರಿಸಿಕೊಡಲು ಪವಿತ್ರಾತ್ಮನ ಸಹಾಯವನ್ನು ಕೇಳಿಕೊಳ್ಳಲು ಸ್ವಲ್ಪ ಸಮಯವನ್ನು ವೆಚ್ಚಮಾಡಿರಿ. ಆ ವ್ಯಕ್ತಿಯು ನಿಮಗೆ ಮಾಡಿರುವ ನಷ್ಟದ ನಿಖರವಾದ ಪ್ರಮಾಣ ಎಷ್ಟೆಂಬುದನ್ನು ಪ್ರಾರ್ಥನಾಪೂರ್ವಕವಾಗಿ ಅರಿತು ಅದನ್ನು ಅವರಿಗೆ ಮನ್ನಿಸಲು ಸಹಾಯವಾಗುತ್ತದೆ (ಅದು ಹಣ, ವರ್ಚಸ್ಸು, ವೇದನೆ... ಇತ್ಯಾದಿಗಳಾಗಿರಬಹುದು). ಅಂಥವರು ನಿಮಗೆ ಸಾಲವಾಗಿ ಕೊಡಬೇಕಾಗಿರುವುಗಳನ್ನು ಬಿಟ್ಟುಬಿಡಿರಿ.

**ನೀವು ಇತರರನ್ನು ಕ್ಷಮಿಸುತ್ತಿರುವದಾದಲ್ಲಿ ಮಾರ್ಗದರ್ಶಿಗಳು**

- ನಿಮ್ಮನ್ನು ಅವರು ವೇದನೆಪಡಿಸಿರುವ ವಿದಾನವನ್ನು ವಿಶಿಷ್ಟವಾಗಿ ದೇವರ ಮುಂದೆ ಹೇಳಿಕೊಳ್ಳಿರಿ
- ಅವರನ್ನು ಕ್ಷಮಿಸಲು ಬಯಸಿದ್ದಲ್ಲಿ ಸಹಾಯಕ್ಕಾಗಿ ದೇವರನ್ನು ಕೇಳಿಕೊಳ್ಳಿರಿ
- ಅವರು ನಿಮಗೆ ಮಾಡಿರುವುದಕ್ಕೆ ಪ್ರತಿಯಾಗಿ ನೀವು ಮಾಡಿರಬಹುದಾದ ತಪ್ಪಾದ ಅಲೋಚನೆಗಳು, ಕ್ರಿಯೆಗಳು ಇದ್ದಲ್ಲಿ ಅರಿಕೆ ಮಾಡಿರಿ
- ಅವರನ್ನು ಆಶೀರ್ವದಿಸಿರಿ ಹಾಗೂ ಆಶೀರ್ವದಿಸುವಂತೆ ದೇವರನ್ನು ಕೇಳಿಕೊಳ್ಳಿರಿ
- ಯೇಸುವನ್ನು ಮತ್ತೊಮ್ಮೆ ನಿಮ್ಮ ಹೃದಯದೊಳಕ್ಕೆ ಅಹ್ವಾನಿಸಿ ಪವಿತ್ರಾತ್ಮನಿಂದ ಸಂಪೂರ್ಣವಾಗಿ ತುಂಬಿಸುವಂತೆ ಕೇಳಿಕೊಳ್ಳಿರಿ

ನೀವು ಸಿದ್ಧವಾದ ನಂತರ ಈ ಮುಂದಿನ ಪ್ರಾರ್ಥನೆಯನ್ನು ಜೋರಾಗಿ ಬೇಡಿಕೊಳ್ಳಿರಿ.

**ಇತರರ ಕ್ಷಮಾಪಣೆಗಾಗಿನ ವಿಜ್ಞಾಪನೆ**



"ಪರಲೋಕದಲ್ಲಿರುವ ಪ್ರೀತಿಯ ತಂದೆಯೇ, ನನ್ನ ಪಾಪಗಳಿಗಾಗಿ ತನ್ನ ಪ್ರಾಣವನ್ನೇ ನನಗಾಗಿ ಕೊಟ್ಟ ಯೇಸುವಿಗಾಗಿ ಸ್ತೋತ್ರ. ನನಗೆ ವಿರುದ್ಧವಾಗಿ ತಪ್ಪುಗಳನ್ನು ಮಾಡಿರುವವರನ್ನು ಮನ್ನಿಸಲು ದಯವಿಟ್ಟು ಸಹಾಯ ಮಾಡು."

**"ನಾನು ಈ ಮುಂದಿನ ವ್ಯಕ್ತಿಗಳಿಗಾಗಿ... ಕ್ಷಮಿಸಲು ಬಯಸುತ್ತಿದ್ದೇನೆ. ಅವರು ನಮ್ಮನ್ನು ದೂಷಿಸಿ, ನಿಂದಿಸಿ, ನಿರ್ಲಕ್ಷಿಸಿ, ಹೀಯಾಳಿಸಿರುವ ವಿಷಯಗಳನ್ನು ವಿಶಿಷ್ಟವಾಗಿ ಕ್ಷಮಿಸುತ್ತಿದ್ದೇನೆ. ಈ ಮುಂದಿನ... ಎಂಬ ವ್ಯಕ್ತಿಯು ನನಗೆ ಕೊಡಬೇಕಾಗಿರುವ ಸಾಲ ಹಾಗೂ ಕ್ಷಮಿಸಿರಿ ಎಂದು ಕೇಳಿಕೊಳ್ಳದಿರುವ ವಿಷಯದಲ್ಲೂ ಕ್ಷಮಿಸಿ ಮನ್ನಿಸುತ್ತಿದ್ದೇನೆ."**

"ತಂದೆಯಾದ ದೇವರೇ – ಅವರು ನನಗೆ ವಿರುದ್ಧವಾಗಿ ಮಾಡಿರುವ ತಪ್ಪುಗಳಿಗೆ ಪ್ರತಿಯಾಗಿ ನಾನೂ ಸಹ ಅವರಿಗೆ ಮಾಡಿರುವ (ನಿಮ್ಮ ತಪ್ಪುಗಳನ್ನೂ ಸಹ **ವಿಶಿಷ್ಟವಾಗಿ** ಅರಿಕೆ ಮಾಡಿರಿ – ಕೋಪ, ಖಂಡಿಸುವಿಕೆ, ಪ್ರತಿದಂಡನೆ, ಇತ್ಯಾದಿ) ಈ ರೀತಿಯ ತಪ್ಪಾದ ಪ್ರತಿಕ್ರಿಯಿಸುವಿಕೆಗಳಿಂದ ನನ್ನನ್ನು ವಿಮುಕ್ತಗೊಳಿಸು. ನನ್ನನ್ನು ದಯವಿಟ್ಟು ಕ್ಷಮಿಸು, ತೊಳೆದು ಶುದ್ಧೀಕರಿಸಿ ಹಾಗೂ ನೂತನ ಹೃದಯವನ್ನು ದಯಪಾಲಿಸು. ಈ ರೀತಿಯ ಪಾಪಗಳ ಪ್ರಭಾವದಿಂದ ನನ್ನನ್ನು ಈಗಲೇ ಮುಕ್ತಗೊಳಿಸು."

"ನಾನು ಅವರೆಲ್ಲರನ್ನೂ ಈಗಾಗಲೇ ಕ್ಷಮಿಸಿರುವೆನು ಹಾಗೂ ಅವರೆಲ್ಲರನ್ನೂ ಆಶೀರ್ವದಿಸ ಬಯಸುತ್ತಿದ್ದೇನೆ (**ಹೆಸರುಗಳು** ...) ತಂದೆಯೇ ಅವರನ್ನು ಆಶೀರ್ವದಿಸುವಂತೆ ಯೇಸುವಿನ ನಾಮದಲ್ಲಿ ನಿನ್ನನ್ನು ಬೇಡಿಕೊಳ್ಳುತ್ತಿದ್ದೇನೆ."

"ಯೇಸುವಿನ ನಾಮದಲ್ಲೇ, ಆಮೆನ್."

ಈ ಸಮಯದಲ್ಲಿ ನೀವು ಯಾರಾರ ತಪ್ಪುಗಳನ್ನು ಮನ್ನಿಸಿ ಕ್ಷಮಿಸಲು ಬಯಸುತ್ತಿರುವಿರೋ ಅವರೆಲ್ಲರ ಹೆಸರುಗಳನ್ನು ಹೇಳಿಕೊಂಡು ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಿರಿ.

# ನಮ್ಮನ್ನೇ ನಾವು ಕ್ಷಮಿಸುವುದು

ಈ ಹಿಂದೆ ನಾವು ಮಾಡಿರಬಹುದಾದ ನಾಚಿಕೆ ಹುಟ್ಟಿಸಬಹುದಾದ ಕಾರ್ಯಗಳಿಗಾಗಿ ನಮ್ಮನ್ನು ನಾವೇ ಮನ್ನಿಸಬೇಕಾದ ಅಗತ್ಯವುಂಟು. ಕೆಲವರಂತೂ ಘೋರವಾದ ತಪ್ಪುಗಳನ್ನು ಮಾಡಿರಬಹುದು, ಆದರೆ ಅವುಗಳ ಬಗ್ಗೆ ಪಶ್ಚಾತ್ತಾಪಪಟ್ಟಿರುವ ನಾವು ದೇವರು ನಮ್ಮನ್ನು ಮನ್ನಿಸಿರುವಂತೆಯೇ ನಾವು ನಮ್ಮನ್ನೇ ಕ್ಷಮಿಸುವುದನ್ನು ಕಲಿಯಬೇಕಿದೆ. ನಾವು ನಮ್ಮನ್ನೇ ವೇದನೆಪಡಿಸಿರುವ ವಿಷಯದೊಳಕ್ಕೆ ಸಿಕ್ಕಿಹಾಕಿಕೊಂಡಿದ್ದರಿಂದ ನಮ್ಮನ್ನೇ ದೂಷಿಸಿರಬಹುದು ಅಥವಾ ನಮ್ಮನ್ನೇ ಮೂರ್ಖರನ್ನಾಗಿಸಿಕೊಂಡಿರಬಹುದು. ಈ ರೀತಿಯಾಗಿ ನಾವು ನಮ್ಮನ್ನೇ ಮನ್ನಿಸಲಾಗದ ಅನುಭವದಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದು ಇದರಿಂದ ನಾವು ವಿಮುಕ್ತರಾಗಲೇಬೇಕಿದೆ.

ನೀವು ಯಾವ ವಿಷಯ(ಕ್ಷೇತ್ರ)ದಲ್ಲಿ ನಿಮ್ಮನ್ನೇ ಮನ್ನಿಸಬೇಕೆಂಬುದನ್ನು ತೋರಿಸಿಕೊಡುವಂತೆ ಪವಿತ್ರಾತ್ಮನ ಸಹಾಯವನ್ನು ಬೇಡಿಕೊಳ್ಳಬಹುದಾಗಿದೆ (ಸ್ವಲ್ಪ ಸಮಯ ಈ ವಿಷಯವನ್ನು ಮೌನವಾಗಿ ಚಿಂತಿಸಿರಿ). ನೀವು ಸಿದ್ಧರಾಗಿದ್ದರೆ ಈ ಮುಂದಿನ ಪ್ರಾರ್ಥನೆಯನ್ನು ಜೋರಾಗಿ ಮಾಡಿರಿ.

**ಕ್ಷಮಾಪಣೆಗಾಗಿ ಒಬ್ಬನು ತನಗಾಗಿ ತಾನೇ ಬೇಡಿಕೊಳ್ಳುವುದು**



"ಪರಲೋಕದಲ್ಲಿರುವ ತಂದೆಯೇ, ನನ್ನ ಪಾಪಗಳಿಗಾಗಿ ತನ್ನ ಪ್ರಾಣವನ್ನೇ ಕೊಟ್ಟ ಯೇಸುವಿಗಾಗಿ ವಂದನೆಗಳು. ತಂದೆಯೇ ನನ್ನನ್ನು ಮನ್ನಿಸಿರುವುದಕ್ಕಾಗಿ ವಂದನೆಗಳು. ನಾನು ಮಾಡಿರುವ ತಪ್ಪುಗಳಿಗಾಗಿ ನನ್ನನ್ನೇ ಕ್ಷಮಿಸಲು ಸಹಾಯಿಸು... ***(ನಿಮ್ಮನ್ನೇ ನೀವು ಕ್ಷಮಿಸಿರುವ ಕೆಲವು ವಿಶಿಷ್ಟವಾದ ಪಾಪಗಳನ್ನು ಹೇಳಿಕೊಳ್ಳಿರಿ).*** ನನ್ನನ್ನೇ ನಾನು ಕ್ಷಮಿಸಿರುವುದರಿಂದ ಇನ್ಮುಂದೆ ನನ್ನನ್ನೇ ಖಂಡಿಸಲು ನಾನಿನ್ನು ಬಯಸುತ್ತಿಲ್ಲ. ಬದಲಾವಣೆಯನ್ನು ಬಯಸುತ್ತಿರುವ ನನಗೆ ದಯವಿಟ್ಟು ಸಹಾಯಿಸು. ನಾನಿನ್ನು ನನ್ನನ್ನೇ ಆಶೀರ್ವದಿಸುವಂತೆ ನನ್ನನ್ನು ದಯವಿಟ್ಟು ಆಶೀರ್ವದಿಸಿರಿ. ವಂದನೆಗಳು, ಯೇಸುವಿನ ನಾಮದಲ್ಲಿ, ಆಮೆನ್."

ಈ ಸಮಯದಲ್ಲಿ ಕರ್ತನು ನಮಗೆ ತೋರಿಸಿಕೊಟ್ಟ ಎಲ್ಲಾ ವಿಷಯಗಳಿಗಾಗಿ ನೀವು ಪ್ರಾರ್ಥಿಸಿ ಮುಗಿಸುವವರೆಗೂ ನಿಮ್ಮ ಸ್ವಂತ ಮಾತುಗಳಲ್ಲಿ ವಿಜ್ಞಾಪಿಸುತ್ತಲೇ ಇರಿ

# ದೇವರ ಮೇಲೆ ತಪ್ಪು ಹೊರಿಸುವುದು

*"ಮನುಷ್ಯನು ಮೂರ್ಖತನದಿಂದ ತನ್ನ ಗತಿಯನ್ನು ಕೆಡಿಸಿಕೊಂಡು ಯೆಹೋವನ ಮೇಲೆ ಕುದಿಯುವನು." **(ಜ್ಞಾನೋ 19:3)***

ನಮ್ಮ ಜೀವಿತದಲ್ಲಿ ನಡೆದಿರಬಹುದಾದ ಕೆಲವು ದುರ್ಘಟನೆಗಳಿಗಾಗಿ ನಾವು ದೇವರನ್ನು ದೂಷಿಸುತ್ತೇವೆ (ದೇವರು ಎಲ್ಲಾ ಒಳ್ಳೆಯವುಗಳಿಗೆ ಕಾರಣನೇ ಹೊರತು ಪಾಪಗಳಿಗಲ್ಲ). ದೇವರು ಒಳ್ಳೆಯವನಾಗಿದ್ದಾನೆ. ಉದಾಹರಣೆಗೆ – ನಮಗಿಷ್ಟವಿಲ್ಲದ ಘಟನೆಯೊಂದು ನಮ್ಮ ಅಥವಾ ನಮ್ಮ ಸ್ನೇಹಿತರ ಜೀವನದಲ್ಲಿ ನಡೆದಿರುವುದಕ್ಕಾಗಿ ನಾವು ದೇವರ ಮೇಲೆ ಕೋಪಗೊಂಡಿರಬಹುದು. ಇಂತಹ ಸನ್ನಿವೇಶಗಳಲ್ಲಿ ನಾವು ದೇವರನ್ನು ದೂಷಿಸುವ ವಿಷಯಗಳಿಂದ ವಿಮುಕ್ತರಾಗಬೇಕಿದೆ.

ನೀವು ಯಾವುದಾದರೂ ಕಾರಣಗಳಿಗಾಗಿ ದೇವರನ್ನು ದೂಷಿಸಿರಬಹುದಾದ ವಿಷಯಗಳನ್ನು ನಿಮಗೆ ತೋರಿಸಿಕೊಡುವಂತೆ ಪವಿತ್ರಾತ್ಮನನ್ನು ಆಹ್ವಾನಿಸಿರಿ (ಮತ್ತೆ ಈ ವಿಷಯವನ್ನು ಮೌನವಾಗಿ ಚಿಂತಿಸಿರಿ).

ನೀವು ಸಿದ್ಧರಾಗಿದ್ದರೆ ಈ ಮುಂದಿನ ಪ್ರಾರ್ಥನೆಯನ್ನು ಗಟ್ಟಿಯಾಗಿ ಪ್ರಾರ್ಥಿಸಿರಿ.

**ದೇವರನ್ನು ದೂಷಿಸಿರುವುದಕ್ಕಾಗಿ ಕ್ಷಮಾಪಣೆಯ ಪ್ರಾರ್ಥನೆ**



"ಕರ್ತನಾದ ದೇವರೇ, ನನ್ನ ಜೀವನದ ವಿವಿಧ ಸನ್ನಿವೇಶಗಳಲ್ಲಿ ಉಂಟಾದ ಅನೇಕ ಘಟನೆಗಳಿಗಾಗಿ ನಾನು ಅರಿವಿಲ್ಲದೆಯೇ ನಿನ್ನನ್ನು ದೂಷಿಸಿದ್ದೇನೆ (ಅಂತಹ ಕೆಲವು **ವಿಶಿಷ್ಟ** ಸನ್ನಿವೇಶಗಳನ್ನು ದೇವರ ಮುಂದೆ ಹೇಳಿಕೊಳ್ಳಿರಿ). ತಂದೆಯೇ ನನ್ನನ್ನು ಕ್ಷಮಿಸಿರಿ, ಇನ್ನೆಂದೂ ನಿನ್ನನ್ನು ದೂಷಿಸಲಾರೆ. ನಮ್ಮೆಲ್ಲರಿಗೂ ನೀನು ಅತ್ಯುತ್ತಮವಾದುದ್ದನ್ನೇ ಬಯಸುತ್ತಿರುವಿಯೆಂದು ನಾನು ಅಂಗೀಕರಿಸುತ್ತೇನೆ. ನನ್ನನ್ನು ಪ್ರೀತಿಸಿ, ಕ್ಷಮಿಸಿ, ವಿಮುಕ್ತಗೊಳಿಸಿದ್ದಕ್ಕಾಗಿ ವಂದನೆಗಳು. ಯೇಸುವಿನ ನಾಮದಲ್ಲಿ ಬೇಡಿಕೊಳ್ಳುತ್ತೇನೆ, ಆಮೆನ್."

ಈ ಸಮಯದಲ್ಲಿ ಕರ್ತನು ನಮಗೆ ತೋರಿಸಿಕೊಟ್ಟ ಎಲ್ಲಾ ವಿಷಯಗಳಿಗಾಗಿ ನೀವು ಪ್ರಾರ್ಥಿಸಿ ಮುಗಿಸುವವರೆಗೂ ನಿಮ್ಮ ಸ್ವಂತ ಮಾತುಗಳಲ್ಲಿ ವಿಜ್ಞಾಪಿಸುತ್ತಲೇ ಇರಿ.

# ಪಶ್ಚಾತ್ತಾಪ ಹಾಗೂ ಕ್ಷಮಾಪಣೆಗಳ ಆಳಕ್ಕೆ ಇಳಿಯುವಿಕೆ

ನಾವು ಅನೇಕ ವಿಧಾನಗಳಲ್ಲಿ ಪಾಪ ಮಾಡುವವರಾಗಿದ್ದೇವೆ. ಅಜ್ಞಾನವೂ ಸಹ ಅವುಗಳಲ್ಲಿ ಒಂದು ವಿಧಾನವಾಗಿದೆ ***(ಹೋಶೇಯ 4:6).*** ಈ ಕಾರಣಕ್ಕಾಗಿಯೇ ಸತ್ಯವೇದವನ್ನು ಪ್ರತಿದಿನ ಓದಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದದ್ದು ಅತ್ಯಗತ್ಯವಾಗಿದೆ. ಮಾನಸಾಂತರ ಪಡಬೇಕಾಗಿರುವ ವಿಷಯಗಳ ಪಟ್ಟಿಯನ್ನು ಈ ಪುಸ್ತಕದ ಅಂತಿಮ ಪುಟಗಳಲ್ಲಿ ಒದಗಿಸಲಾಗಿದೆ. ಮುಂದಿನ ಕೆಲವು ಅಧ್ಯಾಯಗಳಲ್ಲಿ ಪಾಪಕ್ಕೆ ಅವಕಾಶಕೊಡಬಹುದಾದ ವಿಷಯಗಳ ಬಗ್ಗೆ ಗಮನಿಸಲಿದ್ದೇವೆ. ಈ ವಿಷಯಗಳು ನಮ್ಮ ವೈಯಕ್ತಿಕ ಜೀವನದ ಮೇಲೆ ಯಾವ ವಿಧಾನದಲ್ಲಿ ಪರಿಣಾಮ ಬೀರಲಿದೆಯೆಂದೂ ಪ್ರಾರ್ಥನಾಪೂರ್ವಕವಾಗಿ ಅವಲೋಕಿಸಲಿದ್ದೇವೆ. ಕಾರಣ ಆ ವಿಷಯಗಳು ಜಯಕರವಾದ ಕ್ರೈಸ್ತ ಜೀವಿತವನ್ನು ನಡೆಸಲು ನಮ್ಮನ್ನು ಅಡ್ಡಿಪಡಿಸುತ್ತವೆ.


**ಸಾಕ್ಷಿ**

***ನಿಜವಾದ ಸ್ನೇಹಿತನಾಗಲು ಯೇಸು ಸಹಾಯಿಸಿದನು***

*"ನನ್ನೊಂದಿಗೆ ಅತ್ಯಂತ ನಿಕಟವಾಗಿದ್ದ ಸ್ನೇಹಿತೆಯೊಂದಿಗೆ ಬಹಳ ಹತ್ತಿರದ ಸಂಬಂದ ಇಟ್ಟುಕೊಂಡಿದ್ದು ಅನೇಕಾವರ್ತಿ ಅವಳನ್ನು ಮನೆಯಿಂದ ಹೊರಕ್ಕೆ ಬರುವಂತೆ ಕರೆಮಾಡಿ ಪುಸಲಾಯಿಸಿದ್ದುಂಟು. ಆದರೆ ಮನೆಯಿಂದ ಹೊರಬರಲಾಗದ ಸಂದಿಗ್ಧ ಸನ್ನಿವೇಷಗಳ ಬಗ್ಗೆಯೇ ಅವಳು ತಿಳಿಸುತ್ತಿದ್ದಳು. ಆದರೆ ಅನೈತಿಕ ಸಂಬಂಧಗಳ ವಿಷಯದಲ್ಲಿನ ಬೋಧನೆಗಳನ್ನು ಕೇಳಿಸಿಕೊಂಡಾಗ ಮಾತ್ರವೇ ನಾನು ಅವಳ ಮೇಲೆ ನಿಯಂತ್ರಣ ಸಾಧಿಸಿ ದಬ್ಬಾಳಿಕೆ ಮಾಡುತ್ತಿರುವುದಾಗಿ ಗ್ರಹಿಸಿಕೊಂಡೆನು. ನಾನು ಅವಳನ್ನು ಕರ್ತನ ಸನ್ನಿಹಕ್ಕೆ ತಂದು ನನ್ನ ಪಾಪಗಳ ಬಗ್ಗೆ ಪಶ್ಚಾತ್ತಾಪಪಟ್ಟು ಅನೈತಿಕ ಸಂಬಂಧವನ್ನು ಮುರಿದುಹಾಕಲು ಯೇಸು ನಮ್ಮಿಬ್ಬರನ್ನು ಸ್ವತಂತ್ರರನ್ನಾಗಿಸಿದನು. ಈಗ ನಮ್ಮಲ್ಲಿರುವ ಸಂಬಂಧವು ಅನೈತಿಕತ್ವದಿಂದ ವಿಮುಕ್ತವಾಗಿದ್ದು ಪವಿತ್ರವಾದದ್ದಾಗಿದೆ."*

# ಆತ್ಮೀಕವಲ್ಲದ ಸಂಬಂಧಗಳಿಂದ ಬಿಡುಗಡೆ

***"ಅವರಿಬ್ಬರೂ ಒಂದೇ ಶರೀರವಾಗಿರುವರು." (ಆದಿ 2:24; ಮತ್ತಾಯ 19:5)***



ವ್ಯಕ್ತಿಗಳಿಬ್ಬರ ಮಧ್ಯ ಸಾಮಾಜಿಕ ಅಥವಾ ಆತ್ಮೀಕವಾದ ನಿಕಟವಾದ ಸಂಬಂಧವು ಸ್ಥಾಪಿಸಲ್ಪಟ್ಟಾಗ ಶಾರೀರಿಕ, ಮಾನಸಿಕ ಹಾಗೂ ಆತ್ಮೀಕ ಒಡಂಬಡಿಕೆಯೂ ಸಹ ಸ್ಥಾಪಿಸಲ್ಪಡುತ್ತದೆ. ಈ ರೀತಿಯ ಒಡಂಬಡಿಕೆಗಳು ಬಹುಕಾಲ (ಮರಣದವರೆಗೂ) ನಮ್ಮ ಮನಸ್ಸಿನಲ್ಲಿರುವುದರಿಂದ ನಮ್ಮ ಮನವು ಆ ಸಂಬಂಧಗಳ, ವ್ಯಕ್ತಿಗಳ, ಸನ್ನಿವೇಶಗಳ ಚಿತ್ರ (ಫೋಟೋ) ಗಳನ್ನು ತೆಗೆದುಕೊಳ್ಳುವುದರಿಂದ ಇದು ಬಹುಕಾಲ ನಿಲ್ಲುತ್ತದೆ ಹಾಗೂ ಅವುಗಳನ್ನು ಬಹುಕಾಲ ಅಂದರೆ ಮರಣದವರೆಗೂ ನಮ್ಮ ಜ್ಞಾಪಕದಲ್ಲಿರುವಂತೆ ಮಾಡಲು ಶಕ್ತವಾಗಿದೆ.

ಈ ವಿಧದ ನೆನಪುಗಳು ನಮ್ಮ ಹಿತಕ್ಕಾಗಿಯೇ ಆಗಿದ್ದು ಇದು ಮದುವೆ ಇತ್ಯಾದಿ ಆತ್ಮೀಕ ಸಂಬಂಧಗಳಿಗೆ ನಡೆಸುತ್ತದೆ. ಆದರೆ ನಾವು ತಪ್ಪಾದ ಅಥವಾ ಪಾಪಮಯವಾದ

ಮೋಜು – ಮಸ್ತಿ ಹಾಗೂ ಮದುವೆಗೂ ಮುಂಚಿನ ಲೈಂಗಿಕ ಸಂಬಂಧಗಳಾಗಲೀ ಅಥವಾ ಭಯ ಹಾಗೂ ಆತ್ಮೀಕವಲ್ಲದ ಸಂಬಂಧಗಳಲ್ಲಿ ಭಾಗಿಗಳಾಗುವಂತಹ ಸನ್ನಿವೇಶಗಳು ನಮ್ಮನ್ನು ವಿರೋಧಿಯಾದ ಸೈತಾನನು ಆತ್ಮೀಕವಲ್ಲದ ಸಂಬಂಧಗಳಿಗೆ ತಳ್ಳಲು ಉಪಯೋಗಿಸುವನು. ಈ ರೀತಿಯಾಗಿ ರೂಪಿಸಲ್ಪಟ್ಟ ಸಂಬಂಧಗಳಲ್ಲಿ ಭಾಗಿಯಾದ ಒಬ್ಬ ವ್ಯಕ್ತಿ ಸತ್ತರೂ ಸಹ ಆ ಆತ್ಮೀಕವಲ್ಲದ ಸಂಬಂಧದ ಪರಿಣಾಮವು ಮುಕ್ತಾಯಗೊಳ್ಳದು ***(2 ಪೇತ್ರ 2:18–19; ಮತ್ತಾಯ 5:27–28; ಯೂದ 8).***

ಅದರಂತೆಯೇ – ಭಯ, ಪೀಡನೆ ಅಥವಾ ಪರಸ್ಪರ ಸಂಬಂಧಗಳಲ್ಲಿನ ಆತ್ಮೀಕವಲ್ಲದ ನಿಯಂತ್ರಣಗಳಿಂದ ಆತ್ಮೀಕ ವಲ್ಲದ ಸಂಬಂಧಗಳು ಸ್ಥಾಪಿಸಲ್ಪಡುತ್ತವೆ. ಜನರ ಮೇಲೆ ದಬ್ಬಾಳಿಕೆ ನಡೆಸಲಾಗುವಂತೆ ಸೈತಾನನು ನಮ್ಮ ಮೇಲೆ ಈ ರೀತಿಯ ಆತ್ಮೀಕವಲ್ಲದ ಸಂಬಂಧವನ್ನು ಉಪಯೋಗಿಸುತ್ತಾನೆ. ಈ ರೀತಿಯ ಆತ್ಮೀಕವಲ್ಲದ ಸಂಬಂಧಗಳನ್ನು ಸಾಮಾನ್ಯವಾಗಿ ಕುಟುಂಬಗಳಲ್ಲಿಯೂ ಇತರರಲ್ಲಿಯೂ ಕಾಣಬಹುದಾಗಿದೆ.

## ಸಾಕ್ಷಿ
## ಆತ್ಮೀಕವಲ್ಲದ ಬಂಧನದಿಂದ ಕ್ರಿಸ್ತನು ನನ್ನನ್ನು ಮುಕ್ತನನ್ನಾಗಿಸಿದ್ದು

*"ನಮ್ಮ ತಾಯಿಯವರು ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಕುಟುಂಬದಿಂದ ಬಂದಿರುವೆನು. ಕೆಲವು ವರ್ಷಗಳ ಹಿಂದೆ ನನ್ನ ಸ್ವಂತ ಊರನ್ನು ಬಿಟ್ಟು ಕೆಲಸಕ್ಕಾಗಿ ಬೇರೊಂದು ಸ್ಥಳಕ್ಕೆ ಹೋಗಲು ಬಯಸಿದಾಗ ನನ್ನ ತಾಯಿಯವರು ಅದಕ್ಕೆ ವಿರುದ್ಧವಾಗಿ ನನ್ನ ಮನಸ್ಸನ್ನು ಬದಲಾಯಿಸಲು ಬಹಳಷ್ಟು ಪ್ರಯತ್ನಿಸಿದರು, ಆದರೆ ಅವರು ನನ್ನ ಮೇಲೆ ಹಿಡಿತ ಸಾಧಿಸಿ ನನ್ನನ್ನು ನಾಶನಕ್ಕೆ ತಳ್ಳಲು ಹಾಗೂ ನನ್ನ ತೀರ್ಮಾನಕ್ಕೆ ಬದಲಾಗಿ ತನ್ನ ತೀರ್ಮಾನವನ್ನು ನನ್ನ ಮೇಲೆ ಹೇರಲು ಪ್ರಯತ್ನಿಸುತ್ತಿದ್ದಳು. ನೀನು ನನ್ನನ್ನು ಬಿಟ್ಟು ಹೋದಲ್ಲಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹತಾಶಳಾಗಿ ಹೇಳಿದಳು. ಆದರೆ ಅವಳು ಮಂತ್ರವಾದವೆಂಬ ದುಷ್ಟ ಆಯುಧವನ್ನು ನನ್ನ ಮೇಲೆ ಪ್ರಯೋಗಿಸುತ್ತಿದ್ದಳೆಂಬುದು ಆ ನಂತರ ನಾನು ಕಂಡುಕೊಂಡೆನು. ದೇವರು ನನ್ನನ್ನು ವಿಮುಕ್ತಗೊಳಿಸಲು ನಾನು ಅವಳನ್ನು ಮನ್ನಿಸಿದೆನು ಹಾಗೂ ಆತ್ಮೀಕವಲ್ಲದ ಬಂಧನವನ್ನು ಮುರಿದು ಹಾಕಿದೆನು ಹಾಗೂ ಯೇಸು ನನ್ನನ್ನು ಸ್ವತಂತ್ರಳನ್ನಾಗಿಸುವುದನ್ನು ಕಂಡುಕೊಂಡೆನು."*

*"ದುಷ್ಟನ ದುಷ್ಕೃತ್ಯಗಳೇ ಅವನನ್ನು ಆಕ್ರಮಿಸುವವು, ಅವನ ಪಾಪ ಪಾಶಗಳೇ ಅವನನ್ನು ಬಂಧಿಸುವವು"* ***ಜ್ಞಾನೋ 5:22).***



ಈ ರೀತಿಯ ಅನೈತಿಕ ಸಂಬಂಧಗಳ ಮುಖಾಂತರ ಉಂಟಾದ ಆತ್ಮೀಕವಲ್ಲದ ಮೋಜು ಹಾಗೂ ಲೈಂಗಿಕ ಸಂಬಂಧಗಳು, ಪ್ರೋನೊಗ್ರಾಫಿಗಳ ಬಗ್ಗೆ ಪಶ್ಚಾತ್ತಾಪಪಟ್ಟು ಅವುಗಳಲ್ಲಿ ಸಹಕರಿಸಿದ ವ್ಯಕ್ತಿ (ಗಳು) ನ್ನು ಕ್ಷಮಿಸಿ ಆ ಮೂಲಕವಾಗಿ ಉಂಟಾದ ಸಂಬಂಧವನ್ನು ಯೇಸುವಿನ ಅಧಿಕಾರವುಳ್ಳ ನಾಮದಲ್ಲಿ ಮುರಿದುಹಾಕುವಂತೆ ದೇವರನ್ನು ಬೇಡಿಕೊಳ್ಳೋಣ. ಪಾಪದಲ್ಲಿ ಭಾಗಿಗಳಾದವರಿಂದಲೂ, ಕೆಟ್ಟ ಸಂಬಂಧದಿಂದಲೂ ಹಾಗೂ ಆ ಕೆಟ್ಟ ನೆನಪುಗಳ ಬಂಧನದಿಂದಲೂ ನಮ್ಮನ್ನು ಬಂಧಮುಕ್ತಗೊಳಿಸುವಂತೆ ದೇವರನ್ನು ಬೇಡಿಕೊಳ್ಳೋಣ. ಇದನ್ನು ಪ್ರತಿಯೊಬ್ಬರೂ ವೈಯಕ್ತಿಕವಾಗಿಯೂ, ಕ್ರಮಬದ್ಧವಾಗಿಯೂ ಮಾಡಬೇಕಿದೆ.

*"ಆದರೆ ನೀತಿಸ್ವರೂಪನಾದ ಯೆಹೋವನು ದುಷ್ಟರು ಹಾಕಿದ ಬಂಧನಗಳನ್ನು ಛೇದಿಸಿಬಿಟ್ಟನು"* ***(ಕೀರ್ತನೆ 129:4).***

*"ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ"* ***(ಇಬ್ರಿಯ 4:12).***

ನಾವು ಪ್ರೀತಿಸುತ್ತಿರುವ ನಮ್ಮ ಕುಟುಂಬದ ಸದಸ್ಯರುಗಳು ಹಾಗೂ ಇತರರೊಂದಿಗಿನ ಆತ್ಮೀಕವಲ್ಲದ (ಅನೈತಿಕ) ಸಂಬಂಧಗಳು ಮುರಿಯುವುದೆಂದರೆ ಅವರಿಗಾಗಿ ಪ್ರಾರ್ಥಿಸದಿರುವುದು ಎಂಬರ್ಥವಲ್ಲ. ಇದರರ್ಥವು ನಮ್ಮನ್ನು ತಿರುಗಿ ಕತ್ತಲೆಗೆ ನೂಕುವ ವಿರೋಧಿಯ ಬಲವನ್ನೇ ಮುರಿಯುವುದು ಎಂಬುದಾಗಿದೆ.

**ಸಾಕ್ಷಿ**

**ಬ್ಯಾಡ್ಮಿಂಟನ್ ನನ್ನ ವಿಗ್ರಹವಾಗಿತ್ತು**

*"ಬ್ಯಾಡ್ಮಿಂಟನ್ ಆಟದ ಬಗ್ಗೆ ಅತ್ಯಂತ ಉತ್ಸುಕನಾಗಿದ್ದ ನಾನು ವಾರದ 6 ರಾತ್ರಿಗಳಲ್ಲೂ ರಜಾದಿನಗಳಲ್ಲೂ ಅದರಲ್ಲೇ ತಲ್ಲೀನನಾಗಿರುತ್ತಿದ್ದೆ. ಸಭೆಗೆ ಹೋಗಲಿಕ್ಕಾಗಲೀ ಅಥವಾ ಸತ್ಯವೇದ ಓದಲಿಕ್ಕಾಗಲೀ ಸಮಯವೇ ಸಿಗುತ್ತಿರಲಿಲ್ಲ. ಮುಂದೊಂದು ದಿನದಲ್ಲಿ ಒಬ್ಬ ಶ್ರೇಷ್ಠ ಬ್ಯಾಡ್ಮಿಂಟನ್ ಆಟಗಾರನಾಗಬೇಕೆಂಬುದೇ ನನ್ನ ಬಯಕೆಯಾಗಿತ್ತು. ದೀಕ್ಷಾಸ್ನಾನ ಮಾಡಿಸಿಕೊಂಡಲ್ಲಿ ನನ್ನ ಬಯಕೆಯನ್ನು ನೆರವೇರಿಸಲು ದೇವರು ಸಹಾಯಿಸುವನೆಂದು ನೆನಸಿ ನನ್ನ ಸಭಾಪಾಲಕರನ್ನು ಸಂಧಿಸಿದಾಗ ಅವರು ನನಗೆ ದೀಕ್ಷಾಸ್ನಾನ ಮಾಡಿಸಲು ನಿರಾಕರಿಸಿದರು. ಜೀವಿತದಲ್ಲಿ ಎಲ್ಲಕ್ಕಿಂತಲೂ ಮಿಗಿಲಾಗಿ ಯೇಸುವಿಗೆ ಮಾತ್ರ ಪ್ರಾಧಾನ್ಯತೆ ಕೊಟ್ಟರೆ ದೀಕ್ಷಾಸ್ನಾನ ಮಾಡಿಸುವದಾಗಿ ಅವರು ಹೇಳಿದರು. ತದನಂತರವೇ ಬ್ಯಾಡ್ಮಿಂಟನ್ ನನ್ನ ಜೀವಿತದ ದೇವರು ಹಾಗೂ ವಿಗ್ರಹವಾಗಿತ್ತೆಂಬ ತಪ್ಪನ್ನು ಗ್ರಹಿಸಿಕೊಂಡೆನು."*

ವಿಮೋಚನಾಕಾಂಡ 20:3–6 ರ ಪ್ರಕಾರ ದೇವರನ್ನಲ್ಲದೆ ಇತರೆ ಯಾವುದೇ ಸ್ವರೂಪವನ್ನೂ ಆರಾಧಿಸಬಾರದೆಂದು ಖಂಡಿತವಾಗಿ ಹೇಳಲ್ಪಟ್ಟಿದೆ. ಅದರಿಂದುಂಟಾಗುವ ಭೀಕರ ಪರಿಣಾಮಗಳ ಬಗ್ಗೆಯೂ ಹೇಳಲಾಗಿದೆ. ವಿಗ್ರಹಾರಾಧನೆಯನ್ನು ಆತ್ಮೀಕ ವ್ಯಭಿಚಾರವೆಂದು ಅನೇಕ ಬಾರಿ ಕರೆಯಲಾಗಿದೆ. ಇಸ್ರಾಯೇಲ್ಯರು ಅನೇಕ ಕಾಲಾವದಿಗಳಲ್ಲಿ ಅನೇಕ ವಿದೇಶಿ ದೇವರು (ವಿಗ್ರಹ) ಗಳನ್ನು ಪೂಜಿಸಿದ್ದರಿಂದ ಅವರನ್ನು "ವ್ಯಭಿಚಾರಿ" ಗಳೆಂದು ಕರೆಯಲಾಗಿದೆ ***(ಯೆರೆ 3; ಹೋಶೇ 1:2; ಹಾಗೂ ಅಧ್ಯಾಯ 2).***

ವ್ಯಭಿಚಾರಿಯೊಂದಿಗೆ ಸಂಬಂಧ ಬೆಳೆಸಿದ್ದಲ್ಲಿ ನಾವು ಅವಳೊಂದಿಗೆ ಒಂದಾಗಿದ್ದೇವೆ ಎಂಬುದಾಗಿದೆ. ಅದು 1 ಕೊರಿ 6:13–20 ರಲ್ಲಿ ಹೇಳಲ್ಪಟ್ಟಿರುವ *"ಪವಿತ್ರಾತ್ಮನ ಗರ್ಭಗುಡಿ"* ಎಂಬ ಸತ್ಯಾರ್ಥಕ್ಕೆ ವಿರುದ್ಧವಾಗಿದ್ದು ಸ್ಪಷ್ಟವಾದ ದೂಷಣೆಯಾಗಿರುತ್ತದೆ. ವ್ಯಭಿಚಾರಿಯೊಂದಿಗಿನ ಸಂಬಂಧದಂತೆಯೇ ಎಲ್ಲಾ ರೀತಿಯ ವಿಗ್ರಹಾರಾಧನೆಯೂ ಸಹ ಆತ್ಮೀಕವಲ್ಲದ ಸಂಬಂಧಕ್ಕೆ ನಡೆಸುತ್ತದೆ ***(ಎಫೆಸ 5:5; 1 ಯೋಹಾನ 5:21).***

ನಿಮ್ಮ ಜೀವನದಲ್ಲಿ ಯಾವುದಕ್ಕೆ ಅತೀ ಹೆಚ್ಚು ಪ್ರಾಧಾನ್ಯತೆ ಕೊಡುವಿರಿ? ನಿಮ್ಮ ಉತ್ತರ 'ಯೇಸು' ವಲ್ಲದಿದ್ದಲ್ಲಿ ಅದೊಂದು ವಿಗ್ರಹವೇ ಆಗಿರುತ್ತದೆಯಷ್ಟೆ.

ವಿಗ್ರಹಾರಾಧನೆ ಮಾಡುವುದು ಎಂದರೆ ದೇವರನ್ನು ಯೇಸುಕ್ರಿಸ್ತನ ಮೂಲಕ[3] ಆರಾಧಿಸುವ ಸರಿಯಾದ ಕ್ರಮದಿಂದ ದೂರವಾಗಿ ನಮ್ಮನ್ನು ಇತರ ವ್ಯಕ್ತಿಗಳಿಗೋ ಅಥವಾ ವಸ್ತುಗಳಿಗೋ ಸಮರ್ಪಿಸಿ ಕೊಡುವುದಾಗಿದೆ. (ಉದಾ: ಕೆಲಸ, ವಿದ್ಯಾಭ್ಯಾಸ, ಆಟೋಟ, ವಿಶ್ರಾಂತಿ) ಮತ್ತು ಕತ್ತಲೆಯ ರಾಜ್ಯಕ್ಕೆ ಸಂಬಂಧಿಸಿದ ಯಾವುದೇ ಕ್ರಿಯೆಗಳು, ಸತ್ಯವೇದ ರಹಿತ ಆತ್ಮೀಕ ಸ್ವಸ್ಥತೆ ಮತ್ತು ಮಾರ್ಮಿಕವಾದ ಶಕ್ತಿಯಿಂದ ನಡೆಸಲಾಗುತ್ತಿರುವ ಎಲ್ಲಾ ರೀತಿಯ ಧಾರ್ಮಿಕ ಹಿನ್ನೆಲೆಯ ಕ್ರಿಯೆಗಳು ಅಥವಾ ವ್ಯಾಯಾಮಗಳೂ ಸಹ ಅದರಲ್ಲಿ ಅಡಕವಾಗಿದೆ.

ಯಾವುದೇ ಸ್ವರೂಪದ ವಿಗ್ರಹಾರಾಧನೆಯೂ ಸಹ ಆತ್ಮೀಕವಲ್ಲದ ಸಂಬಂಧಕ್ಕೆ ನಡೆಸುತ್ತದೆಂಬುದನ್ನು ಮೇಲಿನ ಚಿತ್ರಗಳ ಮೂಲಕ ತಿಳಿಯಬಹುದಾಗಿದೆ. ನಮ್ಮಲ್ಲಿರುವ ಪ್ರತಿಯೊಂದು ವಿಗ್ರಹದ ಹಿಂದೆಯೂ ಸೈತಾನನ ಬಲವುಂಟು ***(1 ಕೊರಿ 10:20–21).*** ಆ ವಿಗ್ರಹಗಳ ಮೂಲಕವೇ ವ್ಯಕ್ತಿಯಲ್ಲಿ ಪ್ರವೇಶ ಪಡೆದ ದುರಾತ್ಮಗಳು ಆ ವ್ಯಕ್ತಿಯನ್ನು ನಾಶನಕ್ಕೆ ನಡೆಸುತ್ತವೆ. ಯಾರಾದರೂ ಆ ರೀತಿಯ ಕತ್ತಲೆಯ ರಾಜ್ಯದಲ್ಲಿ ಸಿಲುಕಿದ್ದರೆ ಪಶ್ಚಾತ್ತಾಪಪಟ್ಟು ಆ ಕಾರ್ಯಗಳನ್ನು ಕ್ಷಮಿಸುವಂತೆಯೂ ಬೇಡಿಕೊಳ್ಳಬೇಕಿದೆ. ಯೇಸುವಿನ ಅಧಿಕಾರವುಳ್ಳ ನಾಮದಲ್ಲಿ ಅವರನ್ನು ಬಂಧಿಸಿರುವ ಕತ್ತಲೆಯ ಶಕ್ತಿಗಳನ್ನು ಮುರಿದುಹಾಕಲಿ ಹಾಗೂ ಯೇಸುವಿನ ರಕ್ತದ ಶಕ್ತಿಯ ಮೂಲಕ ಅದರ ಅಡ್ಡಪರಿಣಾಮಗಳಿಂದ ಬಿಡಿಸುವಂತೆ

**ಸಾಕ್ಷಿ**

***ಯೇಸು ಒಬ್ಬ ಯೌವನ ಪ್ರಾಯದ ಹುಡುಗಿಗೆ ಅವರ ಸಂಬಂಧಗಳ ಬಗ್ಗೆ ಕಲಿಸಿಕೊಟ್ಟನು***

*"ಸತ್ಯವೇದ ಅಧ್ಯಯನ ಮಾಡುತ್ತಿದ್ದ ಇಬ್ಬರು ವಿದ್ಯಾರ್ಥಿನಿಯರು ನಮ್ಮೊಂದಿಗೆ ಮಾತನಾಡುತ್ತಾ ಹುಡುಗರನ್ನು ಸ್ನೇಹಿತರನ್ನಾಗಿ ಹೊಂದುವುದು ತಪ್ಪೋ? ಎಂದು ಕೇಳಿದರು. ನಾವು ಅವರೊಂದಿಗೆ ಪ್ರಾರ್ಥಿಸುತ್ತಿದ್ದಾಗ ಯೇಸು ಒಬ್ಬಳ ವಿಷಯದಲ್ಲಿ ಮಹಿಮಾದ್ಭುತ ದರ್ಶನದೊಂದಿಗೆ ನಗುವುದನ್ನು ಕಂಡಳು. ಇನ್ನೊಬ್ಬಳು ಪರಮಗೀತೆ 2:7 ರ ವಾಕ್ಯವನ್ನು ಕೇಳಿಸಿಕೊಂಡಳು "ಯುವತಿಯೇ ಉಚಿತ ಕಾಲಕ್ಕೆ ಮುಂಚೆ ಪ್ರೀತಿಯನ್ನು ಹುಟ್ಟಿಸಿ ಬೆಳೆಸಬಾರದೆಂದು..." ಇದಾದ ನಂತರ ಯುವತಿಯರಿಬ್ಬರೂ ಆ ಹುಡುಗರೊಂದಿಗಿನ ಮೋಜು – ಮಸ್ತಿಯ ಬಗ್ಗೆ ಪಶ್ಚಾತ್ತಾಪಪಟ್ಟು ಅವರೊಂದಿಗಿನ ಆತ್ಮೀಕವಲ್ಲದ ಸಂಬಂಧವನ್ನು ಮುರಿದುಹಾಕಲು ಹಾತೊರೆದರು."*

[3] *ಡೇವಿಡ್ ಕ್ರಾಸ್‌ರವರ, ಸೋಲ್ ಟೈಸ್, 2006, ಸಾವಿರಿಯನ್ ವರ್ಲ್ಡ್ ಲಿಮಿಟೆಡ್.*

ದೇವರನ್ನು ಬೇಡಿಕೊಳ್ಳಲಿ. ಇದಕ್ಕಾಗಿ ಹಿಂದಿನ ಪುಟದ ಪ್ರಾರ್ಥನೆಯನ್ನೆ ವ್ಯಕ್ತಿಗಳಿಗೆ ಬದಲಾಗಿ ನಾವು ಆರಾದಿಸಿರಬಹುದಾದ ವಸ್ತುಗಳ ಹೆಸರನ್ನು ಹೇಳಿಕೊಂಡು ಪ್ರಾರ್ಥಿಸಿರಿ.

**ಆತ್ಮೀಕವಲ್ಲದ ಸಂಬಂಧ ನಿಮ್ಮಲ್ಲಿದ್ದಲ್ಲಿ ಪ್ರಾರ್ಥನಾ ಮಾರ್ಗಸೂಚಿಗಳು**

- ನಿಮಗೆ ವಿರುದ್ಧವಾಗಿ ತಪ್ಪು ಮಾಡಿರುವವರನ್ನು ನಿರ್ಧಿಷ್ಟವಾಗಿ ಮನ್ನಿಸಿರಿ
- ನೀವು ಮಾಡಿರುವ ಪಾಪಗಳ ಬಗ್ಗೆ ನಿರ್ಧಿಷ್ಟವಾಗಿ ಪಶ್ಚಾತ್ತಾಪ ಪಟ್ಟು ಅರಿಕೆ ಮಾಡಿರಿ
- ಯೇಸುವಿನ ನಾಮದಲ್ಲಿ ಆತ್ಮೀಕವಲ್ಲದ ಸಂಬಂಧಗಳನ್ನು ಮುರಿದು ಹಾಕಿರಿ ನಿಮ್ಮ ಶರೀರ, ಪ್ರಾಣ – ಆತ್ಮಗಳನ್ನು ಆ ವ್ಯಕ್ತಿಯಿಂದಲೂ ದುರಾತ್ಮನಿಂದಲೂ ವಿಮೋಚಿಸುವಂತೆ ದೇವರನ್ನು ಕೇಳಿಕೊಳ್ಳಿರಿ
- ಆ ವ್ಯಕ್ತಿಯ ವಿಷಯದಲ್ಲಿ ನಿಮಗೆ ಲಭ್ಯವಿರುವ ವಿಷಯಗಳನ್ನು ಯೇಸುವಿಗೆ ತಿಳಿಸಿರಿ. ನಿಮಗೆ ನಷ್ಟವಾಗಿರುವುದನ್ನು ಮತ್ತೆ ನಿಮಗೆ ಲಭಿಸುವಂತೆ ಮಾಡಿ ನಿಮ್ಮನ್ನು ಸಂಪೂರ್ಣರಾಗಿಸುವಂತೆ ವಿಜ್ಞಾಪಿಸಿರಿ
- ಆ ವ್ಯಕ್ತಿಯನ್ನು ಆಶೀರ್ವದಿಸಿರಿ
- ಯೇಸುವನ್ನು ಇನ್ನೊಮ್ಮೆ ನಿಮ್ಮ ಹೃದಯದೊಳಗೆ ಆಹ್ವಾನಿಸಿರಿ ಹಾಗೂ ಪವಿತ್ರಾತ್ಮನಿಂದ ನಿಮ್ಮನ್ನು ಸಂಪೂರ್ಣವಾಗಿ ತುಂಬಿಸುವಂತೆ ವಿಜ್ಞಾಪಿಸಿರಿ

ಹೃದಯಾಂತರಾಳದಿಂದ ಒಬ್ಬನು ಈ ಕೆಳಗಿನ ವಿಜ್ಞಾಪನೆಯನ್ನು ಸಲ್ಲಿಸಬೇಕಿರುತ್ತದೆ.

**ಆತ್ಮೀಕವಲ್ಲದ ಸಂಬಂಧಗಳ ಮುರಿಯುವಿಕೆಗಾಗಿನ ಪ್ರಾರ್ಥನೆ**




"ಪರಲೋಕದ ತಂದೆಯೇ, ನನ್ನನ್ನು ಆತ್ಮೀಕವಲ್ಲದ ಸಂಬಂಧಗಳಿಗೆ ನಡೆಸಿ ನನಗೂ ಅವುಗಳಿಗೂ ಬಂಧನ ಏರ್ಪಡುವುದಕ್ಕೆ ಕಾರಣರಾದವರನ್ನು ಕ್ಷಮಿಸುವಂತೆ ಕೇಳುತ್ತೇನೆ. ಈ ರೀತಿಯ ಸಂಬಂಧಗಳ ಮೂಲಕವಾಗಿ ಉಂಟಾದ ಎಲ್ಲಾ ಪರಿಣಾಮಗಳನ್ನು ನಿನ್ನ ಬಳಿಗೆ ತರುತ್ತಿದ್ದೇನೆ ಹಾಗೂ ಆ ಮೂಲಕವಾಗಿ ನಾನು ಕಳೆದುಕೊಂಡ ಎಲ್ಲಾ ರೀತಿಯ ಆಶೀರ್ವಾದಗಳನ್ನು ನನಗೆ ಹಿಂತಿರುಗಿಸಿ ಕೊಡಬೇಕಾಗಿ ಬೇಡಿಕೊಳ್ಳುತ್ತಿದ್ದೇನೆ – ಕರ್ತನೇ ವಂದನೆಗಳು, ಆಮೆನ್."

**"ಪರಲೋಕದ ತಂದೆಯೇ ಈ ಮುಂದಿನ ವ್ಯಕ್ತಿಗಳು.... ನನಗೆ ಮಾಡಿದ ಈ ಮುಂದಿನ ತಪ್ಪುಗಳನ್ನು... ಕ್ಷಮಿಸುತ್ತಿದ್ದೇನೆ. ಅವರ ಸಾಲವನ್ನೆಲ್ಲಾ ಬಿಟ್ಟುಬಿಡುತ್ತಿದ್ದೇನೆ. ಅವರು ನನಗೆ ಮಾಡಿದ್ದಕ್ಕೆ ಪ್ರತಿಯಾಗಿ ನಾನು ಅವರಿಗೆ ಮಾಡಿರುವ ಮುಂದಣ ತಪ್ಪುಗಳನ್ನು... ಅರಿಕೆ ಮಾಡುತ್ತಿದ್ದೇನೆ."**

"ನನಗೂ... ವ್ಯಕ್ತಿಗೂ ಮಧ್ಯದ ಆತ್ಮೀಕವಲ್ಲದ ಸಂಬಂಧಗಳನ್ನು ಯೇಸುವಿನ ನಾಮದಲ್ಲಿ ಮುರಿದು ಹಾಕುತ್ತಿದ್ದೇನೆ. ನನ್ನ ಶರೀರ–ಪ್ರಾಣ–ಆತ್ಮಗಳ ಮಧ್ಯದಲ್ಲಿರುವ ಆತ್ಮೀಕವಲ್ಲದ ಆತ್ಮಗಳ ಮಧ್ಯೆ ಯೇಸುಕ್ರಿಸ್ತನ ಶಿಲುಬೆಯನ್ನು ತರುತ್ತಿದ್ದೇನೆ. ನನ್ನನ್ನು ಎಲ್ಲಾ ಕೆಟ್ಟತನದಿಂದ ವಿಮೋಚಿಸಿ ಮತ್ತೊಮ್ಮೆ ಸಂಪೂರ್ಣಗೊಳಿಸು – ವಂದನೆಗಳು, ಆಮೆನ್."

# ಖಂಡನಾತ್ಮಕವಾದ ತೀರ್ಪುಗಳಿಂದ ವಿಮುಕ್ತಿ[4]



ಖಂಡಿಸುವಿಕೆ ಹಾಗೂ ಇತರರಲ್ಲಿ ದೋಷಗಳನ್ನು ಹುಡುಕುವ ಮೂಲಕವಾಗಿ ನಾವರಿಯದೆಯೇ ನಾವು ಸಾಮಾನ್ಯವಾಗಿ ಪಾಪ ಮಾಡುವವರಾಗಿರುತ್ತೇವೆ. ದೇವರು ಅನೇಕ ರೀತಿಯ ನಿಯಮ (ಧರ್ಮಶಾಸ್ತ್ರ) ಗಳನ್ನು ಇಟ್ಟಿರುವುದರಿಂದ ಈ ಪಾಪಗಳು ನಮ್ಮ ಮೇಲೆ ಗಂಭೀರವಾದ ಪರಿಣಾಮಗಳನ್ನು ಉಂಟುಮಾಡುತ್ತದೆ. ಲೌಕಿಕ ನಿಯಮಗಳಾದ ಗುರುತ್ವಾಕರ್ಷಣೆಯೂ ಒಂದು ಉದಾಹರಣೆ ಆಗಿದ್ದು ಸತ್ಯವೇದದಲ್ಲಿ ದೇವರೂ ಸಹ ತನ್ನ ನಿಯಮಗಳನ್ನು ಪ್ರಕಟಿಸಿರುವನು. ಗುರುತ್ವಾಕರ್ಷಣೆಯು ನಿಯಮದಂತೆಯೇ ದೈವೀಕ ನಿಯಮಗಳೂ ಸಹ ಯಾವಾಗಲೂ ಕಾರ್ಯ ನಿರ್ವಹಿಸುತ್ತದೆಯೇ ಹೊರತು ಬದಲಾಗದು. ಉದಾಹರಣೆಗೆ ಖಂಡನಾತ್ಮಕ ತೀರ್ಪುಗಳು, ಖಂಡಿಸುವಿಕೆ ಹಾಗೂ ಇತರರಲ್ಲಿ ತಪ್ಪು ಹುಡುಕುವಿಕೆಗಳನ್ನು ನಾವು ಸಾಮಾನ್ಯವಾಗಿ ಮಾಡುವವರಾಗಿದ್ದು ಅವುಗಳನ್ನು ನಾವು ಗಂಭೀರವಾಗಿ ತೆಗೆದುಕೊಂಡಿರುವುದಿಲ್ಲ. ಈ ರೀತಿಯ ಪಾಪಗಳು ದೈವೀಕ ನಿಯಮಗಳಿಗೆ ಒಳಪಟ್ಟಿರುವುದರಿಂದ ನಮ್ಮ ಜೀವನದ ಮೇಲೆ ಗಂಭೀರವಾದ ಪರಿಣಾಮಗಳನ್ನು ಉಂಟುಮಾಡಬಲ್ಲದು. ಅದ್ದರಿಂದ ಈ ರೀತಿಯ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ನಾವು ಅದಕ್ಕನುಗುಣವಾಗಿಯೇ ಜೀವಿಸಬೇಕು.

## ನಿಮ್ಮ ತಂದೆ–ತಾಯಿಗಳನ್ನು ಸನ್ಮಾನಿಸಿರಿ

*"ನಿನ್ನ ತಂದೆ–ತಾಯಿಗಳನ್ನು ಸನ್ಮಾನಿಸಬೇಕು, ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ಬಹುಕಾಲ ಇರುವಿ"* ***(ವಿಮೋ 20:12; ಧರ್ಮೋ 5:16; ಎಫೆಸ 6:2–3).***

ನಮ್ಮ ಜೀವನದಲ್ಲಿ ನಮ್ಮ ತಂದೆ – ತಾಯಿಗಳನ್ನು ಸನ್ಮಾನಿಸಿದರೆ ಉಂಟಾಗಲಿರುವ ಆಶೀರ್ವಾದಗಳನ್ನು ಈ ವಾಗ್ದಾನದಲ್ಲಿ ಕಾಣಬಹುದಾಗಿದೆ. ಆದರೆ ನಮ್ಮ ಜೀವನದ ಯಾವುದಾದರೂ ಕ್ಷೇತ್ರಗಳಲ್ಲಿ ನಮ್ಮ ತಂದೆ – ತಾಯಿಗಳನ್ನು ಸನ್ಮಾನಿಸದಿದ್ದಲ್ಲಿ ಎಲ್ಲಾ ಕಾರ್ಯಗಳೂ ಒಳ್ಳೇದಾಗಿ ನೆರವೇರದು.

ಈ ರೀತಿಯ ಆತ್ಮೀಕ ನಿಯಮಗಳು ಯಾವ ವಿಧಾನದಲ್ಲಿ ನಮ್ಮ ಮೇಲೆ ಪ್ರಭಾವ ಬೀರಬಹುದೆಂಬ ನಿಜವಾದ ತಿಳುವಳಿಕೆಯಿಂದ ನಾವು ಜೀವಿಸಬೇಕು.

## ನೀವು ಬಿತ್ತಿದ್ದನ್ನೇ ಕೊಯ್ಯುವಿರಿ

*"ಮೋಸ ಹೋಗಬೇಡಿರಿ, ದೇವರು ತಿರಸ್ಕಾರ ಸಹಿಸುವವನಲ್ಲ, ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು"* ***(ಗಲಾತ್ಯ 6:7).***

[4] *ಜಾನ್ ಹಾಗೂ ಪೌಲಾ ಸ್ಯಾಂಡ್‌ಫೋರ್ಡ್, ಎಲೈಜಾ ಹೌಸ್ ಯು.ಎಸ್.ಎ, www.elijahhouse.org*

ನಾವೇನನ್ನು ಕೊಡುತ್ತೇವೋ ಅದಕ್ಕನುಗುಣವಾಗಿಯೇ ಪಡೆದುಕೊಳ್ಳಲಿದ್ದೇವೆಂದು ಈ ಧರ್ಮಪ್ರಮಾಣವು ತೀರ್ಮಾನಿಸುತ್ತಿದೆ. ನಾವು ಒಳ್ಳೆಯದನ್ನು ಕೊಟ್ಟರೆ ಒಳ್ಳೆಯದನ್ನೂ, ಕೆಟ್ಟದ್ದನ್ನು ಕೊಟ್ಟರೆ ಅದಕ್ಕೆ ಪ್ರತಿಯಾಗಿ ಕೆಟ್ಟದ್ದನ್ನೂ ಹಿಂತಿರುಗಿ ಪಡೆದುಕೊಳ್ಳಲಿದ್ದೇವೆ.

> **ಸಾಕ್ಷಿ**
> **ಯೇಸು ನನ್ನ ಸಹೋದರನನ್ನು ಬದಲಾಯಿಸಿದನು**
>
> *"ನನ್ನ ಸಹೋದರನು ಮದ್ಯಪಾನಕ್ಕೆ ಗುಲಾಮನಾಗಿದ್ದದರಿಂದ ಅವನನ್ನು ಯಾವಾಗಲೂ "ಮದ್ಯಪಾನಿಯೆಂದು" ಕರೆಯುತ್ತಿದ್ದೆ. ಆದರೆ ಆ ವಿಧದ ತೀರ್ಪುಮಾಡುವ ನನ್ನ ಮನೋಭಾವವನ್ನು ಬದಲಾಯಿಸಿ "ನನ್ನ ಸಹೋದರನು ಇದರಿಂದ ಹೊರಬರುವನೆಂದು" ಹೇಳಲಾರಂಬಿಸಿದೆ. ಕೆಲವು ತಿಂಗಳುಗಳು ಗತಿಸಿದ ನಂತರ ಅವನು ಕುಡಿಯುವುದನ್ನು ನಿಲ್ಲಿಸಿಬಿಟ್ಟನು."*


"ಇತರರನ್ನು ಕ್ಷಮಿಸಿದರೆ ನಿಮಗೂ ಕ್ಷಮಿಸಲಾಗುವುದು, ಕ್ಷಮಿಸದಿದ್ದಲ್ಲಿ ನಿಮಗೂ ಕ್ಷಮಿಸಲಾಗದು" ***(ಮತ್ತಾಯ 6:14–15).***

*"ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ಅವರಿಗೂ ಮಾಡಿರಿ"* ***(ಮತ್ತಾಯ 7:12).***

"ಇವುಗಳೆಲ್ಲವೂ 'ನೀವೇನು ಬಿತ್ತುತ್ತೀರೋ ಅದನ್ನೇ ಕೊಯ್ಯುತ್ತೀರಿ' ಎಂಬ ಸಾರ್ವತ್ರಿಕ ನಿಯಮಕ್ಕೆ ಅನುಗುಣವಾಗಿಯೇ ಇದೆ." ಅದರರ್ಥ ಇತರರನ್ನು ನಾವು ಖಂಡಿಸುತ್ತಿರುವ ವಿಷಯಗಳನ್ನು ನಾವೂ ಸಹ ಮಾಡುವವರಾಗಿರುತ್ತೇವೆ ***(ಓಬದ್ಯ 15; ರೋಮಾ 2:1).***

## ತೀರ್ಪು ಮಾಡಬೇಡಿರಿ

*"ತೀರ್ಪು ಮಾಡಬೇಡಿರಿ, ಹಾಗೇ ನಿಮಗೂ ತೀರ್ಪಾಗುವುದಿಲ್ಲ. ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವುದು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು* ***(ಮತ್ತಾಯ 7:1–2).***



*"ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸೆಯಿಟ್ಟುಕೊಂಡು ಉಳಿದವರನ್ನು ಉದಾಸೀನ ಮಾಡುವಂಥ ಕೆಲವರಿಗೆ ಒಂದು ಸಾಮ್ಯವನ್ನು ಹೇಳಿದನು. ಪ್ರಾರ್ಥನೆ ಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು, ಒಬ್ಬನು ಪರಿಸಾಯನು, ಒಬ್ಬನು ಸುಂಕದವನು ..."* ***(ಲೂಕ 18:9–14)***

ಇದೊಂದು ವಿಧದ ತೀರ್ಪಾಗಿದ್ದು ವ್ಯಕ್ತಿಯೊಬ್ಬನು ಮಾಡಿದ ಕ್ರಿಯೆಗಿಂತಲೂ ಮಿಗಿಲಾಗಿ ಆ ವ್ಯಕ್ತಿಯನ್ನೇ ದೂಷಿಸುವುದಾಗಿರುತ್ತದೆ. ಉದಾ: **"ನಾವು ಇತರರನ್ನು** ಕೆಟ್ಟವನು /ಮೂರ್ಖನೂ/ಭೀಕರವಾದದ್ದನ್ನು ಮಾಡುವವನೂ ಎಂದು ಹೇಳುತ್ತೇವೆಯೇ ಹೊರತು ಅವನು **ಮಾಡಿದ್ದು** ಕೆಟ್ಟದ್ದು/ಮೂರ್ಖತನದ್ದು ಅಥವಾ ಭೀಕರವಾದದ್ದೆಂದು ಹೇಳಲಾರೆವು**"**. ಇತರರಿಗಿಂತಲೂ ನಾವು ಶ್ರೇಷ್ಟ ಹಂತದಲ್ಲಿದ್ದೇವೆ ಎಂಬ ಮನೋಭಾವದ ಹಿನ್ನೆಲೆಯಲ್ಲೇ ನಾವು ಈ ತೀರ್ಪನ್ನು ಮಾಡಿರುತ್ತೇವೆ. ಇದನ್ನು ಮಾಡಬಾರದೆಂದು ದೇವರು ಸತ್ಯವೇದದಲ್ಲಿ ಎಚ್ಚರಿಕೆ ಕೊಟ್ಟಿರುವಾಗ ಆತನು ಯಾರಿಗೂ ಪಕ್ಷಪಾತ ತೋರಿಸುವುದಿಲ್ಲ. ಕೆಲವರು

ಅಧಿಕವಾದ ವಿದ್ಯಾಭ್ಯಾಸ, ಶ್ರೀಮಂತಿಕೆ ಇರುವವರಾಗಿರಬಹುದು, ಆದರೆ ಇನ್ನೂ ಕೆಲವರು ಅನಕ್ಷರಸ್ಥರೂ, ದರಿದ್ರರೂ ಆಗಿದ್ದರೂ ನಾವೆಲ್ಲರೂ ದೇವರ ದೃಷ್ಟಿಯಲ್ಲಿ ಅಮೂಲ್ಯರೇ ಆಗಿದ್ದೇವೆ. ತೀರ್ಪು ಮಾಡಬಾರದೆಂದು ನಮಗೆ ಹೇಳಲ್ಪಟ್ಟಿದೆ. ನಮ್ಮ ನೆರೆಹೊರೆಯವರನ್ನೂ ಸಹ ನಮ್ಮಂತೆಯೇ ಪ್ರೀತಿಸಬೇಕಿದೆ ***(ಯಾಕೋಬ 2:1–9).*** ಈ ತೀರ್ಪುಗಳು ಸಣ್ಣ ಪ್ರಮಾಣದ ದ್ವೇಷಗಳು ಅಥವಾ ಕಿರುಕುಳ, ಅಸಂತುಷ್ಟತೆಗಳೋಪಾದಿಯಲ್ಲಿ ಇದ್ದು ಅವುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಇಲ್ಲವೆಂದು ನಮಗನಿಸಿದರೂ ನಿಜಾರ್ಥದಲ್ಲಿ ಅವುಗಳಿಗೆ ಅಧಿಕವಾದ ಆತ್ಮೀಕ ಪ್ರಾಧಾನ್ಯತೆಯಿದ್ದು ದೇವರ ಪ್ರೀತಿಯ ಪ್ರಮಾಣಕ್ಕೆ (ನಿಯಮಕ್ಕೆ) ವಿರುದ್ದವಾಗಿದೆ.

## ಅಧಿಕವಾಗಿ ಕೊಡಿರಿ

*"ಕೊಡಿರಿ, ಆಗ ನಿಮಗೂ ಕೊಡುವರು. ಜಡಿದು ಅಲ್ಲಾಡಿಸಿ ಹೊರಚೆಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು"* ***(ಲೂಕ 6:38).***

ದೇವರಿಂದ ಹೆಚ್ಚೆಚ್ಚಾದ ಆಶೀರ್ವಾದಗಳನ್ನು ಹೊಂದುವುದಕ್ಕಾಗಿ ದೇವರು ಇಟ್ಟಿರುವ ಪ್ರಮಾಣವೇ ಹೆಚ್ಚೆಚ್ಚಾಗಿ ಕೊಡುವುದಾಗಿದೆ. ಈ ಪ್ರಮಾಣವು ಒಳ್ಳೆಯದು ಹಾಗು ಕೆಟ್ಟದ್ದು ಎರಡೂ ರೀತಿಯ ದಾನಗಳಿಗೆ (ವರಗಳಿಗೆ) ಸಮನಾಗಿ ಅನ್ವಯಿಸುತ್ತದೆ. ಇದು ಒಳ್ಳೆಯ ವರಗಳಾದ ಆಶೀರ್ವದಿಸುವಿಕೆ, ದಯೆ, ಪ್ರೋತ್ಸಾಹ ಹಾಗು ಉದಾರತ್ವಗಳಿಗೂ ಮತ್ತು ಕೆಟ್ಟ ಸ್ವಭಾವಗಳಾದ ಕ್ಷಮಿಸದಿರುವಿಕೆ, ಕಹಿಯನುಭವ, ಖಂಡಿಸುವಿಕೆ, ಸಹಿಸದಿರುವಿಕೆ ಹಾಗೂ ಜಿಪುಣತನ ಇತ್ಯಾದಿ ವಿಷಯಗಳಿಗೂ ಹೋಲಿಕೆಯಾಗಿದೆ.

ಉದಾ: ನಾವು ಇತರರ ಬಗ್ಗೆ ಕಹಿಯಾದ ಅನುಭವವನ್ನಿಟ್ಟುಕೊಂಡವರಾಗಿ ಅವರನ್ನು ಕ್ಷಮಿಸದಿರುವವರಾಗಿದ್ದರೆ ಇತರರಿಂದಲೂ ಇದೇ ರೀತಿಯ ಅನುಭವಗಳನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಿಂದಕ್ಕೆ ಪಡೆಯಲಿದ್ದೇವೆ ಹಾಗೂ ಇತರರಿಗೆ ನಾವು ಮಾಡಿದ ತೀರ್ಪಿಗಿಂತ ಕಠಿಣವಾದುದ್ದನ್ನು ಹೊಂದಲಿದ್ದೇವೆ.

ಈ ನಾಲ್ಕೂ ಪ್ರಮಾಣ (ನಿಯಮಗಳು) ಬಹಳ ಬಲಿಷ್ಠವಾಗಿದ್ದು ನಮ್ಮ ಸುತ್ತಮುತ್ತಲಿನವರ ಮನೋಭಾವಗಳ ಮೇಲೆ ಕಾರ್ಯಮಾಡುತ್ತಿದ್ದು ಅವರನ್ನು ಸನ್ಮಾರ್ಗಹೀನರನ್ನಾಗಿ ಮಾರ್ಪಡಿಸುತ್ತಿದೆ. ಇತರರು ನಮ್ಮ ವಿಷಯದಲ್ಲಿ ಕರುಣೆಯುಳ್ಳವರಾಗಿರುವಂತೆ ಮಾಡಲು ನಾವೂ ಸಹ ಅದೇ ರೀತಿಯ ಕರುಣೆ ಎಂಬ ಒಳ್ಳೆಯ ಬೀಜವನ್ನೇ ಬಿತ್ತಬೇಕಿದೆ. ಆದರೆ ನಾವು ಬಿತ್ತಿದ್ದು ಕೆಟ್ಟದ್ದಾಗಿದ್ದರೆ ನಮ್ಮ ವಿಷಯದಲ್ಲಿನ ಇತರರ ಮನೋಭಾವವೂ ಸಹ ಕೆಟ್ಟದ್ದಾಗಿರುತ್ತದೆ. ನಮ್ಮ ಮನೋಭಾವವೇ ಅದನ್ನು ಮಲಿನಗೊಳಿಸುತ್ತದೆ (ತೀರ್ಮಾನಿಸುತ್ತದೆ) ***(ಇಬ್ರಿಯ 12:14–15).***

ತಂದೆ–ತಾಯಿಗಳಲ್ಲಿ ದೋಷವನ್ನು ಹುಡುಕುವುದು ಹಾಗೂ ಅವರಿಗೆ ವಿರುದ್ಧವಾಗಿ ಖಂಡನಾತ್ಮಕವಾದ ತೀರ್ಪುಗಳನ್ನು ಮಾಡುವುದು ನಮಗೇ ಹೆಚ್ಚಿನ ಕೆಡುಕನ್ನುಂಟುಮಾಡುತ್ತದೆ. ನಿಮ್ಮ ತಂದೆಗೆ ವಿರುದ್ಧವಾಗಿ ನೀವು ಮಾಡಿರುವ ಖಂಡನಾತ್ಮಕವಾದ ತೀರ್ಪಿನಿಂದ ಎಲ್ಲರೂ ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಅವರಿಗೆ ವಿರುದ್ಧವಾಗಿ ನಾವು ಹಾಗೆ ಮಾತನಾಡಿರುವುದನ್ನು ನಾವು ಮರೆತರೂ ಸಹ ವರ್ಷಗಳು ದಾಟಿದರೂ ನಾವು ಅದರ ನಕಾರಾತ್ಮಕವಾದ ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ. ಈ ರೀತಿಯ

ತೀರ್ಪುಗಳು ಇದನ್ನೇ ಹೆಚ್ಚಾಗಿ ಮಾಡಲು ನಮ್ಮನ್ನು ಪ್ರೋತ್ಸಾಹಿಸುತ್ತದೆ. ನಮ್ಮ ತೀರ್ಪುಗಳು ಇತರರನ್ನೂ ಮಲಿನಗೊಳಿಸುತ್ತದೆ ಹಾಗೂ ನಮ್ಮ ವಿಷಯದಲ್ಲಿನ ಅವರ ಮನೋಭಾವವೂ ಸಹ ಮಲಿನಗೊಳ್ಳುತ್ತದೆ.

ಸಾಮಾನ್ಯವಾಗಿ ನಾವು **ಖಂಡನಾತ್ಮಕವಾದ ತೀರ್ಪುಗಳನ್ನು,** ಮಾಡುವಾಗ ಅದರೊಂದಿಗೆ **ಶಪಥ (ಹರಕೆ)** ಗಳನ್ನೂ ಮಾಡುವವರಾಗಿದ್ದು ಅದು ನಾವು ಮಾಡಿದ ಖಂಡನಾತ್ಮಕವಾದ ತೀರ್ಪುಗಳಿಗೆ ಹೆಚ್ಚಿನ ಬಲವನ್ನು ಒದಗಿಸುತ್ತದೆ (ಮುಂದಿನ ವಿಭಾಗದಲ್ಲಿ ಇದರ ಬಗ್ಗೆ ಹೆಚ್ಚಿನ ವಿವರಣೆಗಳುಂಟು). ತಂದೆಯ ಶಿಕ್ಷೆಗೆ (ಏಟಿಗೆ) ನೊಂದ ಮಗುವೊಂದು ಉದಾಹರಣೆಗೆ – 'ನನ್ನ ತಂದೆಯು ನನ್ನನ್ನು ಹೊಡೆದಿರುವಾಗ (ಅದು ನೈಜ ಸಂಗತಿ)' ತನ್ನ ತಂದೆಯನ್ನು ತನ್ನ ಹೃದಯದಲ್ಲಿ ಕ್ರೂರಿ ಹಾಗು ಕೆಟ್ಟ ತಂದೆಯೆಂದು ಖಂಡನಾತ್ಮಕವಾಗಿ ತೀರ್ಪು ಮಾಡಿ 'ನಾನು ದೊಡ್ಡವನಾದ ಮೇಲೆ ಕ್ರೂರಿಯು ಮಕ್ಕಳನ್ನು ಹೊಡೆಯುವವನು ಆಗಿರುವುದಿಲ್ಲವೆಂದು' ತೀರ್ಪು ಮಾಡಿರುವನು. ಆದರೆ ಆ ಮಗುವೇ ಬೆಳೆದು ದೊಡ್ಡವನಾಗಿ ತಂದೆಯಾದಾಗ ತನ್ನ ಮಕ್ಕಳನ್ನೂ ಸಹ ಶಿಕ್ಷಿಸದಿರಲು ಅಸಾಧ್ಯವೆಂದು ಅರಿಯುವನು. ತಾನು ಯಾವ ವಿಷಯಕ್ಕಾಗಿ ತನ್ನ ತಂದೆಯನ್ನು ಖಂಡಿಸಿದನೋ ಅದೇ ವಿಷಯವನ್ನು ಮುಂದುವರೆಸಲು ಆ ತೀರ್ಪು ಅವನಲ್ಲೂ ಕಾರ್ಯ ಮಾಡುತ್ತದೆ. ಇನ್ನೊಂದು ಉದಾಹರಣೆ: – ಹುಡುಗನೊಬ್ಬನು ತನ್ನ ತಾಯಿಯ ಹಠಮಾರಿ ಧೋರಣೆಯ ಬಗ್ಗೆ ತನ್ನ ಹೃದಯದಲ್ಲಿ ತಾಯಿಯನ್ನು ದೂಷಿಸಿರಬಹುದು. ಆದರೆ ಅವನು ಬೆಳೆದು ದೊಡ್ಡವನಾದ ನಂತರ ತನ್ನ ಹೆಂಡತಿ ಹಾಗೂ ಜೊತೆಯಲ್ಲಿ ಕೆಲಸ ಮಾಡುವ ಹೆಂಗಸರೂ ಸಹ ಅವನನ್ನು ಈಗಲೂ ಹದ್ದುಬಸ್ತಿನಲ್ಲಿಡಲು ಪ್ರಯತ್ನಿಸುತ್ತಿರುವುದನ್ನು ಗಮನಿಸುತ್ತಿರುವನು. ಅವನು ತನ್ನ ಸ್ವಂತ

## ಸಾಕ್ಷಿ

### *ತನ್ನ ಗಂಡನನ್ನೂ ತಂದೆಯನ್ನೂ ಖಂಡಿಸುತ್ತಿದ್ದ ಹೆಂಗಸೊಬ್ಬಳನ್ನು ಯೇಸು ಕ್ಷಮಿಸಿದ್ದು*

*"ಕೇವಲ 5 ವರ್ಷದವಳಾಗಿದ್ದಾಗ ತನ್ನ ತಂದೆಯನ್ನು ಕಳೆದುಕೊಂಡಿದ್ದ ಯುವತಿ ಒಬ್ಬಳನ್ನು ಕಂಡೆವು. ಅವಳ ತಂದೆಯೊಬ್ಬ ದೊಡ್ಡ ಕುಡುಕನಾಗಿದ್ದು ಕುಡಿದು ಚರಂಡಿಗಳಲ್ಲಿ ಬೀಳುತ್ತಿದ್ದ. ಅವನನ್ನು ಇತರರು ಮನೆಗೆ ಎತ್ತಿಕೊಂಡು ಬರುತ್ತಿದ್ದರು. ಆದರೆ ಒಮ್ಮೆ ಕುಡಿದ ನಂತರ ಕಂದಕದಲ್ಲಿ ಬಿದ್ದು ಮುಳುಗಿ ಸತ್ತನು. ಒಳ್ಳೆಯ ಕೆಲಸದಲ್ಲಿದ್ದ ಒಳ್ಳೆಯ ವ್ಯಕ್ತಿಯೊಬ್ಬನನ್ನು ಅವಳು ಮದುವೆಯಾದ ನಂತರ ಅವರಿಗೊಂದು ಮಗು ಹುಟ್ಟಿತು. ಆದರೆ 3 ವರ್ಷಗಳ ನಂತರ ಅವಳ ಗಂಡನೂ ಸಹ ಕುಡುಕನಾಗಿ ಮಾರ್ಪಟ್ಟು ತನ್ನ ಮಾವನಂತಾದನು. "ನಿಮ್ಮ ತಂದೆಯು ಕುಡುಕನಾಗಿದ್ದರಿಂದ ಅವನಿಗೆ ವಿರುದ್ಧವಾಗಿ ನೀವು ತೀರ್ಪು ಮಾಡಿರುವಿರೋ" ಎನ್ನಲು ಅವಳು "ಹೌದೆಂದಳು". ನೀನೊಬ್ಬ ಅಯೋಗ್ಯ ಹಾಗೂ ನಿನ್ನಂಥವನನ್ನು ನಾನೆಂದೂ ಮದುವೆಯಾಗುವುದಿಲ್ಲ ಎಂದು ತೀರ್ಪು ಮಾಡಿರುವುದಾಗಿ ಒಪ್ಪಿಕೊಂಡಳು. ತಾನಿತ್ತ ತೀರ್ಪಿಗಾಗಿ ಪಶ್ಚಾತ್ತಾಪಪಟ್ಟಳು ಹಾಗೂ ತನ್ನನ್ನು ಕ್ಷಮಿಸುವಂತೆ ದೇವರಲ್ಲಿ ಬೇಡಿಕೊಂಡಳು. ಆ ರಾತ್ರಿಯಲ್ಲೂ ಸಹ ಅವಳ ಗಂಡನನ್ನು ಮನೆಗೆ ಹೊತ್ತುಕೊಂಡು ಬಂದರೂ ಸಹ ಅವಳೇನೂ ಹೇಳಿರಲಿಲ್ಲ. ಮುಂದಿನ ದಿನವೇ ಅವನು ಕುಡಿಯುವ ವಿಷಯದಲ್ಲಿ ಪಶ್ಚಾತ್ತಾಪಪಟ್ಟು ನಿಲ್ಲಿಸಿಬಿಟ್ಟು ತನ್ನನ್ನು ಕ್ಷಮಿಸುವಂತೆ ಅವಳನ್ನೂ ದೇವರನ್ನೂ ಬೇಡಿಕೊಂಡನು."*

ತಾಯಿಗೆ ತೀರ್ಪು ಮಾಡಿರುವ ಮೂಲಕವಾಗಿ ಉಂಟಾದ ಮಲಿನತ್ವವು ಇತರರೂ ಸಹ ಅವನ ವಿಷಯದಲ್ಲಿ ಅದೇ ರೀತಿಯ ಮನೋಭಾವ ತೋರುವಂತೆ ಮಾರ್ಪಡಿಸಿರುತ್ತದೆ. **"ಆಣೆಯನ್ನೇ ಇಡಬೇಡ"** ***(ಮತ್ತಾಯ 5:33–34)*** ಎಂಬ ಅತ್ಯುತ್ತಮವಾದ ಅಪ್ಪಣೆಯನ್ನೇ ಯೇಸು ನಮಗೆ ಕೊಟ್ಟಿರುವನು. ನಾವಿಟ್ಟಿರುವ ಆಣೆಗಳ ಬಗ್ಗೆ ಪಶ್ಚಾತ್ತಾಪ ಪಡೋಣ ಹಾಗೂ ಅವುಗಳಿಂದ ನಮಗುಂಟಾಗಬಹುದಾದ ಎಲ್ಲಾ ವಿಧದ ನಕಾರಾತ್ಮಕ ಪರಿಣಾಮಗಳಿಂದ ಬಿಡಿಸುವಂತೆ ಯೇಸುವಿನ ನಾಮದಲ್ಲಿ ಬೇಡಿಕೊಳ್ಳೋಣ.

ಕೆಲವೊಮ್ಮೆ ನಾವು ನಮ್ಮ ವಿಷಯದಲ್ಲಿ ನಕಾರಾತ್ಮಕ ಧೋರಣೆಯನ್ನೂ ಹಾಗೂ ಕೆಲವು ವಿಶಿಷ್ಟ ಜನರಿಗಿಂತ ಕೆಳಮಟ್ಟದವರೆಂದೂ ಭಾವಿಸುವುದುಂಟು. ಅಂತಹವರನ್ನು ನಾವು ಅತ್ಯಂತ **"ಶ್ರೇಷ್ಠರೆಂದೂ"**, ನಮ್ಮನ್ನು ಕೇವಲ ಚಿಕ್ಕವ (ಬಲಹೀನ) ರೆಂದೂ ತೀರ್ಪು ಮಾಡುವವರೂ ಆಗಿರುತ್ತೇವೆ. ಆದರೆ ದೇವರು **"ಪಕ್ಷಪಾತಮಾಡದವ"** ನಾಗಿರುವುದರಿಂದ ನಮ್ಮನ್ನು ಹಾಗೆ ಎಣಿಸಿಕೊಳ್ಳಬಾರದೆಂದೂ ಎಚ್ಚರಿಸುತ್ತಿದ್ದಾನೆ. ಕೆಲವರು ಹೆಚ್ಚಿನ ವಿದ್ಯಾಭ್ಯಾಸವುಳ್ಳವರೂ, ಕೆಲವರು ಅವಿದ್ಯಾವಂತರೂ, ಕೆಲವರು ಧನಿಕರೂ, ಇನ್ನೂ ಕೆಲವರು ನಿರ್ಗತಿಕರೂ ಆಗಿರಬಹುದು. ಆದರೆ ದೇವರ ದೃಷ್ಟಿಯಲ್ಲಿ ನಾವೆಲ್ಲರೂ ಏಕರೀತಿಯಲ್ಲೇ ಅಮೂಲ್ಯರಾಗಿದ್ದೇವೆ. ನಾವು ಇತರರಿಗೆ ತೀರ್ಪು ಮಾಡದೆ ನಮ್ಮನ್ನು ಪ್ರೀತಿಸುವಂತೆಯೇ ನಮ್ಮ ನೆರೆಹೊರೆಯವರನ್ನು ಪ್ರೀತಿಸುವಂತೆ ಹೇಳಲ್ಪಟ್ಟವರಾಗಿದ್ದೇವೆ ***(ಯಾಕೋಬ 2:1–9)***.

ದೇವರು ನಮ್ಮ ವಿಷಯದಲ್ಲಿ ಹೆಚ್ಚಿನ ಕಾಳಜಿಯನ್ನು ವಹಿಸುತ್ತಿರುವುದರಿಂದ ಆ ರೀತಿಯ ನಕಾರಾತ್ಮಕವಾದ ವಿಷಯಗಳೇ ನಮ್ಮ ಜೀವಿತದಲ್ಲಿ ಮುಂದುವರೆಯುತ್ತಿರಬೇಕೆಂದು ದೇವರು ಬಯಸುತ್ತಿಲ್ಲ. ಆದರೆ ನಾವು ಗುಣಮುಖರಾಗಿ ಸಂಪೂರ್ಣವಾದ ಬಿಡುಗಡೆಯೊಂದಿಗೆ ಆತನು ನಮಗೋಸ್ಕರ ಇಟ್ಟಿರುವ ಎಲ್ಲಾ ರೀತಿಯ ಕೃಪೆ – ಆಶೀರ್ವಾದಗಳನ್ನು ಅನುಭವಿಸಬೇಕೆಂಬುದೇ ದೇವರ ಚಿತ್ತವಾಗಿದೆ. ನಾವು ಮಾಡಿರುವ ತೀರ್ಪುಗಳ ವಿಷಯದಲ್ಲಿ ಪಶ್ಚಾತ್ತಾಪಪಟ್ಟು ಆ ನಿಮಿತ್ತವಾಗಿ ಉಂಟಾದ ಮಲಿನತ್ವದಿಂದ ನಮ್ಮನ್ನೂ ಇತರರನ್ನೂ ತೊಳೆದು ಶುದ್ಧೀಕರಿಸುವಂತೆ ದೇವರನ್ನು ಬೇಡಿಕೊಳ್ಳೋಣ. ಇತರರಲ್ಲಿನ ಆತ್ಮೀಕವಲ್ಲದ ಮನೋಭಾವಗಳನ್ನು ಪ್ರಾಮಾಣಿಕರಿಸುವುದನ್ನು ದೇವರು ಬಯಸದೆ ಅವರನ್ನು ನಾವು ಗೌರವಿಸಬೇಕೆಂದು ದೇವರು ಬಯಸುತ್ತಿದ್ದಾನೆ. ಅವರು ಯಾರೇ ಆಗಿದ್ದರೂ ಎಂಥವರೇ ಆಗಿದ್ದರೂ ಅವರನ್ನು ಗೌರವಿಸಬೇಕೆಂದು ದೇವರು ಬಯಸುತ್ತಿದ್ದಾನೆ. ಉದಾ: ತಂದೆ–ತಾಯಿಗಳಿಂದ ನಾವು ಜನ್ಮ ಪಡೆದವರಾಗಿದ್ದೇವೆ ಅವರು ನಮ್ಮನ್ನು ಸರಿಯಾಗಿ ನೋಡಿಕೊಳ್ಳದೆ ನಮ್ಮನ್ನು ತ್ಯಜಿಸಿಬಿಟ್ಟರೂ ನಮಗೆ ಜನ್ಮ ಕೊಡುವುದಕ್ಕಾಗಿ ದೇವರು ಅವರನ್ನೇ ಉಪಯೋಗಿಸಿರುವುದರಿಂದ ನಾವು ಅವರನ್ನು ಗೌರವಿಸಲೇಬೇಕು. ಆದ್ದರಿಂದ ಪ್ರತಿಯೊಬ್ಬರನ್ನೂ ಗೌರವಿಸೋಣ. ಅಥವಾ ಜೊತೆ ಕ್ರೈಸ್ತರು (ಹೊಸದಾಗಿ ಹುಟ್ಟಿದ) ಪ್ರತಿಯೊಬ್ಬ ವಿಶ್ವಾಸಿಯಲ್ಲಿ ಯೇಸುಕ್ರಿಸ್ತನು ಜೀವಿಸುತ್ತಿರುವನು ಅಥವಾ ಇತರೆ ವ್ಯಕ್ತಿಗಳು (ಪ್ರತಿಯೊಬ್ಬನೂ ದೇವರ ಸ್ವರೂಪದಂತೆ ಸೃಷ್ಟಿಸಲ್ಪಟ್ಟಿರುವನು).

ಆದರೆ ಅದರಿಂದುಂಟಾದ ದುಷ್ಪರಿಣಾಮಗಳನ್ನೂ ನಮ್ಮಲ್ಲಿ ನಾವು ಕಾಣುತ್ತಿರುತ್ತೇವೆ. ಸಾಮಾನ್ಯವಾಗಿ ಚಿಕ್ಕ ಪ್ರಾಯದಲ್ಲಿ ಮಾಡಿರಬಹುದಾದ ಖಂಡನಾತ್ಮಕವಾದ ತೀರ್ಪುಗಳನ್ನು ನಾವು ಈಗಾಗಲೇ ಮರೆತಿರಬಹುದಾಗಿದೆ. ಅವುಗಳನ್ನು ನಮಗೆ ತೋರಿಸಿಕೊಟ್ಟು ಅದರ ಪರಿಣಾಮಗಳಿಂದ ಬಿಡಿಸುವಂತೆ ಪವಿತ್ರಾತ್ಮನನ್ನು ಕೇಳಿಕೊಳ್ಳೋಣ.

**ಇತರರ ಮೇಲೆ ನೀವು ಉಪಯೋಗಿಸಿರಬಹುದಾದ ಖಂಡನಾತ್ಮಕ ತೀರ್ಪುಗಳ ಮುರಿಯುವಿಕೆಗಾಗಿನ ಪ್ರಾರ್ಥನಾ ಮಾರ್ಗಸೂಚಿ**

- ಅವರನ್ನು ಗೌರವಿಸದೆ ತೀರ್ಪು ಮಾಡಿರುವುದಕ್ಕಾಗಿ ಪಶ್ಚಾತ್ತಾಪಪಡಿರಿ
- ಯೇಸುವಿನ ನಾಮದಲ್ಲಿ ಆ ಎಲ್ಲಾ ದೋಷಾರೋಪಗಳನ್ನು ಹಿಂದಕ್ಕೆ ಪಡೆಯಿರಿ
- ಈ ತೀರ್ಪುಗಳ ನಿಮಿತ್ತ ಉಂಟಾದ ಎಲ್ಲಾ ರೀತಿಯ ನಕಾರಾತ್ಮಕವಾದ ಪರಿಣಾಮಗಳಿಂದ ಬಿಡಿಸುವಂತೆ ದೇವರನ್ನು ಕೇಳಿಕೊಳ್ಳಿರಿ
- ಅದಕ್ಕೆ ಪ್ರತಿಯಾಗಿ ನೀವು ಮಾಡಿರಬಹುದಾದ ಹರಕೆ/ಶಪಥಗಳನ್ನು ಹಿಂದಕ್ಕೆ ಪಡೆಯಿರಿ (ಹೆಚ್ಚಿನ ಮಾಹಿತಿ ಮುಂದಿನ ಪುಟದಲ್ಲಿ)
- ಆ ವ್ಯಕ್ತಿಯನ್ನೂ ನಿಮ್ಮನ್ನೂ ಆಶೀರ್ವದಿಸುವಂತೆ ದೇವರನ್ನು ಕೇಳಿಕೊಳ್ಳಿರಿ
- ಯೇಸುವನ್ನು ಮತ್ತೊಮ್ಮೆ ನಿಮ್ಮ ಹೃದಯದೊಳಕ್ಕೆ ಬರುವಂತೆಯೂ ಪವಿತ್ರಾತ್ಮನಿಂದ ಸಂಪೂರ್ಣವಾಗಿ ತುಂಬಿಸುವಂತೆ ಕೇಳಿಕೊಳ್ಳಿರಿ

ನೀವು ಗಟ್ಟಿಯಾಗಿ ಪ್ರಾರ್ಥಿಸಬಹುದಾದ ಪ್ರಾರ್ಥನಾ ಮಾರ್ಗದರ್ಶಿ ಕೆಳಗಿದೆ.

**ಖಂಡನಾತ್ಮಕ ತೀರ್ಪುಗಳ ಮುರಿಯುವಿಕೆಗಾಗಿನ ಪ್ರಾರ್ಥನೆ**



"ಪರಲೋಕದ ತಂದೆಯೇ – ನಿನಗೆ ವಿರುದ್ಧವಾಗಿ ಪಾಪ ಮಾಡಿರುವೆನೆಂದು ಅರಿಕೆ ಮಾಡುತ್ತಿದ್ದೇನೆ. ಇತರರಲ್ಲಿನ ತಪ್ಪುಗಳ ಹುಡುಕಾಟ ನಡೆಸಿ ಖಂಡನಾತ್ಮಕವಾದ ತೀರ್ಪುಗಳನ್ನು ಮಾಡಿರುವ ಅಪರಾಧಗಳನ್ನು ನಾನು ಅರಿಕೆ ಮಾಡುತ್ತಿದ್ದೇನೆ. ನಾನು ವಿಶಿಷ್ಟವಾಗಿ (... **ನಿಮ್ಮ ಪಾಪಗಳನ್ನು ಜೋರಾಗಿ ದೇವರಿಗೆ ಈಗ ಅರಿಕೆ ಮಾಡಿರಿ, ಪ್ರತಿಯೊಂದು ಸನ್ನಿವೇಶಗಳನ್ನು ಪ್ರಾಮಾಣಿಕವಾಗಿ ವಿವರವಾಗಿ ಆತನ ಸನ್ನಿಧಿಯಲ್ಲಿ ಅರಿಕೆ ಮಾಡಿರಿ**). ನಾನು ಅದನ್ನು ಪಾಪವೆಂದು ಒಪ್ಪಿಕೊಂಡು, ಪಶ್ಚಾತ್ತಾಪ ಪಡುತ್ತೇನೆ ಹಾಗೂ ಆ ಎಲ್ಲಾ ಪಾಪಗಳಿಂದ ವಿಮುಕ್ತನಾಗಿ ನಿನ್ನ ಬಳಿಗೆ ಹಿಂತಿರುಗಿ ಬರಲು ಇಚ್ಛಿಸುತ್ತಿದ್ದೇನೆ."


"ಯೇಸುವಿನ ಅಧಿಕಾರವುಳ್ಳ ನಾಮದಲ್ಲಿ ನಾನು ಮಾಡಿರುವ **ಖಂಡನಾತ್ಮಕ ತೀರ್ಪುಗಳನ್ನು (ಒಂದೊಂದಾಗಿ ಹೇಳಿ ಒಪ್ಪಿಕೊಳ್ಳಿರಿ) ಹಾಗೂ ಶಪಥಗಳನ್ನು (ಒಂದೊಂದಾಗಿ ಅರಿಕೆಮಾಡಿರಿ) ತಿರಸ್ಕರಿಸುತ್ತಿದ್ದೇನೆ.** ಇವುಗಳ ನಿಮಿತ್ತ ನನಗೂ ಇತರರಿಗೂ ಆಗಿರಬಹುದಾದ ನಕಾರಾತ್ಮಕ ಪರಿಣಾಮಗಳ್ನು ದಯವಿಟ್ಟು ತಡೆಯಿರಿ. ಪರಲೋಕದ ತಂದೆಯೇ ದಯವಿಟ್ಟು ನನ್ನನ್ನು ಕ್ಷಮಿಸಿರಿ. ಯೇಸುವಿನ ರಕ್ತದಲ್ಲಿ ತೊಳೆಯಿರಿ ಹಾಗೂ ಆ ಕೆಟ್ಟತನದಿಂದ ನನ್ನನ್ನು ವಿಮುಕ್ತಿಗೊಳಿಸಿರಿ. ಕರ್ತನಾದ ಯೇಸುವೇ ದಯವಿಟ್ಟು ನನ್ನೊಳಗೆ ಬಂದು ನಿನ್ನಾತ್ಮನಿಂದ ನನ್ನನ್ನು ಸಂಪೂರ್ಣವಾಗಿ ತುಂಬಿಸಿರಿ. ನನ್ನನ್ನು ಬದಲಾಯಿಸಿ. ಶುದ್ಧನನ್ನಾಗಿಸಿರಿ. ನಾನು (ವ್ಯಕ್ತಿಗಳ ಹೆಸರುಗಳನ್ನು ತಿಳಿಸಿ) ಆಶೀರ್ವದಿಸುತ್ತಿದ್ದೇನೆ. ಯೇಸುವಿನ ನಾಮದಲ್ಲಿ ಆಮೆನ್."

# ನಕಾರಾತ್ಮಕ ಮಾತುಗಳಿಂದ ಬಿಡುಗಡೆ

*"ನಿನ್ನ ಮಾತುಗಳಿಂದಲೇ ನೀನು ನೀತಿವಂತನೆಂದೂ, ಅಪರಾಧಿಯೆಂದೂ ತೀರ್ಪುಹೊಂದುವಿ"* ***(ಮತ್ತಾಯ 12:37).***

*"ಸವಿನುಡಿಯು ಜೇನುಕೊಡ, ಅದು ಆತ್ಮಕ್ಕೆ ಸಿಹಿ ಎಲುಬಿಗೆ ಕ್ಷೇಮ"* ***(ಜ್ಞಾನೋ 16:24)***

*"ಜೀವನ ಮರಣಗಳು ನಾಲಿಗೆಯ ವಶ, ವಚನಪ್ರಿಯರು ಅದರ ಫಲವನ್ನು ಅನುಭವಿಸುವರು"* ***(ಜ್ಞಾನೋ 18:21).***



*"ನಾಲಿಗೆಯಿಂದ ತಂದೆಯಾದ ಕರ್ತನನ್ನು ಕೊಂಡಾಡುತ್ತೇವೆ. ಅದರಿಂದಲೇ ದೇವರ ಹೋಲಿಕೆಗೆ ಸರಿಯಾಗಿ ಉಂಟುಮಾಡಲ್ಪಟ್ಟ ಮನುಷ್ಯರನ್ನು ಶಪಿಸುತ್ತೇವೆ."* ***(ಯಾಕೋಬ 3:9)***

*"ನಿತ್ಯಜೀವವನ್ನು ಉಂಟುಮಾಡುವ ವಾಕ್ಯಗಳು ಯೇಸುವಿನಲ್ಲಿ ಮಾತ್ರ ಉಂಟು"* ***(ಯೋಹಾನ 6:68).***

**ವಾಕ್ಯಕ್ಕೆ ಶಕ್ತಿಯುಂಟು** – ದೇವರು ಉಂಟಾಗಲಿ ಎನ್ನಲು ಸಕಲವೂ ಉಂಟಾಯಿತು ***(ಆದಿ 1:3).*** ನಾವಾಡುವ ಮಾತುಗಳಲ್ಲಿ ಬಲವುಂಟು! ಆ ಮಾತುಗಳಲ್ಲಿ ಜೀವ ಅಥವಾ ಮರಣ, ಆರೋಗ್ಯ ಅಥವಾ ರೋಗಗಳನ್ನುಂಟು ಮಾಡುವ ಬಲವುಂಟು. ನಾವಾಡುತ್ತಿರುವ ಮಾತುಗಳಲ್ಲಿ ಪ್ರತಿಯೊಂದೂ ಸಹ ಗಂಭೀರವಾಗಿರುತ್ತದೆಂಬುದು ವಿಸ್ಮಯವೂ, ಎದೆಗುಂದಿಸುವ ವಿಷಯವೂ ಆಗಿದೆ.

ಸೈತಾನನನ್ನು ಸಹೋದರರ ಮೇಲೆ ದೂರು ಹೇಳುವವನೆಂಬುದಾಗಿ ಕರೆಯಲಾಗಿದೆ. ಪ್ರಕ 12:10 ರಲ್ಲಿ ಸೈತಾನನನ್ನು ನಮಗೆ ವಿರುದ್ಧವಾಗಿ ದೇವರೆದುರಿನಲ್ಲಿ ದೂರು ಹೇಳಲು ಶಕ್ತನಾದವನೆಂದು ಹೇಳಲಾಗಿದೆ. ಸೈತಾನನು ಆಕಾಶದಿಂದ ಬೀಳುವುದನ್ನು ಯೇಸು ಕಂಡಿದ್ದಾನೆ ***(ಲೂಕ 10:18; ಯೆಶಾ 14:12–15; ಯೆಹೆ 28:12–18).*** ಅವನು ದೇವರಿಗೆ ವಿರುದ್ಧವಾಗಿ ತಿರುಗಿಬಿದ್ದು ದೇವರಂತಾಗಲು ಇಷ್ಟಪಟ್ಟಿದ್ದರಿಂದ ಆಕಾಶದಿಂದ ಅವನನ್ನು ಕೆಳಕ್ಕೆ ದೊಬ್ಬಲಾಯಿತು. ಆದರೆ ದೇವರ ಜನರಿಗೆ ವಿರುದ್ಧವಾಗಿ ದೂರುಗಳನ್ನು ತರುವುದನ್ನು ಮುಂದುವರೆಸಿದ್ದಾನೆ. ಅದರಂತೆಯೇ ನಾವು ನಮ್ಮ ಜೊತೆ ಕ್ರೈಸ್ತ ಸಹೋದರ–ಸಹೋದರಿಯರ ವಿಷಯದಲ್ಲಿ ದೇವರ ಸನ್ನಿಧಿಯಲ್ಲಿ ದೂರುಗಳನ್ನು ತರುವುದನ್ನು ದೇವರು ಇಷ್ಟಪಡಲಾರನು ಹಾಗೂ ಆ ಮೂಲಕ ದೇವರನ್ನು ವೇದನೆಪಡಿಸಿರುತ್ತೇವೆ ***(1 ಪೂರ್ವ 16:22).*** ಸೈತಾನನು ತರುತ್ತಿರುವ ದೂರುಗಳನ್ನು ದೇವರು ಇಷ್ಟಪಡದಿರುವುದರಿಂದ ನಾವು ತರುತ್ತಿರುವ ದೂರುಗಳನ್ನೂ ಸಹ ದೇವರು ಇಷ್ಟಪಡನು. ನಾವು ನಮ್ಮ ಹಾಗೂ ಇತರರ ವಿಷಯದಲ್ಲಿ ನಕಾರಾತ್ಮಕವಾದ ಮಾತುಗಳನ್ನಾಡುವುದಕ್ಕೆ ಬದಲಾಗಿ

ಕ್ರಿಸ್ತನು ಪ್ರತಿಯೊಬ್ಬರಲ್ಲಿಯೂ ಜೀವಿಸುತ್ತಾ ಇರುವನೆಂಬುದನ್ನು ಗ್ರಹಿಸಿಕೊಳ್ಳಿರಿ.

**ಸಾಕ್ಷಿ**
**ಮರಣವನ್ನು ತಂದ ನನ್ನ ಮಾತುಗಳು**

*"ಅನೇಕ ವರ್ಷಗಳಿಂದಲೂ ಅಂಗವೈಕಲ್ಯವುಳ್ಳ ನನ್ನ ಸಹೋದರನಿಗೆ ನಾನೇ ಪಾಲಕನಾಗಿದ್ದೆ. ಅವನನ್ನು ನೋಡಿಕೊಳ್ಳುವುದು ಕೆಲವೊಮ್ಮೆ ಸಂಕಷ್ಟದ ಸನ್ನಿವೇಶವಾಗಿರುತ್ತಿತ್ತು. ಒಮ್ಮೆ ನಾನು ಬಹಳ ಹತಾಶನಾಗಿದ್ದು ಕೋಪದಿಂದ ಅವನೆಡೆಗೆ – "ಇಲ್ಲಿಂದ ರಸ್ತೆಗೆ ಹೋಗಿ ಬಿದ್ದು ಸಾಯಬಾರದೇಕೆ?" ಎಂದೆ. ಆದರೆ 5 ವಾರಗಳ ನಂತರ ರಸ್ತೆಯಲ್ಲೇ ಕಾರೊಂದು ಗುದ್ದಿ ಅವನು ಸತ್ತಾಗ ಅದು ನನ್ನನ್ನು ಆಳವಾಗಿ ವೇದನೆಪಡಿಸಿತು. ನನ್ನ ಮಾತುಗಳು ಅವನ ಜೀವಿತದಲ್ಲಿ ಶಾಪದಂತೆ ಕಾರ್ಯನಿರ್ವಹಿಸಿತ್ತು."*

ಕೆಲವು ಸನ್ನಿವೇಶಗಳಲ್ಲಿ ನಮಗರಿವಿಲ್ಲದೆಯೇ ಸೈತಾನನಿಗೆ ಮಹಿಮೆ ಸಲ್ಲಿಸುವವರಾಗಿದ್ದೇವೆ. ಸಭಾಪಾಲಕರೊಬ್ಬರು ಈ ವಿಷಯದಲ್ಲಿ ತಮ್ಮ ಅನುಭವವನ್ನು ಕೆಳಗಿನಂತೆ ಹಂಚಿಕೊಂಡಿದ್ದಾರೆ. ದೇವರು ಅವರಿಗೆ ಹೇಳಿದ್ದೇನೆಂದರೆ – "ನಿಮ್ಮ ಸಭೆಯ ಆರಾಧನೆಗಳಲ್ಲಿ ಸೈತಾನನಿಗೇಕೆ ಪ್ರಥಮ ಸ್ಥಾನ ಕೊಡುತ್ತಿರುವಿರಿ? ಅವನನ್ನೂ ಅವನ ದುರಾತ್ಮಗಳನ್ನೂ ನನ್ನನ್ನು ಆರಾಧಿಸುವ ಮೊದಲೇ ನೀನು ಆರಾಧಿಸುತ್ತಿರುವುದು ಏಕೆ?" ಅದಕ್ಕೆ ಸಭಾಪಾಲಕರ ಪ್ರತ್ಯುತ್ತರವು – "ಕರ್ತನಾದ ದೇವರೇ, ನಾನೆಂದೂ ಹಾಗೆ ಮಾಡಿರಲಿಲ್ಲ, ನಮ್ಮೆಲ್ಲಾ ಆರಾಧನಾ ಕೂಟಗಳಲ್ಲಿ ನಿನಗೇ ಪ್ರಥಮ ಸ್ಥಾನ ಕೊಟ್ಟಿರುವೆನಷ್ಟೇ". ಅದಕ್ಕೆ ದೇವರ ಪ್ರತ್ಯುತ್ತರವು – "ಹಾಗಲ್ಲ", "ನೀನು ಮೊದಲು ದೆವ್ವಗಳನ್ನು ಬಂಧಿಸುವ ಹಾಗೂ ಗದರಿಸುವ ಮೂಲಕ ಅವುಗಳೊಂದಿಗೆ ಮಾತನಾಡುವಿ, ಮತ್ತು ಅವುಗಳನ್ನು ಹೊರಹಾಕುತ್ತೀ, ಇದನ್ನೇ ಅವುಗಳು ತಮಗೋಸ್ಕರವಿರುವ ಆರಾಧನೆಯೆಂದು ನೆನೆಸಿವೆ. ನಿನ್ನಿಂದ ಈ ವಿಧದ ಆರಾಧನೆಯನ್ನು ಹೊಂದುವುದಕ್ಕಾಗಿ ದೆವ್ವಗಳು ಬಹುದೂರದಿಂದ ಬರುವುದುಂಟು. ನೀನು ನನ್ನನ್ನೇ ಸ್ತುತಿಸು ಹಾಗೂ ದೆವ್ವಗಳ ಬಗ್ಗೆ ನಾನೇ ನೋಡಿಕೊಳ್ಳುತ್ತೇನೆ". (ಈ ಘಟನೆಯನ್ನು ಜಡ್ಸನ್ ಕಾರ್ನ್‌ವಾಲ್‌ರವರ 'ಒಟ್ಟಾಗಿ ಸ್ತುತಿಸೋಣ' ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ).

ಆ ಸಭಾಪಾಲಕನಮಟ್ಟಿಗೆ ಇದು ಖಂಡಿತವಾಗಿಯೂ ಒಂದು ಭಯಾನಕ ವಿಷಯವಾಗಿತ್ತು ಹಾಗೂ ನಮ್ಮೆಲ್ಲರಿಗೂ ಒಂದು ಎಚ್ಚರಿಕೆಯಾಗಿರಲಿ. ಇದರಿಂದ ನಾವು ಕಲಿಯಬೇಕಾಗಿರುವ ಪಾಠ ಏನೆಂದರೆ ಯೇಸುವನ್ನೇ ನಾವು ಕೇಂದ್ರೀಕರಿಸುತ್ತಾ ದೇವರು ನಮಗೋಸ್ಕರ ಮಾಡುತ್ತಿರುವುಗಳನ್ನೇ ಗಮನಿಸುತ್ತಾ ಎಡೆಬಿಡದೆ ಆತನನ್ನೇ ಸ್ತುತಿಸೋಣ ಹಾಗೂ ವಿರೋಧಿಯ ಬಗ್ಗೆ ದೇವರೇ ನೋಡಿಕೊಳ್ಳಲಿದ್ದಾನೆ ***(ಯೂದ 9).*** ಪ್ರಾರ್ಥನೆಗಳಿಗೂ ಇದೇ ನಿಯಮಾವಳಿಗಳು ಅನ್ವಯಿಸುತ್ತದೆ.

*"ಯಾವಾವುದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಮನೋಹರವೂ ಆಗಿದೆಯೋ, ಯಾವುದು ಸದ್ಗುಣವಾಗಿದೆಯೋ, ಯಾವುದು ಕೀರ್ತಿಗೆ ಯೋಗ್ಯವೋ ಅವೆಲ್ಲವುಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ"* ***(ಫಿಲಿಪ್ಪಿ 4:8).***

ದೇವರನ್ನು ಎಡೆಬಿಡದೆ ಎಲ್ಲಾ ಸ್ಥಿತಿಗತಿಗಳಲ್ಲಿಯೂ ಕೊಂಡಾಡುವುದು ಜಯಕರವಾದ ಕ್ರೈಸ್ತ ಜೀವನಕ್ಕೆ ಪ್ರಮುಖವಾದ ಬೀಗದ ಕೈ ಇದ್ದಂತೆ, ಆ ಮೂಲಕವಾಗಿ ದೇವರ ವಿಷಯದಲ್ಲಿನ ನಮ್ಮ ತಿಳುವಳಿಕೆಯು ಅಧಿಕಗೊಳ್ಳುತ್ತದೆ. ಆತನು ಎಷ್ಟು ಅದ್ಭುತ

ಸ್ವರೂಪನೆಂಬುದನ್ನೂ, ಆತನು ಈಗಾಗಲೇ ನಮಗೋಸ್ಕರ ಮಾಡಿರುವ ಕಾರ್ಯಗಳನ್ನೂ ಜ್ಞಾಪಕಕ್ಕೆ ತಂದು ಆತನಿಂದ ಯಾವುದೂ ಅಸಾಧ್ಯವಲ್ಲ ಎಂಬುದನ್ನೂ ಸಾಬೀತುಪಡಿಸುತ್ತಿದೆ. ಸ್ತುತಿಯ ಮೂಲಕ ಸೈತಾನನ ಮೇಲೆ ಜಯ ಲಭಿಸುತ್ತದೆ. ಆತ್ಮೀಕ ಯುದ್ಧದಲ್ಲಿ ಉಪಯೋಗಿಸಲ್ಪಡುವ ಅತ್ಯಂತ ಪರಿಣಾಮಕಾರಿಯಾದ ಅಸ್ತ್ರವೇ ಸ್ತುತಿಯಾಗಿದೆ ***(ಕೀರ್ತನೆ 149:6–9).***

ನಾನು ಕಂಡ ಕನಸಿನಲ್ಲಿ 3 ಬಾರಿ "ಹಲ್ಲೇಲೂಯಾ" ಎಂದು ದೇವರನ್ನು ಕೊಂಡಾಡಿದ ತರುವಾಯ ಸೈತಾನನು ಚಲಿಸಲಾಗದೆ ನೆಲದ ಮೇಲೆ ಬಿದ್ದಿರುವುದನ್ನು ಕಂಡೆನು. ಹಾಗೂ ಎಚ್ಚರವಾದಾಗ ನನಗಾದ ಕನಸಿನ ಬಗ್ಗೆ ಯೋಚಿಸಿದೆನು. ಹಾಗೂ ಯಾವುದೇ ಆತಂಕವಿಲ್ಲದೆ 3 ಬಾರಿ "ಹಲ್ಲೇಲೂಯಾ" ಎಂದು ಹೇಳಲು ಸಾಧ್ಯವಾಯಿತು. ಸಂಕಷ್ಟಗಳ ಸಂದರ್ಭಗಳಲ್ಲಿಯೂ ಹಾಗೆಯೇ ಉಚ್ಚರಿಸುವದನ್ನು ಮುಂದುವರಿಸಿದೆನು.

ನಮ್ಮ ಮನಸ್ಸು ಹಾಗೂ ಮಾತುಗಳಲ್ಲಿ ಕ್ರಿಯಾತ್ಮಕವಾದ ಶಕ್ತಿಯಿದ್ದು ಮನಸ್ಸಿನಲ್ಲಿ ಯೋಚಿಸುವುದೂ ಸಹ ನೈಜವಾಗಿ ಮಾರ್ಪಡಬಲ್ಲದು. ನಕಾರಾತ್ಮಕ ಮಾತುಗಳು ಹಾಗೂ ಆಲೋಚನೆಗಳು ನಮ್ಮ ಹಾಗೂ ನಾವು ಮಾತನಾಡಿರುವವರ, ಚಿಂತಿಸುವವರ ಮೇಲೆ ಅಧಿಕಾರ ಸ್ಥಾಪಿಸಲು ಸೈತಾನನಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ನಾವು ಒಳ್ಳೇ ಕಾರ್ಯಗಳ ಬಗ್ಗೆ ಎಷ್ಟು ಹೆಚ್ಚಾಗಿ ಚಿಂತಿಸುತ್ತೇವೋ ಅವುಗಳ ಬಗ್ಗೆ ಗಮನಕೊಡಲು ಹೆಚ್ಚು ಪ್ರೋತ್ಸಾಹ ಹೊಂದುತ್ತೇವೆ. ಕ್ಯಾರೋಲ್ ಮತ್ತು ಜಾನ್ ಆರ್ನೋಟ್‌ರವರು ತಮ್ಮ ಪುಸ್ತಕವಾದ "ಕೃಪೆ ಹಾಗೂ ಕ್ಷಮಿಸುವಿಕೆ" ಯಲ್ಲಿ ಸಭಾಪಾಲಕರೊಬ್ಬರ ವಿಷಯದಲ್ಲಿ ಉಲ್ಲೇಖಿಸಿದ್ದು ಆ ಸಭಾಪಾಲಕರು ತಮ್ಮ ಪ್ರತಿದಿನದ ಕನಿಷ್ಠ 80% ಭಾಗವನ್ನು ನಕಾರಾತ್ಮಕ, ಖಂಡನಾತ್ಮಕವಾದ ತೀರ್ಪು ಮಾಡುವುದರಲ್ಲೇ ಕಳೆಯುತ್ತಿದ್ದು ಕೇವಲ 20% ರಷ್ಟು ಭಾಗವನ್ನು ಮಾತ್ರವೇ ಒಳ್ಳೆಯ (ಸಕಾರಾತ್ಮಕ) ವಿಷಯಗಳಿಗಾಗಿ ಕಳೆಯುತ್ತಿದ್ದರು. ಆನಂತರ ಇದು ಅನೇಕರ ವಿಷಯದಲ್ಲಿಯೂ ನಿಜವೆಂಬುದನ್ನು ಕಂಡುಕೊಂಡರು. ನಾವು ನಮ್ಮ ಬಗ್ಗೆ, ಇತರರ ಬಗ್ಗೆ ಹಾಗೂ ನಮಗಿರುವ ಸನ್ನಿವೇಶಗಳ ಬಗ್ಗೆ ನಕಾರಾತ್ಮಕವಾಗಿ ಮಾತನಾಡುವುದಾದಲ್ಲಿ ನಿಜಾರ್ಥದಲ್ಲಿ ಸೈತಾನನ ಸೇವೆಯನ್ನು ಮಾಡುವವರಾಗಿರುತ್ತೇವಷ್ಟೆ ***(ಪ್ರಕ 12:9–11).***

*"ತನ್ನ ಸಹೋದರರನ್ನು ನೋಡಿ, ಛೀ ನೀಚ ಅನ್ನುವವನು ನ್ಯಾಯ ಸಭೆಯ ವಿಚಾರಣೆಗೆ ಒಳಗಾಗುವನು. ಮೂರ್ಖ ಅನ್ನುವವನು ಅಗ್ನಿ ನರಕಕ್ಕೆ ಗುರಿಯಾಗುವನು"* ***(ಮತ್ತಾಯ 5:22).***

ನಮ್ಮ ಮನಸ್ಸು ಹಾಗೂ ನಾಲಿಗೆಗಳಿಗೆ ಸರಿಯಾದ ತರಬೇತಿಯನ್ನು ಕೊಟ್ಟು ನಮ್ಮ ಮನೋಭಾವ ಹಾಗೂ ಮಾತುಗಳನ್ನು ಸಕಾರಾತ್ಮಕವಾಗಿಸುವುದನ್ನು ಕಲಿಯಬೇಕಿದೆ. ಇತರರನ್ನು ಖಂಡಿಸುವುದಕ್ಕೆ ಬದಲಾಗಿ ಅವರನ್ನು ಆಶೀರ್ವದಿಸುವವರೂ, ಗೌರವಿಸುವವರೂ, ಪ್ರೋತ್ಸಾಹಗೊಳಿಸುವವರೂ ಆಗಿದ್ದಲ್ಲಿ ಅವರಿಗೆ ವಿರುದ್ಧವಾಗಿ ತಪ್ಪು ಹೊರಿಸುವವರಾಗಿರದೆ ಕ್ಷಮಿಸಿ ನಂಬಿಕೆಯಲ್ಲಿ ಭದ್ರಪಡಿಸೋಣ. ಪ್ರತಿದಿನದ ಪ್ರಾರ್ಥನೆ ಹಾಗೂ ಜೀವನ ಸಂಭಾಷಣೆಗಳಲ್ಲೂ ನಮ್ಮ ಮನೋಭಾವವು ಇದೇ ಪ್ರಕಾರವಿರಲಿ.

**ನೀವು ನಕಾರಾತ್ಮಕ ಮಾತುಗಳನ್ನಾಡಿದ್ದರೆ ಪ್ರಾರ್ಥನಾ ಮಾರ್ಗಸೂಚಿಗಳು**

- ನೀವಾಡಿರುವ ನಕಾರಾತ್ಮಕ ಮಾತುಗಳ ಬಗ್ಗೆ ಪಶ್ಚಾತ್ತಾಪಪಡಿರಿ ಹಾಗೂ ನಿಮ್ಮನ್ನು ಬದಲಾಯಿಸುವಂತೆ ದೇವರಲ್ಲಿ ಬೇಡಿಕೊಳ್ಳಿರಿ
- ನಿಮ್ಮ ಬಗ್ಗೆಯೂ ಇತರರ ಬಗ್ಗೆಯೂ ನೀವಾಡಿರುವ ಎಲ್ಲಾ ನಕಾರಾತ್ಮಕ ಮಾತುಗಳನ್ನು ಯೇಸುವಿನ ನಾಮದಲ್ಲಿ ಅರಿಕೆಮಾಡಿ ಬಿಟ್ಟುಬಿಡಿರಿ
- ಅದಕ್ಕೆ ಬದಲಾಗಿ ಆಶೀರ್ವಾದದ ಮಾತುಗಳನ್ನು ನುಡಿಯಿರಿ
- ಯೇಸುವನ್ನು ಮತ್ತೊಮ್ಮೆ ನಿಮ್ಮೊಳಗೆ ಆಹ್ವಾನಿಸಿರಿ ಹಾಗೂ ಪವಿತ್ರಾತ್ಮನಿಂದ ಸಂಪೂರ್ಣವಾಗಿ ತುಂಬಿಸುವಂತೆ ಕೇಳಿಕೊಳ್ಳಿರಿ

ಈ ಕ್ಷಣದಲ್ಲೇ ದೇವರು ನಮ್ಮನ್ನು ತೊಳೆದು ಶುದ್ಧೀಕರಿಸಲು ಇಷ್ಟಪಡುತ್ತಿರುವ ವಿಶಿಷ್ಟವಾದ ಘಟನೆಗಳಿರುವುದಾದಲ್ಲಿ ತೋರಿಸಿಕೊಡುವಂತೆ ಕರ್ತನನ್ನು ಬೇಡಿಕೊಳ್ಳಿರಿ.

ಈ ಕೆಳಗಿನ ಪ್ರಾರ್ಥನೆಯನ್ನು ಗಟ್ಟಿಯಾಗಿ ಪ್ರಾರ್ಥಿಸಿರಿ.

**ನಾನಾಡಿರುವ ನಕಾರಾತ್ಮಕ ಮಾತುಗಳ ವಿಷಯದಲ್ಲಿನ ಪಶ್ಚಾತ್ತಾಪದ ಪ್ರಾರ್ಥನೆ**



"ತಂದೆಯಾದ ದೇವರೇ, ನನ್ನ ಸಹೋದರರಿಗೆ ವಿರುದ್ಧವಾಗಿ ದೂರುಹೇಳುವವನಾಗಿದ್ದೇನೆಂದು ಅರಿತಿದ್ದೇನೆ – ನನ್ನ ಜೊತೆ ವಿಶ್ವಾಸಿಗಳಿಗೆ ವಿರುದ್ಧವಾಗಿ ತೀರ್ಪು ಹಾಗೂ ಖಂಡಿಸುವಿಕೆಗಳನ್ನು ಮಾಡುತ್ತಾ, ಅವರಿಗೆ ವಿರುದ್ಧವಾಗಿ ಪ್ರಾರ್ಥಿಸುತ್ತಾ ನಿನ್ನ ಬಳಿಗೆ ದೂರುಗಳನ್ನು ತಂದಿರುವೆನು. ದಯವಿಟ್ಟು ನನ್ನನ್ನು ಕ್ಷಮಿಸಿರಿ ***(...ವಿಶಿಷ್ಟ ಘಟನೆಗಳಿಗಾಗಿ ಕ್ಷಮಾಪಣೆಯನ್ನು ಕೇಳಿಕೊಳ್ಳಿರಿ)***. ನಾನು ಪಶ್ಚಾತ್ತಾಪ ಪಡುತ್ತಿದ್ದೇನೆ ಹಾಗೂ ಬದಲಾಗಲು ಬಯಸುತ್ತಿದ್ದೇನೆ. ಇತರರಿಗೆ ವಿರುದ್ಧವಾಗಿ ನಾನಾಡಿರುವ ಹಾಗೂ ಯೋಚಿಸಿರುವ ಎಲ್ಲಾ ವಿಧವಾದ ನಕಾರಾತ್ಮಕವಾದ ಯೋಚನೆ ಹಾಗೂ ಮಾತುಗಳ ಶಕ್ತಿಯನ್ನು ಯೇಸುವಿನ ನಾಮದಲ್ಲಿ ಮುರಿಯುತ್ತಿದ್ದೇನೆ. ನನ್ನಲ್ಲಿನ ನಕಾರಾತ್ಮಕ ಮಾತುಗಳಿಂದ ಅವರಿಗುಂಟಾದ ಅಡ್ಡ ಪರಿಣಾಮಗಳಿಂದ ಅವರನ್ನು ವಿಮುಕ್ತಗೊಳಿಸಿರಿ. ಶಪಿಸುವುದಕ್ಕೆ ಬದಲಾಗಿ ಆಶೀರ್ವದಿಸಲು ಸಹಾಯಿಸಿರಿ, ಆ ಮೂಲಕವಾಗಿ ಮರಣಕ್ಕೆ ಬದಲಾಗಿ ಜೀವದ ಮಾತನ್ನಾಡುವೆನು. ಯೇಸುವಿನ ನಾಮದಲ್ಲಿ, ಆಮೆನ್."

ತಂದೆ–ತಾಯಂದಿರು ತಮ್ಮ ಮಕ್ಕಳ ಮೇಲೆ ನಕಾರಾತ್ಮಕವಾದ ಪರಿಣಾಮಗಳನ್ನು ಉಂಟು ಮಾಡಬಹುದಾದ ಮಾತುಗಳನ್ನು ಸತತವಾಗಿ ಹೇಳುವುದುಂಟು. ಉದಾ: "ನೀನು ಹುಟ್ಟದಿದ್ದರೆ ಒಳ್ಳೆಯದಾಗುತ್ತಿತ್ತು" ಅಥವಾ "ನೀನೊಬ್ಬ ಸೋಮಾರಿಯಾಗಿರುವುದರಿಂದ ನಿನ್ನ ಜೀವಿತದಿಂದ ಯಾವುದೇ ಪ್ರಯೋಜನವುಂಟಾಗದು."

ಸಾಮಾನ್ಯವಾಗಿ ನಾವು ಯೌವನದಲ್ಲಿರುವಾಗ ನಮ್ಮ ಮೇಲೆ ಅಧಿಕಾರ ಹೊಂದಿರುವ ಪೋಷಕರು, ಬೋಧಕರು ಅಥವಾ ನಮ್ಮನ್ನು ಕೆಲಸಕ್ಕೆ ಸೇರಿಸಿಕೊಂಡವರ ನಕಾರಾತ್ಮಕವಾದ ಮಾತುಗಳು ನಮ್ಮ ಮೇಲೆ ಆಳವಾದ ಪರಿಣಾಮವನ್ನು ಬೀರುವುದುಂಟು. ತಮಗಿಷ್ಟವಾದ ಕೆಲವು ವಿಶಿಷ್ಟವಾದ ಪ್ರಾಣಿ – ಪಕ್ಷಿಗಳ ಹೆಸರಿಡಿದು ಅವರನ್ನು ಸಂಭೋದಿಸುವುದೂ ಸಹ

ಮಕ್ಕಳ ಜೀವಿತದಲ್ಲಿ ಶಾಪವಾಗಿ ಮಾರ್ಪಡಬಹುದಾಗಿದೆ. ನಮ್ಮ ವಿಷಯದಲ್ಲಿ ನಮಗಿಂತ ಹಿರಿಯರಾದ ಉಪಾಧ್ಯಾಯರು ಆಡಿರುವ ಮಾತುಗಳೂ ಸಹ ನಮಗೆ ಹಾನಿಯನ್ನುಂಟುಮಾಡಬಹುದಾಗಿದೆ. ನಮ್ಮನ್ನು ಖಂಡಿಸಿ ನಮಗೆ ವಿರುದ್ಧವಾಗಿ ನಕಾರಾತ್ಮಕವಾಗಿ ಮಾತಾಡಿರುವವರನ್ನು ನಾವು ಕ್ಷಮಿಸಲೇಬೇಕು. ಯೇಸುವಿನ ನಾಮದಲ್ಲಿ ನಕಾರಾತ್ಮಕವಾದ ಮಾತುಗಳ ಬಲ ಹಾಗೂ ಆ ಮೂಲಕವಾಗಿ ಉಂಟಾದ ಎಲ್ಲಾ ವಿಧದ ಪಾಪಗಳಿಂದ ನಮ್ಮನ್ನು ವಿಮೋಚಿಸಿ ಶುದ್ಧೀಕರಿಸುವಂತೆ ದೇವರನ್ನು ಬೇಡಿಕೊಳ್ಳೋಣ.

ಇನ್ನೂ ಕೆಲವು ಸನ್ನಿವೇಶಗಳಲ್ಲಿ ಕೇವಲ ಮಾತುಗಳಿಂದ ಮಾತ್ರವಲ್ಲದೇ ಯಾವ ಪ್ರೋತ್ಸಾಹದಾಯಕ ಮಾತುಗಳನ್ನೂ ಹೇಳದೆ ಮೌನವಾಗಿ ಇರುವ ಮೂಲಕವೂ ಸಹ ವೇದನೆಯುಂಟಾಗುತ್ತದೆ. ಉದಾ: ಒಬ್ಬ ಪೋಷಕ, ಶಿಕ್ಷಕ ಅಥವಾ ಗಂಡ/ಹೆಂಡತಿ ಯಾರೇ ಆಗಲಿ ನಿಮ್ಮೊಂದಿಗೆ ಮಾತನಾಡದೆ **ಮೌನ ಉತ್ತರ** ಕೊಡುತ್ತಿರುವುದಾದಲ್ಲಿ ನೀವು ಮಾತನಾಡುವುದಕ್ಕೆ ಯೋಗ್ಯರಲ್ಲ ಅಥವಾ ಅಯೋಗ್ಯರುಎಂಬ ಭಾವನೆಯುಂಟಾಗುತ್ತದೆ.

ಇತರರಿಂದ ಪ್ರೋತ್ಸಾಹ ಸಿಗದಿರುವುದೂ ಸಹ ನಮ್ಮನ್ನು ವೇದನೆಗೊಳಪಡಿಸುತ್ತದೆ. ಉದಾ – ಮಗುವೊಂದು ಪರೀಕ್ಷೆಯಲ್ಲಿ 92% ರಷ್ಟು ಅಂಕಗಳಿಸಿ ಉತ್ತಮ ಫಲಿತಾಂಶವನ್ನು ಪಡೆದರೂ ಸಹ "ನಿನ್ನ ಸಹೋದರನಿಗೆ 96% ರಷ್ಟು ಸಿಕ್ಕಿದೆಯಲ್ಲಾ" ಎಂದೋ ಅಥವಾ ಈ ಅತ್ಯುತ್ತಮ ಫಲಿತಾಂಶದ ಬಗ್ಗೆ ಯಾವುದೇ ಪ್ರತಿಕ್ರಿಯೆ ಕೊಡದಿರುವುದು ಇದು ನಾನು ಪ್ರಾಮುಖ್ಯವಲ್ಲ ಅಥವಾ ಅವರಿಗೆ ನನ್ನಲ್ಲಿ ಆಸಕ್ತಿ ಇಲ್ಲವೆಂಬ ಮನೋಭಾವ ಹುಟ್ಟಿಸಬಹುದು. ಅದೂ ಸಹ ವೇದನೆಗೊಳಿಸುವ ಸಂಗತಿಯಾಗಿರುವುದರಿಂದ ಅವರನ್ನೂ ನಾವು ಕ್ಷಮಿಸಬೇಕಿದೆ ಹಾಗೂ ಕ್ಷಮಿಸಲು ಸಹಾಯಿಸುವಂತೆ ದೇವರನ್ನು ಬೇಡಿಕೊಳ್ಳಬೇಕಿದೆ.

### ಸಾಕ್ಷಿ

#### *ನಕಾರಾತ್ಮಕ ಮಾತುಗಳ ಶಕ್ತಿಯನ್ನು ಮುರಿದ ಕ್ರಿಸ್ತನು*

*"ಬಹುಕಾಲಗಳಿಂದ ಆಯಾಸ (ದಣಿವು) ಖಾಯಿಲೆಯಿಂದ ಬಳಲುತ್ತಿದ್ದ ವ್ಯಕ್ತಿಗಾಗಿ ನಾವು ಪ್ರಾರ್ಥಿಸಿದ ನಂತರ ಯಾರಾದರೂ ನಿಮಗೆ ವಿರುದ್ಧವಾಗಿ ನಕಾರಾತ್ಮಕವಾದ ಮಾತುಗಳನ್ನಾಡಿರುವರೋ ಎಂದು ಅವನನ್ನು ಕೇಳಲಾಗಿ ಅನೇಕ ವರ್ಷಗಳ ಹಿಂದೆ "ನೀನು ಯಾವ ಪ್ರಯೋಜನಕ್ಕೂ ಬಾರದವ" ನೆಂದು ಅವನ ತಂದೆಯು ಹೇಳಿರುವುದನ್ನು ನೆನಪಿಸಿ ಕೊಂಡನು. ಈ ಮಾತುಗಳು ಅವನ ಜೀವನದಲ್ಲಿ ಒಂದು ಶಾಪದಂತೆ ಕಾರ್ಯ ಮಾಡುತ್ತಿತ್ತು. ಅವನು ತನ್ನ ತಂದೆಯನ್ನು ಕ್ಷಮಿಸಿ ಆಶೀರ್ವದಿಸಿದ 3 ದಿನಗಳ ನಂತರ ಅವನ ತಂದೆಯು ಕನಸಿನಲ್ಲಿ ಯೇಸುವನ್ನು ದರ್ಶಿಸಿದನು ಹಾಗೂ ಆತನೊಂದಿಗೆ ಸರಿಯಾದ ಸಂಬಂಧವನ್ನು ಹೊಂದಿರುವುದಿಲ್ಲ ಎಂಬುದನ್ನು ತಿಳಿದು ಪಶ್ಚಾತ್ತಾಪಪಟ್ಟು ಯೇಸುವನ್ನು ತನ್ನ ಹೃದಯ ದೊಳಕ್ಕೆ ಅಂಗೀಕರಿಸಿಕೊಂಡು ಹೊಸದಾಗಿ ಹುಟ್ಟಿದನು ಮತ್ತು ಅವರ ಸಂಬಂಧವೂ ಸಹ ಸರಿಮಾಡಲ್ಪಟ್ಟಿತು."*

ಕೆಲವು ಸನ್ನಿವೇಶಗಳಲ್ಲಿ ನಮ್ಮ ತೀರ್ಪುಗಳು ಪರಿಸಾಯನಂತೆ ***(ಲೂಕ 18:9–14)*** ತಪ್ಪಾಗಿರುತ್ತವೆ ಹಾಗೂ ನಾವು ಮಾಡುವ ಹರಕೆಗಳಾಗಲೀ ಅಥವಾ ನಾವಾಡುವ ನಕಾರಾತ್ಮಕ ಮಾತುಗಳಾಗಲೀ ವಿನಾಶಕಾರಕವಾದ ಪರಿಣಾಮಗಳನ್ನುಂಟು ಮಾಡಬಲ್ಲದು ***(ನ್ಯಾಯ 11:29–35).*** ಕೆಲವು ಸನ್ನಿವೇಶಗಳಲ್ಲಿ ನಮ್ಮ ವಿಷಯದಲ್ಲೇ ನಾವಾಡುವ ಮಾತುಗಳಾಗಲೀ ಅಥವಾ ಚಿಂತನೆಗಳೇ ಆಗಲಿ ಬಹಳ ನಕಾರಾತ್ಮಕವಾಗಿರಬಹುದು. ಉದಾ: – "ನಾನೊಬ್ಬ

ನಿರುಪಯುಕ್ತ" ಅಥವಾ "ಸಾಯುವುದೇ ಲೇಸು" ಈ ರೀತಿಯ ಮಾತು/ಆಲೋಚನೆಗಳು ನಮ್ಮ ಜೀವಿತಾವಧಿಯಲ್ಲಿ ಶಾಪಗಳಂತೆ ಕಾರ್ಯ ನಿರ್ವಹಿಸಿ ಹತಾಶೆ (ನಿರಾಸೆ) ಯಂತಹ ಮನೋರೋಗವನ್ನು ಉಂಟು ಮಾಡುವ ಮೂಲಕ ಆತ್ಮಹತ್ಯೆಗೂ ಕಾರಣವಾಗಬಲ್ಲದು.

ನಮ್ಮ ವಿಷಯದಲ್ಲಿ ನಾವು ಮಾಡುವ ತಪ್ಪಾದ ತೀರ್ಪುಗಳ ಬಗ್ಗೆ ಪಶ್ಚಾತ್ತಾಪಪಡಬಹುದಾಗಿದೆ ಹಾಗೂ ಅವುಗಳ ನಿಮಿತ್ತ ನಮಗುಂಟಾಗಬಹುದಾದ ದೋಷಗಳಿಂದ ವಿಮೋಚಿಸುವಂತೆ ದೇವರನ್ನು ಬೇಡಿಕೊಳ್ಳೋಣ.

**ನಿಮಗೆ ವಿರುದ್ಧವಾಗಿ ನಕಾರಾತ್ಮಕ ವಿಧಾನದಲ್ಲಿ ಮಾತನಾಡಿರುವವರನ್ನು ಕ್ಷಮಿಸಲಿರುವ ಪ್ರಾರ್ಥನಾ ಮಾರ್ಗಸೂಚಿ**

- ನಿಮ್ಮನ್ನು ತಮ್ಮ ಮಾತುಗಳಿಂದ ವೇದನೆ ಪಡಿಸಿರುವವರನ್ನು ಮನ್ನಿಸಿರಿ
- ಪಾಪಮಯವಾಗಿ ನೀವು ಪ್ರತಿಕ್ರಿಯಿಸಿದ್ದರೆ ಪಶ್ಚಾತಾಪಪಡಿರಿ
- ನಿಮಗೆ ವಿರುದ್ಧವಾಗಿ ಮಾತನಾಡಿರುವ ಪ್ರತಿಯೊಂದು ನಕಾರಾತ್ಮಕ ಮಾತುಗಳ ಶಕ್ತಿಯನ್ನು ಯೇಸುವಿನ ನಾಮದಲ್ಲಿ ಮುರಿಯಿರಿ
- ನಿಮ್ಮನ್ನು ಶಪಿಸಿರುವವರನ್ನು ಆಶೀರ್ವದಿಸಿರಿ
- ಯೇಸುವನ್ನು ಇನ್ನೊಮ್ಮೆ ನಿಮ್ಮ ಹೃದಯದೊಳಕ್ಕೆ ಆಹ್ವಾನಿಸಿರಿ ಹಾಗೂ ಪವಿತ್ರಾತ್ಮನಿಂದ ಸಂಪೂರ್ಣವಾಗಿ ತುಂಬಿಸುವಂತೆ ಪ್ರಾರ್ಥಿಸಿರಿ

ಹೃದಯಾಂತರಾಳದಿಂದ ಪ್ರಾರ್ಥಿಸಬೇಕಾದ ಮಾದರಿಯನ್ನು ಕೆಳಗೆ ನಮೂದಿಸಲಾಗಿದೆ.

**ನನಗೆ ವಿರುದ್ಧವಾಗಿ ಇತರರು ಆಡಿರುವ ನಕಾರಾತ್ಮಕ ಮಾತುಗಳ ಶಕ್ತಿಯಿಂದ ವಿಮುಕ್ತಿಗಾಗಿ ಪ್ರಾರ್ಥನೆ**



"ಪರಲೋಕದಲ್ಲಿರುವ ಪ್ರಿಯ ತಂದೆಯೇ, ಯೇಸುವಿನ ನಾಮದಲ್ಲಿ ನನಗೆ ವಿರುದ್ಧವಾಗಿ ಮಾತನಾಡಲ್ಪಟ್ಟಿರುವ ದೈವೀಕವಲ್ಲದ ತೀರ್ಪುಗಳನ್ನು ಹಾಗು ನಕಾರಾತ್ಮಕವಾದ ಮಾತುಗಳನ್ನು ಗ್ರಹಿಸಿಕೊಂಡಿರುವೆನು (ನಿನಗೆ ವಿರುದ್ಧವಾಗಿ ಹೇಳಲ್ಪಟ್ಟಿರುವ **ವಿಶಿಷ್ಟವಾದ** ನಕಾರಾತ್ಮಕ ಮಾತುಗಳನ್ನು ಕರ್ತನ ಮುಂದೆ ಹೇಳಿಕೊಳ್ಳಿರಿ **ಅವರ ಹೆಸರುಗಳನ್ನೂ ಅವರು ಹೇಳಿರುವ ನಕಾರಾತ್ಮಕ ಮಾತುಗಳನ್ನೂ ಹಾಗೂ ಹೇಳದೇ ಇದ್ದ ಸಕಾರಾತ್ಮಕ ಮಾತುಗಳನ್ನೂ ಉಚ್ಛರಿಸಿರಿ**). ನಕಾರಾತ್ಮಕವಾದ ವಿಧಾನದಲ್ಲಿ ನನಗೆ ವಿರುದ್ಧವಾಗಿ ಹೇಳಲ್ಪಟ್ಟಿರುವ ಎಲ್ಲಾ ವಿಧದ ಶಾಪಗಳನ್ನೂ, ಮಾತುಗಳನ್ನೂ ಅಲ್ಲಗಳೆಯುತ್ತೇನೆ. ಅಂತಹವರನ್ನು ನಾನು ಕ್ಷಮಿಸುತ್ತಿದ್ದೇನೆ ಹಾಗೂ ಅವುಗಳಿಂದ ಉಂಟಾಗಬಹುದಾದ ಪರಿಣಾಮಗಳಿಂದ ನನ್ನನ್ನು ಬಿಡಿಸುವಂತೆ ಬೇಡಿಕೊಳ್ಳುತ್ತಿದ್ದೇನೆ. ದಯವಿಟ್ಟು ನನ್ನ ಶರೀರ, ಪ್ರಾಣ, ಆತ್ಮಗಳಿಗೆ ಸೌಖ್ಯ ಕೊಟ್ಟು ಬಿಡುಗಡೆ ಮಾಡಿರಿ, ವಂದನೆಗಳು, ಆಮೆನ್."

ನಾವಾಡಿರುವ ನಕಾರಾತ್ಮಕವಾದ ಮಾತುಗಳಿಗೆ ಪರಿಹಾರಾರ್ಥವಾಗಿ ಕರ್ತನು ನಮ್ಮೊಂದಿಗೆ ಹೇಳಬಯಸುತ್ತಿರುವುದನ್ನು ಪುಟ 102-104 ರಲ್ಲಿ ಗಮನಿಸಿರಿ.

# ಹಣಕಾಸಿನ ಸಮಸ್ಯೆಗಳಿಂದ ವಿಮುಕ್ತಿ



*"ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಹಾಕಿಕೊಂಡು ಬುದ್ಧಿ ವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಸೆಗಳಲ್ಲಿ ಬೀಳುತ್ತಾರೆ. ಇಂಥಾ ಆಸೆಗಳು ಮನುಷ್ಯರನ್ನು ಸಂಹಾರ ನಾಶಗಳಲ್ಲಿ ಮುಳುಗಿಸುತ್ತದೆ. ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತ ನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ"* ***(1 ತಿಮೊಥಿ 6:9–10).***

ಹಣ ಹಾಗೂ ಐಶ್ವರ್ಯದ ಮೂಲಕ ಉಂಟಾಗಲಿರುವ ನಾಶನದ ಬಗ್ಗೆ ಯೇಸು ತನ್ನ ಸಾಮ್ಯಗಳಲ್ಲಿ ಇತರೆಲ್ಲ ವಿಷಯಗಳಿಗಿಂತಲೂ ಅಧಿಕವಾಗಿ ಮಾತನಾಡಿ ತನ್ನ ಹಿಂಬಾಲಕರನ್ನು ಎಚ್ಚರಿಸಿರುವನು. ಜೀವಿಸಲು ನಮ್ಮೆಲ್ಲರಿಗೂ ಹಣಕಾಸಿನ ಅಗತ್ಯವಿದೆ ಆದರೆ ಹಣದಾಸೆಯು ನಾಶನಕ್ಕೆ ನಡೆಸುತ್ತದೆ. ನಾವು ದೇವರಲ್ಲಿ ಭರವಸೆಯುಳ್ಳವರಾಗಿರುವಾಗ ದೇವರು ಸಕಲವನ್ನೂ ನಮಗೆ ಒದಗಿಸುತ್ತಾನೆ ಹಾಗೂ ಅವುಗಳ ನಿಮಿತ್ತ ಆತನನ್ನು ಪ್ರೀತಿಸಬೇಕೆಂದೂ ಬಯಸುತ್ತಿರುವನು. ವ್ಯಕ್ತಿಯೊಬ್ಬನು ಅಂತಿಮವಾಗಿ ತನ್ನ ಕಿಸೆ(ಹಣ)ಯ ವಿಷಯದಲ್ಲೂ ಮಾನಸಾಂತರಪಡಬೇಕೆಂದು ಕೆಲವರು ಹೇಳುವುದುಂಟು. ಹಣಕ್ಕಿಂತಲೂ ಅಧಿಕವಾಗಿ ದೇವರಲ್ಲೇ ಭರವಸೆ ಇಡಬೇಕೆಂಬುದೇ ನಾವು ಅಂತಿಮವಾಗಿ ಕಲಿತ ವಿಷಯವಾಗಿರಬಹುದಷ್ಟೆ. ಲೌಕಿಕವಾದ ಅನೇಕ ವಿಚಾರಗಳು ನಮ್ಮ ಮನಸ್ಸನ್ನು ಸ್ವಾಧೀನಪಡಿಸಿರುವುದರಿಂದ ಈ ವಿಷಯದಲ್ಲಿ ಬಹಳಷ್ಟು ತಪ್ಪುಗ್ರಹಿಕೆಗಳು ನಮ್ಮಲ್ಲಿ ಆಳವಾಗಿ ಬೇರೂರಿವೆ.

ದೇವರಿಗಿಂತಲೂ ಅಧಿಕವಾಗಿ ಶ್ರೀಮಂತಿಕೆಯನ್ನೇ ನಾವು ಬಯಸುವುದಾದಲ್ಲಿ ಅದರಿಂದುಂಟಾಗುವ ಸಮಸ್ಯೆಗಳೇ ಹೆಚ್ಚಾಗಿರುತ್ತದೆ. ಅಧಿಕ ಹಣ ಹೊಂದುವುದರಿಂದ ಯಾವುದೇ ಸಮಸ್ಯೆಗಳಿರದು. ಆದರೆ ಅದರ ವಿಷಯದಲ್ಲಿ ನಾವು ನಂಬಿಗಸ್ತರೂ, ಸಂಕಷ್ಟದಲ್ಲಿರುವವರಿಗೆ ಸಹಾಯಕರೂ ಹಾಗೂ ಶ್ರೇಷ್ಠ ಆಜ್ಞೆಯ ನೆರವೇರಿಕೆಗಾಗಿ ಉದಾರವಾಗಿ ಕೊಡುವವರೂ ಆಗಿರಬೇಕೆಂಬುದೇ ದೇವರ ಇಚ್ಚೆಯಾಗಿದೆ ***(ಮತ್ತಾಯ 25:34–46; ಲೂಕ 12:33–34; ಯಾಕೋಬ 5:1–6).***

ತಾವು ಸಂಪಾದಿಸಿರುವ ಅಥವಾ ಕೃಷಿಯ ಮೂಲಕ ಪಡೆದುಕೊಂಡಿರುವ ಸಂಪನ್ಮೂಲಗಳಲ್ಲಿ ಹತ್ತರಲ್ಲೊಂದು ಭಾಗವನ್ನು ಹಳೆಯ ಒಡಂಬಡಿಕೆಯಲ್ಲಿ ದೇವರಿಗೆ ಕೊಡುವ ನಿಯಮ(ಪದ್ಧತಿ)ವು ಅಬ್ರಹಾಮನಿಂದ ಆರಂಭವಾಗಿ ***(ಆದಿ 14:20)*** ಯಾಕೋಬನಿಂದ ಮುಂದುವರೆಸಲ್ಪಟ್ಟಿತು ***(ಆದಿ 28:22)*** ಹಾಗೂ ಮೋಶೆಯ ಧರ್ಮಶಾಸ್ತ್ರದ ಮೂಲಕವಾಗಿ ಸ್ಥಾಪಿಸಲ್ಪಟ್ಟಿರುತ್ತದೆ ***(ಯಾಜಕ 27:30–32).*** ಹಳೆಯ ಒಡಂಬಡಿಕೆಯ ಜನರು ತಮ್ಮ ಕೃಷಿ–ಬೆಳೆ–ಫಲ ಕೆಲಸಗಳ ಮೂಲಕ ಪಡೆದ ಪ್ರಥಮ ಶೇಕಡಾ 10 ರಷ್ಟು

ಫಲ/ಸಂಪಾದನೆಯನ್ನು ದೇವರಿಗರ್ಪಿಸುತ್ತಿದ್ದರು. ದಶಮ ಭಾಗವು ಪರಿಶುದ್ದವೂ ದೇವರಿಗೆ ಮೀಸಲಾದದ್ದೂ ಆಗಿದೆ. ದಶಮ ಭಾಗವು ಕನಿಷ್ಠ ಭಾಗವಾಗಿದೆ. "ದೇವರ ಕೃಪೆಯ ಸುವಾರ್ತೆಯ ಮೂಲಕ ನಾವು ಧಾರಾಳವಾಗಿ ಆಶೀರ್ವದಿಸಲ್ಪಟ್ಟಿರುವುದರಿಂದ ಶೇಕಡಾ ಹತ್ತಕ್ಕಿಂತ ಹೆಚ್ಚಾಗಿ ಕೊಡುವ ಹಂಬಲವಿರಬೇಕೇ ಹೊರತು ಕಡಿಮೆಯಲ್ಲ" – (ಡಂಕನ್ ವ್ಯಾಟ್‌ಕಿನ್‌ಸನ್ 2014).

ಯೇಸು ಹೇಳಿದ್ದು "ಹಾಗಾದರೆ ಕೈಸರನದನ್ನು ಕೈಸರನಿಗೆ ಕೊಡಿರಿ, ದೇವರದನ್ನು ದೇವರಿಗೆ ಕೊಡಿರಿ" ***(ಮತ್ತಾಯ 22:21; ಮಾರ್ಕ 12:17; ಲೂಕ 20:25).***

ಬೋಧಕರೊಬ್ಬರ ಪ್ರಕಾರ ದಶಮ ಭಾಗವು–"ಈ ಭೂಲೋಕದಲ್ಲಿ ನಾವು ಜೀವಿಸುತ್ತಾ ವಾಯುವಿನಿಂದ ಶ್ವಾಸೋಚ್ಚಾರಣೆ ಮಾಡುತ್ತಿರುವುದಕ್ಕೆ ನಾವು ಕೊಡುತ್ತಿರುವ ಬಾಡಿಗೆಯಾಗಿದೆ". ಶೇಕಡಾ 10 ಕ್ಕಿಂತ ಹೆಚ್ಚಾಗಿ ದೇವರಿಗೆ ನಾವು ಕೊಡುವುದೇ ಕಾಣಿಕೆಯಾಗಿದೆ. ಈ ಕೊಡುವಿಕೆಗಳನ್ನು ದೇವರು ಆಶೀರ್ವದಿಸಿದನು. ಲೇಖಕರ ಅನುಭವಗಳ ಪ್ರಕಾರ ಹಣಕಾಸಿನ ತೊಂದರೆಗಳಲ್ಲಿರುವ ದೇವಜನರನ್ನು ತಾವು ಸಂಧಿಸಿರುವ ಕಡೆಗಳೆಲ್ಲಾ ಅವರು ಕನಿಷ್ಠ ಹತ್ತರಲ್ಲೊಂದು ಭಾಗವನ್ನು ಕೊಡದವರಾಗಿದ್ದಾರೆಂಬ ಸತ್ಯವನ್ನು ಒಪ್ಪಿಕೊಂಡಿದ್ದಾರೆಂಬುದನ್ನು ಗ್ರಹಿಸಿಕೊಂಡಿದ್ದಾರೆ. ದಶಮ ಭಾಗ ಕೊಡದಿರುವುದೇ ಸೇವಾ ಕ್ಷೇತ್ರದಲ್ಲಿನ ಹಣಕಾಸಿನ ಮುಗ್ಗಟ್ಟುಗಳಿಗೂ ಕಾರಣವಾಗಿದೆ. ದಶಮಭಾಗದ ಹೊರೆಯನ್ನು ನಮ್ಮಿಂದ ಹೊರಲಾಗದೆಂಬುದು ಲೌಕಿಕ ಅವಲೋಕನವಾಗಿದೆ ***(ಅರಣ್ಯ 18:25–26).*** ಆದರೆ ದಶಮಭಾಗ ಕೊಡದಿರುವುದರ ನಿಮಿತ್ತದಿಂದಾಗಿ ನಮ್ಮ ಮೇಲಿದ್ದ ದೈವೀಕ ಸಂರಕ್ಷಣೆಯ ಹಸ್ತವು ತೆಗೆಯಲ್ಪಡುತ್ತದೆ ಹಾಗೂ ನಮ್ಮ ಹಣವು ಅದು ತಲುಪಬೇಕಾದ ಸೂಕ್ತ ಸ್ಥಳವನ್ನು ತಲುಪುತ್ತಿಲ್ಲ. ಉದಾ: – ಯಂತ್ರಗಳು ಕೆಟ್ಟುಹೋಗಬಹುದು, ಆಹಾರವು ಹಳಸಿ ಹೋಗುವುದು ಹಾಗೂ ಸಾಲಭಾರಗಳು ಹೆಚ್ಚುತ್ತವೆ. ಸ್ವಾಭಾವಿಕ ವಿಧಾನದಲ್ಲಿ ನಮಗೆ ಅಗತ್ಯವಿರುವಷ್ಟು ಹಣವು ನಮ್ಮಲ್ಲಿಲ್ಲದೆ ಇದ್ದರೂ ಪ್ರಥಮವಾದುದ್ದನ್ನು ದೇವರಿಗೇ ಕೊಡುವುದಾದಲ್ಲಿ ನಮ್ಮಲ್ಲಿ ಸಾಕಷ್ಟು ಉಳಿಯಲಿದೆಯೆಂದು ದೇವರು ಹೇಳುತ್ತಿದ್ದಾನೆ.

**ದಶಮ ಭಾಗದ ಲೆಕ್ಕಾಚಾರ**

1. ನಿಮ್ಮ ಒಂದು ವಾರದ / ತಿಂಗಳಿನ ಸಂಪೂರ್ಣ ಆದಾಯವು ರೂ. 5000/– ಎಂದು ಊಹಿಸಿರಿ. (ನೀ ಒಬ್ಬ ವ್ಯಾಪಾರಿಯಾಗಿದ್ದರೆ ನಿಮ್ಮ ಒಂದು ವಾರದ/ತಿಂಗಳಿನ ಸಂಪೂರ್ಣ ಆದಾಯಕ್ಕೆ ಸಂಬಂಧಿಸಿದಂತೆ)
2. ರೂ. 5000/– ವನ್ನು 10 ರಿಂದ ಭಾಗಾಕಾರ (ಡಿವೈಡ್) ಮಾಡಿರಿ
3. ರೂ. 5000/– = ರೂ. 500/– ಗಳು
4. ಈ ಉದಾಹರಣೆಯಲ್ಲಿ ನೀವು ನಿಮ್ಮ ಸ್ಥಳೀಯ ಸಭೆಗೆ ಸಲ್ಲಿಸಬೇಕಿರುವ ದಶಮ ಭಾಗವು ರೂ. 500/– ಆಗಿರುತ್ತದೆ.

ಸಂಪೂರ್ಣ ಸತ್ಯವೇದದಲ್ಲಿ ತನ್ನನ್ನು ಪರೀಕ್ಷಿಸಿ ನೋಡುವಂತೆ ದೇವರು ಹೇಳಿರುವ ಏಕ ಸನ್ನಿವೇಶವನ್ನು ಕೆಳಗೆ ಕೊಡಲಾಗಿದೆ–*"ಈ ಜನಾಂಗದವರೆಲ್ಲರೂ ನನ್ನಿಂದ ಕದ್ದುಕೊಳ್ಳುವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ, ನನ್ನ ಆಲಯವು ಆಹಾರ ಶೂನ್ಯವಾಗದಂತೆ ನೀವು ದಶಮಾಂಶ ಯಾವತ್ತೂ ಭಂಡಾರಕ್ಕೆ ತೆಗೆದುಕೊಂಡು ಬನ್ನಿರಿ. ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾರದಷ್ಟು ಸುವರವನ್ನು ಸುರಿಸುವೆನೋ*

*ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ..." **(ಮಲಾಕಿ 3:8–12).***

[ಇಲ್ಲಿ ಭಂಡಾರ ಎಂಬ ಪದಕ್ಕೆ ನಾವು ಆತ್ಮೀಕವಾಗಿ ಪೋಷಣೆ ಹೊಂದುತ್ತಿರುವ ಸಭೆಯೆಂಬ ಅರ್ಥವಿದೆ ***(ಧರ್ಮೋ 14:22–23).***]

ದಯವಿಟ್ಟು ಗಮನಿಸಿರಿ ನಾವು ಅಭ್ಯುದಯದ ಸುವಾರ್ತೆಯನ್ನು ಸಾರದೆ ಅದಕ್ಕೆ ಬದಲಾಗಿ ಕೇವಲ ವಾಕ್ಯಕ್ಕೆ ವಿದೇಯತ್ವವನ್ನು ಒತ್ತಿ ಹೇಳುವವರಾಗಿದ್ದೇವಷ್ಟೇ. ನಾವು ದೇವರ ಮುಂದೆ ಯಥಾರ್ಥರಾಗಿರಬೇಕು, ನಾವು ದಶಮಭಾಗವನ್ನು ಕೊಡದವರಾಗಿದ್ದಲ್ಲಿ ದೇವರದನ್ನು ಕದಿಯುವವರಾಗಿರುವಾಗ ನಾವು ಪಶ್ಚಾತ್ತಾಪಪಟ್ಟು ಕ್ಷಮಿಸುವಂತೆ ದೇವರನ್ನು ಬೇಡಿಕೊಳ್ಳೋಣ. ನಾವು ಅಂಗಗಳಾಗಿರುವ ಸಭೆಗೆ ನಮ್ಮ ಆದಾಯಗಳ ಹತ್ತರಲ್ಲೊಂದು ಭಾಗವನ್ನೇ ಖಂಡಿತವಾಗಿಯೂ ಸಲ್ಲಿಸಲಿರುವುದಾಗಿ ದೇವರಿಗೆ ವಾಗ್ದಾನ ಮಾಡಿರಿ.

**ದಶಮಭಾಗ ಸಲ್ಲಿಸದಿರುವುದಕ್ಕಾಗಿನ ಪಶ್ಚಾತ್ತಾಪದ ಪ್ರಾರ್ಥನೆ**[5]



"ಪರಲೋಕದಲ್ಲಿರುವ ನನ್ನ ಪ್ರೀತಿಯ ತಂದೆಯೇ, ಭೂಮ್ಯಾಕಾಶಗಳಲ್ಲಿರುವ ಸಕಲವೂ ನಿನ್ನದೇ ಎಂದು ನಾನು ಗ್ರಹಿಸಿರುವೆನು ***(ಅ.ಕೃ. 17:24).*** ನನ್ನ ವಶದಲ್ಲಿರುವುದೆಲ್ಲವನ್ನೂ ನೀನೇ ನನಗೆ ಕೊಟ್ಟಿರುವುದಕ್ಕಾಗಿ ವಂದನೆಗಳು. ಈ ದಶವುಭಾಗವು ಪವಿತ್ರವೆಂದೂ ಅದು ನಿನಗೇ ಸಲ್ಲಿಸಬೇಕಾಗಿರುವುದೆಂದೂ ನಾನು ಬಲ್ಲವನಾಗಿದ್ದೇನೆ. ನೀನು ನನಗೆ ಕೊಟ್ಟಿರುವುದನ್ನು ನಿನಗೇ ತಿರುಗಿ ಕೊಡದಿರುವುದಕ್ಕಾಗಿ ನನ್ನನ್ನು ಮನ್ನಿಸಿರಿ ***(ಮಲಾಕಿ 3).***"

"ಈ ದಿನ ಮೊದಲುಗೊಂಡು ನನ್ನ ಎಲ್ಲಾ ಆದಾಯಗಳಲ್ಲಿ ಹತ್ತರಲ್ಲೊಂದು ಭಾಗವನ್ನು ನಿನಗೇ ಸಮರ್ಪಿಸಲು ದಯವಿಟ್ಟು ಸಹಾಯಿಸಬೇಕೆಂದು ಬೇಡಿಕೊಳ್ಳುತ್ತಿದ್ದೇನೆ. ಇಂದಿನಿಂದಲೇ ನಾನು ಇತರರಿಗೂ ಹಾಗೂ ನಿನ್ನ ರಾಜ್ಯದ ಅಭಿವೃದ್ಧಿಗಾಗಿಯೂ ಹಣಕಾಸಿನ ವಿಷಯದಲ್ಲಿ ನಾನೊಬ್ಬ ಆಶೀರ್ವಾದ ಪಾತ್ರನಾಗಿರುವಂತೆ ಮಾರ್ಪಡಿಸಿರಿ."

"ಕ್ರಮಬದ್ಧವಾಗಿ ನಿನಗೆ ಸೇರಬೇಕಾದುದ್ದನ್ನು ಕೊಡದಿರುವುದಕ್ಕಾಗಿ ಈ ದಿನ ಪಶ್ಚಾತ್ತಾಪ ಪಡುತ್ತಿದ್ದೇನೆ. ನನ್ನನ್ನು ದಯವಿಟ್ಟು ಕ್ಷಮಿಸಿರಿ ಹಾಗೂ ಈದಿನ ಮೊದಲುಗೊಂಡು ನನ್ನ ಎಲ್ಲಾ ಆದಾಯಗಳಲ್ಲಿ ಹತ್ತರಲ್ಲೊಂದು ಭಾಗವನ್ನು ನಿನಗೆ ಕೊಡಲು ನನ್ನನ್ನೇ ಸಮರ್ಪಿಸಿಕೊಳ್ಳುತ್ತಿದ್ದೇನೆ. ಈ ಮುಂಚಿನಿಂದಲೂ ನಿನಗೆ ಕೊಡಬೇಕಾಗಿರುವುದನ್ನು ಕೊಡದಿರುವುದರಿಂದ ಉಂಟಾದ ಎಲ್ಲಾ ಪರಿಣಾಮಗಳಿಂದ ನಿನ್ನ ಕೃಪೆಯ ಮೂಲಕ ನನ್ನನ್ನು ವಿಮೋಚಿಸಿರಿ. ನೀನು ನಮಗೋಸ್ಕರ ಮಾಡುತ್ತಿರುವ ಆಲೋಚನೆಗಳು ಹಿತದ ಆಲೋಚನೆಗಳೇ ಹೊರತು ಅಹಿತದ ಆಲೋಚನೆಗಳಲ್ಲದಿರುವುದಕ್ಕಾಗಿ ***(ಯೆರೆ 29:11)*** ಯೂ ನುಂಗುವ ಹುಳವನ್ನು ತಡೆದಿರುವುದಕ್ಕಾಗಿಯೂ ***(ಮಲಾಕಿ 3:11)*** ತಂದೆಯೇ ವಂದನೆಗಳು. ಯೇಸುವಿನ ನಾಮದಲ್ಲಿ, ಆಮೆನ್."

[5] *ಕ್ಲೈವ್ ಪಿಕ್‌ರವರ, ದಿ ರವಲೇಶನ್ ಆಫ್ ಫೈನಾನ್ಸಿಯಲ್ ರಿನಿವಲ್, 1998, ನ್ಯೂ ವೈನ್ ಮಿನಿಸ್ಟ್ರೀಸ್.*

> **ಸಾಕ್ಷಿ**
> **ಯೇಸು ನನ್ನನ್ನು ಇತರರಿಗೆ ಆಶೀರ್ವಾದವನ್ನಾಗಿ ಮಾರ್ಪಡಿಸಿದ್ದು**
>
> *"ಸಂಪೂರ್ಣ ದಶವು ಭಾಗವು ಪವಿತ್ರವೆಂದೂ ಅದು ದೇವರಿಗೆ ಮೀಸಲೆಂದೂ ಅದನ್ನು ಸ್ಥಳೀಯ ಸಭೆಗೆ ಅರ್ಪಿಸಬೇಕೆಂಬುದನ್ನೂ 14 ವರ್ಷಗಳ ಹಿಂದೆಯೇ ಕಲಿತು ಆ ವಿಷಯದಲ್ಲಿ ಪಶ್ಚಾತ್ತಪಪಟ್ಟು ಸರಿಯಾಗಿ ಸಮರ್ಪಿಸಲು ಆರಂಭಿಸಿದೆನು. ಇದಕ್ಕೂ ಮೊದಲು ನಾನು ದೊಡ್ಡ ಸಾಲಗಾರನಾಗಿದ್ದು ವೈವಾಹಿಕ ಜೀವನವೂ ಸಹ ಸಂಕಷ್ಟದಲ್ಲಿತ್ತು. ಆದರೆ ಈಗ ನಮ್ಮ ಸಾಲಗಳೂ ಸಹ ತೀರಿಸಲ್ಪಟ್ಟಿದೆ ಹಾಗೂ ವೈವಾಹಿಕ ಜೀವನವೂ ಸಹ ಭದ್ರವಾಗಿದೆ. ನಾವೀಗ ಅನೇಕರನ್ನೂ ಅವರ ಸಾಲಗಳಿಂದ ಮುಕ್ತರಾಗಿಸಿ ದೈವೀಕ ಕರೆಯೆಡೆಗೆ ಅವರನ್ನು ಪ್ರೋತ್ಸಾಹಿಸುತ್ತಿದ್ದೇವೆ."*

ಹೊಸ ಒಡಂಬಡಿಕೆಯಲ್ಲಿನ ದಶವುಭಾಗದ ವಿಧಾನವು ಲೌಕಿಕ ಅವಲೋಕನಗಳಿಗಿಂತಲೂ ಅಧಿಕ ಸವಾಲಿನ ಸಂಗತಿಯಾಗಿದೆ. ಜನಸ್ತೋಮಕ್ಕೆ ಯೇಸು ಹೇಳಿದ್ದೇನೆಂದರೆ "ನಿನ್ನನ್ನು ಬೇಡುವವನಿಗೆ ಕೊಡು ***(ಮತ್ತಾಯ 5:42; ಲೂಕ 6:30)*** ಹಾಗೂ ನಿಮಗಿರುವುದನ್ನು ಮಾರಿ ಬಿಟ್ಟು ದಾನ ಕೊಡಿರಿ" ***(ಲೂಕ 12:33).*** ಐಶ್ವರ್ಯವಂತನಾದ ಯೌವನಸ್ಥನಿಗೆ ಆತನು ಹೇಳಿದ್ದೇನೆಂದರೆ ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಹಂಚಿಕೊಡು ***(ಮಾರ್ಕ 10:21; ಲೂಕ 18:22).*** ಆರಂಭಿಕ ಕಾಲದ ಸಭೆಯವರೂ ಸಹ ಯಾರಿಗೂ ಕೊರತೆಯಾಗದಂತೆ ತಮ್ಮದೆಲ್ಲವನ್ನು ಇತರರಿಗೂ ಹಂಚಿ ಕೊಡುತ್ತಿದ್ದರು ***(ಅ.ಕೃ 2:45).*** ಇದೇ ರೀತಿಯ ಮನೋಭಾವವುಳ್ಳವರಾಗಿರುವಂತೆ ಪತ್ರಿಕೆಗಳಲ್ಲಿಯೂ ನಮ್ಮನ್ನು ಪ್ರೋತ್ಸಾಹಿಸಲಾಗಿದೆ ***(2 ಕೊರಿ 8:11–15, 9:7–15; 1 ಯೋಹಾನ 3:17).*** ದಶಮಭಾಗ ಕೊಡುವುದನ್ನು ನಾವು ಕರಗತ ಮಾಡಿಕೊಳ್ಳುವಾಗ ದೇವರು ನಮ್ಮನ್ನು ಧಾರಾಳವಾಗಿ ಆಶೀರ್ವದಿಸುವುದರ ಮೂಲಕವಾಗಿ ಇತರರಿಗೆ ಇನ್ನೂ ಉದಾರವಾಗಿ (ಹೆಚ್ಚಾಗಿ) ಕೊಡುವ ಸವಾಲನ್ನು ಹೊಂದಲಿದ್ದೇವೆ.

*"ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವನು, ಪ್ರತಿಯೊಬ್ಬನೂ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ. ದುಃಖದಿಂದಾಗಲೀ ಬಲಾತ್ಕಾರದಿಂದಾಗಲೀ ಯಾರೂ ಕೊಡಬಾರದು. ಯಾಕೆಂದರೆ ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು. ದೇವರು ಸಕಲ ವಿಧವಾದ ದಾನಗಳನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವುದಕ್ಕೆ ಶಕ್ತನಾದ್ದರಿಂದ ನೀವು ಯಾವಾಗಲೂ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರಾಗಿ ಸಕಲ ಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರಬೇಕು"* ***(2 ಕೊರಿ 9:6–8).***

ಅನೇಕರು ಅನೇಕ ಕಾರಣಗಳ ನಿಮಿತ್ತ ಸಾಲಗಾರರಾಗಿ ಮಾರ್ಪಡುತ್ತಾರೆ. ಉದಾ – ಆಸ್ಪತ್ರೆ ಖರ್ಚುಗಳು, ಕುಟುಂಬದ ಹಾಗೂ ಸ್ನೇಹಿತರ ಅಗತ್ಯತೆಗಳು. ದೇವರ ಮಕ್ಕಳಲ್ಲಿ ಅನೇಕರು ಸಾಲಗಾರರಾಗಿದ್ದಾರೆ, ಅದು ಸಾಮಾನ್ಯವಾದದ್ದೆಂದು ಲೌಕಿಕ ವಿಧಾನದಲ್ಲೇ ಚಿಂತಿಸುವವರಾಗಿದ್ದಾರೆ. ನಮಗೆ ಯಾವ ಸಾಲವೂ ಇರಬಾರದೆಂದು ಸತ್ಯವೇದವು ಹೇಳುತ್ತದೆ ***(ರೋಮಾ 13:8).*** ಇಲ್ಲದಿದ್ದಲ್ಲಿ ನಾವು ದೇವರಿಗೆ ಬದಲಾಗಿ ಸಾಲ ಕೊಟ್ಟವನಿಗೆ ಸೇವಕರಾಗಿ ***(ಜ್ಞಾನೋಕ್ತಿ 22:7)*** ಮಾರ್ಪಡುತ್ತೇವೆ. ಸಾಲವು ಹತಾಶೆಗೆ ನಡೆಸುವುದರ ನಿಮಿತ್ತ ಅದು ಆತ್ಮಹತ್ಯೆಗೂ ಕಾರಣವಾಗಿದೆ. ದೇವರು ನಮಗೆ ಒದಗಿಸಿರುವ ಸಂಪನ್ಮೂಲಗಳ ವಿಷಯದಲ್ಲಿ ಒಳ್ಳೆಯ ಮನೆವಾರ್ತೆಯವರಾಗುವುದನ್ನೂ ನಮ್ಮ ಅಗತ್ಯತೆಗಳಿಗಾಗಿ ಆತನನ್ನೇ ಆಶ್ರಯಿಸುವುದನ್ನು ನಾವು ಕಲಿಯಬೇಕಿದೆ ***(ಫಿಲಿಪ್ಪಿ 4:6).*** ಹಣದ ಮೇಲಿನ ಪ್ರೀತಿ ಹಾಗೂ

ದುರಾಶೆಗಳಿಂದ ನಾವು ಸಾಲಗಾರರಾಗಿದ್ದರೆ ಪಶ್ಚಾತ್ತಾಪಪಟ್ಟು ಕ್ಷಮಿಸುವಂತೆ ದೇವರನ್ನು ಬೇಡಿಕೊಳ್ಳೋಣ ಹಾಗೂ ಕರ್ತನ ಸಹಾಯದಿಂದ ಸಾಲವನ್ನು ಬೇಗನೆ ತೀರಿಸಲು ತೀರ್ಮಾನಿಸಿಕೊಳ್ಳಿರಿ.

*"ನೀವು ದೇವರನ್ನೂ ಧನವನ್ನೂ ಸೇವಿಸಲಾರಿರಿ"* ***(ಮತ್ತಾಯ 6:24).***


ಸಾಲದಿಂದ ವಿಮುಕ್ತರಾಗಬೇಕಾಗಿದ್ದಲ್ಲಿ ನಮ್ಮಲ್ಲಿರುವ ಹಣವನ್ನು ನಾವು ಬಯಸುವ ವಿಷಯಗಳಿಗಾಗಿ ಬಳಸದೆ ಅಗತ್ಯವಿರುವ ವಿಷಯಗಳಿಗಾಗಿ ಮಾತ್ರ ಬಳಸೋಣ. ನಮ್ಮಿಂದ ವ್ಯಯಮಾಡಲು (ಸಹಿಸಲು) ಅಸಾಧ್ಯವಾಗಿರುವುದನ್ನು ಕೊಂಡುಕೊಳ್ಳದಿರೋಣ. ಇತರರಲ್ಲಿರುವ ಯಾವುದನ್ನೂ ಆಶಿಸಬಾರದು ***(ವಿಮೋ 20:17).*** ನಮ್ಮಲ್ಲಿರುವ ಹಣಕ್ಕಿಂತಲೂ ಅಧಿಕ ಬೆಲೆಯದನ್ನು ಕೊಂಡುಕೊಳ್ಳಬೇಕಿದ್ದಲ್ಲಿ ಪ್ರತಿ ಸಾರಿಯೂ ನಮ್ಮ ಕೈಗೆ ಹಣ ಸಿಕ್ಕುವಾಗ ಅದರಲ್ಲಿ ಅಲ್ಪ ಹಣವನ್ನು ಆ ಉದ್ದೇಶಕ್ಕಾಗಿ ಪ್ರತ್ಯೇಕಿಸಿಡೋಣ.

**ದೇವರ ವಾಕ್ಯವು ನಮಗೆ ಹೇಳುತ್ತಿರುವುದೇನೆಂದರೆ** – ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಟ್ಟಲ್ಲಿ ದೇವರು ಎಲ್ಲವನ್ನೂ ನಮಗೆ ಒದಗಿಸುವನು ***(ಮತ್ತಾಯ 6:19–34; ವಿಶೇಷವಾಗಿ ವಚನ 6:33).*** ಈ ವಿಷಯದಲ್ಲಿ ನಮ್ಮಲ್ಲಿ ಅನೇಕರಿಗೆ ಲೌಕಿಕವಾದ ಅಭಿಪ್ರಾಯಗಳಿರುವುದರಿಂದ ಶ್ರೇಷ್ಟವಾದ ಪುನರ್‌ವಿಮರ್ಶೆ (ಕ್ರಮಪಡಿಸಿಕೊಳ್ಳುವಿಕೆಯ) ಅಗತ್ಯತೆಯುಂಟು. ಆದರೆ ನಾವು ವಿಧೇಯತ್ವವುಳ್ಳವರಾಗಿ ದೈವೀಕ ಒದಗಿಸುವಿಕೆಗಳಲ್ಲಿ ಭರವಸೆಯುಳ್ಳವರಾಗಿದ್ದರೆ ಆತನೇ ನಮ್ಮೊಂದಿಗಿದ್ದು ನಮ್ಮ ಎಲ್ಲಾ ಅಗತ್ಯತೆಗಳನ್ನೂ ಪೂರೈಸುವುದನ್ನು ನಾವು ಕಣ್ಣಾರೆ ಕಾಣಲಿದ್ದೇವೆ ***(ಕೀರ್ತನೆ 23:1).***

> ದೈವೀಕ ಕಾರ್ಯವನ್ನು ದೈವೀಕ ವಿಧಾನದಲ್ಲಿ ಮಾಡುವವರಿಗೆ ದೈವೀಕ ಒದಗಿಸುವಿಕೆ ಹಾಗೂ ಸಂಪನ್ಮೂಲಗಳ ಕೊರತೆ ಉಂಟಾಗದು.
>
> (ಹಡ್ಸನ್ ಟೈಲರ್)

ಸುವಾರ್ತೆಯ ಪ್ರಸಾರಕ್ಕಾಗಿಯೂ ಸಹ ನಾವು ಧಾರಾಳವಾಗಿ ಕೊಡಬೇಕೆಂದು ಹೊಸ ಒಡಂಬಡಿಕೆಯು ನಮಗೆ ಬೋಧಿಸುತ್ತದೆ. ಭವಿಷ್ಯದಲ್ಲಿ ಹಣಕಾಸಿನ ಸಂಕಷ್ಟ ಉಂಟಾಗಬಹುದೆಂಬ ಭೀತಿಯಲ್ಲಿ ನಮ್ಮಲ್ಲಿ ಅನೇಕರು ಇದನ್ನು ಸಾಕಷ್ಟು ರೀತಿಯಲ್ಲಿ ಕೊಡುತ್ತಿಲ್ಲ. ಆದರೆ ದೈವೀಕ ದೃಷ್ಟಿಕೋನದಲ್ಲಿ ಹೇಳುವುದಾದಲ್ಲಿ ಅತೀ ಕಡಿಮೆ ಕೊಟ್ಟಷ್ಟೂ ಅತೀ ಹೆಚ್ಚು ಭಯಪಡಬೇಕಾಗುತ್ತದೆ ***(ಯಾಕೋಬ 5:1–6; 3 ಯೋಹಾನ 5–8).***

# ದೈವೀಕ ಸ್ವಾಸ್ಥ್ಯತೆಗೆ ತಿರುಗಿ ಬಾಧ್ಯಸ್ಥರಾಗುವುದು



ಸಾಮಾನ್ಯವಾಗಿ ಜನರು ನೋಡಲು ತಮ್ಮ ತಂದೆ – ತಾಯಿಗಳಂತೆಯೇ ಅಥವಾ ತಮ್ಮ ಬಂಧುಗಳಂತೆಯೇ ಇರುವರು. ಶಾರೀರಿಕವಾದ ಸ್ಥಿತಿಗತಿ ಹಾಗೂ ಆತ್ಮೀಕ ಗುಣಸ್ವಭಾವಗಳನ್ನೂ ಸಹ ನಮ್ಮ ಹಿರಿಯರಿಂದಲೇ ಹೊಂದಿರುತ್ತೇವೆ. ನಮ್ಮ ತಂದೆ – ತಾಯಿಗಳಿಂದಲೇ ನಾವು ಅವುಗಳನ್ನು ಕಲಿತಿರುತ್ತೇವೆ. ದೈವೀಕ ಉದ್ದೇಶವಾಗಿದ್ದ ಒಳ್ಳೆಯ ಕಾರ್ಯಗಳಾದ ಅನೇಕ ಭಾಷೆಗಳನ್ನು ಅರಿತಿರುವುದು ಅಥವಾ ಇತರರಿಗೆ ಸಹಾಯಿಸುವುದು ಅವುಗಳೊಂದಿಗೆ ಕೆಟ್ಟತನವೂ ಸಹ ತಲೆಮಾರುಗಳಿಗೆ ಕೊಡಲ್ಪಡುತ್ತಿದೆ. ಕೆಲವು ವಿಶಿಷ್ಟವಾದ ಸಮಸ್ಯೆಗಳು ಮತ್ತು ಪಾಪಗಳಾದ (ಲೈಂಗಿಕ ಪಾಪ, ಆರ್ಥಿಕ ದಿವಾಳಿತನ, ಮದ್ಯಪಾನ) ಗಳಿಗೆ ಕುಟುಂಬದ ಹಿನ್ನೆಲೆ ಇದ್ದು ತಲೆಮಾರುಗಳ ಕೊಡುಗೆಯಾಗಿರಬಹುದು.

ಎಲ್ಲಾ ಪಾಪಗಳನ್ನೂ ತಲೆಮಾರುಗಳ ಪಾಪವೆನ್ನಬಹುದು, ಕಾರಣ ಆದಾಮ – ಹವ್ವರಿಂದಲೇ ಪಾಪವು ಎಲ್ಲಾ ತಲೆಮಾರುಗಳಿಗೆ ನೀಡಲ್ಪಟ್ಟಿದೆ. ಅರಿಕೆ ಮಾಡದಿರುವ ನಮ್ಮ  ಪೂರ್ವಿಕರ ಪಾಪವು ಜನರನ್ನು ವಿಶೇಷವಾಗಿ ನಮ್ಮ ಸ್ವಂತ ಕುಟುಂಬ ಸದಸ್ಯರ ಮೇಲೆ ಹಾಗೂ ಕೆಲವು ಅಸ್ವಸ್ಥತೆಗಳ ಮೂಲಕ ಸೈತಾನನಿಗೆ ಆಕ್ರಮಣ ಮಾಡಲು ಅವಕಾಶ ಮಾಡಿಕೊಟ್ಟಂತೆಯೇ ಆಗಿರುತ್ತದೆ.

ದೈವೀಕ ನಿಯಮವನ್ನು ಮುರಿಯುವಾಗ ಪಾಪವು ಉದ್ಭವವಾಗುತ್ತದೆ ಹಾಗೂ ಅಂತಹ ವ್ಯಕ್ತಿಯ ಮೇಲೆ ಶಾಪವೂ ಸಹ ಕಾರ್ಯಮಾಡಲಾರಂಭಿಸಿ ಅವರ ಬಂದುಬಾಂಧವರ ಹಾಗೂ ತಮ್ಮ ತಲೆಮಾರುಗಳನ್ನು ಬಾಧಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ.

ದಶಾಜ್ಞೆಗಳಲ್ಲೂ ಇದನ್ನೇ ಗಮನಿಸುತ್ತಿದ್ದೇವೆ ***(ವಿಮೋ 20:4–6).*** ದೇವರನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ದೋಷಫಲವನ್ನು 3–4 ತಲೆಗಳವರೆಗೂ ಆಜ್ಞೆಗಳಿಗೆ ವಿಧೇಯರಾಗುವವರ ವಿಷಯದಲ್ಲಿ ಸಾವಿರ ತಲೆಗಳವರೆಗೂ ಆಶೀರ್ವಾದವಿರುವುದೆಂದು ಹೇಳಲಾಗಿದೆ. ಅನೈತಿಕತ್ವದಿಂದುಂಟಾಗುವ ಪಾಪವು ಹತ್ತನೇ ತಲೆಗಳವರೆಗೂ ಇರುವುದು ***(ಧರ್ಮೋ 23:2).***

ದೇವರು ಒಳ್ಳೆಯವನು, ಕರುಣೆ ಹಾಗೂ ಪ್ರೀತಿಸ್ವರೂಪನೂ ಆಗಿರುವದರಿಂದ ಪಾಪದ ನಿಮಿತ್ತ ಆತನಿಂದ ನಾವು ಬೇರ್ಪಡಬೇಕೆಂಬುದನ್ನು ಅಥವಾ ನಮ್ಮ ಸ್ವಂತ ಪಾಪ ಶಾಪ ಅಥವಾ ನಮ್ಮ ಪೂರ್ವಜರ ಪಾಪಗಳ ನಿಮಿತ್ತ ನಾವು ನಕಾರಾತ್ಮಕವಾದ ಭಾಧೆಗಳನ್ನು ಅನುಭವಿಸಬೇಕೆಂಬುದನ್ನು ಕರ್ತನು ಬಯಸುತ್ತಿಲ್ಲ. ಆದರೆ ಈ ವಿಷಯದಲ್ಲಿ ನಾವು ನಮಗೇ ಸಹಾಯಮಾಡಲು ಶಕ್ತರಲ್ಲದಿರುವದರಿಂದಲೇ ಆತನು ಯೇಸುಕ್ರಿಸ್ತನ ಮೂಲಕ ನಮಗೆ ಉತ್ತರವನ್ನು ಕೊಟ್ಟಿದ್ದಾನೆ ಸ್ತೋತ್ರ.

ರಕ್ತಧಾರೆಯಿಲ್ಲದೇ ಪಾಪ ಪರಿಹಾರ ಉಂಟಾಗುವುದಿಲ್ಲವೆಂದು ಬೈಬಲ್ ಹೇಳುತ್ತಿದೆ ***(ಇಬ್ರಿಯ 9:22)***. ಅದು ತನ್ನಷ್ಟಕ್ಕೆ ತಾನೇ ಪರಿಹಾರವಾಗದು (ಅಳಿಸಿಹೋಗದು) ***(ನೆಹೆ 1:6–7)***. ಒಳ್ಳೆಯವರಾಗಲಿಕ್ಕಿರುವ ನಮ್ಮ ಪ್ರಯತ್ನ ಅಥವಾ ಮರೆಯುವಿಕೆಯ ನಿಮಿತ್ತವೂ ಪಾಪವು ನಮ್ಮಿಂದ ದೂರವಾಗದು. ಪಾಪವನ್ನು ಕ್ಷಮಿಸೆಂದು ಬೇಡಿಕೊಳ್ಳುವವರೆಗೂ ಅದು ಅಳಿಸಿಹೋಗದು. ಆಗ ಯೇಸು ನಮ್ಮನ್ನು ಕ್ಷಮಿಸುವನು ಹಾಗೂ ಆತನ ರಕ್ತವು ನಮ್ಮನ್ನು ಸಂಪೂರ್ಣವಾಗಿ ತೊಳೆದು ನೀತೀಕರಿಸುವುದು. ನಾವು ನಮ್ಮ ತಂದೆತಾಯಿಯವರನ್ನೂ, ನಮ್ಮ ಪಿತೃಗಳನ್ನೂ ಕ್ಷಮಿಸುವ ಮೂಲಕವಾಗಿ ಅವರ ಪಾಪ ಹಾಗೂ ನಕಾರಾತ್ಮಕವಾದ ಕುಟುಂಬದ ಪಾಪಗಳಿಂದ ಬಿಡುಗಡೆ ಹೊಂದುತ್ತೇವೆ. ಅದರಂತೆಯೇ ನಾವು ಪಶ್ಚಾತ್ತಾಪ ಪಡುವುದಕ್ಕನುಗುಣವಾಗಿ ನಮ್ಮ ಮಕ್ಕಳೂ (ತಲೆಮಾರುಗಳೂ) ಸಹ ನಾವು ಮಾಡಿರುವ ಪಾಪ ಹಾಗೂ ನಕಾರಾತ್ಮಕವಾದ ಸಮಸ್ಯೆಗಳಿಂದ ವಿಮುಕ್ತರಾಗಿರುವರು.

ಹಾಗೆ ಅರಿಕೆ ಮಾಡಿದ್ದಲ್ಲಿ ಯೇಸು ನಮ್ಮೆಲ್ಲಾ ಪಾಪಗಳನ್ನು ಕ್ಷಮಿಸಿ ರಕ್ತದ ಮೂಲಕ ತೊಳೆದು ನೀತೀಕರಿಸುವನು. ನಮ್ಮ ಕುಟುಂಬಗಳಲ್ಲಿನ ನಕರಾತ್ಮಕವಾದ ಪರಿಣಾಮಗಳಿಂದ ಬಿಡುಗಡೆಗಾಗಿ ಆ ಪಾಪಗಳಿಗಾಗಿ ಪಶ್ಚಾತ್ತಾಪಪಡುವುದೊಂದೇ ಪರಿಹಾರವಾಗಿದೆ.

ಯೇಸು ನಮ್ಮ ಪಾಪಗಳನ್ನೂ ಅದರ ಪರಿಣಾಮಗಳನ್ನೂ ತನ್ನ ಶರೀರದಲ್ಲಿ ವಹಿಸಿಕೊಂಡನು. ನಮ್ಮ ಹಾಗೂ ನಮ್ಮ ಪಿತೃಗಳ ಪಾಪಗಳ ಪರಿಣಾಮಗಳಿಂದ ನಮ್ಮನ್ನು ಸ್ವತಂತ್ರರನ್ನಾಗಿಸುವುದಕ್ಕಾಗಿನ ಶಿಕ್ಷೆಯನ್ನೂ ಆತನೇ ಅನುಭವಿಸಿದನು.

*"ಅಧರ್ಮವು ನಿಮ್ಮನ್ನು ನಾಶ ಮಾಡದಂತೆ ತಿರುಗಿಕೊಂಡು ನಿಮ್ಮ ಅಪರಾಧಗಳೆನ್ನೆಲ್ಲಾ ಬಿಟ್ಟುಬಿಡಿರಿ"* ***(ಯೆಹೆಜ್ಕೆ 18:30–32).***

## ಸಾಕ್ಷಿ

**ತನ್ನ ಮಕ್ಕಳೆಲ್ಲರೂ ಶಾಪಕ್ಕೆ ಅಧೀನರಾಗಿದ್ದಾರೆಂಬುದನ್ನು ಅರಿತ ತಂದೆಯೊಬ್ಬನು ಕ್ರಿಸ್ತನಲ್ಲಿಗೆ ಬಂದದ್ದು**

*"ನನ್ನ ತಂದೆಗೆ ಅನೇಕ ಸ್ತ್ರೀಯರೊಂದಿಗೆ ಅನೈತಿಕ ಸಂಬಂಧವಿದ್ದು ಅದು ನನ್ನ ತಾಯಿಯನ್ನು ಮದ್ಯಪಾನದ ಚಟಕ್ಕೆ ತಿರುಗಿಸಿತು. ನನ್ನ ತಂದೆ – ತಾಯಿ ಅಜ್ಜ – ಅಜ್ಜಿಯರೂ ಸಹ ಮಾಟ – ಮಂತ್ರ ಗಳನ್ನು ನಡೆಸುತ್ತಿದ್ದರು. ನನ್ನ ಸಹೋದರ ಸಹೋದರಿಯರ ಕುಟುಂಬಗಳೂ, ಮಕ್ಕಳೂ ಸಹ ಇದೇ ದುಃಖಕರವಾದ ಕ್ರಮದಲ್ಲೇ ಮುಂದುವರೆದಿದ್ದರು. ಇವೆಲ್ಲಾ ಸತ್ಯಗಳನ್ನು ಒಮ್ಮೆ ನನ್ನ ತಂದೆಯವರಿಗೆ ವಿವರಿಸಿ ವಂಶಾನುಕ್ರಮವಾಗಿ ಪಾಪವು ಹೇಗೆ ಮಕ್ಕಳ ಹಾಗೂ ಮೊಮ್ಮಕ್ಕಳ ಮೇಲೆ ಕಾರ್ಯ ನಿರ್ವಹಿಸುತ್ತಿದೆಯೆಂದು ವಿವರಿಸಿಕೊಟ್ಟೆನು. ಆಗ ತನ್ನನ್ನೂ ಹಾಗೂ ತನ್ನವರನ್ನೂ ಶಾಪದಿಂದ ಮುರಿದು ವಿಮುಕ್ತಿಗೊಳಿಸಲು ಶಕ್ತನಾದ ಯೇಸುವಿನ ಅಗತ್ಯತೆಯನ್ನು ಅರಿತೆನು. ಅವನು ಮಾನಸಾಂತರಪಟ್ಟು ತನ್ನನ್ನು ಕ್ಷಮಿಸಿ ತನ್ನ ಕುಟುಂಬದಿಂದ ಶಾಪವನ್ನು ನಿವಾರಿಸುವಂತೆ ಮೊಣಕಾಲೂರಿ ಯೇಸುವನ್ನು ಬೇಡಿಕೊಂಡನು. ಈಗ ನಮ್ಮ ತಂದೆಯವರು ತನ್ನ ಕೈಗಳನ್ನೆತ್ತಿ ಯೇಸುವನ್ನು ಸ್ತುತಿಸುತ್ತಿರುವುದನ್ನು ನೋಡಿ ಸಂತೋಷಪಡುತ್ತಿದ್ದೇನೆ. ಈಗ 1 ವರ್ಷ ದಾಟಿತು ಮೊದಲಿನಿಂದಲೂ ನಮ್ಮ ಕುಟುಂಬದಲ್ಲೇ "ಕ್ರಿಸ್ತ ವಿರೋಧಿ" ಯಂತಿದ್ದ ನನ್ನ ಸಹೋದರಿಯೂ ಸಹ ಕ್ರಿಸ್ತ ನಂಬಿಕೆಗೆ ಬಂದಿರುವಳು."*

ನಾವು ಹೊಸದಾಗಿ ಹುಟ್ಟುವಾಗಲೇ ನಮ್ಮ ಎಲ್ಲಾ ಪಾಪಗಳೂ ನೀಗಿಸಲ್ಪಟ್ಟು, ನೀತಿವಂತರಾಗಿ ಮಾರ್ಪಟ್ಟು ದೇವರ ಕುಟುಂಬದ ಅಂಗಗಳಾಗಿ ಮಾರ್ಪಡುತ್ತೇವೆ. ಆದರೆ ಪಾಪದ ಪರಿಣಾಮಗಳು ನೀಗಿಸಲ್ಪಡಲಿಲ್ಲ. ಉದಾ: ನಾವು ಇತರರ ಹಣವನ್ನು ಕದ್ದಿದ್ದರೆ ದೇವರು ಕ್ಷಮಿಸಬಲ್ಲನು, ಆದರೆ ಆ ಹಣವನ್ನು ಅವನಿಗೆ ಹಿಂದಿರುಗಿಸಬೇಕಾದದ್ದು ನನ್ನ ಜವಾಬ್ದಾರಿಕೆಯಾಗಿರುತ್ತದೆ ಹಾಗೂ ಕಾನೂನಾತ್ಮಕ ನಿಯಮಗಳು ಅದಕ್ಕುಂಟು. ಯೇಸು ನನ್ನ ಸಾಲವನ್ನೆಲ್ಲಾ ತಾನೇ ವಹಿಸಿಕೊಂಡಿದ್ದರೂ ನಾನು ಕದ್ದಿರುವುದನ್ನು ನಾನೇ ಹಿಂತಿರುಗಿಸಬೇಕು. ಆ ಕಳ್ಳತನದ ಪರಿಣಾಮಗಳು ಕುಟುಂಬ, ಮಕ್ಕಳು, ಮೊಮ್ಮಕ್ಕಳ ಮೇಲೂ ಆ ನಂತರ ಪೋಲಿಸರು, ನಮ್ಮ ಸಮಾಜದ ಮೇಲೂ ಉಂಟಾಗಬಹುದಾಗಿದ್ದು **ನಮ್ಮ ಪಾಪವೆಂದೂ ಖಾಸಗಿ ವಿಷಯವಾಗಿರದು.**


ಬಹಳ ದುಃಖಕರವಾದ ವಿಷಯವೊಂದನ್ನು 2 ಸಮುವೇಲ 11 ರಲ್ಲಿ ವಿವರಿಸಲಾಗಿದೆ. ಅರಸನಾದ ದಾವೀದನು ಹಿತ್ತೀಯನಾದ ಊರೀಯನ ಹೆಂಡತಿಯಾಗಿದ್ದ ಬತ್ಷೆಬೆಯನ್ನು ಮೋಹಿಸಿ ಅವಳೊಂದಿಗೆ ವ್ಯಭಿಚಾರ ಮಾಡಿದನು. ಅವಳು ಗರ್ಭಧರಿಸಿದಾಗ ಆ ಅಪರಾಧವನ್ನು ಊರೀಯನ ಮೇಲೆ ಹಾಕುವ ಕುತಂತ್ರ ಮಾಡಿ ತಾನು ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದನು. ಊರೀಯನು ದಾವೀದನ ಮೋಸದ ಬಲೆಗೆ ಬೀಳದಿದ್ದಾಗ ಊರೀಯನನ್ನು ಯುದ್ಧದಲ್ಲಿ ಸತ್ತು ಬೀಳುವಂತೆ ಮಾಡುವಲ್ಲಿ ದಾವೀದನು ಯಶಸ್ವಿಯಾದನು. ಈ ವಿಷಯದಲ್ಲಿ ದಾವೀದನು ಪಶ್ಚಾತ್ತಾಪಪಟ್ಟರೂ ಪಾಪದ ಫಲವಾಗಿ ಹುಟ್ಟಿದ ಆ ಮಗು ಸತ್ತು ಹೋಯಿತು (ಆ ಮಗುವಿನ ರಕ್ಷಣೆಗಾಗಿ ಅವನು ಉಪವಾಸವಿದ್ದು ಪ್ರಾರ್ಥಿಸಿದ್ದನು). ಆದರೆ ದಾವೀದನು ಮಾಡಿದ ಈ ನೀಚಕೃತ್ಯದ ನಿಮಿತ್ತ ಅವನ ಅನೇಕ ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರೂ ಸಹ ಅದರ ಪರಿಣಾಮವನ್ನು ಎದುರಿಸಿದರು. ದಾವೀದನ ಪಾಪವನ್ನು ದೇವರು ಕ್ಷಮಿಸಿದರೂ ಅದರ ಪ್ರಭಾವವು ಹಾಗೆಯೇ ಅವನ ಸಂತಾನದವರ ಮೇಲೆಯೇ ಉಳಿದುಕೊಂಡಿತ್ತು.

ಒಮ್ಮೆ ಪಾಪ ಮಾಡುವಾಗ ಮತ್ತೆ ಮಾಡಬೇಕೆನ್ನುವ ತವಕ ಸಾಮಾನ್ಯವಾಗಿ ಉಂಟಾಗುತ್ತದೆ. ಅದರಂತೆಯೆ ನಮ್ಮ ಪಿತೃಗಳು ಮಾಡಿದ ತಪ್ಪುಗಳನ್ನು ನಾವೂ ಮಾಡುವ ಹಂಬಲ ನಮ್ಮಲ್ಲಿ ಉಂಟಾಗುತ್ತದೆ. ಆದರೆ ಆ ವಿಶಿಷ್ಟವಾದ ತಪ್ಪುಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದ್ದಲ್ಲಿ ದೇವರು ಅದನ್ನು ಕ್ಷಮಿಸುವನು ಹಾಗೂ ಆ ಪಾಪದ "ಮೂಲ" ಬಾಗಿಲನ್ನು ದೇವರೇ ಮುಚ್ಚುವಂತೆ ಕೇಳಿಕೊಳ್ಳೋಣ. ಶಾಪವಿದ್ದಲ್ಲಿ ಅದರ ಶಕ್ತಿಯನ್ನು ಮುರಿದು ಅದರ ಪ್ರಭಾವದಿಂದ ನಮ್ಮನ್ನು ವಿಮುಕ್ತರನ್ನಾಗಿಸುವಂತೆ ಯೇಸುವಿನ ಅಧಿಕಾರವುಳ್ಳ ನಾಮದಲ್ಲಿ ಬೇಡಿಕೊಳ್ಳೋಣ ಹಾಗೂ ಅದರ ಪರಿಣಾಮಗಳನ್ನು ತನ್ನ ರಕ್ತದಲ್ಲಿ ತೊಳೆಯುವಂತೆ ಕೇಳಿಕೊಳ್ಳೋಣ.

*"ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು, ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು"* ***(1 ಪೇತ್ರ 2:24; ಯೆಶಾಯ 53:5–6).***

*"ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗುಹಾಕಲ್ಪಟ್ಟ ಪ್ರತಿಯೊಬ್ಬನೂ ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದಿದೆಯಲ್ಲಾ"* ***(ಗಲಾತ್ಯ 3:14).***

ನಾವು ಹೊಸದಾಗಿ ಹುಟ್ಟಿದ ತಕ್ಷಣವೇ ಕೆಲವು ಪಾಪಗಳು ಹಾಗೂ ಶಾಪಗಳೂ ನೀಗಿಸಲ್ಪಟ್ಟರೂ ಸಹ ಕೆಲವು ಅದರ ಪರಿಣಾಮಗಳನ್ನುಂಟುಮಾಡುತ್ತಲೇ ಇರುತ್ತವೆ. ಧರ್ಮೋಪದೇಶ 27–28 ನೇ ಅಧ್ಯಾಯದಲ್ಲಿ ವಿಧೇಯತ್ವದಿಂದ ಉಂಟಾಗಲಿರುವ ಅನೇಕ ಆಶೀರ್ವಾದಗಳನ್ನೂ, ಅವಿಧೇಯತ್ವದಿಂದ ಉಂಟಾಗಲಿರುವ ಶಾಪಗಳನ್ನೂ ವಿವರಿಸಲಾಗಿದೆ. ದೇವರೊಂದಿಗಿನ ಅನ್ಯೋನ್ಯತೆಯ ಮೂಲಕವಾಗಿ ಎಲ್ಲಾ ಆಶೀರ್ವಾದಗಳನ್ನು ನಾವು ಪಡೆಯಬೇಕೆಂಬುದೇ ಆತನ ಬಯಕೆಯಾಗಿದೆ. ಆದರೆ ಅನೇಕರು ದೇವರ ವಾಗ್ದಾನಕ್ಕನುಗುಣವಾದ ಸಂಪೂರ್ಣ ಆಶೀರ್ವಾದಗಳನ್ನು ಹೊಂದಲಾಗುತ್ತಿಲ್ಲ, ಅದರ ಕಾರಣ ನಾವಿನ್ನೂ ವಿವಿಧ ಶಾಪದ ಅಧೀನದಲ್ಲೇ ಇದ್ದೇವೆ.




ನಮ್ಮ ಸ್ವಂತ ಕುಟುಂಬಗಳ ಬಗ್ಗೆ ಅಧ್ಯಯನ ಮಾಡಲು ಸ್ವಲ್ಪ ಸಮಯವನ್ನು ಪ್ರಾರ್ಥನಾ ಪೂರ್ವಕವಾಗಿ ವ್ಯಯ ಮಾಡುವುದು ಯುಕ್ತವಾಗಿರುತ್ತದೆ. (ಕುಟುಂಬ ಚರಿತ್ರೆಯ ಚಿತ್ರಪಟದ ಭಾಗವನ್ನು ಕೊನೆಯಲ್ಲಿ ಗಮನಿಸಿರಿ.)

• ನಮ್ಮ ತಂದೆ–ತಾಯಿಯಲ್ಲಿ, ಅಜ್ಜ–ಅಜ್ಜಿಯಲ್ಲಿ, ಮುತ್ತಜ್ಜ–ಮುತ್ತಜ್ಜಿಯಲ್ಲಿ ತೋರಿಬರುತ್ತಿರುವ ಒಳ್ಳೆಯ ದೈವೀಕ ಗುಣಸ್ವಭಾವಗಳಾವುವು? ನಮ್ಮ ಬಂಧು–ಭಾಂದವರಲ್ಲಿ ಈ ದೈವೀಕ ಗುಣಸ್ವಭಾವಗಳನ್ನು ಹೊಂದಿರುವವರು ಯಾರು?

• ನಮ್ಮ ಮೂಲಪಿತೃಗಳಲ್ಲಿ ನಮಗೆ ಕಂಡುಬರುತ್ತಿರುವ **ಆತ್ಮೀಕವಲ್ಲದ** ಕೆಟ್ಟ ಗುಣಸ್ವಭಾವಗಳಾವುವು? ಈ ಕೆಟ್ಟ ಗುಣಸ್ವಭಾವಗಳನ್ನು ಹೊಂದಿದ್ದ ನಮ್ಮ ಮೂಲಪಿತೃ ಯಾರು? ಉದಾಹರಣೆಗೆ–ಲೈಂಗಿಕತ್ವ, ಮದ್ಯಪಾನ, ಮುರಿದು ಹೋದ ಸಂಬಂಧಗಳು, ನಿಯಂತ್ರಣವಿಲ್ಲದ ಕೋಪ, ಗಂಭೀರ ಮನೋಭಾವಗಳು, ಪಿತೃಗಳಿಂದ ಕೊಡಲ್ಪಟ್ಟ ಭೀಕರವಾದ ರೋಗಗಳಿಂದ ಬಹಳಷ್ಟು ಜನ ಸಂಕಟ ಪಟ್ಟಿರುವವರುಂಟೋ?

ಖಂಡಿತವಾಗಿಯೂ ನಮ್ಮ ಕುಟುಂಬಗಳಲ್ಲಿ ನಾವು ಒಳ್ಳೆಯ ವ್ಯಕ್ತಿತ್ವ ಗುಣಸ್ವಭಾವವುಳ್ಳವರಾಗಿರಲು ಇಚ್ಚಿಸುತ್ತೇವೆ. ಹಾಗಾದರೆ ಕೆಟ್ಟ ಸ್ವಭಾವಗಳ ಬಗ್ಗೆ ಏನೆನ್ನುವಿರಿ? ಆತ್ಮೀಕವಲ್ಲದ ಕುಟುಂಬದಲ್ಲಿನ ಗುಣಸ್ವಭಾವಗಳಿಂದ ನಾವು ಹೇಗೆ ವಿಮುಕ್ತರಾಗಬಹುದು?

ವ್ಯಕ್ತಿ ಅಥವಾ ಕುಟುಂಬವೊಂದು ಶಾಪಕ್ಕಧೀನದಲ್ಲಿದೆಯೇ ಎಂದು ಹೇಗೆ ಕಂಡು ಹಿಡಿಯಬಹುದೆಂಬುದನ್ನು ಸತ್ಯವೇದ ಪಂಡಿತರೂ ಆಗಿರುವ ಡೆರಿಕ್ ಪ್ರಿನ್ಸ್‌ರವರು ತಮ್ಮ ಅಧ್ಯಯನಗಳು ಹಾಗೂ ವಿಶಿಷ್ಟವಾಗಿ ಧರ್ಮೋ 28:15–68 ವಾಕ್ಯದಡಿಯಲ್ಲಿ 7 ವಿಷಯಗಳನ್ನು ಈ ಕೆಳಗಿನಂತೆ ವಿವರಿಸಿರುವರು

1. ಮಾನಸಿಕ ಖಾಯಿಲೆಯ ಚರಿತ್ರೆಯುಳ್ಳವರು
2. ಸೌಖ್ಯವಾಗದ ಧೀರ್ಘ ಕಾಲದ ರೋಗಗಳು–ವಿಶಿಷ್ಟವಾಗಿ ಅನುವಂಶೀಕ ಖಾಯಿಲೆಗಳು
3. ಸ್ತ್ರೀಯರಿಗೆ ಸಂಬಂಧಿಸಿದಂತೆ ಮತ್ತೆ ಮತ್ತೆ ಗರ್ಭಸ್ರಾವಗಳು ಹಾಗು ಇತರೆ ಸಮಸ್ಯೆಗಳು
4. ಕುಟುಂಬಗಳಲ್ಲಿ ವಿಚ್ಛೇದನ ಹಾಗೂ ಬೇರ್ಪಟ್ಟು ಜೀವಿಸುವಿಕೆಗಳು
5. ಹಣಕಾಸಿನ – ಸಾಲ ಮುಗ್ಗಟ್ಟುಗಳು
6. ಸರಣಿ ಅಪಘಾತಗಳಿಗೆ ತುತ್ತಾಗುವಿಕೆ
7. ಕುಟುಂಬದಲ್ಲಿ ಆತ್ಮಹತ್ಯೆ ಅಥವಾ ನೈಸರ್ಗಿಕವಲ್ಲದ (ಅಕಾಲಿಕ) ಮರಣಗಳು.

ಆದರೆ ಇವೆಲ್ಲವುಗಳಿಂದ ವಿಮುಕ್ತರಾಗಲು ಇಗೋ ನಿಮಗಾಗಿ ಪರಿಹಾರದ ಶುಭವಾರ್ತೆ. ಯೇಸು ಕ್ರಿಸ್ತನು ಮಾತ್ರವೇ ಪ್ರತಿಯೊಂದು ಪಾಪಕ್ಕೂ ಶಾಪಕ್ಕೂ ಪರಿಹಾರವಾಗಿದ್ದಾನಷ್ಟೆ, ನಿಮ್ಮೆಲ್ಲಾ ಪಾಪ ಶಾಪಗಳನ್ನು ನೀಗಿಸುವ ಶಕ್ತಿ, ಅಧಿಕಾರ ಕೇವಲ ಯೇಸುವಿನ ರಕ್ತಕ್ಕೂ ನಾಮಕ್ಕೂ ಉಂಟು. ಶಾಪವು ವ್ಯಕ್ತಿಯೊಬ್ಬನ ಮೇಲೆ ಅವನ ಸ್ವಂತ ಪಾಪ ಅಥವಾ ತನ್ನ ಪೂರ್ವಜರ ಪಾಪದಿಂದಲೋ ಅಥವಾ ಬೇರೊಬ್ಬನು ಆ ವ್ಯಕ್ತಿಯನ್ನೇ ಗುರಿಯಾಗಿಸಿ ಮಾಡಿರುವ ಮಾಟಮಂತ್ರಗಳ ಶಕ್ತಿ ಅಥವಾ ತಿಳಿಯದೇ ಆಡಿರುವ ನಕಾರಾತ್ಮಕ ಮಾತುಗಳ ಉಚ್ಚರಣೆಗಳಿಂದಲೇ ತಗಲಿದ್ದರೂ ಸಹ ಪ್ರತಿಯೊಂದು ಪಾಪ ಹಾಗೂ ಶಾಪಗಳ ವಿಮೋಚನೆಗೆ ಯೇಸು ಮಾತ್ರವೇ ಪರಿಹಾರವಾಗಿದ್ದಾನೆ.

ನೀನಾಗಲೀ ನಿನ್ನ ಕುಟುಂಬದ ಬಂದುಗಳಾಗಲೀ ಶಾಪವೊಂದರ ಅಧೀನದಲ್ಲಿ ಜೀವಿಸುತ್ತಿದ್ದಾರೆಂದು ನೀನು ನೆನೆಸಿದ್ದಲ್ಲಿ ನೀನದನ್ನು ವಿವರವಾಗಿ ಅರಿಕೆಮಾಡಬೇಕು ಅಥವಾ ಇನ್ನು ಅಧಿಕವಾಗಿ ಪಶ್ಚಾತ್ತಾಪಪಟ್ಟು ಕ್ಷಮಾಪಣೆಹೊಂದಬೇಕೆಂದು ದೇವರು ನಿನ್ನಿಂದ ಬಯಸುತ್ತಿದ್ದಾನೆ.

ನಿಮ್ಮ ಕುಟುಂಬದಲ್ಲಿ ಶಾಪವೊಂದು ಕಾರ್ಯನಿರ್ವಹಿಸುತ್ತಿದೆಯೋ ಎಂದು ಕಂಡುಕೊಳ್ಳಲು ನಿಮಗೆ ಸಹಾಯಿಸುವ ಉದ್ದೇಶದಿಂದಲೇ ಕುಟುಂಬ ಚರಿತ್ರೆಯ ಚಿತ್ರಪಟವನ್ನು ಮುಂದಿನ ಇತರೆ ವಿಷಯಗಳ ಅಧ್ಯಾಯದಲ್ಲಿ ಕಾಣಲಿರುವಿರಿ. ಅದರ ಸಹಾಯದಿಂದ ನಿಮ್ಮ ಸ್ವಂತ ಕುಟುಂಬ ಚರಿತ್ರೆಯ ಚಿತ್ರಪಟವನ್ನು ಸಿದ್ಧಪಡಿಸಲು ಸಹಾಯವಾಗುತ್ತದೆ. ಆ ಚಿತ್ರಪಟದ ಮೂಲಕವಾಗಿ ನಿಮ್ಮ ಸ್ವಂತ ಕುಟುಂಬಗಳಲ್ಲಿ ಯಾವ ವಿಧದ ಆಶೀರ್ವಾದಗಳೂ

ಶಾಪಗಳೂ ಹಾಗೂ ವೇದನೆಗಳೂ ಸಂಭವಿಸುತ್ತಲಿರುವದೆಂದು ಕಂಡುಕೊಳ್ಳಲು ನೆರವಾಗುತ್ತದೆ. ಅಷ್ಟು ಮಾತ್ರವಲ್ಲದೆ ಪಾಪದ ವಿವಿದ ವಿಧ ಹಾಗೂ ಮೂಲಗಳ ಮೂಲಕ ಕುಟುಂಬದಲ್ಲಿ ಉಂಟಾದ ಪೀಡನೆ – ವೇದನೆಗಳ ಕಾರಣಗಳನ್ನು ಕಂಡುಹಿಡಿದು ಪಶ್ಚಾತ್ತಾಪಪಟ್ಟು ಮಾನಸಾಂತರದ ಮೂಲಕವಾಗಿ ಕ್ಷಮಾಪಣೆ ಹಾಗೂ ಅದರ ಅಡ್ಡ ಪರಿಣಾಮಗಳ ಬಗ್ಗೆ ನಮಗೆ ಹೆಚ್ಚು ಮಾಹಿತಿ ಲಭಿಸಿದಷ್ಟೂ ಹೆಚ್ಚು ಪರಿಣಾಮಕಾರಿಯಾಗಿ ನಮ್ಮ ಕುಟುಂಬಗಳಿಂದ ಅದನ್ನು ಅಷ್ಟೇ ಪರಿಣಾಮಕಾರಿಯಾಗಿ ಮುರಿದುಹಾಕಲು ಶಕ್ತರಾಗುತ್ತೇವೆ.

ಯಾವ ಕುಟುಂಬವು ವಿಗ್ರಹಾರಾಧನೆಯ ಬಂಧನದಿಂದ 4 ತಲೆಮಾರುಗಳವರೆಗೂ ಸ್ವತಂತ್ರವಾಗಿದೆ? ನಮ್ಮ ಜೀವನದ ಕೆಲವು ಸನ್ನಿವೇಶಗಳಲ್ಲಿ ನಾವೆಲ್ಲರೂ ವಿಗ್ರಹಾರಾಧನೆ ಅಂದರೆ ದೇವರಿಗಿಂತಲೂ ಇತರ ವಿಷಯಗಳನ್ನು ಹೆಚ್ಚಾಗಿ ಪ್ರೀತಿಸಿರುವೆವು ***(1 ಯೋಹಾನ 5:21).*** ತಮ್ಮ ಸ್ವಂತ ಪ್ರಯತ್ನಗಳಿಂದ ಒಳ್ಳೆಯವರಾಗಿರಲು ಪ್ರಯತ್ನಿಸದವರು ಯಾರು? ನಾವು ನಮ್ಮ ತಪ್ಪುಗಳನ್ನು ಅರಿಕೆ ಮಾಡಿ ಕ್ಷಮಿಸುವಂತೆ ದೇವರನ್ನು ಬೇಡಿಕೊಂಡಾಗ ನಾವು ಕ್ಷಮಿಸಲ್ಪಟ್ಟವರಾಗಿಯೂ, ಶಾಪ ಹಾಗೂ ಇತರ ವಿಷಯಗಳ ಪ್ರಭಾವಗಳಿಂದ ಬಿಡುಗಡೆ ಹೊಂದಿರುವ ಬಗ್ಗೆ ಭರವಸೆಯೂ ನಮ್ಮಲ್ಲಿ ಉಂಟಾಗುತ್ತದೆ ***(1 ಯೋಹಾನ 1:9).*** ಇದಕ್ಕೆ ಪ್ರತಿಯಾಗಿ ದೇವರು ನಮಗೆ ಸಾವಿರ ತಲೆಗಳವರೆಗೂ ಸ್ವಾತಂತ್ರ್ಯ ಹಾಗೂ ಆಶೀರ್ವಾದಗಳನ್ನು ಕೊಡುವನು ***(ವಿಮೋ 20:6).***

**ವಂಶಾನುಕ್ರಮದ ನಕಾರಾತ್ಮಕ ಘಟನೆಗಳು ಅಥವಾ ನಿಮ್ಮನ್ನು ಪೀಡಿಸುವ ಪಾಪಗಳಿದ್ದಲ್ಲಿ ಪ್ರಾರ್ಥನಾ ಮಾರ್ಗಸೂಚಿ**

- ನಿಮಗೂ ಹಾಗೂ ನಿಮ್ಮ ಕುಟುಂಬದವರಿಗೂ ಕೊಡಲ್ಪಟ್ಟಿರುವ ಎಲ್ಲಾ ಒಳ್ಳೆ ದಾನಗಳಿಗಾಗಿ ಸ್ತೋತ್ರ ಸಲ್ಲಿಸಿರಿ
- ಅಂತಹ ಪಾಪ/ಘಟನೆಗಳೇನಾದರು ಜ್ಞಾಪಕಕ್ಕೆ ಬಂದಲ್ಲಿ ನಿಮ್ಮ ಪಾಲಕರ ಹಾಗೂ ಮೂಲ ಪಿತೃಗಳ ಪಾಪಗಳಬಗ್ಗೆ ಅರಿಕೆ ಮಾಡಿರಿ ಹಾಗೂ ಕ್ಷಮಿಸಿರಿ.
- ಶರೀರ–ಪ್ರಾಣ–ಆತ್ಮಗಳ ಮೇಲೆ ಹೋರಾಟ ಮಾಡುವ ಎಲ್ಲಾ ಆತ್ಮೀಕವಲ್ಲದ ವಂಶಾನುಕ್ರಮದ ಎಲ್ಲಾ ಪಾಪಗಳನ್ನೂ (ಆದಾಮನವರೆಗೂ) ಅದರ ಶಕ್ತಿಗಳನ್ನು ಯೇಸುವಿನ ನಾಮದಲ್ಲಿ ಮುರಿಯಲ್ಪಡಲಿ
- ಈ ಪಾಪಗಳಿಂದ ನಿಮ್ಮನ್ನೂ ನಿಮ್ಮ ಪೂರ್ವಿಕರನ್ನೂ ಬೇರ್ಪಡಿಸುವಂತೆ ಪ್ರಾರ್ಥಿಸಿ ಆ ಮೂಲಕ ಅದರ ನಕಾರಾತ್ಮಕ ಪರಿಣಾಮಗಳಿಂದ ವಿಮುಕ್ತರಾಗಿಸುವಂತೆ ಕೇಳಿಕೊಳ್ಳಿರಿ
- ಈ ವಿಷಯದಲ್ಲಿನ ನಿಮ್ಮ ಪಾಪಗಳನ್ನೂ ಅರಿಕೆ ಮಾಡಿರಿ
- ಯೇಸುವಿನ ನಾಮದಲ್ಲಿ ಅಂತಹ ಪಾಪಗಳನ್ನು ಮಾಡಬೇಕೆನ್ನುವ ಭಯಕೆಯನ್ನು ನಿಮ್ಮಿಂದಿಲೂ, ಬಂಧುಗಳಿಂದಲೂ ನೀಗಿಸುವಂತೆ ಕೇಳಿಕೊಳ್ಳಿರಿ
- ನಿಮಗೋಸ್ಕರವೂ ನಿಮ್ಮ ಸಂತತಿಯವರಿಗೋಸ್ಕರವೂ ದೇವರು ಕೊಡಲು ಬಯಸುತ್ತಿರುವ ಆಶೀರ್ವಾದಗಳನ್ನೂ ಸುರಿಸುವಂತೆ ಕೇಳಿಕೊಳ್ಳಿರಿ
- ಯೇಸುವನ್ನು ಇನ್ನೊಮ್ಮೆ ನಿಮ್ಮ ಹೃದಯದೊಳಕ್ಕೆ ಆಹ್ವಾನಿಸಿರಿ ಹಾಗೂ ಪವಿತ್ರಾತ್ಮನಿಂದ ಸಂಪೂರ್ಣವಾಗಿ ತುಂಬಿಸುವಂತೆ ವಿಜ್ಞಾಪಿಸಿರಿ.

ನೀವು ಸಿದ್ಧರಾಗಿರುವುದಾದಲ್ಲಿ ಈ ಕೆಳಗಿನ ಪ್ರಾರ್ಥನೆಯನ್ನು ಜೋರಾಗಿ ಪ್ರಾರ್ಥಿಸಿರಿ

**ತಂದೆ–ತಾಯಿ ಹಾಗೂ ಬಂಧು–ಬಾಂಧವರ ಕ್ಷಮಾಪಣೆಗಾಗಿನ ಪ್ರಾರ್ಥನೆ**



"ಪರಲೋಕದಲ್ಲಿರುವ ಪ್ರೀತಿಯ ತಂದೆಯೇ, ನೀನು ನನಗೆ ಕೊಟ್ಟಿರುವ ಪರಲೋಕದ ಆಸ್ತಿಗಾಗಿ ಸ್ತೋತ್ರ, ನೀನು ನನಗೂ ನನ್ನ ಕುಟುಂಬಕ್ಕೂ ಕೊಟ್ಟಿರುವ ಎಲ್ಲಾ ಈ ಮುಂದಣ ... ಆಶೀರ್ವಾದಗಳಿಗಾಗಿ ಸ್ತೋತ್ರ – ನಕಾರಾತ್ಮಕ ದೋರಣೆ (ಕ್ರಮ) ಗಳು ನನ್ನ ಕುಟುಂಬದಲ್ಲಿ ಕಾರ್ಯಮಾಡುತ್ತದೆಂದು ಬಲ್ಲೆನು."

**"ನಾನು ಈ ಮುಂದಿನ ವ್ಯಕ್ತಿಗಳನ್ನು... ಕ್ಷಮಿಸಿರುವೆನು. ಅವರು ಮಾಡಿರುವ ಪಾಪಗಳು ಹಾಗೂ ಕೆಟ್ಟ ಕಾರ್ಯಗಳನ್ನೂ ಕ್ಷಮಿಸುವೆನು... (ದೂಷಣೆ, ತಿರಸ್ಕಾರ, ಖಂಡನೆ, ಇತ್ಯಾದಿ). ಈ ಪಾಪಗಳನ್ನು ಮಾಡಿರುವುದಕ್ಕಾಗಿ ನಮ್ಮನ್ನೂ ನಮ್ಮ ಕುಟುಂಬದ ಉಳಿದವರನ್ನೂ ಸಹ ಕ್ಷಮಿಸಿರಿ. ನಾವು ತಿಳಿದೋ ತಿಳಿಯದೆಯೋ ಮಾಡಿದ ಎಲ್ಲಾ ಪಾಪಗಳಿಂದ ನಮ್ಮನ್ನು ನಮ್ಮ ಕುಟುಂಬ ವರ್ಗದವರನ್ನು ಕ್ಷಮಿಸಿರಿ."**

"ನನ್ನನ್ನೂ ನನ್ನ ಕುಟುಂಬವನ್ನೂ ಯೇಸುವಿನ ರಕ್ತದಿಂದ ತೊಳೆಯಿರಿ. ನಕಾರಾತ್ಮಕ ವಿಧಾನ ಹಾಗೂ ವಂಶಾನುಕ್ರಮದ ಪಾಪಗಳಿಂದಲೂ, ದುಷ್ಟನ ಕೈಯಿಂದಲೂ ನಮ್ಮನ್ನು ವಿಮೋಚಿಸಿರಿ. ಈ ಪಾಪಗಳ ಪ್ರಭಾವದಿಂದ ನನ್ನನ್ನೂ ನಮ್ಮ ಕುಟುಂಬವನ್ನೂ ಬೇರ್ಪಡಿಸಿರಿ. ಯೇಸುವಿನ ಅಧಿಕಾರವುಳ್ಳ ನಾಮದಲ್ಲಿ ಪ್ರತಿಯೊಂದು ವಂಶಾನುಕ್ರಮದ ಶಾಪಗಳನ್ನುಮುರಿದು ಹಾಕುತ್ತಿದ್ದೇನೆ, ಎಲ್ಲಾ ದುಷ್ಟ ಶಕ್ತಿಗಳಿಂದ ಬಿಡಿಸಿ ಸ್ವತಂತ್ರಗೊಳಿಸಿರುವುದಕ್ಕಾಗಿ ಸ್ತೋತ್ರ."

"ನಾನು ನನಗೂ ನನ್ನ ಕುಟುಂಬಕ್ಕೂ ಶುಭ ಹಾರೈಸುತ್ತಿದ್ದೇನೆ. ತಂದೆಯೇ ನಮ್ಮನ್ನು ಆಶೀರ್ವದಿಸುವಂತೆ ವಿಜ್ಞಾಪಿಸಿಕೊಳ್ಳುತ್ತಿದ್ದೇನೆ. ನನ್ನನ್ನೂ ನನ್ನ ಕುಟುಂಬವನ್ನೂ ಕ್ಷಮಿಸಿರುವುದಕ್ಕಾಗಿ ವಂದನೆಗಳು ದಯವಿಟ್ಟು ನನ್ನೊಳಗೆ ಬಂದು ನಿನ್ನಾತ್ಮನಿಂದ ನನ್ನನ್ನು ಸಂಪೂರ್ಣವಾಗಿ ತುಂಬಿಸು – ಯೇಸುವಿನ ನಾಮದಲ್ಲಿ, ಆಮೆನ್."

ಮರೆಯದಿರಿ – ಈ ರೀತಿಯ ಪಾಪಕೃತ್ಯಗಳನ್ನು ಮುಂದುವರೆಸಿದ್ದಲ್ಲಿ ನಾವು ಮತ್ತೆ ಶಾಪಕ್ಕೆ ಒಳಗಾಗಲಿದ್ದೇವೆ. ಆದ್ದರಿಂದ ಆ ಪಾಪಗಳನ್ನು ಮತ್ತೆ ಅರಿಕೆ ಮಾಡಿ ಅವುಗಳಿಂದ ದೂರವಾಗಿ ಕ್ಷಮಿಸುವಂತೆಯೂ ನಾವುಗಳು ಬದಲಾದ ವ್ಯಕ್ತಿಗಳಾಗಲು ಆತನು ಸಹಾಯ ಮಾಡುವಂತೆಯೂ ಬೇಡಿಕೊಳ್ಳಿರಿ.

ನಾವು ಎಲ್ಲಾ ಸನ್ನಿವೇಶಗಳಲ್ಲಿ ಹಿಂದಿನ ತಲೆಮಾರುಗಳ ಕ್ಷಮಾಪಣೆಗಾಗಿ ಪ್ರಾರ್ಥಿಸಬಹುದಾಗಿದೆ. ಉದಾ: ಸ್ತ್ರೀಯೊಬ್ಬಳು ಇತರ ಸ್ತ್ರೀಗೋಸ್ಕರವೂ ಸಭೆಯೊಂದರ ವಿಶ್ವಾಸಿಯು ಇತರ ವಿಶ್ವಾಸಿಗಾಗಿಯೂ ಭಾರತೀಯರು ಭಾರತೀಯರಿಗಾಗಿಯೂ ಪಶ್ಚಾತ್ತಾಪದ ಪ್ರಾರ್ಥನೆ ಮಾಡುವ ಮೂಲಕವಾಗಿ ಅದೊಂದು **ಮಧ್ಯಸ್ಥ (ಇತರರಿಗಾಗಿನ) ಪ್ರಾರ್ಥನೆ**ಯಾಗಿ ಮಾರ್ಪಡುತ್ತದೆ. ಇದು ಮೋಶೆ, ದಾನಿಯೇಲ, ನೆಹೆಮಿಯ, ಯೇಸು ಹಾಗೂ ಇತರರಿಂದ ಸ್ಥಾಪಿಸಲ್ಪಟ್ಟ ಪ್ರಾರ್ಥನಾ ವಿಧಾನವಾಗಿದೆ. ಯೇಸು ಹೇಳಿದ್ದೇನೆಂದರೆ – "ನೀವು ಯಾರನ್ನು

## ಸಾಕ್ಷಿ
### ಯೇಸು ನನ್ನಿಂದ ಪುರಾತನವಾದ ಶಾಪವೊಂದನ್ನು ನೀಗಿಸಿದ್ದು

*"ನನ್ನ ತಂದೆ ತಾಯಿಗಳಿಬ್ಬರೂ ಹೊಸದಾಗಿ ಹುಟ್ಟಿದ ವಿಶ್ವಾಸಿಗಳಾಗಿದ್ದಾಗ್ಯೂ ಅನೇಕ ಆತ್ಮೀಕವಲ್ಲದ ಪದ್ಧತಿಗಳು ನಮ್ಮಲ್ಲಿದ್ದವು. ನನಗರಿವಿಲ್ಲದೆಯೇ ನನ್ನ ಪಿತೃಗಳು ಮಾಡುತ್ತಿದ್ದ ಪಾಪ ಕಾರ್ಯಗಳಲ್ಲಿ ಬಿದ್ದು ಹೋದೆ. ನನ್ನ ತಂದೆ ತಾಯಿಯರನ್ನು 5 ವರ್ಷ ಇರುವಾಗಲೇ ಮನೆಯಿಂದ ಹೊರಹಾಕಿದಂತೆ ಅನುಭವ ನನ್ನಲ್ಲುಂಟಾಗಿ ನಾನು ಆತ್ಮಹತ್ಯೆಗೂ ಪ್ರಯತ್ನಿಸಿದ್ದೆ. ನನ್ನ ಚಿಕ್ಕಂದಿನಿಂದಲೂ ನನ್ನ ಸಹೋದರಿಯೊಂದಿಗೆ ನನಗೆ ಸರಿಯಾದ ಸಂಬಂಧವಿರಲಿಲ್ಲ. ಆದರೆ ನನ್ನ 11ನೇ ವಯಸ್ಸಿನಲ್ಲಿ ನಾನು ಹೊಸದಾಗಿ ಹುಟ್ಟಿ 14ನೇ ವಯಸ್ಸಿನಲ್ಲೇ ಪವಿತ್ರಾತ್ಮನ ಸ್ನಾನವನ್ನು ಹೊಂದಿದೆನು. ಆತ್ಮಹತ್ಯೆಯ ಚಿಂತನೆಗಳು ನನ್ನಿಂದ ದೂರ ಹೋದಾಗ್ಯೂ ತಿರಸ್ಕಾರದ ಅನುಭವ ನನ್ನೊಳಗಿನ್ನೂ ಇದ್ದು ನನ್ನ ಬಗ್ಗೆಯೇ ಬಹಳ ನಕಾರಾತ್ಮಕ ಮಾತುಗಳನ್ನಾಡುತ್ತಿದ್ದೆ. ಅನೇಕ ವರ್ಷಗಳ ನಂತರ ಬಹಳ ದುಃಖಿತಳಾಗಿ ಪ್ರಾರ್ಥನಾ ಕೂಟಕ್ಕೆ ಹೋದೆನು. ನನಗೂ ನನ್ನ ಸಹೋದರಿಗೂ ಇದ್ದ ದ್ವೇಷವು ಶತಮಾನಗಳಷ್ಟು ಹಳೆಯದಾಗಿದ್ದು ಅದು ನನ್ನ ತಂದೆಯ ಮನೆಯವರಿಗೂ ನನ್ನ ತಾಯಿಯ ಮನೆಯವರಿಗೂ ಮಧ್ಯದಲ್ಲಿ ನಡೆದಿದ್ದು ಇದುವರೆಗೂ ಅದಕ್ಕೆ ಪರಿಹಾರ ಕಂಡು ಕೊಂಡಿರಲಿಲ್ಲ. ನಾನು ಇಬ್ಬರ ಕುಟುಂಬಗಳಿಗಾಗಿಯೂ ಪಶ್ಚಾತ್ತಾಪಪಟ್ಟು ಎರಡೂ ಕಡೆಯವರನ್ನು ಕ್ಷಮಿಸುವಂತೆ ಬೇಡಿಕೊಂಡೆನು ಹಾಗೂ ಇದುವರೆಗೂ ಆಗಿರದಂತಹ ಆಂತರಿಕವಾದ ಸಮಾಧಾನವನ್ನು ಅನುಭವಿಸಿದೆನು ಹಾಗೂ ನನ್ನೊಳಗಿನ ಹೋರಾಟವು ಕೊನೆಗೊಂಡಿತ್ತು. ಆ ಆಂತರಿಕ ಸಮಾಧಾನ ನನ್ನೊಳಗಿನ್ನೂ ಉಳಿದುಕೊಂಡಿದೆ ಹಾಗೂ ನನ್ನ ಸಹೋದರಿಯ ಬಗೆಗಿನ ಕೋಪ-ದ್ವೇಷಗಳೆಲ್ಲವೂ ದೂರವಾಯಿತು."*

ಕ್ಷಮಿಸಿಬಿಡುತ್ತೀರೋ ಅವರಿಗೆ ಕ್ಷಮಾಪಣೆ ಆಗುತ್ತದೆ, ಯಾರನ್ನು ಕ್ಷಮಿಸದೆ ಇರುವಿರೋ ಅವರಿಗೆ ಕ್ಷಮಿಸಲ್ಪಡದು" ***(ಯೋಹಾನ 20:23).*** ಈ ರೀತಿಯ ಪ್ರಾರ್ಥನೆಗಳಿಂದ ಅಧಿಕ ಬಲ, ಪರಿಣಾಮ ಹಾಗೂ ಬಹುಕಾಲದ ನಂತರದ ಪ್ರಯೋಜನಗಳೂ ಉಂಟಷ್ಟೆ. ವಿಶ್ವಾಸಿಗಳಾದ ನಾವು ಸಾಮಾನ್ಯವಾಗಿ ಜನರನ್ನೂ, ಸ್ಥಳಗಳನ್ನೂ ಹಾಗೂ ರಾಷ್ಟ್ರಗಳನ್ನೂ ಖಂಡಿಸುವವರು ಆಗಿರುತ್ತೇವೆ. ಅದಕ್ಕೆ ಬದಲಾಗಿ ಅವುಗಳ ಮೇಲೆ ದೈವೀಕ ಆಶೀರ್ವಾದಗಳನ್ನು ಉಚ್ಚರಿಸುವುದಾದಲ್ಲಿ ನಮ್ಮ ಪ್ರಾರ್ಥನೆಯ ಫಲವಾಗಿ ದೇವರು ಅವುಗಳನ್ನು ಆಶೀರ್ವದಿಸಬಲ್ಲನು.

ಮುಂದಿನ ವಿಭಾಗದಲ್ಲಿ ಹೇಳಲ್ಪಟ್ಟಿರುವ ವಂಶಾನುಕ್ರಮದ ಆಶೀರ್ವಾದಗಳಿಗಾಗಿನ ಪ್ರಾರ್ಥನೆಯನ್ನು ವಾಕ್ಯಾನುಸಾರವಾಗಿ ದೇವರಿಂದ ನಮಗೆ ಶಾಪಗಳನ್ನು ತರಬಹುದಾದ ಪಾಪಕೃತ್ಯಗಳಿಗೆ ಅನುಗುಣವಾಗಿ ಸಿದ್ಧಪಡಿಸಲಾಗಿದೆ. ಅದನ್ನು ದಯವಿಟ್ಟು ಓದಿರಿ ಹಾಗೂ ಆ ಪಟ್ಟಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ವಿಷಯಗಳಲ್ಲಿ ನೀವೂ ನಿಮ್ಮ ಪಿತೃಗಳೂ ಭಾಗಿಯಾಗಿರುವುದಾಗಿ ತೋಚಿದಲ್ಲಿ ಆ ಪ್ರಾರ್ಥನೆಯನ್ನು ಪ್ರಾರ್ಥಿಸಿರಿ. ನಾವೂ ಅವರು ಆ ಪಾಪಗಳಲ್ಲಿ ಭಾಗಿಯಾಗಿರುವುದಿಲ್ಲವೆಂದು ನಿಮಗೆ ಅನಿಸಿದಲ್ಲಿ ಮತ್ತೆ ಅವಲೋಕಿಸಿರಿ. ಜನರು ಅವುಗಳನ್ನು ಮಾಡುತ್ತಿದ್ದುದರಿಂದಲೇ ವಾಕ್ಯಗಳಲ್ಲಿ ಅವುಗಳು ಉಲ್ಲೇಖಿಸಲ್ಪಟ್ಟಿವೆ.

ನಮಗೆ ನಮ್ಮ ಪೂರ್ವೀಕರ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇಲ್ಲದಿರುವುದರಿಂದ **"ಭಾಗಿಯಾಗಿದ್ದರೆ"** ಎಂಬ ಕ್ರಮದಲ್ಲಿ ಆ ಪ್ರಾರ್ಥನೆಯನ್ನು ಪ್ರಾರ್ಥಿಸಿರಿ. ಈ ಪ್ರಾರ್ಥನೆಯನ್ನು ಮರಿಯಮ್ಮ ತಂಬಿಯವರಿಂದ ಸಿದ್ಧಪಡಿಸಿರುವ ***(ಧರ್ಮೋ 27)*** ಪ್ರಾರ್ಥನಾ ಪಟ್ಟಿಯಿಂದ ಆಯ್ದುಕೊಳ್ಳಲಾಗಿದೆ.[6]

ಆ ಪ್ರಾರ್ಥನೆಯನ್ನು ನೀವು ಮಾಡಿದಾದಲ್ಲಿ ನಿಮ್ಮಲ್ಲಿನ ಶಾಪಗಳೆಲ್ಲವೂ ದೇವರಿಂದ ಮುರಿಯಲ್ಪಟ್ಟಿರುತ್ತದೆ ಹಾಗೂ ದೇವರ ಪ್ರೀತಿಯ ಮಕ್ಕಳಿಗಾಗಿರುವ ಎಲ್ಲಾ ಆಶೀರ್ವಾದಗಳನ್ನೂ ಪಡೆಯಲು ನೀವೀಗ ಯೋಗ್ಯರಾಗಿರುವಿರಿ.

---

[6] *ಮರಿಯಮ್ಮ ತಂಪಿರವರ, ಬೆಟರ್ ದೆನ್ ವೆಪನ್ಸ್ ಆಫ್ ವಾರ್, 2009, ಅಡ್ವಂಟೇಜ್ ಇನ್‌ಸ್ಪಿರೇಷನಲ್.*

# ದೀಕ್ಷಾಸ್ನಾನಗಳು

## *ನೀರಿನಿಂದ ದೀಕ್ಷಾಸ್ನಾನ*

ಒಬ್ಬ ವ್ಯಕ್ತಿಯು ಯೇಸುಕ್ರಿಸ್ತನನ್ನು ಕರ್ತನನ್ನಾಗಿಯೂ ರಕ್ಷಕನನ್ನಾಗಿಯೂ ಅಂಗೀಕರಿಸಿ ಕೊಂಡವರಾಗಿ "*ಹೊಸದಾಗಿ ಹುಟ್ಟಿದ*" ನಂತರ ***(ಯೋಹಾನ 3:3–7)*** ಯೇಸುವಿನಂತೆಯೇ ಅವರು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸತ್ಯವೇದವು ತಿಳಿಸುತ್ತದೆ. "*ಹೀಗೆ ನಾವು ಎಲ್ಲಾ ನೀತಿಯನ್ನು ನೆರವೇರಿಸತಕ್ಕದ್ದಾಗಿದೆ*" ***(ಮತ್ತಾಯ 3:15).*** ಯೋಹಾನನ ದೀಕ್ಷಾಸ್ನಾನದ ಉದ್ದೇಶವು ಜನರು ತಮ್ಮ ಪಾಪಗಳ ನಿಮಿತ್ತ ಮಾನಸಾಂತರಪಟ್ಟು ದೇವರೆಡೆಗೆ ತಿರುಗಿಕೊಂಡಿದ್ದಾರೆಂಬುದನ್ನು ಸೂಚಿಸುವುದಕ್ಕಾಗಿತ್ತು. ಯೇಸು – ನೂರಕ್ಕೆ ನೂರರಷ್ಟು ಮನುಷ್ಯನೂ ನೂರರಷ್ಟು ದೇವರೂ ಆಗಿದ್ದನು ಹಾಗೂ ಪಾಪವನ್ನೆಂದಿಗೂ ಮಾಡಿರಲಿಲ್ಲ ***(2 ಕೊರಿ 5:21; 1 ಪೇತ್ರ 1:19, 2:22).*** ಆದರೆ ಪಾಪಿಗಳಾದ ನಮ್ಮೊಂದಿಗೆ ಗುರುತಿಸಿಕೊಳ್ಳುವುದಕ್ಕಾಗಿ ಯೋಹಾನನಿಂದ ದೀಕ್ಷಾಸ್ನಾನ ಹೊಂದಲು ಇಷ್ಟಪಟ್ಟನು.

> ಕ್ರಿಸ್ತನ ವಿಷಯವಾಗಿ ಹೃದಯಾಂತರಾಳದಲ್ಲಿರುವ ನಂಬಿಕೆಯನ್ನು ಹೊರಲೋಕಕ್ಕೆ ತೋರ್ಪಡಿಸಿ ಕೊಳ್ಳುವುದೇ ದೀಕ್ಷಾಸ್ನಾನವಾಗಿದೆ.

ದೀಕ್ಷಾಸ್ನಾನ ಮಾಡಿಸುವುದೆಂದರೆ "ಮುಳುಗಿಸು" ವುದಾಗಿದೆ. ನೀರಿನಲ್ಲಿ ದೀಕ್ಷಾಸ್ನಾನ ಹೊಂದುವುದೆಂದರೆ ವ್ಯಕ್ತಿಯೊಬ್ಬನು ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಹಾಗೂ ಪುನರುತ್ಥಾನದಲ್ಲಿ ಭಾಗಿಯಾಗುವುದಾಗಿದೆ. ನೀರಿನೊಳಗೆ ಹೋಗುವುದು ನನ್ನ ಹಳೆಯ ಪಾಪಸ್ವಭಾವವನ್ನು ಕೊಂದು ಹೂಳಿಡುವುದಾಗಿದ್ದು ನೀರಿನಿಂದ ಹೊರಬರುವುದು ಕ್ರಿಸ್ತನನ್ನು ಹಿಂಬಾಲಿಸುವುದಕ್ಕಾಗಿ ಪುನರುತ್ಥಾನ ಹೊಂದಿ ಹೊಸಬರಾಗಿ ಜೀವಿಸುವುದಾಗಿದೆ ***(ರೋಮಾ 6:1–7; 1 ಕೊರಿ 15:3–4; ಕೊಲೊಸ್ಸೆ 2:12).***[7] ದೀಕ್ಷಾಸ್ನಾನವು ಕ್ರಿಸ್ತನ ದೇಹವಾದ ಸಭೆಯೊಂದಿಗಿನ ನಮ್ಮ ಸೇರ್ಪಡೆಗಿನ ಬಾಹ್ಯ ಗುರುತೂ ಆಗಿದೆ.

> **ಸಾಕ್ಷಿ**
>
> **ದ್ವಿತೀಯ ದೀಕ್ಷಾಸ್ನಾನ**
>
> "ವ್ಯಕ್ತಿಯೊಬ್ಬನನ್ನು ನೀರಿನಲ್ಲಿ ಮುಳುಗಿಸಿ ದೀಕ್ಷಾಸ್ನಾನ ಮಾಡಿಸಿದ ನಂತರ ಅನ್ಯಭಾಷೆಗಳನ್ನು ಮಾತನಾಡುತ್ತಲೇ ಅವರು ನೀರಿನಿಂದ ಮೇಲೆದ್ದು ಬಂದದ್ದು ದೀಕ್ಷಾಸ್ನಾನದ ಪ್ರಾಧಾನ್ಯತೆಯನ್ನು ದೃಢೀಕರಿಸಿತ್ತು."

ಯೇಸುವಿನ ಮಾತುಗಳು ಹಾಗೂ ಅಪೋಸ್ತಲರ ಬೋಧನೆಗಳ ಮೂಲಕ ವಿಶ್ವಾಸಿಗಳ ಜೀವಿತದಲ್ಲಿ ದೀಕ್ಷಾಸ್ನಾನದ ಪ್ರಾಧಾನ್ಯತೆಯು ಸ್ಪಷ್ಟವಾಗಿ ತಿಳಿದು ಬರುತ್ತದೆ ***(ಮಾರ್ಕ 16:16; ಅ.ಕೃ2:37–38; ಗಲಾತ್ಯ 3:27; ಮತ್ತಾಯ 22:11).*** ಯೇಸುಕ್ರಿಸ್ತನನ್ನು ಜನರು ಕರ್ತನನ್ನಾಗಿಯೂ ರಕ್ಷಕನನ್ನಾಗಿಯೂ ನಂಬಿಕೆಯಿಂದ ಅಂಗೀಕರಿಸಿದ ನಂತರ ಸಾಧ್ಯವಾದಷ್ಟೂ ಬೇಗನೆ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರೆಂಬುದನ್ನು ಪ್ರಥಮ ಶತಮಾನದ (ಆದಿ ಸಭೆಯ) ಅನುಭವದಿಂದ

---

*[7] ರೆವ. ಡೆರೆಕ್ ಪ್ರಿನ್ಸ್‌ರವರ, ಫೌಂಡೇಶನ್ಸ್ ಫಾರ್ ಕ್ರಿಶ್ಚಿಯನ್ ಲಿವಿಂಗ್, ಡೆರೆಕ್ ಪ್ರಿನ್ಸ್ ಮಿನಿಸ್ಟ್ರೀಸ್ ಇಂಡಿಯಾ, 2004. ಅನುಮತಿಯೊಂದಿಗೆ.*

ತಿಳಿಯಬಹುದಾಗಿದೆ ***(ಅ.ಕೃ 8:35–38, 9:17–18, 10:42–48, 16:27–33).*** ಯೇಸು ತನ್ನ ಹಿಂಬಾಲಕರಿಗೆ ದೀಕ್ಷಾಸ್ನಾನ ಹೊಂದುವಂತೆ ಆಜ್ಞಾಪಿಸಿರುವನು. ಕ್ರಿಸ್ತನೆಡೆಗಿನ ನಮ್ಮ ಪ್ರಯಾಣದಲ್ಲಿ ವಿಧೇಯತ್ವದ ದ್ವಿತೀಯ ಹೆಜ್ಜೆಯೇ ದೀಕ್ಷಾಸ್ನಾನವಾಗಿದೆ. ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ***(ಅ.ಕೃ 2:38).***

# ಪವಿತ್ರಾತ್ಮನ ಸ್ನಾನ



*"ಪವಿತ್ರಾತ್ಮ ಭರಿತರಾಗಿರಿ"* ***(ಎಫೆಸ 5:18).***

*"ಸ್ನಾನಿಕನಾದ ಯೋಹಾನನು ಅವರಿಗೆ ಹೇಳಿದ್ದೇನೆಂದರೆ 'ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ, ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು. ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ. ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು"* ***(ಮತ್ತಾಯ 3:11).***

*"ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮ ವರವನ್ನು ಕೊಡುವವನಲ್ಲವೇ"* ***(ಲೂಕ 11:13).***

ಪವಿತ್ರಾತ್ಮನ ಸ್ನಾನವಾಗಿರುವ "ಮೇಲಣ ಲೋಕದ ಶಕ್ತಿ" ಯನ್ನೂ ಸಹ ದೇವರು ನಮಗೆ ದಯಪಾಲಿಸುವನು ***(ಲೂಕ 24:49; ಅ.ಕೃ 1:8).*** ಈ ಸ್ನಾನವು ಮೇಲಿನಿಂದ ಸಂಪೂರ್ಣವಾಗಿ ಮುಳುಗಿಸಿ ಮಾಡಿಸುವ ದೀಕ್ಷಾಸ್ನಾನವಾಗಿದ್ದು ನೇರವಾಗಿ ದೇವರಿಂದಲೂ ***(ಅ.ಕೃ 2:1–4, 4:31, 10:44–47)*** ಅಥವಾ ಈಗಾಗಲೇ ಪವಿತ್ರಾತ್ಮನ ದೀಕ್ಷಾಸ್ನಾನದ ಅನುಭವ ಹೊಂದಿರುವವರ ಹಸ್ತಾರ್ಪಣೆಗಳಿಂದಲೂ ಕೊಡಲ್ಪಡುತ್ತದೆ ***(ಅ.ಕೃ 8:14–19, 9:17, 19:6).***

ಪವಿತ್ರಾತ್ಮನ ದೀಕ್ಷಾಸ್ನಾನವು ನೇರವಾಗಿ ದೇವರಿಂದಲೋ ಅಥವಾ ಇತರರ ಹಸ್ತಾರ್ಪಣೆಗಳ ಮೂಲಕವೋ ಹೇಗೇ ಕೊಡಲ್ಪಟ್ಟರೂ ಮೇಲಣ ಲೋಕದ ಶಕ್ತಿಯನ್ನು ಹೊಂದುವುದರ ಉದ್ದೇಶವು ಯೇಸುಕ್ರಿಸ್ತನ ಸುವಾರ್ತೆಯನ್ನು ಇತರರೊಂದಿಗೆ ಪರಿಣಾಮಕಾರಿಯಾಗಿ ಹಂಚಿಕೊಳ್ಳುವುದಾಗಿದೆ. ಈ ಕಾರಣಕ್ಕಾಗಿಯೇ ಅ.ಕೃ 2 ರಲ್ಲಿನ ಪವಿತ್ರಾತ್ಮನ ಸ್ನಾನವೂ ಸಹ ಸ್ಥಾಪಿಸಲ್ಪಟ್ಟಿರುತ್ತದೆ. ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿದ ನಂತರವಷ್ಟೇ ಪೇತ್ರನು ಸುವಾರ್ತೆಯನ್ನು ಬಲಯುತವಾಗಿಯೂ ಪರಿಣಾಮಕಾರಿಯಾಗಿಯೂ ಸಾರಲು ಶಕ್ತನಾದನು. ಈ ಮೊದಲು ಹೆಂಗಸೊಬ್ಬಳಿಗೆ ಭಯಪಟ್ಟಿದ್ದ ಅವನು ಪಂಚಶತ್ತಮ ದಿನದಲ್ಲಿ ಧೈರ್ಯದಿಂದ ಪ್ರಸಂಗಿಸಲಾಗಿ ಮೂರು ಸಾವಿರ ಜನರು ರಕ್ಷಿಸಲ್ಪಟ್ಟರು.

ಪವಿತ್ರಾತ್ಮನು ನಮ್ಮಲ್ಲಿ ವಾಸಮಾಡುವಾಗಲೇ ನಮ್ಮ ಸ್ವಭಾವಗಳನ್ನು ಆತನು ನೂತನಪಡಿಸುವನು ಹಾಗೂ ಗಲಾತ್ಯ 5:22 ರಲ್ಲಿ ಹೇಳಲ್ಪಟ್ಟಿರುವ ಫಲಗಳಾದ ಪ್ರೀತಿ, ಸಂತೋಷ, ಸಮಾಧಾನ, ಧೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶ್ರಮ, ದಯೆ, ಇತ್ಯಾದಿ ಫಲಗಳು ಉಂಟಾಗಲು ಸಹಾಯಿಸುವನು.


ಹೊಸದಾಗಿ ಮದುವೆಯಾದ ಕುಟುಂಬವೊಂದು ಫ್ಲಾಟ್ ಒಂದರಲ್ಲಿ ವಾಸವಿದ್ದರು. ಅವರ ಬಾಲ್ಕನಿ (ಕೈಸಾಲೆ) ಯಲ್ಲೇ ಒಂದು ಬಿಳಿ ಪಾರಿವಾಳವೂ ಸಹ ವಾಸವಿತ್ತು. ಸ್ವಲ್ಪ ದಿನಗಳ ನಂತರ ಗಂಡ – ಹೆಂಡತಿ ಮಧ್ಯದಲ್ಲಿ ಪರಸ್ಪರ ದೂಷಿಸುತ್ತಾ ಜೋರಾದ ಗಲಾಟೆಯು ನಡೆದೇ ಹೋಯಿತು. ಅವರ ವಾದ – ವಿವಾದಗಳ ನಿಮಿತ್ತ ಪಾರಿವಾಳವು ಅಲ್ಲಿಂದ ಹಾರಿಹೋಗುವುದನ್ನು ಅವರು ಗಮನಿಸಿದರು. ಆದರೆ ಅವರು ಪರಸ್ಪರ ಕ್ಷಮಿಸಿ ಸಂಧಾನವಾದ ನಂತರ ಪಾರಿವಾಳವು ಹಿಂದಿರುಗಿರುವುದನ್ನೂ ಸಹ ಅವರು ಗಮನಿಸಿದರು. ಇದಾದ ನಂತರ ತಮ್ಮ ನಿಮಿತ್ತ ಇನ್ನು ಮೇಲೆ ಪಾರಿವಾಳವು ಹಾರಿ ಹೋಗದಿರುವಂತೆ ತಮ್ಮನ್ನು ಸಹಾಯಿಸುವಂತೆ ದೇವರನ್ನು ಬೇಡಿಕೊಂಡರು.

ಇವು ಆತ್ಮನ ಫಲಗಳಾಗಿದ್ದು ಇತರ ವಿಶ್ವಾಸಿಗಳಲ್ಲಿ ನಾವು ಕಾಣುವವರೂ ಇತರರು ನಮ್ಮಲ್ಲಿ ಕಾಣಶಕ್ತರೂ ಆಗಿರಬೇಕು. ಇದರ ಬಗ್ಗೆ ಹೆಚ್ಚಿನ ಉದಾಹರಣೆಗಳು ಅಪೋಸ್ತಲರ ಕೃತ್ಯಗಳಲ್ಲಿವೆ. ಪವಿತ್ರಾತ್ಮನ ದೀಕ್ಷಾಸ್ನಾನವು ವಿಶ್ವಾಸಿಗಳ ಮನಸ್ಸನ್ನೂ ಹೃದಯಗಳನ್ನೂ ಐಕ್ಯಗೊಳಿಸಿದ್ದರಿಂದ ಹಾಗೂ ಅವರು ಒಬ್ಬರನ್ನೊಬ್ಬರು ಪರಸ್ಪರ ಪ್ರೀತಿಸಿದ್ದರಿಂದ ತಮ್ಮಲ್ಲಿದ್ದ ಆಸ್ತಿಪಾಸ್ತಿಗಳನ್ನು ಪರಸ್ಪರ ಹಂಚಿಕೊಂಡಿದ್ದರು ***(ಅ.ಕೃ 2:42–47, 4:32–35).***

ಈ ಫಲಗಳು ನಮ್ಮಲ್ಲಿ ಕಂಡುಬರದಿದ್ದಲ್ಲಿ ಕಾರಣವೇನೆಂದು ಗಮನಿಸಬೇಕು. ಪ್ರಾರ್ಥನೆ ಹಾಗೂ ವಿವೇಚನಾಶಕ್ತಿಯ ಮೂಲಕ ಫಲಕೊಡದಿರಲು ಮೂಲ ಕಾರಣವೇನೆಂಬುದನ್ನು ಕಂಡುಹಿಡಿಯಬಹುದಾಗಿದೆ.

*"ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದುಕೊಳ್ಳುವರು"* ***(ಯೋಹಾನ 13:35).***

ಈ ರೀತಿಯ ಅಸ್ವಾಭಾವಿಕವಾದ ಬಲ ಹಾಗೂ ಪ್ರೀತಿಗೆ ಹೊರತಾಗಿ ಪವಿತ್ರಾತ್ಮನ ಸ್ನಾನದ ಮೂಲಕವಾಗಿ ಇತರ ವರಗಳನ್ನು ಹೊಂದಲಿದ್ದೇವೆ. 1 ಕೊರಿಂಥ 12:7–11 ರಲ್ಲಿ ಅವುಗಳನ್ನು ಈ ಮುಂದಿನಂತೆ ವಿವರಿಸಲಾಗಿದೆ – ಜ್ಞಾನವಾಕ್ಯ, ವಿದ್ಯಾವಾಕ್ಯ, ಶ್ರೇಷ್ಠ ನಂಬಿಕೆ, ವಾಸಿಮಾಡುವ ಹಾಗೂ ಮಹತ್ತುಗಳನ್ನು ಮಾಡುವ ವರ, ಪ್ರವಾದನಾ ವರ, ವಿವೇಚಿಸುವ ವರ, ವಾಣಿಗಳನ್ನಾಡುವ ಹಾಗೂ ಅದರ ಅರ್ಥವನ್ನು ಹೇಳುವ ವರ, ಇತ್ಯಾದಿ.



ಪವಿತ್ರಾತ್ಮನ ತುಂಬಿಸುವಿಕೆಯು ಕೇವಲ ಒಮ್ಮೆ ನಡೆಯುವ ಘಟನೆಯಲ್ಲ, ಯೋಹಾನ 20:22 ರಲ್ಲಿ ಯೇಸು ಶಿಷ್ಯರ ಮೇಲೆ ಊದಿ "ಪವಿತ್ರಾತ್ಮನ ವರಗಳನ್ನು ತಕ್ಕೊಳ್ಳಿರಿ" ಅಂದನು. ಅ.ಕೃ 2:4 ರಲ್ಲಿ ಎಲ್ಲಾ ವಿಶ್ವಾಸಿಗಳೂ ಹಾಗೂ ಮೊದಲಿನವರೇ ಮತ್ತೆ ಪವಿತ್ರಾತ್ಮನಿಂದ ತುಂಬಿಸಲ್ಪಟ್ಟ ಬಗ್ಗೆ ವಿವರಿಸಲಾಗಿದೆ ***(ಅ.ಕೃ 4:31).*** ನಾವು ಮತ್ತೆ ಮತ್ತೆ ಸತತವಾಗಿ ಆತನಿಂದ (ಪವಿತ್ರಾತ್ಮನಿಂದ) ತುಂಬಿಸಲ್ಪಡಬೇಕಾಗಿದೆ.

ಪವಿತ್ರಾತ್ಮನ ಸ್ನಾನ ಹಾಗೂ ತುಂಬಿಸುವಿಕೆಗಳನ್ನು ನಮ್ಮ ಜೀವಿತದಲ್ಲಿ ಹೆಚ್ಚಾಗಿ ಅನುಭವಿಸುವುದಕ್ಕಾಗಿ ನಾವು ಪರಲೋಕದ ತಂದೆಯನ್ನೇ ಬೇಡಿಕೊಳ್ಳಬೇಕಿದೆ. ಯೇಸುಕ್ರಿಸ್ತನನ್ನು ಧೈರ್ಯವಾಗಿ ಇತರರಿಗೆ ಸಾಕ್ಷೀಕರಿಸುವುದಕ್ಕೂ ನಮ್ಮ ಜೊತೆ ವಿಶ್ವಾಸಿಗಳನ್ನು ಪ್ರೀತಿಸುವುದಕ್ಕಾಗಿಯೂ ಜೊತೆ ವಿಶ್ವಾಸಿಗಳಿಗಾಗಿಯೂ ಹಾಗೂ ನಮ್ಮ ವಿರೋಧಿಗಳಿಗಾಗಿಯೂ ಪವಿತ್ರಾತ್ಮನ ಎಲ್ಲಾ ವರಗಳನ್ನೂ ದಯಪಾಲಿಸುವಂತೆ ಆತನನ್ನು ಬೇಡಿಕೊಳ್ಳೋಣ. ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನ ಬಲವನ್ನು ಹೊಂದುವವರೆಗೂ ನಾವು ಎಡೆಬಿಡದೆ ದೇವರನ್ನು ಬೇಡಿಕೊಳ್ಳಬೇಕಿದೆ ***(ಅ.ಕೃ 1:8; ಲೂಕ 11:13).*** ನಾವು ಬಲವನ್ನು ಹೊಂದುವುದರ ಉದ್ದೇಶವು – ಸಾಕ್ಷೀಕರಿಸಲು, ಯೇಸು ಮಾಡುತ್ತಿದ್ದ ಕಾರ್ಯಗಳನ್ನೇ ಮಾಡಲು, ಇತರರನ್ನು ಪ್ರೀತಿಸಲು ಹಾಗೂ ಜಯಕರವಾದ ಜೀವನವನ್ನು ನಡೆಸುವುದಕ್ಕಾಗಿದೆ.

**ಸಾಕ್ಷಿ**

***ಯೇಸು ನನ್ನನ್ನು ಆತ್ಮದಿಂದಲೂ ಬೆಂಕಿಯಿಂದಲೂ ಅಭಿಷೇಕಿಸಿದನು***

*"ನನ್ನ ಇಬ್ಬರು ಸ್ನೇಹಿತರೊಂದಿಗೆ ಈ ಬೋಧನಾ ಸಾಮಾಗ್ರಿಯನ್ನು ಓದಿದ ನಂತರವಾಗಿ ನಮ್ಮಲ್ಲಿನ ಕೆಲವು ಪಾಪಕಾರ್ಯಗಳಿಗಾಗಿ ಮಾನಸಾಂತರ ಪಟ್ಟು ಅರಿಕೆ ಮಾಡಿ ನಮ್ಮನ್ನು ವೇದನೆಪಡಿಸಿರುವವರನ್ನು ಕ್ಷಮಿಸಲಾಗಿ ನಮ್ಮಲ್ಲಿದ್ದ ಭಾರಗಳೆಲ್ಲವೂ ನೀಗಿಸಲ್ಪಟ್ಟ ಅನುಭವವಾಯಿತು. ಆ ನಂತರ ನಮ್ಮನ್ನು ತುಂಬಿಸುವಂತೆ ಪವಿತ್ರಾತ್ಮನನ್ನು ಆಹ್ವಾನಿಸಲಾಗಿ ನಮ್ಮಲ್ಲಿ ಸುಡುವಂತ ಅನುಭವವಾಗಿ ಪವಿತ್ರಾತ್ಮನಿಂದಲೂ ಬೆಂಕಿಯಿಂದಲೂ ದೀಕ್ಷಾಸ್ನಾನವಾದ ಅನುಭವ ಉಂಟಾಯಿತು."*

ಆತ್ಮೀಕ ಬೆಳವಣಿಗೆಯು ಒಂದು ಕ್ರಮ (ವಿಧಾನ) ವಾಗಿದೆ. ಪಕ್ವತೆ ಹೊಂದಿದ ಕ್ರೈಸ್ತನಾಗಿರುವುದಕ್ಕಾಗಿ ನಾವು ಪ್ರತಿದಿನ ಜೀವಸ್ವರೂಪನಾದ ನಮ್ಮ ಕರ್ತನ ಸಮೀಪಕ್ಕೆ ಬರಬೇಕಿದ್ದು, ನಾವು ಸತ್ಯವೇದವನ್ನು ಪ್ರತಿದಿನ ಓದುವವರೂ ಆತನ ವಾಕ್ಯಗಳನ್ನು ಧ್ಯಾನಿಸುವವರೂ ಆಗಿದ್ದು ಸುವಾರ್ತೆಯ ಸತ್ಯಾರ್ಥಗಳನ್ನು ನಾವು ನಂಬಿ ದೇವರ ವಾಗ್ದಾನಗಳಿಗೆ ಸ್ಪಂದಿಸುವವರೂ ಆಗಿದ್ದು, ಪಶ್ಚಾತ್ತಾಪ ಪಡುವವರೂ, ಕ್ಷಮಿಸುವವರೂ, ನಮ್ಮನ್ನು ಕರ್ತನಿಗಾಗಿ ಪುನರ್‌ಸಮರ್ಪಿತರೂ ಆಗಿದ್ದು ದೇವರ ಪ್ರೀತಿಯಿಂದ ತುಂಬಿಸಲ್ಪಟ್ಟವರಾಗಿ, ನಮ್ಮಲ್ಲಿಯೂ ನಮ್ಮ ಮೂಲಕವಾಗಿಯೂ ಕಾರ್ಯಮಾಡುವಂತೆ ಆತನನ್ನು ಆಹ್ವಾನಿಸುತ್ತಾ ಪವಿತ್ರಾತ್ಮನಿಂದ ನೂತನವಾಗಿ ತುಂಬಿಸಲ್ಪಡುವಂತೆಯೂ ಪ್ರಾರ್ಥಿಸುತ್ತಾ ಆತನ ಆಜ್ಞೆಗಳಿಗೆ ವಿಧೇಯರಾಗಿ ಜೀವಿಸೋಣ.

ಪ್ರತಿಯೊಂದು ಪ್ರಾರ್ಥನಾ ಕೂಟವನ್ನೂ ಪಶ್ಚಾತ್ತಾಪ ಹಾಗೂ ಕ್ಷಮಾಪಣೆಯ ಪ್ರಾರ್ಥನೆಯ ಜೊತೆಗೆ ಯೇಸುವನ್ನೂ ಪವಿತ್ರಾತ್ಮನನ್ನೂ ನಮ್ಮ ಹೃದಯಾಂತರಾಳದೊಳಕ್ಕೆ ಆಹ್ವಾನಿಸುವುದರೊಂದಿಗೆ ಮುಕ್ತಾಯಗೊಳಿಸುವುದೇ ಸೂಕ್ತ. ಪಶ್ಚಾತ್ತಾಪದ ವಿಭಾಗದಲ್ಲಿ

ಹೇಳಲ್ಪಟ್ಟಿರುವ "ಆತ್ಮೀಕ ಶ್ವಾಸೋಚ್ಚಾರಣೆ" ಯೇ ಇದಾಗಿದೆ. ಇದನ್ನು "ಪಾಪ ಹೊರಕ್ಕೆ, ಯೇಸು ಒಳಕ್ಕೆ" ಎಂದೂ ಕರೆಯುತ್ತೇವೆ. ಆ ಮೂಲಕ ದೈವೀಕವಲ್ಲದ ಯಾವುದನ್ನೂ ನಮ್ಮ ಹೃದಯ ಹಾಗೂ ಜೀವಿತದೊಳಕ್ಕೆ ಸೇರಿಸದಂತೆ ತಡೆಯುವವರಾಗಿರುತ್ತೇವೆ ***(ಮತ್ತಾಯ 12:43–46)*** ಹಾಗೂ ನಮ್ಮನ್ನು ಸಂಪೂರ್ಣವಾಗಿ ತುಂಬಿಸುವುದಕ್ಕಾಗಿ ಪವಿತ್ರಾತ್ಮನನ್ನು ಆಹ್ವಾನಿಸುವವರೂ ಆಗಿರುತ್ತೇವೆ.

ಇತರರೊಂದಿಗೆ ಪ್ರಾರ್ಥಿಸುವಾಗ ಪವಿತ್ರಾತ್ಮನಿಂದ ತಮ್ಮನ್ನು ತುಂಬಿಸುವಂತೆ ಅವರು ಪ್ರಾರ್ಥಿಸುತ್ತಿರುವುದನ್ನು ಗಮನಿಸಿರಿ, ಕಾಯಿರಿ ಹಾಗೂ ದೇವರು ಅವರ ಜೀವಿತದಲ್ಲಿ ಮಾಡುತ್ತಿರುವುದನ್ನು ನೋಡಿರಿ, ಆ ವ್ಯಕ್ತಿಯನ್ನು ಆಶೀರ್ವದಿಸಿರಿ.

ಆ ಉದ್ದೇಶಕ್ಕಾಗಿನ ಈ ಪ್ರಾರ್ಥನೆಯನ್ನು ಹೃದಯಾಂತರಾಳದಿಂದ ಗಟ್ಟಿಯಾಗಿ ಪ್ರಾರ್ಥಿಸಬೇಕಿದೆ.

**ಸಮರ್ಪಣೆ ಹಾಗೂ ಶುದ್ಧೀಕರಣಕ್ಕಾಗಿನ ಪ್ರಾರ್ಥನೆ**



"ಪರಲೋಕದ ತಂದೆಯೇ ನನ್ನ ಶರೀರ–ಪ್ರಾಣ–ಆತ್ಮಗಳನ್ನು ಸಂಪೂರ್ಣವಾಗಿ ನಿನಗೊಪ್ಪಿಸುತ್ತಿರುವೆನು. ನಿನ್ನ ಪವಿತ್ರಾತ್ಮನಿಂದ ನನ್ನನ್ನು ಸಂಪೂರ್ಣವಾಗಿ ತುಂಬಿ ತುಳುಕಿಸುವಂತೆ ಮಾಡುವ ಮೂಲಕ ನಾನು ಸಂಪೂರ್ಣವಾಗಿ ನಿನ್ನವನಾಗಿರುವಂತೆ ಸಹಾಯಿಸು. ಯೇಸುವಿನ ನಾಮದಲ್ಲಿ, ಆಮೆನ್."

# ದೇವರಿಂದ ಕೇಳಿಸಿಕೊಂಡು ಅದಕ್ಕೆ ವಿಧೇಯರಾಗುವಿಕೆ

ದೇವರಿಂದ ಕೇಳಿಸಿಕೊಂಡು ಅದಕ್ಕೆ ವಿಧೇಯರಾಗುವಿಕೆಯ ಪ್ರಾಮುಖ್ಯತೆಯನ್ನು ಹಳೆಯ ಹಾಗೂ ಹೊಸ ಒಡಂಬಡಿಕೆಗಳೆರಡರಲ್ಲಿಯೂ ಒತ್ತು ಕೊಟ್ಟು ಹೇಳಲಾಗಿದೆ. ಕರ್ತನಾದ ಯೇಸು ಸಹ ಈ ವಿಷಯದಲ್ಲಿ ಹೇಳಿರುವುದನ್ನು ಕೆಳಗಿನ ವಾಕ್ಯಗಳಲ್ಲಿ ಉಲ್ಲೇಖಿಸಲಾಗಿದೆ:

*"ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ. ನಾನು ಅವುಗಳನ್ನು ಬಲ್ಲೆನು, ಅವು ನನ್ನ ಹಿಂದೆ ಬರುತ್ತವೆ" **(ಯೋಹಾನ 10:27).***

*"ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ದಿಯುಳ್ಳ ಮನುಷ್ಯನನ್ನು ಹೋಲುವನು" **(ಮತ್ತಾಯ 7:24; ಲೂಕ 6:46–49).***

*"ಯಾರು ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯುತ್ತಾರೋ ಅವರೇ ನನಗೆ ತಾಯಿಯೂ, ಅಣ್ಣ – ತಮ್ಮಂದಿರೂ ಆಗಬೇಕು" **(ಲೂಕ 8:21).***

*"ನನ್ನನ್ನು ಸ್ವಾಮಿ, ಸ್ವಾಮಿ ಅನ್ನುವವರೆಲ್ಲರೂ ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನೆಸಬೇಡಿರಿ. ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು" **(ಮತ್ತಾಯ 7:21).***

ಮೇಲೆ ಹೇಳಲ್ಪಟ್ಟಿರುವ ಮತ್ತಾಯ ಹಾಗೂ ಲೂಕನ ಸುವಾರ್ತೆಗಳಲ್ಲಿನ ಯೇಸುವಿನ ಉಪದೇಶಗಳ ಪ್ರಕಾರ ದೇವರ ಚಿತ್ತಕ್ಕೆ ವಿಧೇಯರಾಗುವವರಿಗೆ ಮಾತ್ರ ನಿತ್ಯಜೀವ ಲಭಿಸಲಿದೆ. ದೇವರಿಂದ ಕೇಳಿಸಿಕೊಂಡು "ಆತನು ಏನು ಹೇಳಿದರೂ ಮಾಡುವುದು" ***(ಯೋಹಾನ 2:5)*** ಪ್ರತಿಯೊಬ್ಬ ವಿಶ್ವಾಸಿಗೂ ಪ್ರಾಮುಖ್ಯವಾಗಿದೆ.

*"ಹಾಕಿರುವ ಅಸ್ತಿವಾರವು ಯೇಸುಕ್ರಿಸ್ತನೇ; ಆ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ. ಆ ಅಸ್ತಿವಾರದ ಮೇಲೆ ಚಿನ್ನ ಬೆಳ್ಳಿ ರತ್ನ ಕಟ್ಟಿಗೆ ಹುಲ್ಲು ಆಪು ಮುಂತಾದವುಗಳಲ್ಲಿ ಯಾವುದರಿಂದ ಕಟ್ಟಿದರೂ ಅವರವರ ಕೆಲಸವು ವ್ಯಕ್ತವಾಗುವುದು. ಕ್ರಿಸ್ತನು ಬರುವ ದಿನವು ಬೆಂಕಿಯೊಡನೆ ಉದಯವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸುವುದು. ಅವರವರ ಕೆಲಸವೆಂಥದೋ ಆ ಬೆಂಕಿ ಶೋಧಿಸುವುದು. ಒಬ್ಬನು ಆ ಅಸ್ತಿವಾರದ ಮೇಲೆ ಕಟ್ಟಿದ್ದು ಉಳಿದರೆ ಅವನಿಗೆ ಸಂಬಳ ಬರುವುದು, ಒಬ್ಬನು ಕಟ್ಟಿದ್ದು ಸುಟ್ಟು ಹೋದರೆ ಅವನಿಗೆ ಸಂಬಳವು ನಷ್ಟವಾಗುವುದು. ತಾನಾದರೋ ರಕ್ಷಣೆ ಹೊಂದುವನು, ಆದರೆ ಬೆಂಕಿಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು" **(1 ಕೊರಿ 3:11–15).***

ಜಯಕರವಾದ ಕ್ರೈಸ್ತ ಜೀವಿತಕ್ಕಾಗಿ ದೇವರಿಂದ ಕೇಳಿಸಿಕೊಳ್ಳಬೇಕಿರುವುದು ಅತ್ಯಗತ್ಯವಾಗಿದೆ.

ದೇವರು ನಮ್ಮೊಂದಿಗೆ ಅನೇಕ ವಿಧಾನಗಳಲ್ಲಿ ಮಾತನಾಡುವನು. ನಾವು ದೇವರ ವಾಕ್ಯವನ್ನು ಓದಿ ಧ್ಯಾನಿಸುವಾಗಲೂ ಆತನ ಮಾತುಗಳು ನಮ್ಮ ಮೇಲೆ ಅಧಿಕವಾದ ಪ್ರಭಾವವನ್ನು ಬೀರುತ್ತದೆ. ಅದು ಕೆಲವು ಸನ್ನಿವೇಶಗಳಲ್ಲಿ ನಮ್ಮ ಶರೀರದಲ್ಲಿ ಜೋಮು ಹಿಡಿಯುವಷ್ಟು ಅಥವಾ ಕಣ್ಣೀರು ತರಿಸುವಷ್ಟು ಬಲವುಳ್ಳದ್ದಾಗಿರುತ್ತದೆ. ಇನ್ನೂ ಕೆಲವು ಸನ್ನಿವೇಷಗಳಲ್ಲಿ ದೇವರು ಚಿತ್ರಗಳು, ಕನಸುಗಳು ಅಥವಾ ನಮ್ಮ ಸುತ್ತಮುತ್ತಲಿರುವ ವಸ್ತುಗಳ ಮೂಲಕ ಪ್ರಕಟಿಸುವನು. ಸಾಮಾನ್ಯವಾಗಿ ಆತನು ನಮ್ಮೊಂದಿಗೆ ಮಂದ (ಶಾಂತ) ಸ್ವರದೊಂದಿಗೆ ಮಾತನಾಡುವಾಗ ***(1 ಅರಸು 19:12)*** ಅದೊಂದು ಆಲೋಚನೆಯಾಗಿ ನಮ್ಮ ತಿಳುವಳಿಕೆಗೆ ಬರುತ್ತದೆ. ಸಾಮಾನ್ಯವಾಗಿ ಪರಿಶುದ್ಧವೂ, ನೀತಿಯುಳ್ಳ ಹಾಗೂ ಸಕಾರಾತ್ಮಕವಾದ ಆಲೋಚನೆಯ ಮೂಲಕವಾಗಿ ಪವಿತ್ರಾತ್ಮನು ನಮ್ಮೊಂದಿಗೆ ಮಾತನಾಡುವನು. ಮರೆಯದಿರಿ – ಸಂತೈಸುವವನು ಸಂತೈಸುತ್ತಾನೆ ಹಾಗೂ ದೂಷಿಕನು ದೂಷಿಸುತ್ತಿರುತ್ತಾನೆ.

## ಸಾಕ್ಷಿ

### ಯೇಸುವನ್ನು ಸಂಧಿಸಿದ ಪ್ರಸಂಗ

*"ಬಹು ಕಾಲದಿಂದ ನಿರಾಶಳಾಗಿದ್ದ ನಾನು ಆತ್ಮಹತ್ಯೆಯ ಹಂತಕ್ಕೂ ಬಂದಿದ್ದೆ. ಆತ್ಮಹತ್ಯೆಯ ಚಿಂತನೆಯ ಬಗ್ಗೆ ಪಶ್ಚಾತ್ತಾಪಪಟ್ಟು ಯೇಸುವನ್ನು ಅಂಗೀಕರಿಸಿಕೊಂಡೆನು. ಶ್ರೇಷ್ಠನೂ ಕನಿಕರವುಳ್ಳವನೂ ಆದ ಯೇಸು ನನ್ನ ಮುಂದೆ ನಿಂತಿರುವ ದರ್ಶನ ನನಗಾಯಿತು. ಆತನು ನನ್ನನ್ನೆತ್ತಿ ತನ್ನ ತೋಳುಗಳಲ್ಲಿ ಆಲಂಗಿಸಿಕೊಂಡು ಹೀಗೆಂದನು – "ನೀನು ನನ್ನ ಸಾಕ್ಷಿಯಾಗಿರು ಹಾಗೂ ನಾನು ಯಾವಾಗಲೂ ನಿನ್ನೊಂದಿಗಿರುವೆ ಎಂಬುದನ್ನು ಮರೆಯದಿರು". ಬಹಳ ಸಂತುಷ್ಟಳಾದ ನಾನು ನನ್ನಲ್ಲಾದ ಬದಲಾವಣೆಗಳನ್ನು ನನ್ನನ್ನು ಬಲ್ಲವರೆಲ್ಲರಿಗೂ ತಿಳಿಸಲು ಆರಂಭಿಸಿದೆನು. ಕೆಲವು ಸನ್ನಿವೇಷಗಳಲ್ಲಿ ಯೇಸುವಿನ ಬಗ್ಗೆ ಇತರರಿಗೆ ತಿಳಿಸುವುದು ಅಷ್ಟು ಸರಳವಲ್ಲ. ಅಂತಹ ಸನ್ನಿವೇಷಗಳಲ್ಲಿಯೂ ಆತನು ನನಗಾಗಿ ಮಾಡಿರುವುದನ್ನೂ ಹಾಗೂ ಯಾವಾಗಲೂ ನನ್ನೊಂದಿಗೆ ಇದ್ದಾನೆಂಬುದನ್ನೂ ಜ್ಞಾಪಿಸಿಕೊಳ್ಳುತ್ತಿರುವೆನು."*

ದೇವರಿಂದ ಕೇಳಿಸಿಕೊಳ್ಳಲಿಕ್ಕಿರುವ ಇನ್ನೊಂದು ವಿಧಾನವೆಂದರೆ "ಅನ್ವೇಷಣಾ (ವಿಚಾರಣಾ) ಪ್ರಾರ್ಥನೆ" ಯ ಮೂಲಕವಾಗಿದೆ. ಅಲ್ಪಸಮಯ ಆತನನ್ನು ಆರಾಧಿಸಿ ನಮ್ಮ ಹೃದಯದಲ್ಲಿ ಮಾನಸಾಂತರ ಹಾಗೂ ಕ್ಷಮಿಸುವಿಕೆಯೊಂದಿಗೆ ಆತನ ಬಳಿಗೆ ಬರೋಣ ***(ಕೀರ್ತನೆ 139:23–24).*** ನೀನು ದೇವರೊಂದಿಗೆ ಸಮಾಧಾನ **(ಮೌನ)** ದಿಂದಿರುವಾಗ ಆತನನ್ನೊಂದು ಪ್ರಶ್ನೆ ಕೇಳಬಹುದು. ನೀನು ಅವಲೋಕಿಸದೇ ಇದ್ದ ಆಲೋಚನೆ (ವಿಷಯ) ಯು ಪ್ರಥಮವಾಗಿ ನಿನ್ನ ಮನಸ್ಸಿನೊಳಕ್ಕೆ ಬರುವುದಾದಲ್ಲಿ (ಲಿಖಿತ ರೂಪದಲ್ಲಿರುವ ಆತನ ವಾಕ್ಯಕ್ಕೆ ಅನುಗುಣವಾಗಿದ್ದಲ್ಲಿ) ಅದು ದೇವರು ನಿನ್ನೊಡನೆ ಮಾತನಾಡುತ್ತಿದ್ದಾನಷ್ಟೆ.

ದೇವರು ನಮ್ಮೊಂದಿಗೆ ಮಾತನಾಡುವಾಗ ನಾವು ಗಮನವಿಟ್ಟು ಕೇಳಿಸಿಕೊಂಡು ಪ್ರತಿಕ್ರಿಯಿಸಬೇಕೆಂದು ಆತನು ನಮ್ಮಿಂದ ಬಯಸುತ್ತಿದ್ದಾನೆ. ನಾವು ಆತನ ಸನ್ನಿಧಿಯಿಂದ ದೂರಕ್ಕೆ ಹೋಗದೆ ದೇವರ ಪ್ರಸನ್ನತೆ ಹಾಗೂ ಸಾಮಿಪ್ಯವನ್ನು ಅನುಭವಿಸುತ್ತಿರುವ "ಆ ಸ್ಥಳ" ದಲ್ಲೇ ಮೌನವಾಗಿದ್ದು ಆತನು ಪ್ರಕಟಿಸುವುದನ್ನು ಕೇಳಿಸಿಕೊಳ್ಳಬೇಕಿದೆ. ನಾವೇನು ಮಾಡಬೇಕೆಂದು ದೇವರು ಬಯಸುತ್ತಿರುವನೆಂಬುದರ ಬಗ್ಗೆ ಇನ್ನೂ ಹೆಚ್ಚಿನ ಸ್ಪಷ್ಟೀಕರಣವನ್ನು

ಆತನಿಂದ ಕೇಳಬಹುದಾಗಿದೆ. ನಾವೇನು ಮಾಡಬೇಕೆಂದು ಆತನು ಹೇಳುತ್ತಿರುವನೋ ಅದಕ್ಕೆ ನಾವು ವಿಧೇಯರಾಗಿ ಶೀಘ್ರವಾಗಿಯೂ, ಅತ್ಯುತ್ತಮವಾಗಿಯೂ ಮಾಡಬೇಕಾಗಿದೆ. ಸತ್ಯವೇದದಲ್ಲಿ ಅನೇಕರು ಆ ರೀತಿ ಮಾಡಿರುವರು, ಕೆಲವರಿಗದು ಹುಚ್ಚುತನವಾಗಿ ತೋರಿದರೂ ಮಾಡಿದ್ದಾರೆ (ಉದಾ: ನೋಹನು, ***ಆದಿ 6–10*** ಅಧ್ಯಾಯಗಳು). ಆತನು ನಮಗೆ ಹೇಳುವ ಕಾರ್ಯವನ್ನು ಪವಿತ್ರಾತ್ಮನು ನಮಗೆ ಸಹಾಯ ಮಾಡುವನೆಂಬ ಭರವಸೆಯೊಂದಿಗೆ ಮಾಡಬೇಕಿದೆ. **ನಾವು ಮಾಡಲಿಕ್ಕಾಗುವುದನ್ನು ನಾವು ಮಾಡುವಾಗ ತಾನು ಮಾತ್ರ ಮಾಡಬಹುದಾಗಿರುವುದನ್ನು ದೇವರು ಮಾಡುವನು.** ಉದಾ: – ಪೇತ್ರನು ಅದ್ಭುತವಾಗಿ ಸೆರೆಮನೆಯಿಂದ ಬಿಡುಗಡೆ ಹೊಂದಿದ್ದು ***(ಅಕೃ 12:7–8),*** ನಡು ಕಟ್ಟಿಕೊಂಡು ಕೆರಗಳನ್ನು ಮೆಟ್ಟಿಕೊಳ್ಳಲು ಹೇಳಿದಾಗ ಅವನು ಹಾಗೆಯೇ ಮಾಡಲು ದೇವರು ಅವನ ಸರಪಣಿಗಳನ್ನು ಬಿಚ್ಚಿ ಸೆರೆಮನೆಯಿಂದ ವಿಮೋಚಿಸಿ ಹೊರತಂದನು.

ನಮ್ಮೊಂದಿಗೆ ಮಾತನಾಡುತ್ತಿರುವವನು ದೇವರೋ ಅಥವಾ ನಮ್ಮದೇ ಸ್ವಂತ ಆಲೋಚನೆಯೋ ಅಥವಾ ಅದು ನಮ್ಮ ವಿರೋಧಿಯು ನಮಗೆ ಕೊಡುತ್ತಿರುವ ಸಲಹೆಗಳೋ ಎಂದು ತಿಳಿಯಲು ವಿವೇಚನೆಯ ಅಗತ್ಯತೆಯುಂಟು. ಅದರ ಮೂಲ (ಆರಂಭ) ವು ಬೆಳಕಿನ ರಾಜ್ಯಕ್ಕೆ ಸಂಬಂಧಿಸಿದ್ದೋ ಅಥವಾ ಕತ್ತಲೆಯ ರಾಜ್ಯಕ್ಕೆ ಸಂಬಂಧಿಸಿದ್ದೋ ಎಂದು ಅರಿಯುವುದೇ ವಿವೇಚಿಸುವಿಕೆಯ ಒಂದು ಸುಲಭ ವಿಧಾನವಾಗಿದೆ. ಅದು ಕತ್ತಲೆಯ ಸಾಮ್ರಾಜ್ಯಕ್ಕೆ ಸಂಬಂಧಿಸಿದ್ದಾದಲ್ಲಿ ಅದರ ಗೊಡವೆಗೆ ಹೋಗದೆ ದೂರವಿರಿ. ಸೈತಾನನು **ಸಲಹೆಯನ್ನೀಯುವನು** ***(ಆದಿ 3:1),*** **ದೇವರು ಆಜ್ಞಾಪಿಸುವನು** ***(ಆದಿ 1:3, 2:16–17).***

ನೀವೊಂದು ಹೊಸ ಅಥವಾ ವಿಶಿಷ್ಟವಾದ ಕಾರ್ಯವನ್ನಾಗಲೀ ಮಾಡಲು ದೇವರು ಹೇಳುವಾಗ ಆತನು ಅದನ್ನು ಎರಡು ಅಥವಾ ಮೂವರು ಸಾಕ್ಷಿಗಳ ಮೂಲಕ ದೃಢಪಡಿಸುವನು – ***(ಧರ್ಮೋ 19:15; ಮತ್ತಾಯ 18:16).*** ಇತರರು ನಿಮ್ಮ ಬಳಿಗೆ ಬಂದು "ಪ್ರವಾದನಾ ವಾಕ್ಯ" ವೊಂದನ್ನು ತಿಳಿಸಿದಾದಲ್ಲಿ ಅದು ಈ ಮೊದಲು ನಿಮಗೆ ತಿಳಿಸಿರುವ ವಿಷಯಕ್ಕೆ ಅನುಗುಣವಾಗಿದ್ದರೆ ಅದು ದೇವರಿಂದಲೇ ತಿಳಿಸಲ್ಪಟ್ಟದ್ದಾಗಿರುತ್ತದೆ. ಅದು **ತನ್ನ ಮಾತೇ ಎಂದು ನಿಮಗೆ ದೃಢೀಕರಿಸುವುದಕ್ಕಾಗಿ** ದೇವರು ಅಂತಹವರನ್ನು ನಿಮ್ಮ ಬಳಿಗೆ ಕಳುಹಿಸಿರುವನಷ್ಟೆ. ಕೆಲವು ಸಾರಿ ಪ್ರವಾದನೆಯ ವಿಷಯಗಳು ಸ್ಪಷ್ಟವಾಗಿರುವುದಿಲ್ಲ ***(1 ಕೊರಿ 13:9),*** ಆದ್ದರಿಂದ ಪ್ರವಾದನೆಯ ಅರ್ಥವೇನೆಂದೂ ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದೂ ಪ್ರಾರ್ಥನಾಪೂರ್ವಕವಾಗಿ ವಿವೇಚಿಸಿ ತಿಳಿದುಕೊಳ್ಳುವವರೂ ಆಗಿರಬೇಕು. ಅದರಲ್ಲಿ ನಾವು ಮಾಡಬೇಕಾಗಿರುವ ಕಾರ್ಯವೊಂದಿದ್ದರೆ ನಾವು ಶೀಘ್ರವಾಗಿ ಅದನ್ನು ವಿಧೇಯತ್ವದಿಂದ ನೆರವೇರಿಸಬೇಕೆಂದೂ ಆತನು ಬಯಸುತ್ತಿದ್ದಾನೆ.

> "ನಾನು ಮಾಡುತ್ತಿದ್ದ ಉದ್ಯೋಗವನ್ನು ಬಿಟ್ಟು ನಾನೀಗ ಸೇವೆಗೆ ಬಂದಿರುವೆ" ನೆಂದು ಅನೇಕರು ಹೇಳುವುದನ್ನು ಕೇಳಿಸಿಕೊಂಡಿರುವೆನು. ಅದಕ್ಕೆ ನನ್ನ ಪ್ರತ್ಯುತ್ತರವು "ನೀವೇಕೆ ಉದ್ಯೋಗದಲ್ಲಿರುವಾಗಲೇ ಸೇವೆ ಮಾಡಿರಲಿಲ್ಲ ಎಂಬುದಾಗಿತ್ತು."
>
> (ಡಂಕನ್ ವಾಟ್ಕಿನ್ಸನ್, ಇರ್ನೆಟ್)

ದೇವರ ಚಿತ್ತವು ನಮ್ಮ ಆಲೋಚನೆಗಳ ಮೇಲೆ ದೊರೆತನ ನಡೆಸುವಾಗ ನಾವು ಆತನಿಗೆ ಒಳಗಾದವರಾಗಿರುತ್ತೇವೆ. ಇದೊಂದು ಆಳ್ವಿಕೆ(ದೊರೆತನ)ಯ ಬದಲಾವಣೆಯಾಗಿದ್ದು ನಮ್ಮ ಜೀವನದ ಮೇಲಿದ್ದ ನಮ್ಮ ಆಳ್ವಿಕೆಯನ್ನು ಆತನಿಗೊಪ್ಪಿಸುತ್ತಿದ್ದೇವೆ ಹಾಗೂ ಪ್ರೀತಿಸುವ ಪವಿತ್ರಾತ್ಮನ ವ್ಯವಸ್ಥಾಪಕತ್ವದಲ್ಲಿ ಪಾಪ ಹಾಗೂ ಸ್ವಾರ್ಥತೆಯನ್ನು ತ್ಯಜಿಸಿ ಕ್ರಿಸ್ತನ ಹಿಂಬಾಲಕರೂ ದೇವರ ಸೇವಕರೂ ಆಗುತ್ತಿದ್ದೇವಷ್ಟೆ. ಹಾಗಾಗುವಾಗ ಆತನು ಬಯಸುವಲ್ಲಿ ಮಾತ್ರ ನಾವು ಹೋಗುವವರೂ, ಆತನಿಚ್ಚಿಸುವುದನ್ನು ಮಾತ್ರವೇ ನಾವು ಮಾಡುವವರೂ, ಆತನು ಬಯಸುವುದನ್ನು ಮಾತ್ರ ನಾವು ಮಾತನಾಡುವವರೂ ಹಾಗೂ ಆತನು ಬಯಸುವಂತೆ ನಾವು ಮಾರ್ಪಡುವವರೂ ಆಗಿರುತ್ತೇವೆ. ದೇವರ ಚಿತ್ತಕ್ಕೆ ಅನುಗುಣವಾಗಿ ನಮ್ಮನ್ನೇ ಸಮರ್ಪಿಸಿಕೊಡುವಾಗ ಕರ್ತನ ಪ್ರಾರ್ಥನೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವ – "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ನೆರವೇರಲಿ" ಎಂಬುದು ನಮ್ಮಲ್ಲಿ ನಿಜವಾಗಿ ಮಾರ್ಪಡುವುದು. ಅದಕ್ಕೆ ಮೌಲ್ಯ (ಬೆಲೆ) ಯನ್ನು ಸಮರ್ಪಿಸಬೇಕಾಗಿದ್ದರೂ ನಾವು ನಮ್ಮ ಹಳೆಯ ಚಿಂತನೆಗಳಿಗೂ ಹಾಗೂ ಯೋಗ್ಯತೆಗಳ ಪಾಲಿಗೂ ಸಾಯುವಾಗ ಮಾತ್ರವೇ ಆತನಲ್ಲಿರುವ ಅಸ್ವಾಭಾವಿಕವಾದ ಯೋಗ್ಯತೆಗಳಲ್ಲಿ ನಾವು ಕಾರ್ಯನಿರ್ವಹಿಸಲು ಶಕ್ತರಾಗುತ್ತೇವೆ.

ವಯಸ್ಕನಾದ ವ್ಯಕ್ತಿಯೊಬ್ಬರು ತನ್ನ ವಠಾರದಲ್ಲಿ ಕುಳಿತು ದೇವರು ತನಗೆ ಕೊಟ್ಟ ಆಶೀರ್ವಾದಗಳಿಗಾಗಿಯೂ ತಾನು ಮಾಡಿದ ಸೇವೆಗಳಿಗಾಗಿಯೂ ದೇವರನ್ನು ಸ್ತುತಿಸುತ್ತಿದ್ದನು. ಆಗ ಕರ್ತನು ಅವನೊಂದಿಗೆ "ನನ್ನ ಮಗನೇ ನಾನು ನಿನ್ನನ್ನು ಸೇವೆಗಾಗಿ ಆಫ್ರಿಕಾ ಖಂಡಕ್ಕೆ ಕಳುಹಿಸಲು ಕರೆದಿದ್ದೆ" ಅನ್ನಲು ಆಶ್ಚರ್ಯದಿಂದ ಅವನು – "ನನ್ನ ಮಗನಲ್ಲಿ ಬಹಳಷ್ಟು ಖಾಯಿಲೆಗಳಿದ್ದು ನಾವು ಅವನನ್ನು ಬಿಟ್ಟು ದೂರ ಹೋಗಲಾರದಾದೆವು ಹಾಗೂ ಬಹಳಷ್ಟು ಹಣಕಾಸಿನ ಅಗತ್ಯತೆಗಳೂ ಇದ್ದವಷ್ಟೆ" ಎಂದನು. ಅದಕ್ಕೆ ಕರ್ತನು "ನೀನು ಆಫ್ರಿಕಾಗೆ ಹೋಗಿದ್ದರೆ ಈ ಸಮಸ್ಯೆಗಳಾವುವೂ ಇರುತ್ತಿರಲಿಲ್ಲ" ವೆಂದನು. ತನ್ನ ಜೀವಿತದ ಉಳಿದ ಭಾಗವನ್ನು ಯೌವನಸ್ಥರು ದೇವರ ವಾಕ್ಯವನ್ನು ಕೇಳಿಸಿಕೊಂಡು ವಿಧೇಯರಾಗಿರುವಂತೆ ಪ್ರೋತ್ಸಾಹ ಗೊಳಿಸಲು ಉಪಯೋಗಿಸಿ ಕೊಂಡನು.

(ಜಾನ್ ಹಂಟರ್, ಹೀಲಿಂಗ್ ದಿ ಹೋಲ್‌ಮ್ಯಾನ್ ಹ್ಯಾಂಡ್ ಬುಕ್, 2006)

ಹಾಡುಗಾರನೊಬ್ಬನು ಇದನ್ನು ಸಂಕ್ಷಿಪ್ತವಾಗಿ ಹಾಡೊಂದರಲ್ಲಿ "ಸರ್ವವನ್ನೂ ಯೇಸುವಿಗೆ ಸಮರ್ಪಿಸುತ್ತಿದ್ದೇನೆ, ಸರ್ವವೂ ಆತನಿಗೆ ಮುಕ್ತವಾಗಿ ಕೊಟ್ಟಿರುವೆನು..." ಎಂದು ತಿಳಿಸಿರುತ್ತಾರೆ.


ಆತ್ಮೀಕ ಬೆಳವಣಿಗೆಗಾಗಿನ ಪೌಲನ ಪ್ರಾರ್ಥನೆಯನ್ನು ಗಮನಿಸಿರಿ.

*"ಹೀಗಿರಲಾಗಿ ಯಾವ ತಂದೆಯಿಂದ ಭೂಪರಲೋಕಗಳಲ್ಲಿರುವ ಪ್ರತಿ ಜನವು ಹೆಸರು ತೆಗೆದುಕೊಳ್ಳುತ್ತದೋ ಆ ತಂದೆಯ ಮುಂದೆ ನಾನು ಮೊಣಕಾಲೂರಿಕೊಂಡು – ನೀವು ದೇವರಾತ್ಮನ ಮೂಲಕವಾಗಿ ಆಂತರ್ಯದಲ್ಲಿ ವಿಶೇಷ ಬಲ ಹೊಂದಿದವರಾಗುವ ಹಾಗೆಯೂ ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ... ದೇವರ ಸಂಪೂರ್ಣತೆಯಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ. ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯಧಿಕವಾದುದನ್ನು*

ಮಾಡಲು ಶಕ್ತನಾದ ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ, ಆಮೆನ್" ***(ಎಫೆಸ 3:14–21).***

ಪೌಲನು ತನ್ನ ಸ್ವಂತ ಆತ್ಮೀಕ ಬೆಳವಣಿಗೆಗಳ ಬಗ್ಗೆ ಹೀಗೆ ಉಲ್ಲೇಖಿಸಿರುವನು "ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ" ***(ಪಿಲಿಪ್ಪಿ 3:14).***

# ಕರೆಯುವಿಕೆ



ಯೇಸುವಿನ ಕರೆಯುವಿಕೆಯನ್ನು ಅನೇಕರು ತಮ್ಮ ಜೀವನದಲ್ಲಿ ನೆರವೇರಿಸುತ್ತಿಲ್ಲ. ಅದಕ್ಕೆ ಕಾರಣ ದೇವರಿಂದ ತಾವು ಹೊಂದಿರುವ ವಿಶಿಷ್ಟವಾದ ಕರೆಯುವಿಕೆ ಹಾಗೂ ಸೇವೆಯ ಬಗ್ಗೆ ಅನೇಕರು ತಿಳುವಳಿಕೆ ಇಲ್ಲದವರಾಗಿದ್ದಾರೆ ಎಂದು ತೋಚುತ್ತದೆ. ನಮ್ಮ ಕರೆಯುವಿಕೆಯು ನಮ್ಮಲ್ಲಿರುವ ಸ್ವಾಭಾವಿಕವಾದ ಯೋಗ್ಯತೆಗಳನ್ನೂ ಹಾಗೂ ದೇವರು ಕೊಟ್ಟಿರುವ ವರದಾನಗಳನ್ನೂ ತಿಳಿದು ಉಪಯೋಗಿಸುವುದಕ್ಕಿಂತಲೂ ಮಿಗಿಲಾದುದ್ದಾಗಿದೆ. ಅದಕ್ಕೆ ಆತನು ನಮ್ಮ ಮುಂದಿಟ್ಟಿರುವ ಸವಾಲುಗಳ ನೆರವೇರಿಕೆಗಾಗಿ ಆತನಿಂದ ಲಭ್ಯವಿರುವ ಶ್ರೇಷ್ಟ ವಿಧಾನದ ಆತ್ಮೀಕ ವರದಾನಗಳ ಅಗತ್ಯತೆಯುಂಟು. ಈ ರೀತಿಯಾಗಿ ನಾವು ಸಂಪೂರ್ಣವಾಗಿ ದೇವರನ್ನೇ ಆತುಕೊಳ್ಳುವಾಗ ಮಾತ್ರವೇ ನಾವು ದೇವರ ಬಲದಿಂದಲೇ ಆ ಸವಾಲುಗಳನ್ನು ನೆರವೇರಿಸಲು ಸಾಧ್ಯವಾಯಿತೆಂದು ಅರಿತುಕೊಳ್ಳಲಿದ್ದೇವೆ.

ನಿಮ್ಮ ಪಾದಗಳನ್ನು ಚಲಿಸುವಂತೆ ಮಾಡಲು ನಿಮಗೆ ಮನಸ್ಸು ಇಲ್ಲದಿದ್ದಲ್ಲಿ ನಿಮ್ಮ ಹೆಜ್ಜೆಗಳನ್ನು ಕಾಯುವಂತೆ ದೇವರನ್ನು ಕೇಳಿಕೊಳ್ಳಲಾಗದು.

ಪ್ರಥಮವಾಗಿ, ನಾವು ಸಂಪೂರ್ಣ ಸಮರ್ಪಿತರಾದ ಕ್ರಿಸ್ತನ ಹಿಂಬಾಲಕರಾಗಿ ರುವುದಕ್ಕಾಗಿ ಕರೆಯಲ್ಪಟ್ಟಿರುತ್ತೇವೆ. ನಾವು ಇತರರ ಅಧೀನದಲ್ಲಿ ಕೆಲಸ ಮಾಡುವವರಾಗಿದ್ದರೂ ಅಥವಾ ನಮ್ಮ ಸ್ವಂತ ವ್ಯಾಪಾರ – ವ್ಯವಹಾರಗಳನ್ನು ಹೊಂದಿದ್ದರೂ ನಾವು ಸಂಪೂರ್ಣವಾಗಿ ಕ್ರಿಸ್ತನಿಗೆ ಸಮರ್ಪಿತರಾಗಿರಬೇಕು. ನಾವು ಕ್ರಿಸ್ತನಿಗಾಗಿ ಸಂಪೂರ್ಣವಾಗಿ ಪ್ರಾರ್ಥನೆ, ಸ್ತುತಿ, ಸಾಕ್ಷೀಕರಿಸುವಿಕೆಗಳಿಗಾಗಿ ಸಮರ್ಪಿತರಾಗಿರೋಣ. ಲೌಕಿಕರು ಲೋಕ ವ್ಯವಹಾರಗಳಲ್ಲಿ ತಲ್ಲೀನರಾಗಿರುವಾಗ ನಾವಾದರೋ ಅವೆಲ್ಲವುಗಳಿಂದ ವಿಮುಕ್ತರಾದ ರಾಜವಂಶಸ್ಥರಾದ ಯಾಜಕರಾಗಿ ಆತನ ಪವಿತ್ರವಾದ ಸೇವೆಯನ್ನು ಉತ್ಸಾಹದಿಂದ ಮಾಡುವವರಾಗಿರೋಣ.

ಎರಡನೆಯದಾಗಿ, ಯೇಸು ತನ್ನನ್ನು ನಂಬಿರುವವರೆಲ್ಲರಿಗೂ ಶ್ರೇಷ್ಟವಾದ ಅಪ್ಪಣೆಯನ್ನು ಕೊಟ್ಟಿರುವನು ***(ಮತ್ತಾಯ 28:18–20; ಮಾರ್ಕ 16:15–18; ಲೂಕ 24:46–48).*** ಪ್ರತಿಯೊಂದು ಜನಾಂಗದ ಪ್ರತಿಯೊಬ್ಬರಿಗೂ ಸುವಾರ್ತೆಯ ಸಂದೇಶವು

ಸಾರಲ್ಪಡುವವರೆಗೂ ಆತನು ಹಿಂತಿರುಗಿ ಬರಲಾರನು. ಇದು ಕರ್ತನಿಂದ ಪ್ರತಿಯೊಬ್ಬರಿಗೂ ಕೊಡಲ್ಪಟ್ಟಿರುವ ಶ್ರೇಷ್ಠವಾದ ಜವಾಬ್ದಾರಿಕೆಯಾಗಿದೆ.

ಈ ಶ್ರೇಷ್ಠವಾದ ಅಪ್ಪಣೆಗೆ ಸಂಬಂಧಿಸಿದಂತೆ ಯೇಸು ಜನರಿಗೆ ವಿಶಿಷ್ಟವಾದ ಹಾಗೂ ಜವಾಬ್ದಾರಿಕೆಯುತವಾದ ಕರೆಯುವಿಕೆಯನ್ನೂ ಸಹ ಕೊಟ್ಟಿರುವನು.

> ದೇವರಿಗಾಗಿ ನೀನು ಮಾಡುತ್ತಿರುವ ಎಲ್ಲಾ ಕಾರ್ಯಗಳ ಬಗ್ಗೆ ಪಟ್ಟಿ ಮಾಡಿದ ನಂತರ "ಇವುಗಳನ್ನೆಲ್ಲಾ ಮಾಡಲು ಆತನು ನನಗೆ ಹೇಳಿರುವನೇ?" ಎಂದು ನಿನ್ನನ್ನೇ ನೀನು ಪ್ರಶ್ನಿಸಿಕೋ. ನಿನ್ನ ಉತ್ತರವು "ಇಲ್ಲ" ಅಥವಾ "ಗೊತ್ತಿಲ್ಲ" ಎಂಬುದಾಗಿದ್ದಲ್ಲಿ ನೀನು ಮಾಡುತ್ತಿರುವ ಕಾರ್ಯಗಳ ಬಗ್ಗೆ ಪುನರ್ ಚಿಂತಿಸುವದು ಉತ್ತಮವಾಗಿರುತ್ತದೆ.
>
> (ಡಂಕನ್ ವಾಟ್‌ಕಿನ್‌ಸನ್, ಐರ್ನೆಟ್, 2004)

ಯಾವ ಕಾರ್ಯಕ್ಕಾಗಿ ತಾವು ಕರೆಯಲ್ಪಟ್ಟಿರುತ್ತೇವೆಂದು ಸ್ಪಷ್ಟವಾಗಿ ಅರಿಯದ ಲೇಖಕರು ಅದಕ್ಕಾಗಿ ಗಂಭೀರವಾಗಿ ದೇವರ ಚಿತ್ತವನ್ನು ಹುಡುಕುತ್ತಿದ್ದಾಗಲೇ ಈ ಮುಂದಣ ಪ್ರಾರ್ಥನೆಯನ್ನು[8] ಅವರು ಕಂಡುಕೊಂಡರು. ಈ ಪ್ರಾರ್ಥನೆಯನ್ನು ಆರಂಭಿಸಿ ಮೂರು ವಾರಗಳು ಕಳೆಯುವುದರೊಳಗಾಗಿ ದೇವರು ತನ್ನ ಕರೆಯುವಿಕೆಯನ್ನು ಲೇಖಕರಿಗೆ ಪ್ರಕಟಿಸಿದನು.

**ದೈವಿಕ ಕರೆಯುವಿಕೆಯನ್ನು ನಿಮ್ಮ ಜೀವಿತದಲ್ಲಿ ಪ್ರಕಟಗೊಳಿಸುವುದಕ್ಕಾಗಿನ ಪ್ರಾರ್ಥನೆ**



"ಪರಲೋಕದಲ್ಲಿರುವ ತಂದೆಯೇ – ಯಾವ ಜನರ ಮಧ್ಯದಲ್ಲಿ ಸೇವೆ ಮಾಡಲು ಕರೆಯುತ್ತಿರುವೆಯೋ ಅಂತಹವರ ಮಧ್ಯದಲ್ಲಿ ಸೇವೆ ಮಾಡಲು ನಿನ್ನ ಹೃದಯವನ್ನು ನನಗೆ ದಯಪಾಲಿಸು. ಯೇಸುವಿನ ನಾಮದಲ್ಲಿ ಆಮೆನ್."

ದೈವೀಕ ಕರೆಯುವಿಕೆಯ ಉದ್ದೇಶವನ್ನು ನಮ್ಮ ಜೀವಿತದಲ್ಲಿ ಗ್ರಹಿಸಿಕೊಂಡಾಗ – ಅದು ದೇವರು ನಮಗೋಸ್ಕರವಿಟ್ಟಿರುವ ಅತ್ಯುತ್ತಮವಾದ್ದರಿಂದ ನಾವದನ್ನು ಅತ್ಯಾಸಕ್ತಿಯಿಂದ ಮಾಡುವವರಾಗಿರುತ್ತೇವೆ. ಈ ಕಾರಣಕ್ಕಾಗಿಯೇ ನಾವು ಸೃಷ್ಟಿಸಲ್ಪಟ್ಟವರಾಗಿರುವುದರಿಂದ ಇದು ದೇವರಿಂದ ನಮಗೋಸ್ಕರ ಇಟ್ಟಿರುವ ಸ್ಪಷ್ಟವಾದ ಆಲೋಚನೆಯೆಂದು ಭರವಸೆಯುಳ್ಳವರಾಗಿರಬಹುದಾಗಿದೆ.

*"ನಾವು ಆತನ ನಿರ್ಮಾಣ, ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡೆಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು"* ***(ಎಫೆಸ 2:10).***

ತಾನು ನಮ್ಮೊಂದಿಗೆ ಎಲ್ಲಾ ದಿವಸ ಇರುವೆನೆಂದು ಯೇಸು ವಾಗ್ದಾನ ಮಾಡಿರುವನು!

*"...ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ, ನೋಡಿರಿ ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ"* ***(ಮತ್ತಾಯ 28:20).***

[8] *ಎಸ್ತೇರ್ ಬೇಕರ್‌ರವರ, ಐ ಒನ್ಸ್ ವಾಸ್ ಎ ಬುದ್ದಿಷ್ಟ್ ನನ್, 2009, ಇಂಟರ್‌ವಾರ್ಸಿಟಿ ಪ್ರೆಸ್.*

## ಸಾಕ್ಷಿ

## ಯೇಸು ನಮ್ಮನ್ನು ಉನ್ನತ ಸ್ಥಿತಿಗೆ ತಂದದ್ದು


*“ನಾನೂ ನನ್ನ ಪತ್ನಿಯೂ ಈ ಪುಸ್ತಕದ ಪ್ರತಿಯೊಂದು ಪುಟಗಳನ್ನೂ ಓದಿ ಕರೆಯುವಿಕೆ ಎಂಬ ಅಧ್ಯಾಯದಲ್ಲಿನ ಪ್ರಾರ್ಥನೆಯನ್ನೂ ಸಹ ಹೃದಯಾಂತರಾಳದಿಂದ ಪ್ರಾರ್ಥಿಸಲಾಗಿ ಕೆಲವೇ ವಾರಗಳಲ್ಲಿ ದೇವರು ನಮ್ಮೊಂದಿಗೆ ಮಾತನಾಡಿ ನಾವೀಗ ಅನೇಕ ವರ್ಷಗಳಿಂದ ಮಾಡುತ್ತಿರುವ ಸೇವೆಯನ್ನು ಬಿಟ್ಟು ತ್ಯಾಗದೊಂದಿಗೆ ಬಹು ಪ್ರಯಾಣಗಳನ್ನು ಮಾಡಿ ಬೋಧನಾ ಸೇವೆಯನ್ನು ಮಾಡುವಂತೆ ನನ್ನನ್ನು ಪ್ರೇರೇಪಿಸುತ್ತಿರುವುದನ್ನು ಅರಿತುಕೊಂಡೆನು. ಕೇವಲ 3 ತಿಂಗಳಲ್ಲಿ ಕರ್ತನೊಂದು ಅಸಾಮಾನ್ಯ ಕಾರ್ಯವೊಂದನ್ನು ಮಾಡಲಾಗಿ ನಾವೀಗ ಮಾಡುತ್ತಿರುವ ಕೆಲಸವನ್ನು ಬಿಡಲಾಗಿ ಕರ್ತನು ತಾನೇ ಹೊಸ ಆರ್ಥಿಕ ಮೂಲಗಳನ್ನು ಅದ್ಭುತವಾಗಿ ಒದಗಿಸಿದನು. ಆಗ ನನ್ನ ಪತ್ನಿಯ ಕಣ್ಣುಗಳು ಸಂತೋಷದಿಂದ ತುಂಬಲಾಗಿ ‘ಇದೇ ಪ್ರಥಮ ಸಾರಿ ನಮ್ಮ ಕುಟುಂಬಕ್ಕೊಂದು ಶ್ರೇಷ್ಟ ಭರವಸೆಯುಂಟು’ ಅಂದಳು.”*

# ಪ್ರಾರ್ಥನಾ ಸೇವೆಗಾಗಿ ಗಮನಿಸಬೇಕಾದ ಪ್ರಾಯೋಗಿಕ ವಿಷಯಗಳು

ಈ ಸೇವೆಯ ಜವಾಬ್ದಾರಿಕೆಯನ್ನು ಹೊತ್ತಿರುವ ಸಭೆ ಅಥವಾ ಸಭಾಪಾಲಕರಿಗೆ ಪ್ರಾಯೋಗಿಕ ಪರಿಗಣಿಸುವಿಕೆಗಳ ಬಗ್ಗೆ ಒಮ್ಮತದ ನಿಯಮಾಚಾರವೊಂದಿರಬೇಕು. ಅದು ಇಲ್ಲದಿದ್ದಲ್ಲಿ ಅದಕ್ಕೆ ಅಗತ್ಯವಿರುವ ಕೆಲವು ಮಾರ್ಗಸೂಚಿಗಳನ್ನು ಕೆಳಗೆ ನಮೂದಿಸಲಾಗಿದೆ.

## *ಪ್ರಾರ್ಥನಾ ಸೇವೆಯ ಬಗ್ಗೆ ಮಾರ್ಗಸೂಚಿಗಳು*

**ಪ್ರಾರ್ಥನಾ ಸೇವೆಯು ದೇಶವೊಂದರ ಕಾನೂನು ವ್ಯವಸ್ಥೆಗೆ ಅನುಗುಣವಾಗಿಯೂ ಹಾಗೂ ಮೇಲ್ವಿಚಾರಕರಾಗಿರುವ ಸಭಾಪಾಲಕರೊಂದಿಗಿನ ಒಡಂಬಡಿಕೆ ಹಾಗೂ ಅಧಿಕಾರಕ್ಕೆ ಒಳಪಟ್ಟು ನಡೆಯಲಿ.**



ಗಮನಿಸಿ: ಈ ಸೇವೆಯಲ್ಲಿ ಸೇವೆಯನ್ನು ಹೊಂದುವ ವ್ಯಕ್ತಿಯು ಪ್ರಥಮವಾಗಿ ಮಾನಸಾಂತರ ಹಾಗೂ ಕ್ಷಮಾಪಣೆಗಳಿಗಾಗಿ **ಗಟ್ಟಿಯಾಗಿ** ಪ್ರಾರ್ಥಿಸಬೇಕಿರುತ್ತದೆ. ಆ ಮೂಲಕವಾಗಿ ಪ್ರಾರ್ಥನಾ ಸೇವಕನು ಕೇಳಿಸಿಕೊಂಡು ಜನರನ್ನು ಮುನ್ನಡೆಸಬೇಕು ಹಾಗೂ ಅವರೊಂದಿಗೆ ಪ್ರಾರ್ಥನೆಯಲ್ಲಿ ಏಕಾಭಿಪ್ರಾಯವುಳ್ಳವರೂ ಆಗಿರಬೇಕು ***(ಮತ್ತಾಯ 18:19).*** ಇದಕ್ಕೂ ಮೊದಲು ನಾವೆಂದಿಗೂ ಪ್ರಾರ್ಥಿಸದವರಾಗಿದ್ದರೆ ಪ್ರಾರ್ಥನಾ ತಂಡದವರು ಅವರನ್ನು ಪ್ರಾರ್ಥನೆಗೆ ನಡೆಸಬೇಕು ಹಾಗೂ ಅಂತಹವರು ತದನಂತರ ತಕ್ಷಣ ತಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬೇಕು. ಹೃದಯಾಂತರಾಳದ ಪ್ರಾರ್ಥನೆಯು ಸಾಮಾನ್ಯವಾಗಿ ವ್ಯಕ್ತಿಯೊಬ್ಬನಿಂದಲೇ ಸ್ವಂತವಾಗಿ ಬರುತ್ತದೆ. ಯಾವುದೇ "ಮತೀಯ ಭಾಷಾ ಶೈಲಿ" ಗಳನ್ನು ಉಪಯೋಗಿಸುವ ಅಗತ್ಯತೆಯಿಲ್ಲವೆಂದು ವಿವರಿಸಲೇಬೇಕು, ಕಾರಣ ದೇವರು ಅವರ ಹೃದಯವನ್ನು ಬಲ್ಲವನಾಗಿದ್ದಾನೆ.

- ಸಾಧ್ಯವಿರುವಲ್ಲೆಲ್ಲಾ ಏಕಾಂತ ಹಾಗೂ ಪ್ರಶಾಂತ ಸ್ಥಳವನ್ನೇ ಆಯ್ದುಕೊಳ್ಳಿರಿ.
- ಪ್ರತಿಯೊಂದು ಪ್ರಾರ್ಥನಾ ಸೇವೆಯನ್ನೂ ಪ್ರಾರ್ಥನೆಯೊಂದಿಗೇ ಆರಂಭಿಸಿರಿ ಹಾಗೂ ಮುಂದಿನ ಸಮಯವನ್ನು ಕರ್ತನಿಗೊಪ್ಪಿಸಿ ಆತನ ನಡೆಸುವಿಕೆಗಾಗಿಯೂ ಆಲೋಚನೆಗಳಿಗಾಗಿಯೂ ಬೇಡಿಕೊಳ್ಳಿರಿ.

- ಸಾಮಾನ್ಯವಾಗಿ ಒಬ್ಬನ ಸೇವೆಗಾಗಿ ಇಬ್ಬರಿರುವುದು ಅತ್ಯುತ್ತಮವಾಗಿರುತ್ತದೆ. ಆ ಇಬ್ಬರಲ್ಲಿ ಒಬ್ಬರು ಸೇವೆಯನ್ನು ಹೊಂದಿರುವ ವ್ಯಕ್ತಿಯ ಲಿಂಗದವರೇ ಆಗಿರಬೇಕು, ಉದಾ; ಸ್ತ್ರೀಯರು ಸ್ತ್ರೀಯರಿಗೆ, ಪುರುಷರು ಪುರುಷರಿಗೆ. ಪುರುಷನೊಬ್ಬನಿಗಾಗಿ ಸ್ತ್ರೀಯೊಬ್ಬಳೇ ಏಕಾಂತವಾಗಿ ಪ್ರಾರ್ಥಿಸುವುದಾಗಲೀ ಅಥವಾ ಪುರುಷನೊಬ್ಬನೇ ಸ್ತ್ರೀಯೊಬ್ಬಳಿಗಾಗಿ ಏಕಾಂತವಾಗಿ ಪ್ರಾರ್ಥಿಸಲು ಅನುಮತಿಸದಿರಿ. ಆದರೆ ಸೇವೆಯನ್ನು ಹೊಂದುವುದಕ್ಕಾಗಿ ಗಂಡ – ಹೆಂಡತಿಯರಿಬ್ಬರೂ ಮುಂದೆ ಬಂದಲ್ಲಿ ಅವರು ಸಂಧಾನಕ್ಕಾಗಿ ಮುಂದೆ ಬರಲು ಸಿದ್ಧರಾಗುವವರೆಗೂ ಅವರೊಂದಿಗೆ ಏಂಗಡವಾಗಿ ಪ್ರಾರ್ಥಿಸಿರಿ.
- ಸೇವೆ ಮಾಡುತ್ತಿರುವಾಗಲೆಲ್ಲಾ ಪವಿತ್ರಾತ್ಮನ ನಡೆಸುವಿಕೆ ಹಾಗೂ ಮಾರ್ಗದರ್ಶನಗಳಿಗೆ ಕಿವಿಗೊಡಿರಿ. ಸೇವೆಯಲ್ಲಿರುವ ತಂಡವೊಂದು ತಮಗೆ ಜ್ಞಾನವಾಕ್ಯವಾಗಲೀ ಅಥವಾ ಒಂದು ಚಿತ್ರವಾಗಲೀ ಪ್ರಕಟವಾಗಿರುವುದಾಗಿ ಹೇಳುವುದಾದಲ್ಲಿ ಪ್ರಾರ್ಥನಾ ಅಧಿವೇಶನದಲ್ಲಿ ಅದನ್ನು ಪ್ರಕಟಿಸಲಿ ಹಾಗೂ ಮುಂದೇನು ಮಾಡಬೇಕೆಂದು ಒಟ್ಟಿಗೇ ತೀರ್ಮಾನಿಸಲಿ.
- ಸೇವೆಯನ್ನು ಹೊಂದಬಯಸುತ್ತಿರುವವರ ಹೃದಯದಲ್ಲಿ ಆಳವಾದ ಗಾಯ ಹಾಗೂ ನೋವುಗಳಿದ್ದಲ್ಲಿ ನಿಮ್ಮ ಮಾತುಗಳನ್ನು ಆಶ್ರಯಿಸಲು ಅವರಿಗೆ ಅಧಿಕ ಸಮಯ ಬೇಕಾಗುತ್ತದೆ.
- ಸಮಸ್ಯೆಗಳನ್ನು ಯಾವಾಗಲೂ ಸತ್ಯವೇದದ ಸರಿಯಾದ ವಾಕ್ಯಾಧಾರಗಳ ದೃಷ್ಟಿಕೋನದಲ್ಲೇ ದೃಷ್ಟಿಸಿರಿ. ಸೇವೆ ಮಾಡಲಿಚ್ಛಿಸುವ ಪ್ರತಿಯೊಬ್ಬರೂ ಸತ್ಯವೇದವನ್ನು ಚೆನ್ನಾಗಿ ಬಲ್ಲವರೂ ದೈವೀಕ / ಸತ್ಯವೇದಾನುಸಾರವಾದ ಪರಿಹಾರಕ್ಕಾಗಿ ಶ್ರಮಿಸುವವರೂ ಆಗಿರಬೇಕು.

  *"ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವುದಕ್ಕೆ ಪ್ರಯಾಸಪಡು, ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು" **(2 ತಿಮೋ 2:15)**.*

- ಮತ್ತಾಯ 7:12 ರಲ್ಲಿ ಹೇಳಲ್ಪಟ್ಟಿರುವ ಅತ್ಯುತ್ತಮವಾದ (ಚಿನ್ನದಂತ) ನಿಯಮವನ್ನು ಪಾಲಿಸಿರಿ – *"ಇತರರು ನಿಮಗೇನು ಮಾಡಬೇಕೆಂದು ಬಯಸುತ್ತೀರೋ ಅದನ್ನೇ ಅವರಿಗೂ ಮಾಡಿರಿ."*
- ಎಲ್ಲವನ್ನೂ ಗೋಪ್ಯವಾಗಿಡುವ ಬಗ್ಗೆ ವಾಗ್ದಾನ ಮಾಡಬೇಡಿರಿ (ಹಾಗೆ ವಾಗ್ದಾನ ಮಾಡಿದಲ್ಲಿ ಅದನ್ನು ಪಾಲಿಸಬೇಕು ಹಾಗೂ ಯಾರ ಕಿವಿಗೂ ತಲುಪಿಸಕೂಡದು). ವ್ಯಕ್ತಿಯೊಬ್ಬನು ತಾನು ಕಾನೂನಿಗೆ ವಿರುದ್ಧವಾದ ಕಾರ್ಯವನ್ನು ಮಾಡಿರುವೆನೆಂದು ಅರಿಕೆ ಮಾಡಿದಲ್ಲಿ ಯಾರ ಬಗ್ಗೆಯೂ ಅವರು ಹಾಗೆ – ಹೀಗೆ ಎಂಬುದಕ್ಕೆ ಅವಕಾಶ ಕೊಡಬಾರದು, ಹಾಗಿದ್ದರೂ ಮಾಹಿತಿಗಳನ್ನು ಹಿರಿಯ ಸಭಾಪಾಲಕರೊಂದಿಗೆ ಹಂಚಿಕೊಳ್ಳಬೇಕಿರುವುದರಿಂದ ಸಂಪೂರ್ಣ ಗೋಪ್ಯವಾಗಿಸುವಿಕೆಯ ಬಗ್ಗೆ ವಾಗ್ದಾನ ಮಾಡಲಾಗದು. ಕಾರಣ ಅವರು ಅರಿಕೆ ಮಾಡಿದಂತಹ ವಿಷಯವು ಮಕ್ಕಳ ಮೇಲಿನ ದೌರ್ಜನ್ಯದಂತಹ ಕಾನೂನಾತ್ಮಕವಾದ ವಿಷಯಗಳಾಗಿರಬಹುದು. ಅವರು ಮಾಡಿರುವ ಕೃತ್ಯಕ್ಕೆ ದೇವರೂ ಸಹ ಕೆಲವು "ನಷ್ಟ ಪರಿಹಾರ" ವನ್ನು ಬಯಸುತ್ತಿರುವುದಾಗಿ ತಿಳಿಸಿರಿ. ಅದು ಕೆಲವೊಮ್ಮೆ ಹಣಕಾಸಿನ ಪರಿಹಾರ ಅಥವಾ ವೇದನೆಗೊಳಗಾದ ವ್ಯಕ್ತಿಯ ಕ್ಷಮೆ ಕೋರುವಿಕೆಯೂ ಆಗಿರಬಹುದು.

- ಸೇವೆಯನ್ನು ಹೊಂದಬಯಸುವವರೊಂದಿಗೆ ಗೌರವಯುಕ್ತವಾದ ಮನೋಭಾವ ಉಳ್ಳವರಾಗಿದ್ದು ಅವರೊಂದಿಗೆ ತಾಳ್ಮೆಗೆಟ್ಟು ಕೂಗಾಡುವವರೂ, ಭಯಪಡಿಸುವವರೂ ಆಗಿರಬಾರದು. ಕೂಟವನ್ನು ಮುಕ್ತಾಯಗೊಳಿಸಲು ಆ ವ್ಯಕ್ತಿ ಹೇಳಿದರೆ ತಕ್ಷಣವೇ ನಿಲ್ಲಿಸಿಬಿಡಬೇಕು. ಅವರು ಹಿಂತಿರುಗಿಬರಲು ಬಯಸಿದಲ್ಲಿ ಅದಕ್ಕಾಗಿ ಬಾಗಿಲನ್ನು ತೆರೆದಿಟ್ಟು ಸಿದ್ಧರಾಗಿರಿ.

- ಸೇವೆಯನ್ನು ಹೊಂದಬಯಸುತ್ತಿರುವ ವ್ಯಕ್ತಿಯು ನಿಮ್ಮೊಂದಿಗೆ ಸಹಕರಿಸುತ್ತಿಲ್ಲದಿದ್ದಲ್ಲಿ ಒತ್ತಾಯಪಡಿಸದೇ ಅವರನ್ನು ಬಿಟ್ಟು ಕಳುಹಿಸಿರಿ. ಈ ವಿಧದ ಸೇವೆಗಾಗಿ ಅವರಿನ್ನೂ ಸಿದ್ದರಾಗಿರಲಿಕ್ಕಿಲ್ಲ. ಅದು ದೈವೀಕ ಕಾಲಾವಧಿಯಲ್ಲೇ ನಡೆಯಬೇಕು.

- ಅವರು ಮಾಡಿರುವ ಕಾರ್ಯವಿಧಾನಕ್ಕಾಗಲೀ ಅಥವಾ ಅವರಿಗೆ ಮಾಡಿರುವ ಕಾರ್ಯಕ್ಕಾಗಲೀ ಅಥವಾ ಹೇಳಿರುವ ವಿಷಯಕ್ಕಾಗಲೀ ಅವರನ್ನು ಖಂಡಿಸದಿರಿ.

- ಅವರು ಕೊಟ್ಟಿರುವ ಮಾಹಿತಿಗಳನ್ನು ಯಾವ ವಿಧಾನದಲ್ಲೂ ಉದಾ: ನೇರವಾಗಿಯೋ ಅಥವಾ ಸಂದೇಶಗಳ ಮೂಲಕವೋ ವೈಯಕ್ತಿಕ ಲಾಭಕ್ಕಾಗಿ ಉಪಯೋಗಿಸಲೇಕೂಡದು.

- ಸೇವೆಯನ್ನು ಹೊಂದುತ್ತಿರುವ ವ್ಯಕ್ತಿಯ ಬಗ್ಗೆ ಯಾವಾಗಲೂ **ತೆರೆದ ಕಣ್ಣುಳ್ಳವರಾಗಿರಿ,** ವಿಶಿಷ್ಟವಾಗಿ ಅವರಿಗಾಗಿ ಪ್ರಾರ್ಥಿಸುವಾಗ ಅವರಿಗಾಗಲೀ ಅಥವಾ ನಿಮಗಾಗಲೀ ಏನು ಬೇಕಾದರೂ ಸಂಭವಿಸಬಹುದಷ್ಟೆ.

- **ಯಾವಾಗಲೂ ಮಹಿಮೆಯನ್ನು ದೇವರಿಗೇ ಸಲ್ಲಿಸಿರಿ!** ದೇವರು ಏನೇ ಮಹತ್ಕಾರ್ಯ ಮಾಡಿದರೂ ಅದಕ್ಕೆ ಪ್ರತಿಯಾಗಿ ನೀವು ಗರ್ವಪಡದಂತೆ ಎಚ್ಚರವಹಿಸಿರಿ.

# ಮಕ್ಕಳ ಮಧ್ಯದ ಸೇವೆಗೆ ಅಗತ್ಯವಿರುವ ಇತರೆ ಮಾರ್ಗಸೂಚಿಗಳು

**ಸೇವೆಯ ಮೊದಲು, ಸೇವೆಯ ಕಾಲದಲ್ಲಿ ಹಾಗೂ ಸೇವೆಯ ನಂತರವೂ ಮಕ್ಕಳ ಸಂರಕ್ಷಣೆಯು ಪ್ರಾಮುಖ್ಯ ವಿಷಯವಾಗಿರುತ್ತದೆ.**

- ಪ್ರತಿಯೊಂದು ಮಗುವಿನಲ್ಲೂ ಸಹ ಆತ್ಮ – ಪ್ರಾಣ – ಶರೀರಗಳು ಅಡಕವಾಗಿದೆ. ಕ್ಲಿಷ್ಟಕರ ಸನ್ನಿವೇಶಗಳು ಹಾಗೂ ಪಾಲನೆ – ಪೋಷಣೆಗಳ ಕೊರತೆಯಿಂದ ಮಕ್ಕಳು ಸಂಕಟಪಡುತ್ತಿರುವರು.
- ಮಕ್ಕಳೊಂದಿಗೆ ಪ್ರಾರ್ಥಿಸುವ ಮೊದಲು ತಂದೆ – ತಾಯಿ ಅಥವಾ ಪಾಲಕರ ಅನುಮತಿ ಪಡೆಯಬೇಕಾಗಿರುವುದು ಪ್ರಾಮುಖ್ಯ. ಮಗುವೂ ಸಹ ಪ್ರಾರ್ಥಿಸಲು ಹಾಗೂ ಪ್ರಾರ್ಥನೆಯನ್ನು ಹೊಂದಲು ಸಿದ್ಧವಿರಬೇಕು.
- ಕನಿಷ್ಠ ಇಬ್ಬರು ನಂಬಿಗಸ್ಥರಾದ ವಯಸ್ಕರು ಅವರೊಂದಿಗೆ ಯಾವಾಗಲೂ ಹಾಜರಿರಬೇಕು. ಅವರೊಂದಿಗೆ ನಿಧಾನವಾಗಿ ಮಾತನಾಡುವ ಅಥವಾ ಆಟವಾಡಿಸುವ ಮೂಲಕ ಅವರಲ್ಲಿ ಭರವಸೆ ಮೂಡಿಸಿರಿ.
- ಅವರು ತೀರ್ಮಾನ ಮಾಡಲು ಸ್ವತಂತ್ರರಾಗಿದ್ದಾರೆ. ಆದ್ದರಿಂದ ವಿಷಯವನ್ನು ವಿವರವಾಗಿ ಹೇಳದೆಯೂ ಅಪ್ಪಣೆ ಪಡೆದುಕೊಳ್ಳದೆಯೂ ಏನನ್ನೂ ಮಾಡದಿರಿ.
- ಮಗುವಿಗೆ ಕಲಿಸಿಕೊಡಿರಿ, ಅವರಲ್ಲಿನ ತಪ್ಪುಗ್ರಹಿಕೆಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಸರಿಯಾದ ಆಯ್ಕೆಗಳನ್ನು ಮಾಡಿಕೊಳ್ಳಲು ಸಹಾಯಿಸಿರಿ.
- ಮಗುವನ್ನು ಬೆದರಿಸುವ ಪ್ರಶ್ನೆಗಳನ್ನು ಕೇಳದಿರಿ. ಉದಾ: "ನಿನ್ನ ತಂದೆಯವರು ನಿನ್ನನ್ನು ಹೊಡೆದರೋ?" ಎಂದು ಕೇಳುವುದಕ್ಕೆ ಬದಲಾಗಿ "ನಿನ್ನ ತಂದೆಯವರು ನಿನಗೇನು ಮಾಡಿರುವರು" ಎಂದು ಕೇಳಿರಿ.
- ಪವಿತ್ರಾತ್ಮನು ಮಗುವಿನೊಂದಿಗೆ ನೇರವಾಗಿ ಮಾತನಾಡುವುದನ್ನು ಬಯಸಿರಿ ***(1 ಸಮು 2:18; ಮತ್ತಾಯ 18:3–4).***
- ಆದರೆ ಮಗು ಮಾತನಾಡಲು ಅಥವಾ ಏನಾದರೂ ಹೇಳಿಕೊಳ್ಳಲು ಇಷ್ಟಪಡದಿದ್ದಲ್ಲಿ ಅಲ್ಪ ವಿಶ್ರಾಂತಿಯನ್ನು ಕೊಟ್ಟು ಅವರನ್ನು ಮುಕ್ತರನ್ನಾಗಿಸಲು ಶ್ರಮಿಸಿರಿ. ಆ ನಂತರವೂ ಮಾತನಾಡಲು ಇಷ್ಟಪಡದಿದ್ದಲ್ಲಿ ಹೊರಹೋಗಲು ಅನುಮತಿಸಿರಿ.
- ಮಗುವೊಂದಕ್ಕೆ 1 ಗಂಟೆಗಿಂತಲೂ ಹೆಚ್ಚಾದ ಕಾಲಾವಕಾಶ ನೀಡಬೇಕಾಗಿಲ್ಲ.
- ಮಗುವೊಂದು ಪೀಡನೆ ಅಥವಾ ದೂಷಣೆಗಳಿಗೆ ಒಳಗಾಗಿದ್ದರೆ ಅಂತವರನ್ನು ಕ್ಷಮಿಸುವ ಹಂತಕ್ಕೆ ಅವರನ್ನು ತರಬೇಕಿದೆ ಹಾಗೂ ಅದಕ್ಕಾಗಿ ಸಾಕಷ್ಟು ಕಾಲಾವಕಾಶವನ್ನೂ ಸಹ ಕೊಡಬೇಕಿದೆ.
- ಮಕ್ಕಳಿಗಾಗುವ ದೂಷಣೆ (ವೇದನೆ) ಯನ್ನು ನಿರ್ಲಕ್ಷಿಸಲೇಬಾರದು. ಆ ರೀತಿಯ ದೂರುಗಳು ಬಂದಲ್ಲಿ ಅಂತಹ ಮಗುವಿನ ಸಂರಕ್ಷಣೆಯ ಪರವಾಗಿ ಸಭಾಪಾಲಕರ ಸಲಹೆಯೊಂದಕ್ಕೆ ಸರಿಯಾದ ಕ್ರಮವನ್ನು ಜರುಗಿಸಬೇಕಾಗುತ್ತದೆ. ಮಗುವಿನ ಮೇಲಿನ ದೌರ್ಜನ್ಯವು ಮುಂದುವರಿಯುತ್ತಿರುವುದಾದಲ್ಲಿ ಆ ಮಗುವನ್ನು ಆ ಸನ್ನಿವೇಷ (ಸ್ಥಳ) ದಿಂದ ದೂರಮಾಡಬೇಕಾಗುತ್ತದೆ.

# ಬಿಡುಗಡೆಗಾಗಿನ ಇತರೆ ಮಾರ್ಗದರ್ಶಿಗಳು

ಲೇಖಕರ ಅನುಭವಗಳ ಪ್ರಕಾರ ಈ ಪುಸ್ತಕದಲ್ಲಿ ವಿವರಿಸಲ್ಪಟ್ಟಿರುವ ವಿಧಾನಕ್ಕನುಗುಣವಾಗಿ ಜನರಿಗಾಗಿ ಪ್ರಾರ್ಥಿಸುವಾಗ ಬಿಡುಗಡೆ (ಸೌಖ್ಯ) ಗಳು ಉಂಟಾಗಬಹುದಾದರೂ ಸಾಮಾನ್ಯವಾಗಿ ದುರಾತ್ಮಗಳ ಯಾವುದೇ ರೀತಿಯ ತೋರ್ಪಡಿಸುವಿಕೆಗಳಾಗದಿರುವುದನ್ನು ಲೇಖಕರು ಕಂಡುಕೊಂಡಿದ್ದಾರೆ. ಆದರೆ ಸೇವೆಯನ್ನು ಹೊಂದಲಿರುವವರು ಕೆಲವು ಸನ್ನಿವೇಷಗಳಲ್ಲಿ ಅಸ್ವಾಭಾವಿಕವಾದ ವಿಧಾನದಲ್ಲಿ ಎಚ್ಚರವಾಗಿರಲು ಕಷ್ಟಪಡುವುದು, ಮೂರ್ಚೆ ಹೋಗುವುದು, ನಡುಗುವಿಕೆ ಹಾಗೂ ಕಣ್ಣುಗಳನ್ನು ತಿರುಗಿಸುವಂತಹ ವಿಚಿತ್ರ ಘಟನೆಗಳು ಸಂಭವಿಸಿರುವುದುಂಟು. ಇಂತಹ ಘಟನೆಗಳನ್ನು ಬಹಳ ಸೂಕ್ಷ್ಮತೆಯಿಂದ ನಿಭಾಯಿಸಬೇಕಿದ್ದು, ಇಂತಹ ವಿಚಿತ್ರ ಘಟನೆಗಳು ಸಂಭವಿಸುವಾಗ ಸೇವೆಯನ್ನು ಹೊಂದುವವರು ಕಾರಣಗಳನ್ನು ಕಂಡುಹಿಡಿದು ಅದಕ್ಕಾಗಿ ಹೃದಯಾಂತರಾಳದಿಂದ ಪಶ್ಚಾತ್ತಾಪಪಡುವುದಾಗಲೀ ಅಥವಾ ಕ್ಷಮಿಸುವುದಾಗಲೀ ಮಾಡುವಾಗ ಈ ರೀತಿಯ ಅನುಭವಗಳು ಇನ್ನು ಮುಂದೆ ಪ್ರಕಟಗೊಳ್ಳದು ಹಾಗೂ ಯಾವುದಾದರೂ ದುರಾತ್ಮಗಳ ಸಾನ್ನಿಧ್ಯವಿದ್ದರೂ ಅದು ಯಾವುದೇ ಗುರುತು ಅಥವಾ ಸೂಚನೆಗಳಿಲ್ಲದೆಯೇ ಸ್ಪಷ್ಟವಾಗಿ ಬಿಟ್ಟು ಹೋಗುತ್ತದೆ ಕಾರಣ ವಿರೋಧಿಯ ಕಾನೂನಾತ್ಮಕವಾದ ಹಕ್ಕು ಮುರಿಯಲ್ಪಟ್ಟಿರುತ್ತದೆ – ***(ಜ್ಞಾನೋ 26:2; ಎಫೆಸ 4:27).*** ಆದರೆ ಸಾಂದರ್ಭಿಕವಾಗಿ (ಕೆಲವು ಸನ್ನಿವೇಷಗಳಲ್ಲಿ) ಇದೊಂದು ಆಕಳಿಕೆ, ಕೆಮ್ಮು ಅಥವಾ ಇತರ ಅನುಭವಗಳ ಮೂಲಕವೂ ಸಂಭವಿಸುವುದುಂಟು. ದುರಾತ್ಮಗಳ ತೋರ್ಪಡಿಕೆಗಳು ಸೇವೆಗೆ ಅಡ್ಡಿಯಾಗಿದ್ದರೆ ಪ್ರಾರ್ಥನಾ ಸೇವಕರು ಯೇಸುವಿನ ಅಧಿಕಾರವುಳ್ಳ ನಾಮದಲ್ಲಿ ದುರಾತ್ಮಗಳನ್ನು ಓಡಿಸಬೇಕಾಗುತ್ತದೆ.

ದುರಾತ್ಮಗಳಿಗೆ ವಿರುದ್ಧವಾಗಿ ಮಾತನಾಡುವ ಅಥವಾ ಕೂಗಾಡುವ ಅಗತ್ಯತೆ ಇಲ್ಲ. ಅದಕ್ಕೆ ಬದಲಾಗಿ ತೊಳೆದು ಕ್ಷಮಿಸಿ ಶುದ್ಧೀಕರಿಸಲು ಶಕ್ತನಾದ ಯೇಸು ಮಾಡಿದ ಕಾರ್ಯವನ್ನು ಗಮನಿಸುತ್ತಾ ದೇವರನ್ನು ಕೊಂಡಾಡುತ್ತಾ ಅನ್ಯ ಭಾಷೆಗಳ ಸಹಾಯದಿಂದ ಪ್ರಾರ್ಥಿಸುವವರಾಗಿರೋಣ. ಆ ವ್ಯಕ್ತಿಯು ತನ್ನ ಪಾಪಗಳನ್ನು ಅರಿಕೆಮಾಡಿ ಹೃದಯಾಂತರಾಳದಿಂದ ಪಶ್ಚಾತ್ತಾಪ ಪಡುವಾಗ ದೇವರು ಅವರ ಪಾಪಗಳನ್ನು ದೂರ ಮಾಡಿ ಆ ಮೂಲಕವಾಗಿ ಅವರ ಮೇಲೆ ದೊರೆತನ ನಡೆಸುತ್ತಿದ್ದ ದುಷ್ಟಾತ್ಮನಿಂದ ದೇವರು ಅವರನ್ನು ಬಿಡಿಸುವನು. ತದನಂತರ ದೇವರು ಅವರಲ್ಲಿ ಶುದ್ಧೀಕರಣದ ಕಾರ್ಯವನ್ನು ಮಾಡಿರುವನೆಂದು ಅವರು ಗ್ರಹಿಸಿಕೊಳ್ಳುವರು ಹಾಗೂ ಸ್ವತಂತ್ರರಾಗಿ ಸಮಾಧಾನದಿದ ಇರುವರು.

ಸೈತಾನನ ಬಂಧನಗಳಿಂದ ಸಂಕಟಪಡುವವರೊಳಗೆ ಅನೇಕರು ಹೊಸದಾಗಿ ಹುಟ್ಟಿದ ಅನುಭವವನ್ನು ಹೊಂದಿರುವವರೇ ಆಗಿದ್ದಾರೆಂಬುದನ್ನು ಲೇಖಕರು ಕಂಡುಕೊಂಡಿರುವರು. ಕೆಲವು ಕ್ರೈಸ್ತರು ಹೇಳಿಕೊಳ್ಳುವುದೇನೆಂದರೆ – ಪ್ರತಿಯೊಬ್ಬ ಕ್ರೈಸ್ತನಲ್ಲಿಯೂ ಕ್ರಿಸ್ತನು ಇರುವುದರಿಂದ ದುರಾತ್ಮಗಳು ಅವರ ಮೇಲೆ ಅಧಿಕಾರ ನಡೆಸುವುದು ಅಸಾಧ್ಯವೆನ್ನುತ್ತಾರೆ. ದೆವ್ವಗಳ ವಿಷಯದಲ್ಲಿನ ನಿಮ್ಮ ನಂಬಿಕೆ ಏನೇ ಆಗಿದ್ದರೂ ಕ್ರೈಸ್ತರೂ ಸಹ ದುರಾತ್ಮಗಳ ಪ್ರಭಾವಕ್ಕೆ ಒಳಗಾಗುವಿಕೆಯು ಸ್ಪಷ್ಟ (ಸತ್ಯ) ವಾಗಿದೆ. ನಾವು ಯಾವಾಗ

ನಮ್ಮನ್ನೇ ಹೆಚ್ಚೆಚ್ಚಾಗಿ ಯೇಸುಕ್ರಿಸ್ತನಿಗೂ ಆತನ ಆಳ್ವಿಕೆಗೂ ಸಮರ್ಪಿಸಿಕೊಡುತ್ತೇವೋ ಆಗ ಪವಿತ್ರಾತ್ಮನು ನಮ್ಮಲ್ಲಿರುವ ಪಾಪಗಳನ್ನೂ ಅದರಿಂದ ನಮ್ಮಲ್ಲಿಯೂ ನಮ್ಮ ಮೇಲೂ ಉಂಟಾಗುವ ಪರಿಣಾಮಗಳನ್ನು ಪ್ರಕಟಿಸುವನು ಹಾಗೂ ನಾವು ಆತನನ್ನು ಬೇಡಿಕೊಳ್ಳುವಾಗ ಅದರಿಂದ ನಮ್ಮನ್ನು ವಿಮೋಚಿಸಲೂ ಶಕ್ತನಾಗಿದ್ದಾನೆ. ನಮ್ಮಲ್ಲಿರುವ ಪಾಪ ಸ್ವಭಾವಗಳನ್ನು ಶಿಲುಬೆಗೆ ಜಡಿದು ಇತರರನ್ನೂ ಕ್ಷಮಿಸುವಾಗ ನಮ್ಮ ಪರಲೋಕದ ತಂದೆಯು ದುಷ್ಟನ ಕ್ರಿಯೆಗಳಿಂದ ನಮ್ಮನ್ನು ಬಿಡಿಸುವನು ***(ಮತ್ತಾಯ 6:12–13)***.

# ಸೇವೆಯ ಕಾಲಾವಧಿಯ ಕುರಿತು ಸಲಹೆಗಳು

***ಗಮನಿಸಿ*** – ಸೇವೆಯೊಂದರ ಕಾಲಾವಧಿಯು 15 ನಿಮಿಷದಿಂದ ಅನೇಕ ಗಂಟೆಗಳವರೆಗೂ ನಡೆಯಬಹುದಾದರೂ ಒಬ್ಬೊಬ್ಬರಿಗೆ 3 ಗಂಟೆಗಳಂತೆ ಮೀಸಲಿಡಿರಿ. ಆ 3 ಗಂಟೆಗಳು ಅವನಿಗೆ ಸಾಕಾಗದಿದ್ದಲ್ಲಿ ಮುಂದಿನ ದಿನಗಳಲ್ಲಿ ಇನ್ನೊಂದು ಅವಕಾಶ ಕೊಡಿರಿ.

1. ಸೇವೆಯಲ್ಲಿನ ಪ್ರಾರ್ಥನಾ ಮಾರ್ಗದರ್ಶಿಗಳನ್ನು ಉಪಯೋಗಿಸಿರಿ ಹಾಗೂ ಸೇವೆಯನ್ನು ಹೊಂದಲಿಚ್ಛಿಸುವವರು ತಮ್ಮ ಹೃದಯದಿಂದ ವೇಧನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವಂತೆ ಪ್ರೋತ್ಸಾಹಿಸಿರಿ. ಅವರನ್ನು ದೇವರ ಸಮೀಪಕ್ಕೆ ತರುವುದೇ ನಿಮ್ಮ ಉದ್ದೇಶವೆಂಬುದನ್ನು ಅವರಿಗೆ ಖಾತ್ರಿ ಪಡಿಸಿರಿ ಹಾಗೂ ಯಾಕೋಬ 5:16 ರಂತಹ ಸೂಕ್ತ ವಾಕ್ಯಗಳನ್ನು ಅವರಿಗಾಗಿ ಓದಿರಿ.

2. ಮರೆಯದಿರಿ – ***2 ತಿಮೊ 2:15*** *"ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವುದಕ್ಕೆ ಪ್ರಯಾಸಪಡು, ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು."*

3. ಆ ವ್ಯಕ್ತಿಯಲ್ಲಿ ಮಾನಸಾಂತರಪಟ್ಟು ಕ್ಷಮಾಪಣೆ ಹೊಂದಬೇಕಾದ ವಿಷಯಗಳಿದ್ದಲ್ಲಿ ಅದರ ವಿಷಯದಲ್ಲಿ ಅವನೊಂದಿಗೆ ಮಾತನಾಡು. ಅದು ಅಸ್ಪಷ್ಟವಾಗಿದ್ದು ಆ ವಿಷಯದಲ್ಲಿ ಅವನು ಪ್ರಾರ್ಥಿಸುವ ನಿರೀಕ್ಷೆಯನ್ನು ವ್ಯಕ್ತಪಡಿಸದಿದ್ದರೂ ಆ ವಿಷಯದಲ್ಲಿ ಸತ್ಯವೇದದ ಸೂಕ್ಷ್ಮವಾದ ವಾಕ್ಯಭಾಗಗಳನ್ನು ಉಪಯೋಗಿಸಿರಿ. ಪಾಪದ ಬಗ್ಗೆ ಮನವರಿಕೆಯನ್ನು ಉಂಟುಮಾಡುವವರು ನಾವಲ್ಲ, ಪವಿತ್ರಾತ್ಮನೆಂಬುದನ್ನು ಮರೆಯದಿರಿ. ದೇವರ ಮುಂದೆ ಸಂಪೂರ್ಣವಾಗಿ ಯಥಾರ್ಥರಾಗಿರುವಂತೆ ಅವರನ್ನು ಎಚ್ಚರಿಸಿರಿ.

4. ಸೇವೆಯನ್ನು ಹೊಂದಲಿಚ್ಛಿಸುವವರು ನೀವೂ ಸಹ ಅವರ ಪ್ರಾರ್ಥನೆಗೆ ಆಮೆನ್ ಹೇಳಲಾಗುವಂತೆ ಗಟ್ಟಿಯಾಗಿ ಪ್ರಾರ್ಥಿಸುವಂತೆ ಕೋರಿರಿ. ಪಾಪದ ಬಗ್ಗೆ ಅರಿಕೆ ಮಾಡಿರುವ ಘಟನೆಗಳನ್ನೆಲ್ಲಾ ಗಟ್ಟಿಯಾದ ಶಬ್ಧದಿಂದಲೇ ಮಾಡಲಾಗಿದೆಯೆಂದು ಸತ್ಯವೇದವು ತಿಳಿಸುತ್ತದೆ.

5. ಸೇವೆಯನ್ನು ಹೊಂದಲಿಚ್ಛಿಸುವವರ ವಿಷಯದಲ್ಲಿ ಯಾವಾಗಲೂ ತೆರೆದ ಕಿವಿಯುಳ್ಳವರಾಗಿರಿ ಹಾಗೂ ದೇವರು ಅವರಲ್ಲಿ ಮಾಡುತ್ತಿರುವುದನ್ನು ಹತ್ತಿರದಿಂದ ಗಮನಿಸಿರಿ. ಅವರ ಸ್ಪಂದಿಸುವಿಕೆಯು ನೀವು ಮುಂದುವರಿಸಬೇಕೋ, ನಿಲ್ಲಿಸಬೇಕೋ ಅಥವಾ ವಿಧಾನ (ಕ್ರಮ) ಬದಲಾಯಿಸಬೇಕೋ ಎಂಬುದನ್ನು ಪವಿತ್ರಾತ್ಮನ ಸಹಾಯದಿಂದ ಗಮನಿಸಬಹುದಾಗಿದೆ.



6. ಅವರು ಪ್ರಾರ್ಥಿಸಲಾರಂಭಿಸುತ್ತಿದ್ದಂತೆ ಕೇವಲ "ಸ್ತೋತ್ರ" ಅಥವಾ "ದೇವರಿಗೆ ಸ್ತೋತ್ರ" ಎಂಬ ಪದಗಳನ್ನು ಮಾತ್ರವೇ ಉಚ್ಚರಿಸುತ್ತಿರದೆ ದೇವರ ಮುಂದೆ ತಮ್ಮ ತಪ್ಪುಗಳನ್ನು **ಸ್ಪಷ್ಟವಾಗಿ** ಹಾಗೂ ಯಥಾರ್ಥವಾಗಿ ತಿಳಿಸುವವರಾಗಿರಬೇಕು. ಉದಾ:–"ನನ್ನ ಸಹೋದರಿಯ ಮೇಲೆ ನಾನು

ಬಹಳ ಕೋಪದಿಂದುರಿಯುತ್ತಾ ತುಂಬಾ ಹೊಡೆದಿರುವುದರಿಂದ ದಯವಿಟ್ಟು ಕ್ಷಮಿಸಿರಿ", ಹೀಗೆ ನಿಜವಾದ ಘಟನೆಗಳಿಗಾಗಿ ಸ್ಪಷ್ಟವಾಗಿ ಕ್ಷಮೆಯಾಚಿಸಲು ಅವರಿಗೆ ಸಹಾಯ ಮಾಡಿರಿ. ಇದು ತಾವು ಮಾಡಿದ ಅಪರಾಧಗಳ ಬಗ್ಗೆ ಜವಾಬ್ದಾರಿಕೆಯನ್ನು ಹೊರುವಂತೆ ಮಾಡುತ್ತದೆ. ತಮ್ಮ ಪಾಪಗಳ ವಿಷಯದಲ್ಲಿ ಸಾಕಷ್ಟು ಮಾನಸಾಂತರ ಹಾಗೂ ಕ್ಷಮಾಪಣೆಗಳನ್ನು ಮಾಡುವ ಮೂಲಕವಾಗಿ ಪಾಪದ ಪರಿಣಾಮುಗಳಿಂದ ವಿಮೋಚನೆಗಾಗಿಯೂ ಬೇಡಿಕೊಳ್ಳುವಂತೆ ತಿಳಿಸಿರಿ.

7. ಪಶ್ಚಾತ್ತಾಪದ ಪ್ರಾರ್ಥನೆಯು ಕೊನೆಗೊಂಡ ನಂತರ ಅವರಿಗಾಗಿ 1 ಯೋಹಾನ 1:8–10 ವಾಕ್ಯಭಾಗಗಳನ್ನು ಓದಿರಿ ಹಾಗೂ ಆ ವಿಶಿಷ್ಟವಾದ ಪಾಪದಿಂದ ಕ್ಷಮಾಪಣೆ ಹೊಂದಿರುವಿರೆಂಬ ಭರವಸೆಯನ್ನು ಅವರಿಗೆ ಕೊಡಿರಿ.

8. ಆತ್ಮೀಕವಲ್ಲದ ಸಂಬಂಧಗಳ ಬಗ್ಗೆ ಪಶ್ಚಾತ್ತಾಪಪಟ್ಟು ಕ್ಷಮಾಪಣೆ ಹೊಂದಿದ ನಂತರ ಪ್ರಾರ್ಥನೆಯ ಮೂಲಕ ಆ ಸಂಬಂಧವನ್ನು ಮುರಿದು ಹಾಕಿರಿ. ಆ ರೀತಿಯ ಸಂಬಂಧವನ್ನು ಪ್ರವಾದನಾತ್ಮಕವಾಗಿ "ವಾಕ್ಯವೆಂಬ ಕತ್ತಿ" ಯ ಸಹಾಯದಿಂದ ಕಡಿದು ಹಾಕಿರಿ. ಯಾವುದಾದರೂ ನಕಾರಾತ್ಮಕವಾದ ಮಾತುಗಳನ್ನಾಡಿದ್ದರೆ ಅದನ್ನು ತ್ಯಜಿಸಿಬಿಟ್ಟು ನಂತರ ಆ ವ್ಯಕ್ತಿಯ ಮೇಲಿನ ಅದರ ಶಕ್ತಿಯನ್ನು ಯೇಸುವಿನ ನಾಮದಲ್ಲಿನ ಪ್ರಾರ್ಥನೆಯಿಂದ ಮುರಿದು ಹಾಕಿರಿ.

9. ಯೇಸುವನ್ನೂ ಪವಿತ್ರಾತ್ಮನನ್ನೂ ತಮ್ಮ ಹೃದಯದ ಅಂತರಾಳಕ್ಕೆ ಆಹ್ವಾನಿಸುವಂತೆಯೂ ದೇವರ ಪ್ರೀತಿಯಿಂದಲೂ ಶಕ್ತಿಯಿಂದಲೂ ಇನ್ನೊಂದಾವರ್ತಿ (ಹೊಸದಾಗಿ) ತುಂಬಿಸುವಂತೆಯೂ ತುಂಬಿ ಹೊರಸೂಸುವಂತೆ ಬೇಡಿಕೊಳ್ಳಲು ಅವರನ್ನು ಪ್ರೋತ್ಸಾಹಿಸಿರಿ.

10. ಸೇವೆಯನ್ನು ಹೊಂದಬಯಸುವ ವ್ಯಕ್ತಿಯು ಯೇಸುವಿನೊಂದಿಗೆ ಮಾತನಾಡುವಂತೆಯೂ ಹಾಗೂ ಆತನಿಂದ **ಮೌನವಾಗಿ** ಕೇಳಿಸಿಕೊಳ್ಳುವಂತೆಯೂ ಮಾಡುವಂತೆ ಆಹ್ವಾನಿಸಿರಿ. ಅದೊಂದು ಚಿಕ್ಕ ಪ್ರಾರ್ಥನೆಯಾಗಿರಲಿ ಹಾಗೂ ದೇವರಿಂದ ಕೇಳಿಸಿಕೊಳ್ಳುವುದಕ್ಕಾಗಿ ಹೆಚ್ಚು ಕಾಲ ಮೌನವಾಗಿರಲಿ. ದೇವರು ಅವರಿಗೊಂದು ಪದವನ್ನಾಗಲೀ, ವಾಕ್ಯಭಾಗವನ್ನಾಗಲೀ ಅಥವಾ ಒಂದು ಅನುಭವ ಅಥವಾ ಕಾರ್ಯವೊಂದನ್ನು ನೆರವೇರಿಸಿರುವ ಬಗ್ಗೆ ಸಂತೃಪ್ತಿಯನ್ನು ದಯಪಾಲಿಸಬಲ್ಲನು.

11. ಅವರ ಆಶೀರ್ವಾದಕ್ಕಾಗಿ ನೀವು ಮೌನವಾಗಿ ಪ್ರಾರ್ಥಿಸುತ್ತ ಇರುವಾಗಲೇ ದೇವರು ಅವರೊಂದಿಗೆ ಮಾತನಾಡಲು ಸಮಯವನ್ನು ಮೀಸಲಿಡಿರಿ.

12. ಸ್ವಲ್ಪ ಸಮಯದ ನಂತರ ತಮಗೆ ಏನಾಯಿತೆಂದೂ, ಅನುಭವಗಳನ್ನೂ ಹಾಗೂ ದೇವರು ತನ್ನಲ್ಲಿ ಯಾವ ವಿಧದಲ್ಲಿ ಕಾರ್ಯಮಾಡುತ್ತಿರುವುದನ್ನು ಅವರು ಅರಿತಿರುವರೆಂದೂ ಅವರಿಗೆ ಪ್ರಶ್ನೆ ಮಾಡಿರಿ. ತಾವು ದೇವರಿಂದ ಏನೇನು ಹೊಂದಿರುವರೋ ಅದಕ್ಕೆ ಸಂಬಂಧಿಸಿದ ಸರಿಯಾದ ವಾಕ್ಯಭಾಗವು ನಿಮಗೆ ಗೊತ್ತಿದ್ದರೆ ಅದನ್ನು ಗಟ್ಟಿಯಾಗಿ ಓದಿರಿ ಹಾಗೂ ಅವರಿಗಾಗಿ ಬರೆದಿಡಿರಿ. ಉದಾ–

ಪ್ರಕಾಶಮಾನವಾದ ಬೆಳಕನ್ನು ಅವರು ಕಂಡಿದ್ದರೆ, ಯೇಸು ಹೇಳಿದ್ದನ್ನು (***ಯೋಹಾನ 8:12***) *"ನಾನೇ ಲೋಕಕ್ಕೆ ಬೆಳಕಾಗಿದ್ದೇನೆ"* ಎಂಬುದನ್ನು ತೋರಿಸಿಕೊಡಿರಿ, ಆ ವ್ಯಕ್ತಿಯ ವಿಷಯದಲ್ಲಿ ದೇವರು ನಿಮಗೊಂದು "ವಾಕ್ಯವನ್ನಾಗಲೀ" ಅಥವಾ "ಚಿತ್ರವನ್ನಾಗಲೀ" ತೋರಿಸಬಹುದು.


13. ಅವರಿಗೆ ಆಸಕ್ತಿ ಇದ್ದಲ್ಲಿ ಈ ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಗಳನ್ನು ತಿಳಿಸುವಂತೆ ಕೇಳಿಕೊಳ್ಳಿರಿ.

14. ಅವರನ್ನು ಆಶೀರ್ವದಿಸಿ ಕಳುಹಿಸಿಕೊಡಿರಿ.

15. ಸೇವೆಯ ಮುಕ್ತಾಯದ ನಂತರ ತಂಡದಲ್ಲಿರುವ ಇತರರೊಂದಿಗೆ ಪ್ರಾರ್ಥಿಸಿರಿ ಹಾಗೂ ನಿಮ್ಮನ್ನೂ ವಿಶಿಷ್ಟವಾಗಿ ನಿಮ್ಮ ಕಿವಿಗೆ ಕೇಳಿಸಲ್ಪಟ್ಟ ಎಲ್ಲಾ ವಿಷಯಗಳ ನೆನಪುಗಳನ್ನು ತೊಳೆದು ಶುದ್ಧೀಕರಿಸುವಂತೆ ದೇವರನ್ನು ಬೇಡಿಕೊಳ್ಳಿರಿ. ಆತನ ಪ್ರೀತಿಯಿಂದಲೂ ಪವಿತ್ರಾತ್ಮನ ಶಕ್ತಿಯಿಂದಲೂ ನೂತನವಾಗಿ ನಿಮ್ಮನ್ನು ತುಂಬಿಸುವಂತೆ ದೇವರನ್ನು ಬೇಡಿಕೊಳ್ಳಿರಿ.

# ಇತರೆ ವಿಷಯಗಳು

# *ಪಶ್ಚಾತ್ತಾಪದ ಪಟ್ಟಿ (ವಿವರಗಳು) ಹೊಸ ಒಡಂಬಡಿಕೆ*



*"ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ"* ***(ರೋಮಾ 3:23).***

ಪಾಪವು ನಮ್ಮನು ದೇವರ ಸಂಬಂದದಿಂದ ಮುರಿದು ಹಾಕಿ ಆತನಿಂದ ನಮ್ಮನ್ನು ಬೇರ್ಪಡಿಸುತ್ತದೆ. ಹೊಸ ಒಡಂಬಡಿಕೆಯ 21 ವಾಕ್ಯ ಭಾಗಗಳಲ್ಲಿ ನೂರಕ್ಕಿಂತ ಹೆಚ್ಚು ಪಾಪಗಳ ಬಗ್ಗೆ ಉಲ್ಲೇಖಿಸಲಾಗಿದೆ. ಪಾಪಗಳಿಗೆ ಇಲ್ಲಿ ದರ್ಜೆಗಳಿಲ್ಲ – ಎಲ್ಲಾ ಪಾಪಗಳು ಪಾಪಗಳೇ ಆಗಿವೆ.

ಈ ವಿವರಣಾ ಪಟ್ಟಿಯಲ್ಲಿ 4ನೇ ಆಜ್ಞೆಯಾಗಿರುವ ಸಬ್ಬತ್ ಆಚರಣೆಯ ಹೊರತಾಗಿ ಬೇರೆಲ್ಲ ಆಜ್ಞೆಗಳನ್ನು ಸೇರಿಸಿಕೊಳ್ಳಲಾಗಿದೆ ***(ರೋಮಾ 14:5–6)*** ಹಾಗು ಯೇಸುವಿನ ನೂತನ ಆಜ್ಞೆಯಾಗಿರುವ "ನಾನು ನಿಮ್ಮನ್ನು ಪ್ರೀತಿಸಿದಂತೆಯೇ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು" ***(ಯೋಹಾನ 13:34)*** ಎಂಬ ಆಜ್ಞೆಗೆ ಆಳವಾದ ಅರ್ಥವನ್ನು ಕೊಡುತ್ತದೆ.

ನಾವು ಮಾಡಿರುವ ಪಾಪಗಳ ವಿಷಯದಲ್ಲಿನ ತಿಳುವಳಿಕೆಯು ನಮ್ಮ ಮನಸ್ಸಿನಲ್ಲಿದ್ದು ಅವುಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಕಷ್ಟವಾಗಿರಬಹುದು. ಆದರೆ ಪವಿತ್ರಾತ್ಮನು ಅವುಗಳನ್ನು ಬಲ್ಲವನಾಗಿದ್ದು ಸಹಾಯ ಮಾಡಲು ಶಕ್ತನಾಗಿದ್ದಾನೆ ***(ಕೀರ್ತನೆ 139:23–24).***

*"ಆದರೆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ, ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು"* ***(ಯೋಹಾನ 14:26).***

ವಾಕ್ಯಗಳನ್ನು ಓದುತ್ತಿರುವಾಗಲೇ ನೀವು ಮಾಡಿರುವ ಪಾಪಗಳನ್ನು ತೋರಿಸಿಕೊಡುವಂತೆ ಆತನನ್ನು ಬೇಡಿಕೊಳ್ಳಿರಿ.

| | |
|---|---|
| ***ಮತ್ತಾಯ 15:18–20*** | ***ಎಫೆಸ 5:3–4*** |
| ***ಮಾರ್ಕ 7:21–23*** | ***ಕೊಲೊಸ್ಸೆ 3:5–6*** |
| ***ರೋಮಾ 1:29–32*** | ***ಕೊಲೊಸ್ಸೆ 3:8–9*** |
| ***ರೋಮಾ 13:7–9*** | ***1 ತಿಮೊಥೆ 1:9–10*** |
| ***ರೋಮಾ 13:13–14*** | ***2 ತಿಮೊಥೆ 3:1–5*** |
| ***1 ಕೊರಿಂಥ 5:9–11*** | ***ತೀತ 3:3–5*** |

***1 ಕೊರಿಂಥ 6:9–10***

***2 ಕೊರಿಂಥ 12:20–21***

***ಗಲಾತ್ಯ 5:19–21***

***ಎಫೆಸ 4:17–19***

***ಎಫೆಸ 4:25–31***

***1 ಪೇತ್ರ 2:1***

***1 ಪೇತ್ರ 4:2–4***

***ಪ್ರಕ 21:8***

***ಪ್ರಕ 22:14***

ಪಶ್ಚಾತ್ತಾಪದ ಪ್ರಯೋಜನಗಳು ಬಹಳಷ್ಟಿವೆ. ಅವುಗಳಲ್ಲಿ ಕೆಲವನ್ನು ಕೆಳಗಿನ ವಾಕ್ಯಗಳಲ್ಲಿ ತಿಳಿಸಲಾಗಿದೆ.

***ಕೀರ್ತನೆ 19:12–13***

***ಕೀರ್ತನೆ 32:1–5***

***ಕೀರ್ತನೆ 66:16–20***

***ಜ್ಞಾನೋ 28:13***

***ಯೆಶಾಯ 55:7***

***ಲೂಕ 13:3***

***ಅ.ಕೃ 17:30***

***1 ಪೇತ್ರ 3:7, 12***

# ಪಶ್ಚಾತ್ತಾಪ ಪಡಬೇಕಿರುವ ಕೆಲವು ಸಾಮಾನ್ಯ ವಿಷಯಗಳು

ಪಶ್ಚಾತ್ತಾಪಪಡಬೇಕಾಗಿರುವ ಎಲ್ಲಾ ವಿಷಯಗಳನ್ನು ಇಲ್ಲಿ ಸೇರಿಸದೆ ಕೆಲವು ಮಾರ್ಗದರ್ಶಿಗಳನ್ನು ಮಾತ್ರ ಕೊಡಲಾಗಿದೆ. ಸತ್ಯವೇದಕ್ಕೆ (ಆತನ ವಾಕ್ಯಕ್ಕೆ) ವಿರುದ್ಧವಾದ ಕಾರ್ಯಗಳಲ್ಲಿ ನಾವು ಭಾಗಿಗಳಾಗಿದ್ದಲ್ಲಿ ಆ ಪಾಪದಿಂದ ವಿಮುಕ್ತಿಯನ್ನು ಪಡೆಯಲು ನಾವದನ್ನು ತ್ಯಜಿಸಿಬಿಟ್ಟು ಪಶ್ಚಾತ್ತಾಪದಿಂದ ಆತನಿಂದ ಕ್ಷಮಾಪಣೆ ಹೊಂದಬೇಕಾಗುತ್ತದೆ. ಕೆಲವೊಮ್ಮೆ ನಾವು ಮಾಡುತ್ತಿರುವುದು ತಪ್ಪೆಂದು ಪವಿತ್ರಾತ್ಮನು ತೋರಿಸಿಕೊಟ್ಟರೂ ಅದನ್ನು ಒಪ್ಪಿಕೊಳ್ಳುವುದು ಕಷ್ಟವೆನಿಸುತ್ತದೆ.

*"ಯಾವುದಕ್ಕೆ ನಂಬಿಕೆಯು ಆಧಾರವಿಲ್ಲವೋ ಅದು ಪಾಪ"* ***(ರೋಮಾ 14:23; ಯಾಕೋಬ 4:17).***

**ಕರ್ತನ ವಾಕ್ಯವು ನಿನಗೆ ಹೇಳುತ್ತಿರುವುದೇನೆಂದರೆ...**

| | |
|---|---|
| ಅವಮಾನ | *ಧರ್ಮೋ 5:16; 1 ಕೊರಿಂಥ 11:28–30; ಎಫೆಸ 6:2* |
| ಅಜ್ಞಾನ | *ಯೆಶಾಯ 5:13; ಹೋಶೇಯ 4:6; ಅ.ಕೃ. 17:30–31* |
| ಅಹಂಕಾರ | *ಯಾಕೋಬ 4:16* |
| ಅತಿಯಾದತವಕ | *ಮತ್ತಾಯ 6:33; ಗಲಾತ್ಯ 5:20* |
| ಆಣೆಯಿಡುವುದು | *ಮತ್ತಾಯ 5:33–37; ಯಾಕೋಬ 5:12* |
| ಆತ್ಮಹತ್ಯಾಚಿಂತನೆ | *ವಿಮೋ 20:13; ಅ.ಕೃ. 16:27–28; 1 ಕೊರಿ 3:16–17, 6:19–20; ಎಫೆಸ 2:10; ಯಾಕೋ 1:18* |
| ಉಪಕಾರ ನೆನಸದಿರುವುದು | *ಧರ್ಮೋ 28:47–48; ಲೂಕ 17:17–18; ಫಿಲಿಪ್ಪಿ 4:8; 2 ತಿಮೊ 3:2* |
| ಕೋಪ | *ಜ್ಞಾನೋಕ್ತಿ 15:18; ಮತ್ತಾ 5:22; ಗಲಾತ್ಯ 5:20; ಎಫೆಸ 4:26–27; ಯಾಕೋಬ 1:19–21* |
| ಕೆಟ್ಟ ಆಲೋಚನೆಗಳು | *ಮಾರ್ಕ 7:21; ರೋಮ 12:1–2; ಫಿಲಿಪ್ಪಿ 4:8* |
| ಕಹಿ ಭಾವನೆ | *ಎಫೆಸ 4:31; ಇಬ್ರಿಯ 12:15* |
| ಕೆಟ್ಟ ಮಾತುಗಳು | *ಜ್ಞಾನೋ 18:21; ಮತ್ತಾ 5:22, 12:36–37; ಎಫೆಸ 4:29; ಫಿಲಿಪ್ಪಿ 4:8; ಯಾಕೋ 1:26, 3:10* |

| | |
|---|---|
| ಕಾದಾಟ | *ಎಫೆಸ 4:31; ಯಾಕೋಬ 4:1–2* |
| ಕುಡುಕತನ | *ಜ್ಞಾನೋ 23:29–35; ಯೇಶಾ 5:11–12; ಗಲಾತ್ಯ 5:21; ಎಫೆಸ 5:18; 1 ತಿಮೊ 3:2–3* |
| ಕ್ರಿಸ್ತನನ್ನು ನಂಬದಿರುವವರೊಡನೆ ಮದುವೆ | *ಯೆಹೋ 23:12–13; 1 ಅರಸು 11:2–4; ಎಜ್ರ 9:12; 2 ಕೊರಿ 6:14* |
| ಕದಿಯುವಿಕೆ | *ವಿಮೋ 20:15; ಲೂಕ 19:8; ಎಫೆಸ 4:28* |
| ಕ್ಷಮಿಸದಿರುವುದು | *ಮತ್ತಾಯ 6:14–16, 18:21–35; ಮಾರ್ಕ 11:25–26* |
| ಕೇಡನ್ನುಕಲ್ಪಿಸುವುದು | *ಕೀರ್ತ 7:16; ಜ್ಞಾನೋ 16:29; 1 ತಿಮೊ 3:3; ತೀತ 1:7–8* |
| ಖಂಡಿಸುವಿಕೆ | *ರೊಮ 14:13; ಎಫೆಸ 4:2; ಫಿಲಿಪ್ಪಿ 4:8* |
| ಗುಂಪುಗಾರಿಕೆ | *ಗಲಾತ್ಯ 5:19–21* |
| ಗುಣಗುಟ್ಟುವಿಕೆ | *ವಿಮೋ 16:2; 1 ಕೊರಿಂಥ 10:10; ಯಾಕೋ 5:9* |
| ಗರ್ವ | *2 ಪೂರ್ವ 32:26; ಜ್ಞಾನೋ 16:5; 2ತಿಮೊ 3:2; ಯಾಕೋ 4:6–10; 1 ಪೇತ್ರ 5:5* |
| ಗುಪ್ತ ವಿದ್ಯೆ | *ಯಾಜಕ 19:26, 31; ಧರ್ಮೋ 17:2–7, 18:9–14* |
| ಚಿಂತಿಸುವಿಕೆ | *ಮತ್ತಾಯ 6:25–34; ಫಿಲಿಪ್ಪಿ 4:6–7; ಯಾಕೋಬ 5:7* |
| ಜಾತಕ ವಿದ್ಯೆ | *ಧರ್ಮೋ 18:10; ಯೆರೆಮಿಯ 10:2* |
| ಜಿಪುಣತನ | *ಕೀರ್ತ 112:4, 5, 9; ಜ್ಞಾನೋ 19:17; ಮತ್ತಾ 5:42; ಲೂಕ 3:11, 6:38; ಅ.ಕೃ. 2:44–45; 1 ಯೋಹಾ 3:17* |
| ಜೂಜು | *ತೀತ 1:7* |
| ಜಾತಕ ಭವಿಷ್ಯ | *ಯೆಶಾಯ 41:10; ಯೆರೆಮಿಯ 10:2* |
| ತಂದೆ ತಾಯಿಗಳಿಗೆ/ಅವಿಧೇಯತೆ | *ವಿಮೋ 20:12; ಎಫೆಸ 6:2; ಕೊಲೊ 3:20* |

| | |
|---|---|
| ತಾಯಿತಿ | *ಯೆಹೆಜ್ಕೇಲ 13:18, 20* |
| ತಾಳ್ಮೆಯಿಲ್ಲದಿರುವುದು | *ಅರಣ್ಯ 21:4–5; ಯಾಕೋಬ 1:12; 2 ಪೇತ್ರ 3:9* |
| ತೀರ್ಪುಮಾಡುವುದು | *ಮತ್ತಾಯ 7:1–2; ರೋಮ 14:13; ಯಾಕೋಬ 4:11–12* |
| ತಿರಸ್ಕಾರ | *ಯೆಶಾಯ 49:14–16; ಮತ್ತಾಯ 5:43–45; ಎಫೆಸ 1:5–6; 1 ಥೆಸ 4:9; 1 ಯೋಹಾನ 2:7* |
| ದೇವದೂಷಣೆ | *ವಿಮೋಚನೆ 20:7; 2 ತಿಮೊ 3:2* |
| ದುರಾಶೆ | *ರೋಮಾ 1:26–27; ಮತ್ತಾಯ 5:28; ಮಾರ್ಕ 7:21; ಗಲಾತ್ಯ 5:19; 2 ತಿಮೋ 2:22; 1 ಪೇತ್ರ 4:3* |
| ದಂಗೆ–ಪ್ರತಿರೋಧ | *ಅರಣ್ಯ 16:1–50, 27:12–14; ಧರ್ಮೋ 9:7; 1 ಸಮು 15:23; ಯೋಹಾನ 2:5, 14:15* |
| ದಯೆತೋರಿಸದಿರುವುದು | *ಮತ್ತಾಯ 7:12; ಯಾಕೋ 1:27, 2:14–17* |
| ದೇವರಿಗೆ ಅವಿಧೇಯತೆ | *ಧರ್ಮೋ 28; ಕೀರ್ತನೆ 2:12; ಲೂಕ 6:46–49; ಯೋಹಾ 14:23–24; ಯಾಕೋ 1:22–25, 4:17* |
| ದೇವರನ್ನು ಪೂರ್ಣವಾಗಿಪ್ರೀತಿಸದಿರುವುದು | *ವಿಮೋ 20:3; ಧರ್ಮೋ 6:5; ಮತ್ತಾಯ 6:33; ಮಾರ್ಕ 12:29–30; ಯಾಕೋಬ 1:5–8; ಪ್ರಕ 2:4–5, 3:15–16* |
| ನರಹತ್ಯೆ | *ವಿಮೋ 20:13; ಮತ್ತಾಯ 5:21–22; 1 ಯೋಹಾ 3:15; ಪ್ರಕ 21:8* |
| ಪ್ರೀತಿಸದಿರುವುದು | *ಯೋಹಾನ 15:17; ರೋಮ 1:31; ಗಲಾ 5:14; 1 ಯೋಹಾ 4:7–8* |
| ಪಕ್ಷಪಾತ ಮಾಡುವುದು | *ಅ.ಕೃ. 10:34–35; ರೋಮ 2:11; ಎಫೆಸ 6:9; ಕೊಲೊ 3:25; ಯಾಕೋಬ 2:1–9* |
| ಪವಿತ್ರಾತ್ಮನನ್ನೆದುರಿಸುವುದು | *ಅ.ಕೃ. 7:51; 1 ಥೆಸ 5:19–21; 2 ತಿಮೊ 3:5; ಇಬ್ರಿಯ 10:29* |
| ಪರಿಶುದ್ಧತೆಯಿಲ್ಲದಿರುವುದು | *ಯಾಜಕ 11:44; ರೋಮ 1:29; 2 ತಿಮೊ 3:2; 1 ಪೇತ್ರ 1:15–16* |

| | |
|---|---|
| ಪತ್ನಿಯನ್ನು ಹೊಡೆಯುವುದು | *ಜ್ಞಾನೋ 31:10–31; ಎಫೆಸ 5:25–26; ಕೊಲೊ 3:19; 1 ತಿಮೊ 3:3; ತೀತ 1:7* |
| ಪ್ರೋನೋಗ್ರಾಫಿ | *ದುರಾಶೆ ವಿಭಾಗ ನೋಡಿರಿ* |
| ಪ್ರಾರ್ಥನೆರಹಿತಜೀವಿತ | *1 ಸಮು 12:23; ಮಾರ್ಕ 14:37–38; ಫಿಲಿಪ್ಪಿ. 4:6; 1 ಥೆಸ 5:16–18* |
| ಪ್ರತೀಕಾರ ಮಾಡುವುದು | *ಯಾಜಕ 19:18; ಕೀರ್ತನೆ 94:1; ಓಬದ್ಯ 15; ಮತ್ತಾಯ 5:43–48, 6:14–15; ರೋಮ 12:19; ಇಬ್ರಿಯ 10:29* |
| ಬೈಯುವುದು | *1 ಕೊರಿಂಥ 6:10* |
| ಭರವಸೆಇಡದಿರುವುದು | *ಕೀರ್ತ 118:8; ಮತ್ತಾಯ 13:58; ಮಾರ್ಕ 9:19–24; ಲೂಕ 1:37* |
| ಭ್ರಷ್ಟಾಚಾರ | *ಯಾಜಕ 19:35; ಜ್ಞಾನೋ 20:23; ಲೂಕ 3:12–14; ರೋಮ 13:6–7* |
| ಭಯ | *ಯೆಶಾಯ 41:10, 43:1; ಮತ್ತಾಯ 10:28–33; ರೋಮ 8:15; 2 ತಿಮೊ 1:7; 1 ಯೋಹಾ 4:18* |
| ಮಾಟ–ಮಂತ್ರ | *ಯಾಜಕ 19:31; ಧರ್ಮೋ 18:9–14; 1 ಸಮು 15:23; ಅ.ಕೃ. 19:19; ಗಲಾ 5:19–21; ಪ್ರಕ 21:8* |
| ಮಂತ್ರ ಮಾಡುವುದು | *ಯೆಹೆಜ್ಕೇಲ 13:19–20; ಅ.ಕೃ. 19:19; ಪ್ರಕ 9:21, 21:8, 22:15* |
| ಮೈ ಕಸರತ್ತು | *ವಿಮೋ 20:3–4; 1 ಕೊರಿಂಥ 6:9–10; ಗಲಾತ್ಯ 5:19–21; 1 ಯೋಹಾ 5:21; ಪ್ರಕ 22:15* |
| ಮೋಹಿಸುವಿಕೆ | *ವಿಮೋ 20:17; ಕೊಲೊ 3:5; ಯಾಕೋ 4:2* |
| ಮೋಸ | *ಜ್ಞಾನೋಕ್ತಿ 20:23; ಮಾರ್ಕ 7:22; ಲೂಕ 16:10–13; ರೋಮ 13:6–7* |
| ಮುಂಗೋಪತನ | *ಕೀರ್ತ 37:8; ಜ್ಞಾನೋ 14:17, 29:22; ಎಫೆಸ 4:31; ತೀತ 1:7* |
| ಮೊಂಡು ಮನಸ್ಸು | *1 ಸಮು 15:23; 2 ಪೂರ್ವ 30:8–9; ರೋಮ 2:5* |

| | |
|---|---|
| ಯೇಸುವಿನವನಲ್ಲವೆನ್ನುವಿಕೆ | *ಮತ್ತಾಯ 10:32–33; ಇಬ್ರಿಯ 10:29; 1 ಯೋಹಾನ 2:22–23* |
| ಲೌಕಿಕತ್ವ | *ರೋಮಾ 12:2; 2 ತಿಮೊ 3:4; ತೀತ 2:12; 1 ಯೋಹಾನ 2:15–17* |
| ಲೈಂಗಿಕ ಪಾಪ | *ವಿಮೋ 20:14; ಅ.ಕೃ. 15:20; 1 ಕೊರಿ 3:16–17, 6:18–20; ಜ್ಞಾನೋ 2:12; ಗಲಾ 5:19–21; 1 ಥೆಸ 4:3; ಇಬ್ರಿ 13:4* |
| ಲಂಚಗುಳಿತನ | *ವಿಮೋ 23:8; ಧರ್ಮೋ 10:17, 16:19–20; ಯೋಬ 36:18; ಪ್ರಸಂಗಿ 7:7; ಲೂಕ 3:14* |
| ವ್ಯಭಿಚಾರ | *ಮತ್ತಾಯ 5:28–32; 1 ಕೊರಿಂಥ 6:9–10* |
| ವೈಮನಸ್ಸು | *[ಕೀರ್ತನೆ 133]; ಗಲಾತ್ಯ 5:14–15* |
| ವಿಗ್ರಹಗಳು | *ವಿಮೋ 20:4–5; ಧರ್ಮೋ 4:15–19, 6:13–18, 7:25–26; 12:2–4; ಯೆರೆಮಿಯ 10:2; 1 ಯೋಹಾ 5:21* |
| ವಿಗ್ರಹಾರಾಧನೆ | *ವಿಮೋ 20:3–4; ಧರ್ಮೋ 6:13–18, 32:16–18; ಕೀರ್ತನೆ 106:34–39; ಹೋಶೇಯ 4:12; 1 ಕೊರಿಂಥ 6:9–11; ಗಲಾ 5:19–20; 1 ಪೇತ್ರ 4:3; 1 ಯೋಹಾ 5:21* |
| ವಿಚ್ಛೇದನೆ | *ಮಲಾಕಿ 2:15–16; ಮಾರ್ಕ 10:2–12; 1 ಕೊರಿಂಥ 7:10–11; ಇಬ್ರಿಯ 13:4* |
| ಶಕುನ ಹೇಳುವುದು | *ಯಾಜಕ 19:26; ಧರ್ಮೋ 18:10; ಯೆರೆಮಿಯ 10:2; ಅ.ಕೃ. 16:16* |
| ಸ್ವಚಿತ್ತ | *ಲೂಕ 9:62; ಪ್ರಕ 2:4, 3:2–3, 3:16* |
| ಸ್ವಾರ್ಥತೆ | *ಮಾರ್ಕ 10:44; 2 ತಿಮೊ 3:2* |
| ಸಲಿಂಗತನ | *ಯಾಜಕ 18:22; ರೋಮ 1:26–27; 1 ಕೊರಿಂಥ 6:9–10* |
| ಸೋಮಾರಿತನ | *ಜ್ಞಾನೋ 24:30–34; 1 ಕೊರಿಂಥ 9:27; ಯಾಕೋಬ 1:22; 2 ತಿಮೊ 2:15* |

| | |
|---|---|
| ಸುಳ್ಳಾಡುವುದು | *ವಿಮೋ 20:16; ಎಫೆಸ 4:25; ಕೊಲೊ 3:9; ಪ್ರಕ 21:8* |
| ಸ್ವ–ಪ್ರಯತ್ನ | *ಕೀರ್ತನೆ 118:8–9; ರೋಮಾ 4:3; ಗಲಾತ್ಯ 2:16, 3:6–12; ಎಫೆಸ 2:8–10; ಇಬ್ರಿಯ 11:6* |
| ಸ್ವಾರ್ಥತೆ | *ರೋಮಾ 2:8; ಫಿಲಿಪ್ಪಿ 2:3–4; ಯಾಕೋಬ 3:16* |
| ಸ್ವನೀತಿ | *ಮತ್ತಾಯ 23:6–7; ಲೂಕ 18:9–14; ಫಿಲಿಪ್ಪಿ 3:8–9* |
| ಸತ್ಯವೇದಕ್ಕನುಗುಣವಲ್ಲದ ಗುಣಪಡಿಸುವಿಕೆ | *2 ಪೂರ್ವ 16:12–13; ಕೊಲೊಸ್ಸೆ 2:8* |
| ಸಾಲ/ದಶಮಭಾಗಕೊಡದಿರುವಿಕೆ | *ಮಲಾಕಿ 3:8–12; ರೋಮ 13:7–9; ಯಾಕೋ 5:1–6* |
| ಸಂದೇಹಿಸುವುದು | *ಮತ್ತಾಯ 21:21–22; ಮಾರ್ಕ 9:23–24; ಯಾಕೋಬ 1:5–8* |
| ಹರಟೆ | *ಯಾಜಕ 19:16; ರೋಮ 1:29–30; 2 ಕೊರಿ 12:20; ಯಾಕೋಬ 3:6* |
| ಹಗೆತನ | *ಮತ್ತಾಯ 5:43–45; 1 ಯೋಹಾನ 2:9–11, 3:15, 4:20–21* |
| ಹೊಟ್ಟೆಬಾಕತನ | *ಯೆಹೆಜ್ಕೇಲ 16:49; ಎಫೆಸ 5:5; ತೀತ 1:12* |
| ಹೊಟ್ಟೆಕಿಚ್ಚು | *ಜ್ಞಾನೋಕ್ತಿ 14:30; ರೋಮ 13:12–14; 1 ಕೊರಿಂಥ 3:3; ಯಾಕೋಬ 3:16–18, 4:1–5* |
| ಹಚ್ಚೆ ಚುಚ್ಚಿಸಿಕೊಳ್ಳುವಿಕೆ | *ಯಾಜಕ 19:28* |

# ನಿಮ್ಮ ಕುಟುಂಬ ಚರಿತ್ರೆಯ ಬಗ್ಗೆ ಚಿತ್ರಪಟವನ್ನು ರೂಪಿಸುವುದು

ಕುಟುಂಬ ಚರಿತ್ರೆಯೊಂದರ ಚಿತ್ರವು ನಮ್ಮ ಕುಟುಂಬದ ವಿವಿಧ ತಲೆಮಾರುಗಳ ಬಗ್ಗೆ ಚಿತ್ರಗಳ ಸ್ವರೂಪದಲ್ಲಿ ಗ್ರಹಿಸಿಕೊಳ್ಳಲು ಸಹಾಯಿಸುತ್ತದೆ. ಅದರಲ್ಲೂ ವಿಶಿಷ್ಟವಾಗಿ ಅನೇಕ ತಲೆಮಾರುಗಳಿಂದ ನಮ್ಮ ಕುಟುಂಬಗಳು ಯಾವದಾದರೂ ಆಶೀರ್ವಾದ ಅಥವಾ ಶಾಪಗಳಿಗೆ ಅಧೀನವಾಗಿದ್ದೇವೋ ಎಂಬುದನ್ನು ಸಹ ಗುರ್ತಿಸಲು ಸಾಧ್ಯವಾಗುತ್ತದೆ. ಕುಟುಂಬಗಳು ಸಂಕೀರ್ಣವಾಗಿದ್ದು ಇಂತಹ ವಿಷಯುಗಳು ಅದರಲ್ಲಿ ಅಡಗಿರಬಹುದಾದ್ದರಿಂದ ಅವುಗಳ ಬಗ್ಗೆ ಚಿತ್ರಗಳ ಸಹಾಯದಿಂದ ಅಧ್ಯಯನ ಮಾಡುವದು ಸೂಕ್ತವಾಗಿರುತ್ತದೆ.

ಕುಟುಂಬ ಚರಿತ್ರೆಯ ಚಿತ್ರಪಟವನ್ನು ಸಿದ್ಧಪಡಿಸುವಾಗ ನಾವು ಚಿಹ್ನೆ (ಗುರುತು)ಗಳ ಮೂಲಕವಾಗಿ ಜನರು ಹಾಗೂ ರೇಖೆಗಳ ಮೂಲಕ ಕುಟುಂಬ ಸಂಬಂಧಗಳನ್ನು ಗುರ್ತಿಸುವವರಾಗಿರುತ್ತೇವೆ. ಅಧ್ಯಯನದಲ್ಲಿ ಮದುವೆ, ಮಕ್ಕಳು ಹಾಗೂ ರಕ್ತಸಂಬಂಧಿಗಳ ಸೂಚನೆಗಾಗಿ ಚಿಹ್ನೆ (ಗುರುತು) ಗಳನ್ನು ಉಪಯೋಗಿಸುವುದರಿಂದ ಚಿತ್ರದಲ್ಲಿನ ಕುಟುಂಬದ ವ್ಯಕ್ತಿಗಳನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಾಗುತ್ತದೆ.

1. ಗಂಡುಮಕ್ಕಳ ಸೂಚನೆಗಾಗಿ  ಹಾಗೂ ಹೆಣ್ಣುಮಕ್ಕಳ ಸೂಚನೆಗಾಗಿ  ಗುರುತುಗಳನ್ನು ಬಳಸಲಾಗಿದೆ.


2. ಮದುವೆ ಸಂಬಂಧವನ್ನು ಮೇಲಿನ ಗುರುತುಗಳೆರಡನ್ನು (ಗಂಡು–ಹೆಣ್ಣು) ಒಟ್ಟಿಗೆ ಸೇರಿಸುವ ರೇಖೆಗೆ ಹೋಲಿಸಲಾಗಿದೆ.



ದಂಪತಿ

3. ಮದುವೆಯಿಂದ ಹುಟ್ಟುವ ಮಕ್ಕಳನ್ನು ಆ ಗೆರೆಯ ಮಧ್ಯದ ರೆಂಬೆ (ಕವಲು) ಗಳಲ್ಲಿ ಗುರುತಿಸಲಾಗಿದೆ (ಕೆಳಗೆ ಗಮನಿಸಿರಿ).

ಮೂರು ಮಕ್ಕಳೊಂದಿಗಿರುವ ಗಂಡ–ಹೆಂಡತಿಯರ ರೇಖಾ ಚಿತ್ರದ ಸರಳ ವಿಧಾನದ ಉದಾಹರಣೆಯನ್ನು ಕೆಳಗೆ ಕೊಡಲಾಗಿದೆ.




ದಂಪತಿ


ದಂಪತಿಯ ಮಕ್ಕಳು

ಈ ಉದಾಹರಣೆಯಲ್ಲಿ ಅವರ ಮೊದಲ ಮಗುವು ಹೆಣ್ಣಾಗಿದ್ದು ಎರಡನೆಯದು ಗಂಡು ಹಾಗೂ ಮೂರನೆಯದು ಸಹ ಹೆಣ್ಣು ಮಗುವಾಗಿದೆ.

ಕೆಳಗಿನ ಚಿತ್ರದಲ್ಲಿ ಆ ಮಕ್ಕಳೆಲ್ಲರೂ ಈಗ ಮದುವೆಯಾಗಿರುವರು.




ಕೆಳಗಿನ ಉದಾಹರಣೆಯಲ್ಲಿ ದ್ವಿತೀಯ ತಲೆಮಾರಿನ ಮಕ್ಕಳಿಗೂ ಮಕ್ಕಳು ಹುಟ್ಟಿರುವರು. ಈಗ ಚಿತ್ರದಲ್ಲಿ ಅಜ್ಜ–ಅಜ್ಜಿ, ತಂದೆ–ತಾಯಿ ಹಾಗೂ ಮಕ್ಕಳನ್ನೊಳಗೊಂಡ 3 ತಲೆಮಾರನ್ನು ವೀಕ್ಷಿಸಬಹುದಾಗಿದೆ.




ಮೇಲಿನ ಉದಾಹರಣೆಯ ಚಿತ್ರದಲ್ಲಿನ ಅಜ್ಜ–ಅಜ್ಜಿಯರ ಪ್ರಥಮ ಮಗುವು ಹೆಣ್ಣಾಗಿದ್ದು ಅವಳಿಗೆ ಮದುವೆಯಾಗಿ ಅವಳಿಂದ ಒಂದು ಹೆಣ್ಣು ಎರಡು ಗಂಡು ಮಕ್ಕಳೂ ಹುಟ್ಟಿರುವರು. ಅಜ್ಜ–ಅಜ್ಜಿಯರ ದ್ವಿತೀಯ ಮಗುವು ಗಂಡಾಗಿದ್ದು ಅವನಿಗೂ ಮದುವೆಯಾಗಿ ಒಬ್ಬ ಮಗಳಿರುವಳು. ಅಜ್ಜ–ಅಜ್ಜಿಯರ ತೃತೀಯ ಮಗುವು ಹೆಣ್ಣಾಗಿದ್ದು ಅವಳಿಗೂ ಮದುವೆಯಾಗಿ ಇಬ್ಬರು ಗಂಡು ಮಕ್ಕಳಿರುವರು. ಇದು ಮೂರು ತಲೆಮಾರುಗಳನ್ನು ತೋರಿಸುತ್ತಿದ್ದು ಅವರೆಲ್ಲರೂ ಚಿಕ್ಕಪ್ಪ–ದೊಡ್ಡಪ್ಪನ ಮಕ್ಕಳಾಗಿರುವರು.

ನಮ್ಮ ಸ್ವಂತ ಕುಟುಂಬದ ಚರಿತ್ರೆಯನ್ನು ಸಹ ನಿರೂಪಿಸುವುದಕ್ಕಾಗಿ ನಿಮಗೆ ಪರಿಚಯವಿರುವಷ್ಟು ಕುಟುಂಬಗಳನ್ನು ಒಟ್ಟಿಗೆ ಸೇರಿಸಿ ಚಿತ್ರಪಟವನ್ನು ಸಿದ್ಧಪಡಿಸಬಹುದಾಗಿದೆ. ಅದರಲ್ಲಿ ಮೇಲೆ ತಿಳಿಸಿರುವಂತೆಯೇ ಅಜ್ಜ–ಅಜ್ಜಿಯವರಿಂದ ಆರಂಭಿಸಿ ಕುಟುಂಬದ ಪ್ರತಿಯೊಬ್ಬರ ಚಿತ್ರಗಳನ್ನು ಒಂದೊಂದಾಗಿ ನಿರೂಪಿಸಿರಿ.


ಪ್ರತಿಯೊಬ್ಬರನ್ನು ಸುಲಭವಾಗಿ ಗುರುತಿಸುವುದಕ್ಕಾಗಿ ಅವರ ಹೆಸರುಗಳನ್ನು ಬರೆದಿಡುವುದನ್ನು ನೀವಿಷ್ಟಪಡಬಹುದು. ನಿನ್ನ ತಂದೆಯವರ ಕುಟುಂಬಕ್ಕಾಗಿ ಒಂದು ಹಾಗೂ ತಾಯಿಯವರ ಕುಟುಂಬ ಚರಿತ್ರೆಗಾಗಿ ಬೇರೊಂದು ಚಿತ್ರಪಟವನ್ನು ಸಿದ್ಧಪಡಿಸಬೇಕಾಗುತ್ತದೆ.

ಅದಾದ ನಂತರ ವಿಶಿಷ್ಟವಾದ ಬಣ್ಣ, ಗುರುತು ಅಥವಾ ಅಕ್ಷರಗಳ ಸಹಾಯದಿಂದ ಯಾವ ಯಾವ ವ್ಯಕ್ತಿಗಳಲ್ಲಿ ನೀವು ಕಂಡುಹಿಡಿಯಲೆತ್ನಿಸುತ್ತಿರುವ ಗುಣ–ಸ್ವಭಾವಗಳು ವಾಸವಾಗಿದ್ದವೆಂದು ಸುಲಭವಾಗಿ ಗುರುತಿಸಿರಿ. ಅವರು ಭಾಗಿಗಳಾಗಿರಬಹುದಾದ ಸಂಕಟಗಳ ಬಗ್ಗೆ ಕೆಳಗಿನ ಪಟ್ಟಿಯಲ್ಲಿಂದ 1 ರಿಂದ ಆರಂಭಿಸಿ ಪ್ರತಿಯೊಂದನ್ನು ಪರೀಕ್ಷಿಸಿ ನೋಡಿರಿ. ಆಗ ಅವುಗಳಿಗೆ ಹೊರತಾದ ಇತರೆ ವಿಷಯಗಳು ಸಹ ನಿಮ್ಮ ಪಟ್ಟಿಯಲ್ಲಿ ಯಥಾಪ್ರಕಾರ ಸೇರಿಸಿಕೊಳ್ಳಿರಿ.

1. ಮದುವೆ ಸಮಸ್ಯೆಗಳು (ಬೇರ್ಪಡುವಿಕೆ/ವಿಚ್ಛೇದನ/ಬಹುಪತ್ನಿತ್ವ/ ಇತರರೊಂದಿಗಿನ ಅನೈತಿಕ ಸಂಬಂಧಗಳು)
2. ಭೀಕರ ಕಾಯಿಲೆಗಳು / ವಯಸ್ಸಾಗದ ಮರಣ
3. ಆರ್ಥಿಕ ಮುಗ್ಗಟ್ಟುಗಳು
4. ಕುಟುಂಬಗಳಲ್ಲಿ ಅಸಮಧಾನ / ಮುರಿಯಲ್ಪಡುವಿಕೆ
5. ಮಾನಸಿಕ / ಶಾರೀರಿಕ ಕಾಯಿಲೆಗಳು
6. ಮಕ್ಕಳಾಗದಿರುವಿಕೆ / ಬಂಜೆತನ
7. ಅಪಘಾತಗಳು
8. ವ್ಯಸನಿಗಳಾಗಿ ಮಾರ್ಪಡುವಿಕೆ
9. ತಲುಪಲಾಗದ ಗುರಿ / ಧ್ಯೇಯ
10. ಪೀಡಣೆ / ದೂಷಣೆ

ಇವುಗಳಲ್ಲಿ ಅನೇಕವು ನಿಮ್ಮ ಕುಟುಂಬಗಳಲ್ಲಿರಲಿಕ್ಕಿಲ್ಲ ಅಥವಾ ಅವುಗಳನ್ನು ರಹಸ್ಯವಾಗಿಯೂ ಇಟ್ಟಿರಬಹುದಷ್ಟೆ.

ಕುಟುಂಬ ಚರಿತ್ರೆಯ ಪಟ್ಟಿಯೊಂದನ್ನು ಹೇಗೆ ಉಪಯೋಗಿಸಬೇಕೆಂಬುದರ ಚಿಕ್ಕದೊಂದು ಉದಾಹರಣೆ



**X** = ವಯಸ್ಸಾಗದ ಮರಣ

/ = ಮದುವೆ ವಿಚ್ಛೇದನ

**ಕಪ್ಪು ಗುರುತು** = ಮಾನಸಿಕ ಖಾಯಿಲೆ / ಖಿನ್ನತೆ

ಗಮನಿಸಿರಿ: ಈ ಚರಿತ್ರೆಯಲ್ಲಿ ಪ್ರತಿಯೊಂದು ಕುಟುಂಬದಲ್ಲಿ ದ್ವಿತೀಯ ಮಗುವಾಗಿರುವ (ಗಂಡು) ಖಿನ್ನತೆಯಿಂದ ಬಳಲುತ್ತಿದೆ. ವಿವಿಧ ಬಣ್ಣ ಗುರುತುಗಳ ಮೂಲಕ ವಿವಿಧ ಸಮಸ್ಯೆ (ಸಂಕಟ) ಗಳನ್ನು ಗುರುತಿಸಿಕೊಳ್ಳಬಹುದಾಗಿದೆ.

ನಿಮ್ಮ ಕುಟುಂಬದ ಬಗ್ಗೆ ಅಧ್ಯಯನ ಮಾಡುವ ಮೊದಲು ಪ್ರಾರ್ಥಿಸಿರಿ ಹಾಗೂ ನಮ್ಮ ಕುಟುಂಬದಲ್ಲಿನ ವಿಷಯಗಳನ್ನು ಆತನಿಚ್ಚಿಸುವ ವಿಧಾನದಲ್ಲಿ ನಮಗೆ ತೋರ್ಪಡಿಸಿಕೊಡುವಂತೆ ಪವಿತ್ರಾತ್ಮನನ್ನು ಕೇಳಿಕೊಳ್ಳಿರಿ.

ನಿಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಆಶೀರ್ವಾದ/ಶಾಪ, ಮನೋಭಾವ/ನಡತೆಗಳು, (ಆತ್ಮೀಕ–ಪಾಪ ಸ್ವಭಾವ) ಅದಾವುದಿದ್ದರೂ ಅವುಗಳ ಗುರುತಿಸುವಿಕೆಗಾಗಿ ನೀವು ಬಯಸುವಷ್ಟು ಚಿತ್ರಗಳನ್ನು ಬಿಡಿಸಬಹುದಾಗಿದೆ. ಅವುಗಳಲ್ಲಿ ಅಡಕವಾಗಿರುವ ಒಳ್ಳೆಯ ಕಾರ್ಯಗಳಿಗಾಗಿ ದೇವರನ್ನು ಸ್ತುತಿಸಿರಿ. ಆದರೆ ಅವುಗಳಲ್ಲಿ ಸತತವಾದ ಸಂಕಟ/ವೇದನೆಗಳಿದ್ದಲ್ಲಿ ನಿಮ್ಮ ಕುಟುಂಬವು ಶಾಪಕ್ಕಧೀನದಲ್ಲಿದೆ.

ಅವುಗಳಿಗೆ ಕಾರಣವೇನೆಂಬುದನ್ನು ಕಂಡುಹಿಡಿಯಲು ದೈವೀಕ ಸ್ವಾಸ್ಥತೆಗೆ ತಿರುಗಿ ಬಾಧ್ಯಸ್ಥರಾಗುವಿಕೆ ಎಂಬ ಅಧ್ಯಾಯವನ್ನು ಓದಿರಿ ಹಾಗೂ ಆ ಮೂಲಕವಾಗಿ ಕ್ರಿಸ್ತನು ನಿಮ್ಮನ್ನು ಹಾಗೂ ನಿಮ್ಮ ಕುಟುಂಬವನ್ನು ಆ ಶಾಪಗಳಿಂದ ವಿಮೋಚಿಸಿ ಸ್ವತಂತ್ರರನ್ನಾಗಿಸಲು ನಿರ್ವಹಿಸಿದ ಕಾರ್ಯವನ್ನು ಅಂಗೀಕರಿಸಿಕೊಳ್ಳಿರಿ.

# ಪೂರ್ವಜರಿಗಾಗಿನ ಆಶೀರ್ವಾದಗಳ ಹೊಂದುವಿಕೆಗಾಗಿನ ಪ್ರಾರ್ಥನೆ[9]

ಸತ್ಯವೇದಕ್ಕನುಗುಣವಾಗಿ ನಕಾರಾತ್ಮಕವಾದ ಪರಿಣಾಮಗಳನ್ನುಂಟು ಮಾಡಬಹುದಾದ ಪಾಪಗಳ (ಶಾಪಗಳ) ಪಟ್ಟಿಯನ್ನೂ ಅರಿಕೆ ಮಾಡಿ ಪಶ್ಚಾತ್ತಾಪಪಡುವ ಪ್ರಾರ್ಥನಾ ವಿಧಾನವನ್ನೂ ಕೆಳಗೆ ಕೊಡಲಾಗಿದೆ. ನಮ್ಮ ಪೂರ್ವಜರು ಯಾವ ವಿಧಾನದ ಪಾಪಗಳನ್ನು ಮಾಡಿರುವರೆಂದು ನಾವು ಅರಿಯದ ಕಾರಣ "ಹಾಗಿದ್ದರೆ (ಮಾಡಿದ್ದರೆ)" ಎಂಬ ವಿಧಾನದಲ್ಲಿ ಪ್ರಾರ್ಥಿಸಬಹುದಾಗಿದೆ. ಆನಂತರ ಆ ಮೂಲಕ ನಮ್ಮಲ್ಲೂ ನಮ್ಮ ಕುಟುಂಬ ಸದಸ್ಯರು, ಸಭೆ ಹಾಗೂ ದೇಶಕ್ಕೆ ಉಂಟಾಗಬಹುದಾದ ನಕಾರಾತ್ಮಕ ಪರಿಣಾಮಗಳಿಂದ ಬಿಡಿಸುವಂತೆಯೂ ಆತನ ಮಹತ್ತಾದ ಆಶೀರ್ವಾದಗಳನ್ನು ನಮಗೆ ಒದಗಿಸುವಂತೆಯೂ ಪ್ರಾರ್ಥಿಸಿರಿ.

"ಪರಲೋಕದಲ್ಲಿರುವ ನನ್ನ ಪ್ರೀತಿಯ ತಂದೆಯೇ, ನಾನೂ, ನನ್ನ ಪಿತೃಗಳೂ ಮಾತ್ರವಲ್ಲದೇ ನಮ್ಮ ಮೂಲ ಪಿತೃಗಳಾದ ಆದಾಮ – ಹವ್ವರವರೆಗಿನ ಎಲ್ಲರೂ ನಿನಗೆ ವಿರುದ್ಧವಾಗಿ ನಿನ್ನ ವಾಕ್ಯದಲ್ಲಿ ಹೇಳಲ್ಪಟ್ಟಿರುವ ಪ್ರಕಾರ ನಾವು ಅನೇಕ ಪಾಪ ಹಾಗೂ ದುಷ್ಕಾರ್ಯಗಳನ್ನು ಮಾಡಿದ್ದೇವೆ *(2 ಪೂರ್ವ 6:37)*, ಅವುಗಳ ನಿಮಿತ್ತ ನನಗೂ, ನನ್ನ ಕುಟುಂಬಕ್ಕೂ, ನನ್ನ ಸಭೆಗೂ, ನನ್ನ ದೇಶಕ್ಕೂ ಶಾಪಗಳನ್ನುಂಟು ಮಾಡಿರುತ್ತದೆಂದು ಬೈಬಲ್ ಮೂಲಕ ನಾನು ಬಲ್ಲೆನು.



ದಯವಿಟ್ಟು ನನ್ನನ್ನೂ, ಆದಾಮ – ಹವ್ವರವರೆಗಿರುವ ನಮ್ಮೆಲ್ಲಾ ಪೂರ್ವಜರನ್ನೂ ಅವರೆಲ್ಲರೂ ಮಾಡಿರಬಹುದಾದ ಈ ಕೆಳಗಿನ ಪಾಪಗಳಿಂದ... ವಿಮುಕ್ತಗೊಳಿಸು.

- ನಾವು ಮಾನಸಾಂತರಪಡುವುದಾಗಲೀ ಅಥವಾ ಎಲ್ಲಾ ಮಹಿಮೆಯನ್ನು ನಿನಗೆ ಸಲ್ಲಿಸುವುದನ್ನಾಗಲೀ ಮಾಡಲಿಲ್ಲ *(ಪ್ರಕ 16:9)*
- ನಾವು ನಿಮ್ಮನ್ನು ಪೂರ್ಣ ಹೃದಯದಿಂದಲೂ, ಪ್ರಾಣದಿಂದಲೂ, ಬುದ್ಧಿ – ಶಕ್ತಿಯಿಂದಲೂ ಪ್ರೀತಿಸಲಿಲ್ಲ *(ಧರ್ಮೋ 6:4–5; ಮಾರ್ಕ 12:30; 1 ಕೊರಿ 16:22; 1 ಯೋಹಾನ 5:21)*
- ನಾವು ನಿಮ್ಮನ್ನು ತಿರಸ್ಕರಿಸಿ, ನಿನ್ನ ಆಜ್ಞೆಗಳನ್ನು ಪಾಲಿಸದೇ ಸ್ವಂತ ಮಾರ್ಗದಲ್ಲೇ ನಡೆದಿರುತ್ತೇವೆ *(ಧರ್ಮೋ 11:28, 27:15–26, 28:15; ಯೆರೆ 11:3; ಯೆಶಾಯ 24:5–6, 53:6)*
- ನಾವು ಸೃಷ್ಟಿಕರ್ತನಾದ ನಿಮ್ಮನ್ನು ಆರಾಧಿಸದೆ ದೇವರ ಸೃಷ್ಟಿಯಾದ ಮನುಷ್ಯರನ್ನೂ, ಎಲ್ಲಾ ರೀತಿಯ ವಿಗ್ರಹಗಳನ್ನೂ ಆರಾಧಿಸಿದ್ದೇವೆ *(ವಿಮೋ 20:4–6; ಧರ್ಮೋ 4:15–19, 27:15; ರೋಮಾ 1:21–23; ಎಫೆಸ 5:5; 1 ಯೋಹಾನ 5:21; ಪ್ರಕ 21:8)*
- ನಾವು ನಿನ್ನಲ್ಲಿ ಭರವಸೆಯಿಡದೆ ನಮ್ಮಲ್ಲಿಯೂ ಇತರರಲ್ಲಿಯೂ ಆಶ್ರಯಿಸಿರುತ್ತೇವೆ *(ಕೀರ್ತನೆ 118:8; ಯೆರೆ 17:5)*

[9] *ಇದು ಪಾಪದ ವಿಷಯದಲ್ಲಿನ ಸಂಪೂರ್ಣ ವಿವರಣಾ ಪಟ್ಟಿಯಾಗಿರದೆ ಕೇವಲ ಸತ್ಯವೇದದಲ್ಲಿ ಹೇಳಲ್ಪಟ್ಟಿರುವ ಶಾಪಗಳೊಂದಿಗೆ ಸಂಬಂಧವಿರುವ ವಿಷಯಗಳಾಗಿವೆಯಷ್ಟೆ.*

- ನಾವು ಮಾಟ – ಮಂತ್ರ ಇತ್ಯಾದಿ ದುಷ್ಕಾರ್ಯಗಳಲ್ಲಿ ಭಾಗಿಗಳಾಗಿರುತ್ತೇವೆ *(ಧರ್ಮೋ 11:28, 27:15; ಪ್ರಕ 21:8)*
- ನಮ್ಮ ತಂದೆ – ತಾಯಿಗಳನ್ನು ಸನ್ಮಾನಿಸದೆ ಅವಿಧೇಯರಾಗಿದ್ದೇವೆ *(ಧರ್ಮೋ 27:16; ವಿಮೋ 20:12; ಎಫೆಸ 6:2)*
- ನಾವು ಎಲ್ಲಾ ರೀತಿಯ ಲೈಂಗಿಕತೆ, ಲೈಂಗಿಕ ಪಾಪಗಳನ್ನು ಅದರಲ್ಲೂ ವಿಶಿಷ್ಟವಾಗಿ ನೀನು ನಿರ್ಬಂಧಿಸಿದ್ದ ದುರಾಶೆ, ವ್ಯಭಿಚಾರ, ಅನೈತಿಕತ್ವ ಮಲತಾಯಿ ಸಂಗಮ, ಗುದ ಮೈಥನ, ರಕ್ತ ಸಂಬಂಧಿಗಳೊಂದಿಗೆ ಲೈಂಗಿಕತ್ವ ಹಾಗೂ ಪಶುಸಂಗಮ ಇತ್ಯಾದಿಗಳಲ್ಲಿ ಭಾಗಿಯಾಗಿದ್ದೇವೆ *(ಆದಿ 38:9–10; ವಿಮೋ 20:14; ಧರ್ಮೋ 27:20–23; ಯೆಹೆ 22:10–11; ಮತ್ತಾಯ 5:27–28; ರೋಮಾ 1:26–27; 1 ಕೊರಿ 6:9, 15–20; ಎಫೆಸ 5:5; ಪ್ರಕ 22:15)*
- ನಾವು ನಿನ್ನವರಲ್ಲದವರೊಡನೆ ಒಡಂಬಡಿಕೆ ಮಾಡಿಕೊಂಡು ಅಂಥಹವರನ್ನೇ ಮದುವೆ ಆಗಿರುವೆವು *(ನೆಹೆ 13:23–25; 2 ಕೊರಿ 6:14–15)*
- ನಾವು ಆತ್ಮಹತ್ಯೆ, ಕೊಲೆ, ಗರ್ಭಪಾತ, ಇತ್ಯಾದಿಗಳಲ್ಲಿ ಭಾಗಿಗಳಾಗಿದ್ದೇವೆ *(ಆದಿ 9:5; ವಿಮೋ 20:13; ಧರ್ಮೋ 28:47–48; ಕೀರ್ತನೆ 71:6, 139:13–17; ಯೆಶಾಯ 49:1–5; ಮತ್ತಾಯ 5:21–22; ಮಾರ್ಕ 8:34; ರೋಮಾ 13:9–10)*
- ನಮ್ಮ ನೆರೆ–ಹೊರೆಯುವರನ್ನು ಗುಪ್ತವಾಗಿ ಆಕ್ರಮಿಸಿರುತ್ತೇವೆ *(ಧರ್ಮೋ 27:24; ಮಾರ್ಕ 12:31; 1 ಯೋಹಾನ 3:15)*
- ನಿರಪರಾಧಿಯು ಕೇಡಿಗಾಗಿ ಲಂಚವನ್ನು ಪಡೆದಿರುತ್ತೇವೆ *(ಧರ್ಮೋ 27:25)*
- ಮರಣ ಶಿಕ್ಷೆಗೆ ಒಳಗಾದವರ ಶವಗಳನ್ನು ಅದೇ ದಿನದಲ್ಲಿ ನಾವು ಹೂಣಿರುವುದಿಲ್ಲ *(ಧರ್ಮೋ 21:23; ಗಲಾತ್ಯ 3:14)*
- ದಶಮ ಭಾಗವನ್ನು ಕೊಡುವುದರ ವಿಷಯದಲ್ಲೂ, ಸಭೆಯ ಕಾರ್ಯಕ್ರಮಗಳಲ್ಲಿ ಭಾಗಿಗಳಾಗುವ ವಿಷಯದಲ್ಲೂ ತಪ್ಪಿರುತ್ತೇವೆ *(ಮಲಾಕಿ 3:9; ಧರ್ಮೋ 12:11)*
- ಬಡತನದಲ್ಲಿರುವವರಿಗೆ ಕಣ್ಣನ್ನು ಮುಚ್ಚಿ ಸಂಕಟದಲ್ಲಿರುವವರಿಗೆ ಸಹಾಯ ಮಾಡಿರುವುದಿಲ್ಲ *(ಜ್ಞಾನೋ 28:27; ಮತ್ತಾಯ 25:41–46)*
- ಪರದೇಶಿ, ವಿಧವೆ ಹಾಗೂ ತಂದೆ –ತಾಯಿ ಇಲ್ಲದವರ ನ್ಯಾಯವನ್ನು ತಪ್ಪಿಸಿರುತ್ತೇವೆ *(ಧರ್ಮೋ 27:19; ಯೆಶಾಯ 58:6–7; ಯಾಕೋಬ 1:27)*
- ನಿಮ್ಮ ಪವಿತ್ರ ನಾಮವನ್ನು ನಾವು ಘನಪಡಿಸಲಿಲ್ಲ *(ಧರ್ಮೋ 28:58; ಜೆಕರ್ಯ 5:4; ಮಲಾಕಿ 2:2; ಪ್ರಕ. 16:9)*
- ನಾವು ನಮ್ಮನ್ನೂ, ಇತರರನ್ನೂ ಹಾಗೂ ನಿನ್ನನ್ನೂ ಸಹ ಶಪಿಸಿರುತ್ತೇವೆ *(2 ಸಮು 19:21; ಯೋಬ 2:9; ಕೀರ್ತನೆ 109:17; ಪ್ರಕ 16:9–11; ಮತ್ತಾಯ 5:22; 1 ಕೊರಿ 11:29; ಯಾಕೋಬ 3:10)*

- ನಿನ್ನ ಜನರಾದ ಇಸ್ರಾಯೇಲ್ಯರನ್ನು ನಾವು ಶಪಿಸಿರುತ್ತೇವೆಯೇ ಹೊರತು ಆಶೀರ್ವದಿಸಿರುವುದಿಲ್ಲ *(ಆದಿ 12:3; ಯೆಶಾ 45:17; ರೋಮಾ 11:28–29)*
- ನಾವು ಸುಳ್ಳಾಡಿದ್ದೇವೆ ಹಾಗೂ ತಪ್ಪಾಗಿ ಪ್ರಮಾಣ ಮಾಡಿದ್ದೇವೆ (*ಜೆಕರ್ಯ 5:4; ಪ್ರಕಟ 21:8, 22:15*)
- ನಾವು ಭೂಮಿಯನ್ನು ಕದ್ದು ಇತರರ ಮೇರೆಯನ್ನು ಒತ್ತಿದ್ದೇವೆ *(ಧರ್ಮೋ 19:14, 27:14; ಜ್ಞಾನೋ 22:28)*
- ನಾವು ಮದ್ಯವ್ಯಸನಿಗಳೂ, ಮಾದಕ ವಸ್ತುಗಳನ್ನು ಸೇವಿಸುವವರೂ ಆಗಿದ್ದೇವೆ *(ಜ್ಞಾನೋ 23:29–35; ರೋಮಾ 13:13; 1 ಕೊರಿ 11:27)*
- ನಾವು ನಿನ್ನ ವಿಷಯವಾದ ಶುಭ ವರ್ತಮಾನವನ್ನು ಸಾರದವರಾಗಿದ್ದೇವೆ *(ಯಾಜಕ 19:14; ಧರ್ಮೋ 27:18; ಲೂಕ 17:2; ಗಲಾತ್ಯ 1:8; 2 ಪೇತ್ರ 2:14)*
- ನಾವು ನಿನ್ನ ಕೃಪೆಯನ್ನು ಆಶ್ರಯಿಸದೇ ನಮ್ಮ ಸ್ವ – ಪ್ರಯತ್ನಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿರುತ್ತೇವೆ *(ಮಾರ್ಕ 1:15; ರೋಮಾ 4:1–24, 10:9–13; ಗಲಾತ್ಯ 3:6–12; ಎಫೆಸ 2:8–10)*

"ನಮ್ಮ ಮೂಲ ಪಿತೃಗಳಾದ ಆದಾಮ – ಹವ್ವರಿಂದ ಇಲ್ಲಿಯವರೆಗೂ (ನನ್ನವರೆಗೂ) ನಿನಗೆ ವಿರುದ್ಧವಾಗಿ ಮಾಡಿರುವ ಪ್ರತಿಯೊಂದು ಆಲೋಚನೆ, ಮಾತು, ಕ್ರಿಯೆಗಳಿಗಾಗಿ ಪಶ್ಚಾತ್ತಾಪದಿಂದ ಅರಿಕೆ ಮಾಡುತ್ತಿದ್ದೇನೆ. ದಯವಿಟ್ಟು, ಅರಿವಿದ್ದೋ ಅರಿವಿಲ್ಲದೆಯೋ ನಾನೂ, ನನ್ನ ಪಿತೃಗಳೂ, ನನ್ನ ಸಭೆ ಹಾಗೂ ನನ್ನ ದೇಶದವರೂ ಮಾಡಿರಬಹುದಾದ ಎಲ್ಲಾ ಪಾಪಗಳನ್ನೂ ಮನ್ನಿಸಿರಿ."

"ಕರ್ತನಾದ ಯೇಸುವೇ ನನ್ನ ಪಾಪಗಳಿಗಾಗಿ ನೀನು ಸತ್ತು ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪಗಳಿಂದ ನನ್ನನ್ನು ಬಿಡಿಸಿರುವುದಕ್ಕಾಗಿ ವಂದನೆಗಳು. ನಮ್ಮೆಲ್ಲರ ಪಾಪಗಳ ಪರಿಹಾರಾರ್ಥವಾಗಿ ಶಾಪವನ್ನೆಲ್ಲಾ ನೀನೇ ವಹಿಸಿಕೊಂಡದ್ದಕ್ಕಾಗಿ *(ಗಲಾತ್ಯ 3:13–14)* ವಂದನೆಗಳು. ಇದನ್ನು ನಂಬುವವನಾದ ನಾನು ನಜರೇತಿನ ಯೇಸುಕ್ರಿಸ್ತನ ಅಧಿಕಾರವುಳ್ಳ ನಾಮದಲ್ಲಿ ನನ್ನ ಮೇಲೂ, ನನ್ನ ಕುಟುಂಬ, ಸಭೆ ಹಾಗೂ ದೇಶದ ಮೇಲಿರುವ ಎಲ್ಲಾ ಶಾಪಗಳನ್ನು ಮುರಿದು ಹಾಕುತ್ತಿದ್ದೇನೆ."

"ಪರಲೋಕದ ತಂದೆಯೇ, ನನ್ನನ್ನೂ, ನನ್ನ ಕುಟುಂಬ, ಸಭೆ ಹಾಗೂ ದೇಶವನ್ನು ಶುದ್ಧೀಕರಿಸಿ ವಿಮೋಚಿಸಿ ಪರಲೋಕದ ಕೆಳಗಿನ ಎಲ್ಲಾ ವಿಧದ ಆಶೀರ್ವಾದಗಳಿಂದ *(ಎಫೆಸ 1:3)* ಸಾವಿರ ತಲೆಗಳವರೆಗೂ ಆಶೀರ್ವದಿಸೆಂದು ಬೇಡಿಕೊಳ್ಳುತ್ತಿದ್ದೇನೆ. ನಿನಗೆ ಸ್ತೋತ್ರಗಳು! ನಿನ್ನನ್ನೇ ಪ್ರೀತಿಸಿ, ವಿಧೇಯನಾಗಿ, ದೃಢವಾಗಿ, ನಿನಗಾಗಿ ಸಮರ್ಪಿಸಿಕೊಳ್ಳುತ್ತಿದ್ದೇನೆ *(ಧರ್ಮೋ 30:20; ಯೆಹೋ 24:15; ಮಾರ್ಕ 12:30).* ಪವಿತ್ರಾತ್ಮನೇ ದಯವಿಟ್ಟು ಸಹಾಯ ಮಾಡು, ನನಗೆ ನಿನ್ನ ಅಗತ್ಯತೆ ಇರುವುದರಿಂದ ನನ್ನನ್ನು ಇನ್ನೊಮ್ಮೆ ನೂತನವಾಗಿ ತುಂಬಿಸು."

"ಪರಲೋಕದ ತಂದೆಯೇ, ನಿನ್ನ ಮಹಿಮೆಯುಳ್ಳ ನಾಮಕ್ಕೆ ಸ್ತುತಿಯುಂಟಾಗಲಿ! ಸರ್ವಸ್ತುತಿ ಕೀರ್ತನೆಗಳಿಗೆ ಮಿಗಿಲಾಗಿರುವ ನಿನ್ನ ಮಹಾನಾಮಕ್ಕೆ ಕೊಂಡಾಟವಾಗಲಿ! *(ನೆಹೆ 9:5)* ಯೇಸುವಿನ ನಾಮದಲ್ಲಿ ಬೇಡಿಕೊಂಡಿದ್ದೇನೆ, ಆಮೆನ್."

# ನಾನೀಗ ಕ್ರಿಸ್ತನಲ್ಲಿ ಯಾರಾಗಿರುವೆನು

ಹೊಸದಾಗಿ ಹುಟ್ಟಿದ ವಿಶ್ವಾಸಿಯಾಗಿರುವ ನಾನೀಗ ಕ್ರಿಸ್ತನಲ್ಲಿದ್ದೇನೆ ಹಾಗೂ ಆತನು ನನ್ನಲ್ಲಿದ್ದಾನೆ. ಕೆಳಗೆ ನಮೂದಿಸಿರುವ ವಾಕ್ಯಭಾಗಗಳು ನನ್ನ ವಿಷಯದಲ್ಲಿ ಸರ್ವಸಂಪೂರ್ಣ ಸತ್ಯವಾಗಿವೆ. ಅವುಗಳು ಇನ್ನೂ ಹೆಚ್ಚು ಸತ್ಯವೆಂದು ತೋರ್ಪಡಿಸಲು ನನ್ನಿಂದೇನೂ ಮಾಡಲಾಗದು. ಆದರೆ ಈ ವಿಶೇಷ ಗುಣಲಕ್ಷಣಗಳನ್ನು ದೇವರು ನನ್ನ ವಿಷಯದಲ್ಲಿ ನಾನು ಯಾರೆಂದು ಹೇಳಿರುವ ವಿಷಯಕ್ಕನುಗುಣವಾಗಿ ಅಧಿಕ ಅರ್ಥಪೂರ್ಣವಾಗಿಯೂ ಫಲಕಾರಿಯಾಗಿಯೂ ಮಾರ್ಪಡಿಸಬಲ್ಲನು. ನಾನೀಗ **ಕ್ರಿಸ್ತನಲ್ಲಿರುವವನಾಗಿ:–**

**ನಾನು ಪ್ರೀತಿಸ್ಪಟ್ಟಿರುವೆನು . . .**

- ನಾನು ದೇವರ ಮಗುವಾಗಿದ್ದೇನೆ ***(ಯೋಹಾ 1:12; ರೋಮಾ 8:14; ಗಲಾತ್ಯ 3:26, 4:6–7; ಎಫೆಸ 1:5)***
- ನಾನು ಕ್ರಿಸ್ತನ ಸ್ನೇಹಿತನೂ ***(ಯೋಹಾನ 15:15)*** ಬಂಧುವೂ ***(ಇಬ್ರಿಯ 2:11)*** ಆಗಿದ್ದೇನೆ.
- ನಾನು ದೇವರಿಂದ ಪ್ರೀತಿಸಲ್ಪಟ್ಟಿದ್ದೇನೆ, ದೇವರು ಕ್ರಿಸ್ತನನ್ನು ಪ್ರೀತಿಸಿದಂತೆಯೇ ನನ್ನನ್ನೂ ಪ್ರೀತಿಸುತ್ತಿರುವನು ***(ಯೋಹಾನ 17:23)***
- ದೇವರ ಮೇಲಿನ ಪ್ರೀತಿಯಿಂದ ಅಗಲಿಸಲಾರದವನಾಗಿದ್ದೇನೆ ***(ರೋಮಾ 8:35–39)***
- ನಾನು ಕ್ರಿಸ್ತನ ದೇಹದಲ್ಲಿನ ಒಂದು ಅಂಗವಾಗಿದ್ದೇನೆ ***(1 ಕೊರಿ 12:27; ಎಫೆಸ 5:30)***
- ನಾನು ಕ್ರಿಸ್ತನಲ್ಲಿ ಪರಿಪೂರ್ಣತೆಯುಳ್ಳವನಾಗಿದ್ದೇನೆ ***(ಕೊಲೊಸ್ಸೆ 2:10)***

**ನಾನು ಅಂಗೀಕರಿಸಲ್ಪಟ್ಟಿರುವೆನು . . .**

- ಕ್ರಿಸ್ತನ ಮೇಲಿನ ನಂಬಿಕೆಯಿಂದ ದೇವರೊಡನೆ ಸಮಾಧಾನದಿಂದಿದ್ದೇನೆ ***(ರೋಮಾ 5:1)***
- ನನ್ನ ಪಾಪಗಳ ಪರಿಹಾರದ ಶಿಕ್ಷೆಯಿಂದ ವಿಮುಕ್ತನಾಗಿದ್ದೇನೆ ***(ರೋಮಾ 3:24; ಕೊಲೊಸ್ಸೆ 1:14)***
- ಅಪರಾಧ ನಿರ್ಣಯದಿಂದ ನಾನೀಗ ಶಾಶ್ವತವಾಗಿ ವಿಮುಕ್ತನಾಗಿದ್ದೇನೆ ***(ರೋಮಾ 8:1, 31–34)***
- ದೇವರ ಬಳಿಗೆ ಸಹಾಯಕ್ಕಾಗಿ ಧೈರ್ಯದಿಂದ ಬರುವ ಅವಕಾಶ ಹೊಂದಿದ್ದೇನೆ ***(ಇಬ್ರಿಯ 4:16; ಎಫೆ 2:18, 3:12)***
- ದೇವರಿಗೆ ಸ್ವಕೀಯ ಪ್ರಜೆಯಾಗಿದ್ದೇನೆ ***(1 ಪೇತ್ರ 2:9)***
- ನಾನು ನೂತನ ಸೃಷ್ಟಿಯಾಗಿದ್ದೇನೆ ***(2 ಕೊರಿ 5:17)***
- ದೇವರನ್ನು ಅಪ್ಪಾ ತಂದೆಯೇ ಎಂದು ಕರೆಯುವ ಬಾಧ್ಯತೆಯನ್ನು ಹೊಂದಿದ್ದೇನೆ ***(ಗಲಾತ್ಯ 4:6)***

**ನಾನು ವಿಶಿಷ್ಟನು . . .**

- ಅಯೋಗ್ಯನಾಗಿದ್ದ ನಾನೀಗ ಭರವಸೆ – ಉಲ್ಲಾಸಗಳ ಒಡೆಯನಾಗಿದ್ದೇನೆ ***(ರೋಮಾ 5:2)***
- ನಾನು ಕ್ರಿಸ್ತನಲ್ಲಿ ದ್ರಾಕ್ಷೆಯ ಕೊಂಬೆಯಾಗಿದ್ದು ಆಶೀರ್ವಾದದ ಮೂಲವಾಗಿದ್ದೇನೆ ***(ಯೋಹಾನ 15:1, 5)***
- ನಾನು ದೇವರ ಮೂಲಕ ಕ್ರಿಸ್ತನಲ್ಲಿ ಮರೆಯಾಗಿದ್ದೇನೆ ***(ಕೊಲೊಸ್ಸೆ 3:3; 1 ಕೊರಿ 1:30)***
- ನಾನು ದೇವರ ಆಲಯವಾಗಿದ್ದೇನೆ ಹಾಗೂ ಆತನ ಆತ್ಮನು ನನ್ನಲ್ಲಿ ವಾಸಿಸುತ್ತಿದ್ದಾನೆ ***(1 ಕೊರಿ 3:16)***
- ನಾನು ಕರ್ತನ ಅನ್ಯೋನ್ಯತೆಯಲ್ಲಿರುವುದರಿಂದ ಆತನೊಂದಿಗೆ ಒಂದೇ ಆತ್ಮವಾಗಿದ್ದೇನೆ ***(1 ಕೊರಿ 6:17)***
- ನಾನು ದೇವರಾರಿಸಿಕೊಂಡವನೂ, ವಿಶಿಷ್ಟವಾದವನೂ ಆಗಿದ್ದೇನೆ ***(1 ಪೇತ್ರ 2:9–10)***
- ನಾನು ದೇವರ ಅಪಾರವಾದ ದಯೆ, ಕೃಪೆ, ಕರುಣೆಗಳಿಗೆ ಉದಾಹರಣೆಯಾಗಿದ್ದೇನೆ ***(ಎಫೆಸ 2:7)***

**ನಾನು ಸುರಕ್ಷಿತನು . . .**

- ದೇವರು ನನ್ನಲ್ಲಿ ಆರಂಭಿಸಿರುವ ಒಳ್ಳೆಯ ಕೆಲಸವನ್ನು ಸಿದ್ಧಿಗೆ ತರುವೆನೆಂಬ ಭರವಸೆ ನನಗುಂಟು ***(ಫಿಲಿಪ್ಪಿ 1:6)***
- ನಾನು ದೇವರಿಂದ ಹುಟ್ಟಿದವನಾಗಿರುವುದರಿಂದ ವೈರಿ ನನ್ನನ್ನು ಮುಟ್ಟನು ***(1 ಯೋಹಾನ 5:18)***
- ನಾನು ದೇವರಿಂದ ಸ್ಥಾಪಿಸಿ, ಅಭಿಷೇಕಿಸಿ, ಮುದ್ರೆ ಹಾಕಲ್ಪಟ್ಟಿರುವೆನು ***(2 ಕೊರಿ 1:21–22)***
- ನಾನು ತಾತ್ಕಾಲಿಕ ನಿವಾಸಿಯೂ, ಈ ಭೂಮಿಯಲ್ಲಿ ಪರದೇಶಸ್ಥನೂ ಆಗಿದ್ದೇನೆ ***(1 ಪೇತ್ರ 2:11)***
- ದೇವರ ಪರಿಶುದ್ಧ ಜನರೊಳಗೆ ನಾನೂ ಒಬ್ಬನಾಗಿದ್ದೇನೆ ***(ಎಫೆಸ 1:1; 1 ಕೊರಿ 1:2; ಫಿಲಿ. 1;1; ಕೊಲೊಸ್ಸೆ 1:2)***
- ನಾನು ದೇವರಿಗೆ ಸಮರ್ಪಕವಾದ ನೀತಿಯುಳ್ಳವನೂ – ಪರಿಶುದ್ಧನೂ ಆಗುವುದಕ್ಕಾಗಿ ಕರೆಯಲ್ಪಟ್ಟಿದ್ದೇನೆ ***(ಎಫೆಸ 4:24; 2 ಕೊರಿ 5:21)***
- ನಾನು ಫಲ ಕೊಡುವುದಕ್ಕಾಗಿ ಆರಿಸಿ – ನೇಮಿಸಲ್ಪಟ್ಟಿದ್ದೇನೆ ***(ಯೋಹಾನ 15:16)***

**ನಾನು ಉದ್ದೇಶವುಳ್ಳವನು . . .**

- ನಾನು ಭೂಮಿಗೆ ಉಪ್ಪು, ಲೋಕಕ್ಕೆ ಬೆಳಕು ಆಗಿದ್ದೇನೆ ***(ಮತ್ತಾಯ 5:13–14)***
- ದೇವರಾದುಕೊಂಡ ರಾಜವಂಶಸ್ಥನಾದ ಯಾಜಕನಾಗಿದ್ದೇನೆ ***(1 ಪೇತ್ರ 2:9)***
- ನನ್ನನ್ನು ಬಲಪಡಿಸುವ ಕ್ರಿಸ್ತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ ***(ಫಿಲಿಪ್ಪಿ 4:13)***
- ಆತ್ಮಸಂಬಂಧವಾದ ಆಲಯವಾಗುವುದಕ್ಕೆ ಕಟ್ಟಲ್ಪಡುತ್ತಿರುವ ದೇವರ ಜೀವವುಳ್ಳ ಕಲ್ಲಾಗಿದ್ದೇನೆ ***(1 ಪೇತ್ರ 2:5)***

- ನಾನು ಬಲ–ಪ್ರೀತಿ–ಶಿಕ್ಷಣಗಳ ಆತ್ಮನಿಂದ ತುಂಬಿಸಲ್ಪಟ್ಟಿದ್ದೇನೆ ***(2 ತಿಮೊ 1:7)***
- ಕ್ರಿಸ್ತನಿಗುಂಟಾದ ಬಾಧೆ ಹಾಗೂ ಮಹಿಮೆಯಲ್ಲಿ ಪಾಲುಗಾರನಾಗುವ ಮೂಲಕವಾಗಿ ಕ್ರಿಸ್ತನೊಂದಿಗೆ ಬಾಧ್ಯನಾಗಿದ್ದೇನೆ ***(ರೋಮಾ 8:17)***

**ನನಗಿರುವ ಬಾಧ್ಯತೆಯು ನಿತ್ಯವಾದ ಮಹಿಮೆಯುಳ್ಳದ್ದಾಗಿದೆ . . .**

- ನಾನು ಮಹಿಮೆಯ ನಿರೀಕ್ಷೆಗಾಗಿ ಕರೆಯಲ್ಪಟ್ಟಿದ್ದೇನೆ ***(ಎಫೆಸ 4:4)***
- ದೇವರ ಮಗುವಾಗಿರುವುದರಿಂದ ಬಾಧ್ಯನೂ ಆಗಿದ್ದೇನೆ ***(ಗಲಾತ್ಯ 4:6–7)***
- ನಾನು ದೇವರ ಮನೆಯವನೂ, ದೇವಜನರೊಡನೆ ಒಂದೇ ರಾಜ್ಯಕ್ಕೆ ಸೇರಿದವನೂ ಆಗಿದ್ದೇನೆ ***(ಎಫೆಸ 2:19)***
- ನಾನು ಕ್ರಿಸ್ತನಲ್ಲಿರುವುದು ಆತನಿಂದಲೇ ***(1 ಕೊರಿ 1:30)***
- ನಾನು ಸ್ವರ್ಗದ ಬಾಧ್ಯತೆಗಾಗಿ ಕರೆಯಲ್ಪಟ್ಟವನಾಗಿದ್ದೇನೆ ***(ಇಬ್ರಿಯ 3:1)***
- ಕ್ರಿಸ್ತನು ನನಗೆ ಜೀವವಾಗಿರುವುದರಿಂದ ನಾನು ಆತನ ಪ್ರಭಾವವಾಗಿದ್ದೇನೆ ***(ಕೊಲೊಸ್ಸೆ 3:4)***
- ಮಹಿಮೆಯ ನಿರೀಕ್ಷೆಯಾದ ಕ್ರಿಸ್ತನಲ್ಲಿರುವವನಾಗಿದ್ದೇನೆ ***(ಕೊಲೊಸ್ಸೆ 1:27; 1 ಕೊರಿ 3:16)***
- ನಾನು ಅಂಧಕಾರದ ಅಧಿಕಾರದಿಂದ ಬಿಡಿಸಲ್ಪಟ್ಟು, ದೇವರ ರಾಜ್ಯದೊಳಗೆ ಸೇರಿಸಲ್ಪಟ್ಟವನಾಗಿದ್ದೇನೆ ***(ಫಿಲಿ 3:20; ಎಫೆಸ 2:6; ಕೊಲೊಸ್ಸೆ 1:13; 1 ಥೆಸ 5:5)***
- ನಾನು ಸ್ವರ್ಗದವನೂ, ಈಗಾಗಲೇ ಸ್ವರ್ಗದಲ್ಲಿ ಕೂತಿರುವವನೂ ಆಗಿದ್ದೇನೆ ***(ಫಿಲಿಪ್ಪಿ 3:20; ಎಫೆಸ 2:6)***

## ಆದ್ದರಿಂದ ಕ್ರಿಸ್ತನಲ್ಲೇ ದೃಢವಾಗಿ ನಿಲ್ಲಿರಿ!

***(ಯೋಹಾನ 15:7–10; ಇಬ್ರಿಯ 3:6; 2 ಯೋಹಾನ 9; 1 ಯೋಹಾನ 2:27–28)***

# ಸತ್ಯವೇದವನ್ನು ಅಧ್ಯಯನ ಮಾಡುವ ಕ್ರಮ[10]

## ಸತ್ಯವೇದವನ್ನು ಓದುವ ವಿಧಾನ (ಯೋಜನೆ)

ವರ್ಷಕ್ಕೊಮ್ಮೆಯಾದರೂ ಸಂಪೂರ್ಣ ಸತ್ಯವೇದವನ್ನು ಓದಿ ಮುಗಿಸುವುದು ನಮ್ಮ ಆತ್ಮೀಕ ಆಭಿವೃದ್ಧಿಗೆ ಸಹಾಯಿಸುತ್ತದೆ. ಪ್ರತಿದಿನ ಸತ್ಯವೇದದಲ್ಲಿನ ಹಳೆಯ ಹಾಗೂ ಹೊಸ ಒಡಂಬಡಿಕೆಗಳಲ್ಲಿನ ಭಾಗಗಳನ್ನು ಓದುವಾಗ ಹೆಚ್ಚಿನ ಆಸಕ್ತಿ ಉದ್ಭವವಾಗುತ್ತದೆ. ಹಳೆಯ ಒಡಂಬಡಿಕೆಯಲ್ಲಿ 929 ಅಧ್ಯಾಯಗಳೂ ಹೊಸ ಒಡಂಬಡಿಕೆಯಲ್ಲಿ 260 ಆಧ್ಯಾಯಗಳೂ ಇರುವುದರಿಂದ ವಿವಿಧ ವಿಧಾನದಲ್ಲಿ ನಾವದನ್ನು ಓದಿ ಮುಗಿಸಬಹುದಾದರೂ ಪ್ರತಿದಿನ ಹಳೆಯ ಒಡಂಬಡಿಕೆಯ 2 ರಿಂದ 3 ಅಧ್ಯಾಯಗಳನ್ನು ಹೊಸ ಒಡಂಬಡಿಕೆಯ 1 ಅಧ್ಯಾಯವನ್ನು ಓದುವುದು ಅತ್ಯಂತ ಸೂಕ್ತ ವಿಧಾನವಾಗಿರುತ್ತದೆ. ಹಾಗೆ ಪರಿಪಾಠಮಾಡಿದ್ದಲ್ಲಿ ಒಂದೇ ವರ್ಷದಲ್ಲಿ ಪೂರ್ತಿ ಸತ್ಯವೇದವನ್ನು ಓದಿ ಮುಗಿಸಬಹುದಾಗಿದೆ. ನೀವು ಓದುತ್ತಾ ಯಾವ ಭಾಗಕ್ಕೆ ಬಂದಿರುವಿರೆಂದು ಅರಿತಿರಲು ಪ್ಲೇಸ್ ಮಾರ್ಕರ್‌ಗಳನ್ನು ಉಪಯೋಗಿಸಿರಿ. ಸತ್ಯವೇದವನ್ನು ನಿಮಗೆ ಓದಲು ಸಹಾಯಿಸುವ ಬಹಳಷ್ಟು ಸತ್ಯವೇದ ಆಧಾರಿತ ಏಪ್ಸ್ ಹಾಗೂ ವೆಬ್‌ಸೈಟ್‌ಗಳು ಬಹಳಷ್ಟು ವಿಧಾನ ಹಾಗೂ ಭಾಷೆಗಳಲ್ಲಿ ಲಭ್ಯವುಂಟು. www.youversion.com ಹಾಗೂ www.biblegateway.com ಗಳನ್ನು ಪ್ರಯತ್ನಿಸಿರಿ.

## ಸತ್ಯವೇದ ಧ್ಯಾನ ಹಾಗೂ ದೇವರ ವಾಕ್ಯಗಳನ್ನು ಹಿಡಿದು ಪ್ರಾರ್ಥಿಸುವಿಕೆ

ದೇವರ ವಾಕ್ಯವನ್ನು ಓದುವುದರೊಂದಿಗೆ ದೇವರ ವಾಕ್ಯವನ್ನು ಅಧ್ಯಯನ ಮಾಡುವುದು ಬಹಳ ಪ್ರಾಮುಖ್ಯವಾಗಿದೆ ***(ಯೆಹೋಶುವ 1:8; ಕೀರ್ತನೆ 1:1–3; ಕೀರ್ತನೆ 119:15–16; ಇಬ್ರಿಯ 4:12).*** ವಾಕ್ಯದಿಂದ ತೋಯಿಸಲ್ಪಡುವದು ನಿಮ್ಮನ್ನು ಆತ್ಮೀಕ ಪಕ್ವತೆಗೂ ಫಲಕೊಡುವಿಕೆಗೂ ಸಹಾಯಿಸುತ್ತದೆ, ಸತ್ಯವೇದವನ್ನು ಅನೇಕ ವಿಧಾನದಲ್ಲಿ ಅಧ್ಯಯನ ಮಾಡಬಹುದಾಗಿದೆ. ಕೆಳಗೆ ಕೊಟ್ಟಿರುವ ಕೆಲವು ಮಾರ್ಗದರ್ಶಿಗಳು ನಿಮಗೆ ಸಹಕಾರಿಯಾಗಬಲ್ಲದು.

ಆತನ ವಾಕ್ಯವನ್ನು ಪ್ರತಿದಿನ ಅಧ್ಯಯನ ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳಿರಿ. ನಿಮಗೀಗ ಅರ್ಥವಾಗದೇ ಇರುವ ಸತ್ಯವೇದದ ಯಾವ ಸತ್ಯಾರ್ಥದ ಬಗ್ಗೆಯೂ ಚಿಂತಿಸದಿರಿ.

*"ನನ್ನ ಕಣ್ಣು ತೆರೆ, ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು"* ***(ಕೀರ್ತನೆ 119:18).***

*"ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ, ನನ್ನ ದಾರಿಗೆ ಬೆಳಕೂ ಆಗಿದೆ"* ***(ಕೀರ್ತನೆ 119:105).***

---

[10] *ಕ್ಯಾಂಪ್‌ಬೆಲ್ ಮೆಕಾಲಪೆನ್‌ರವರ, ಎಕ್ಸಪ್ಲೇನಿಂಗ್ ಬಿಬ್ಲಿಕಲ್ ಮೆಡಿಟೇಷನ್, 2004, ಸಾವಿರಿಯನ್ ವರ್ಲ್ಡ್ ಲಿಮಿಟೆಡ್.*

• ಪ್ರಾರ್ಥಿಸಿರಿ ಹಾಗೂ ಸತ್ಯವೇದದ ಯಾವ ಪುಸ್ತಕ(ಭಾಗ)ವನ್ನು ಅಧ್ಯಯನ ಮಾಡಬೇಕೆಂಬುದನ್ನು ಕರ್ತನಲ್ಲಿ ಕೇಳಿಕೊಳ್ಳಿರಿ.

• ಮೌನವಾಗಿದ್ದು ಕರ್ತನೊಂದಿಗಿನ ನಿಮ್ಮ ಸಂಬಂಧವು ಸರಿಯಾಗಿದೆಯೋ ಎಂದು ಪರೀಕ್ಷಿಸಿರಿ. ಒಂದು ನಿಮಿಷ ಆತನು ನಿಮಗೆ ತೋರಿಸಿದ ಕೃಪೆ ಹಾಗೂ ಕರುಣೆಗಾಗಿ ಸ್ತುತಿಸಿರಿ. ಆತನ ಶ್ರೇಷ್ಠತ್ವವನ್ನು ನೆನೆಸಿ ಆತನನ್ನು ಆರಾಧಿಸಿ ಮಹಿಮೆಪಡಿಸಿರಿ.

• ಆತನಿಂದ ಆಲೋಚನೆ ಹೊಂದುವುದಕ್ಕಾಗಿ ಆತನನ್ನೇ ಹೊಂದಿ (ಆಶ್ರಯಿಸಿ) ಕೊಳ್ಳಿರಿ.

ನೀವೀಗ ಆತನು ತಿಳಿಯಪಡಿಸಿದ ವಾಕ್ಯಭಾಗವನ್ನು ಮೌನವಾಗಿ ಅನೇಕ ಸಾರಿ ಓದಿರಿ.

1) ನಿಮಗೆ ಲಭಿಸಿರುವ ಆಲೋಚನೆಗಳಾವುವು?

2) ದೇವರು ನಿಮಗೆ ತಿಳಿಯಪಡಿಸುತ್ತಿರುವ ವಿಷಯಗಳಾವುವು? (ಉದಾ: ಒಂದು ಅಪ್ಪಣೆ, ಎಚ್ಚರಿಕೆ, ಅನುಸರಿಸಬೇಕಾದ ಮಾದರಿ, ಆತನ ಗುಣಸ್ವಭಾವಗಳು, ಆತನನ್ನು ಸ್ತುತಿಸಬೇಕಾದ ವಿಷಯಗಳು... ಇತ್ಯಾದಿ).

3) ಪ್ರಾರ್ಥನೆಯೊಂದಿಗೆ ಆತನ ಬೋಧನೆಗಳಿಗೆ ಪ್ರತಿಕ್ರಿಯಿಸಿರಿ, ಆನಂತರ ಪ್ರಾರ್ಥನೆಯಲ್ಲಿ ಮುಂದುವರೆಯುತ್ತಾ ನಿಮ್ಮ ಕುಟುಂಬ, ಸಭೆ, ದೇಶ, ಅದರಲ್ಲೂ ವಿಶೇಷವಾಗಿ ಇಸ್ರೇಲ್ ಗಾಗಿಯೂ ಪ್ರಾರ್ಥಿಸಿರಿ.[11]

ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದಿಡಿರಿ – ವಾಕ್ಯಭಾಗದ ಸತ್ಯಾರ್ಥಕ್ಕನುಗುಣವಾಗಿ ದೇವರು ನಿಮ್ಮ ಮನಸ್ಸನ್ನು ವಿಶಿಷ್ಟ ಅಗತ್ಯತೆಯೆಡೆಗೆ ನಡೆಸಬಹುದು. ಆತನ ಕಾರ್ಯಗಳನ್ನು ನಿಯಮಿತಗೊಳಿಸಬೇಡಿರಿ.

ನಿಮಗಿನ್ನೂ ಹೆಚ್ಚಿನ ಕಾಲಾವಕಾಶವಿದ್ದಲ್ಲಿ ಅದಕ್ಕೆ ಸಂಬಂಧಿಸಿದ ಇತರೆ ವಾಕ್ಯಭಾಗಗಳನ್ನೂ ಗಮನಿಸಿರಿ ಹಾಗೂ ದೇವರು ನಿಮಗೆ ಪ್ರಕಟಿಸಿರುವ ವಿಷಯಗಳ ಬಗ್ಗೆ ಅವಲೋಕನ ಮಾಡಿರಿ.

---

[11] *ಈ ವಿಧದ ಪ್ರಾರ್ಥನೆಗಳ ಹೆಚ್ಚಿನ ಮಾಹಿತಿಗಳಿಗಾಗಿ ದಯವಿಟ್ಟು ಲಿಡಿಯಾ ಫೆಲೋಶಿಪ್ ಇಂಟರ್‌ನ್ಯಾಷನಲ್ www.lydiafellowshipinternational.org ಸಂಪರ್ಕಿಸಿರಿ.*

# ಸೌಖ್ಯಕ್ಕಾಗಿನ ಪ್ರಾರ್ಥನೆ [12]

ಯೇಸು ಈ ಮುಂದಿನ ಅಪ್ಪಣೆಗಳನ್ನು ಪ್ರತಿಯೊಬ್ಬ ವಿಶ್ವಾಸಿಗೂ ಕೊಟ್ಟಿರುವನು ***(ಮತ್ತಾಯ 28:18–20; ಮಾರ್ಕ 16:15–18; ಲೂಕ 24:46–49; ಯೋಹಾನ 20:21–22).*** ಆತನ ಶಿಷ್ಯರು ಎಲ್ಲೆಲ್ಲಿಯೂ ಹೊರಟುಹೋಗಿ ಸುವಾರ್ತೆಯನ್ನು ಸಾರಿದರು ಹಾಗೂ ಕರ್ತನು ಅವರ ಕೂಡ ಕೆಲಸ ಮಾಡುತ್ತಾ ಸೂಚಕ ಕಾರ್ಯಗಳಿಂದ ಸುವಾರ್ತೆಯ ವಾಕ್ಯವನ್ನು ಬಲಪಡಿಸುತ್ತಾ ಇದ್ದನು ***(ಮಾರ್ಕ 16:20*** ಹಾಗೂ ಸಂಪೂರ್ಣ ಅಪೋಸ್ತಲರ ಕೃತ್ಯಗಳ ಪುಸ್ತಕ***).***

ರೋಗಿಗಳನ್ನು ಗುಣಪಡಿಸುವುದು ಹಾಗೂ ಇತರೆ ಸೂಚಕ ಕಾರ್ಯಗಳು ಸುವಾರ್ತಾ ಪ್ರಸಂಗದ ಭಾಗವಾಗಿದೆ. ಪಶ್ಚಾತ್ತಾಪಪಡುವವರಿಗೆಲ್ಲಾ ಯೇಸುವಿನ ಮೂಲಕ ಪಾಪಗಳ ಕ್ಷಮಾಪಣೆಯಾಗುತ್ತದೆ ಎಂಬುದೇ ಸುವಾರ್ತಾ ಸಂದೇಶವಾಗಿದೆ.

ಪ್ರತಿಯೊಬ್ಬ ವಿಶ್ವಾಸಿಗೂ ರೋಗಿಗಳನ್ನು ಗುಣಪಡಿಸುವಂತೆ ಯೇಸು ಆಜ್ಞಾಪಿಸಿರುವನು ***(ಮತ್ತಾಯ 10:1, 8; ಮಾರ್ಕ 6:12–13; ಲೂಕ 9:1–2).*** ರೋಗಿಗಳಿಗಾಗಿ ಕೇವಲ ಪ್ರಾರ್ಥಿಸುವುದಾಗಿರದೆ ಗುಣಪಡಿಸುವಂತೆ ನಮ್ಮೆಲ್ಲರಿಗೂ ಹೇಳಿರುವನು. ಕೆಲವರಿಗೆ ದೇವರು ಆ ವರವನ್ನು ಕೊಟ್ಟಿರುವನು ***(1 ಕೊರಿ 12:9, 28).*** ಸೌಖ್ಯಕ್ಕಾಗಿ ಪ್ರಾರ್ಥಿಸುತ್ತಿರುವುದಾದಲ್ಲಿ ಅವರನ್ನು ಗುಣಪಡಿಸಲು ದೇವರು ನಮ್ಮನ್ನು ಉಪಯೋಗಿಸಬಲ್ಲನು. ವಾಗ್ದಾನ ಮಾಡಿದಾತನೆಂದಿಗೂ ಸುಳ್ಳಾಡನು ***(ಇಬ್ರಿಯ 6:18).***

ಸೌಖ್ಯಕ್ಕಾಗಿ ಪ್ರಾರ್ಥಿಸುವಾಗ ಈ ಕೆಳಗಿನ 3 ವಾಗ್ದಾನಗಳು ನಮಗೆ ಭರವಸೆ (ಧೈರ್ಯ) ಯನ್ನು ಕೊಡುತ್ತದೆ:

1. *"ಆತನ ಬಾಸುಂಡೆಗಳಿಂದ ನಮಗೆ ಗುಣವಾಯಿತು."* ***(ಯೆಶಾ 53:5; 1 ಪೇತ್ರ 2:24)***
2. *"ನಾವೀಗ ಆತನಿಂದ ಸ್ಥಾಪಿತವಾದ ಹೊಸ (ಒಳ್ಳೆಯ) ನಿಯಮದಲ್ಲಿದ್ದೇವೆ."* ***(ಇಬ್ರಿಯ 9:12–15)***
3. *"ದೇವರ ರಾಜ್ಯವು ನಿಮ್ಮಲ್ಲಿಯೇ ಇದೆ."* ***(ಲೂಕ 17:21)***

ಸೌಖ್ಯಕ್ಕಾಗಿಯೂ ಅದ್ಭುತಗಳಿಗಾಗಿಯೂ ಪ್ರಾರ್ಥಿಸುವಂತೆ ನಮ್ಮನ್ನು ಪ್ರೋತ್ಸಾಹಿಸುವ ಇನ್ನಿತರ ವಾಕ್ಯಭಾಗಗಳು:

> *"ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯಧಿಕವಾದುದ್ದನ್ನು ಮಾಡಲು ದೇವರು ಶಕ್ತನಾಗಿದ್ದಾನೆ."* ***(ಎಫೆಸ 3:20)***
>
> *"ದೇವರಿಂದ ಎಲ್ಲವೂ ಸಾಧ್ಯವೇ."* ***(ಮತ್ತಾಯ 19:26)***
>
> *"ದೇವರು ಯೇಸುವನ್ನು ಪ್ರೀತಿಸಿದಂತೆಯೇ ನಮ್ಮನ್ನೂ ಪ್ರೀತಿಸುತ್ತಿರುವನು."* ***(ಯೋಹಾನ 17:23)***

---

*[12] ಗುಣಪಡಿಸುವಿಕೆಯ ವಿಷಯದಲ್ಲಿನ ಹೆಚ್ಚಿನ ಭಾಗವನ್ನು ರ್‍ಯಾಂಡಿಕ್ಲಾರ್ಕ್‌ರವರ 'ಸರ್ವಲೋಕ ಉಜ್ಜೀವನ' (2010) ಎಂಬ ವಿಷಯದಲ್ಲಿನ ಸೆಮಿನಾರ್ ಹಾಗೂ ಚಾರ್ಲ್ಸ್ ಮತ್ತು ಫ್ರಾನ್ಸಿಸ್ ಹಂಟರ್‌ರವರುಗಳ ಡಿವಿಡಿ ಸೆಮಿನಾರ್ ಮೂಲಗಳಿಂದ ಆರಿಸಿಕೊಳ್ಳಲಾಗಿರುತ್ತದೆ.*

*"ಯೇಸು ಹೇಳಿದ್ದೇನೆಂದರೆ – 'ನಿಮಗೆ ನಿಜ ನಿಜವಾಗಿ ಹೇಳುತ್ತೇನೆ, ನನ್ನನ್ನು ನಂಬುವವನು ನಾನು ನಡೆಸುವ ಕ್ರಿಯೆಗಳನ್ನು ತಾನೂ ನಡೆಸುವನು ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡೆಸುವನು. ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ, ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನು ನೆರವೇರಿಸುವೆನು. ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವುದು. ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು.' " **(ಯೋಹಾನ 14:12–14)***

*"ಯೇಸು ಹೇಳಿದ್ದೇನೆಂದರೆ – 'ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವುದಾದರು ಒಂದು ಕಾರ್ಯದ ವಿಷಯವಾಗಿ ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಆಗುವುದೆಂದು ನಿಮಗೆ ಹೇಳುತ್ತೇನೆ.' " **(ಮತ್ತಾಯ 18:19)***

ಯೇಸು ಜನರನ್ನು ಮುಟ್ಟಿ ಗುಣಪಡಿಸಿದಂತೆ ನಮ್ಮ ಹಸ್ತಗಳನ್ನೂ ಸಹ ಗುಣಪಡಿಸಲು ಸಹಾಯಿಸುವಂತೆ ದೇವರನ್ನು ಬೇಡಿಕೊಳ್ಳೋಣ. ಅವರನ್ನು ಮುಟ್ಟುವ ಮೊದಲು ಅದಕ್ಕೆ ಅವರ ಅಡ್ಡಿಯೇನೂ ಇಲ್ಲವೆಂಬುದನ್ನು ಖಾತರಿಪಡಿಸಿಕೊಳ್ಳಿರಿ. ರೋಗವಿರುವಲ್ಲಿ ಅಥವಾ ಸೌಖ್ಯ ಅಗತ್ಯವಿರುವಲ್ಲಿ ಮುಟ್ಟಿ ಅವರ ಖಾಸಗೀತನಕ್ಕೆ ಅಡ್ಡಿಯಾಗದಂತೆ ಎಚ್ಚರವಹಿಸಿ ಪ್ರಾರ್ಥಿಸಿರಿ.[13]

ಆ ನಂತರ ಆ ವ್ಯಕ್ತಿಗಾಗಿ ನಾವು ಪ್ರಾರ್ಥಿಸಬಹುದು. ನಾವು ಅವರನ್ನು ಆಶೀರ್ವದಿಸಬಹುದಾಗಿದೆ ಹಾಗೂ ಅವರನ್ನು ಆಶೀರ್ವದಿಸಿ ಗುಣಪಡಿಸುವಂತೆ ಪ್ರಾರ್ಥಿಸಬಹುದಾಗಿದೆ. ಗುಣಪಡಿಸಲು ನಮ್ಮನ್ನು ಉಪಯೋಗಿಸುವ ವಿಷಯದಲ್ಲಿನ ವಾಗ್ದಾನಗಳನ್ನು ನಮ್ಮ ಜ್ಞಾಪಕಕ್ಕೆ ತರೋಣ: *"ನಿನ್ನ ಬಾಸುಂಡೆಗಳಿಂದ ಈ ವ್ಯಕ್ತಿ ಸೌಖ್ಯನಾಗಿರುವನು, ನಾನು ಹೊಸ ಒಡಂಬಡಿಕೆಗೆ ಅನುಗುಣವಾಗಿ ಹೊಸದಾಗಿ ಹುಟ್ಟಿರುವುದರಿಂದಲೂ ಹಾಗೂ ನಿನ್ನ ರಾಜ್ಯವು ನನ್ನೊಳಗಿರುವುದರಿಂದಲೂ ದಯವಿಟ್ಟು ಅವರನ್ನು ಗುಣಪಡಿಸಿರಿ"* ಯೇಸುವಿನ ಅಧಿಕಾರವುಳ್ಳ ನಾಮದಲ್ಲಿ ಬೇಡಿಕೊಂಡಿದ್ದೇವೆ, ಆಮೆನ್.

ಅವರನ್ನು ಸ್ಪರ್ಶಿಸುವಾಗ ಆ ವ್ಯಕ್ತಿಗೆ ಈ ಮುಂದಿನ ರೀತಿಯ ಕೆಲವು ಪ್ರಶ್ನೆಗಳನ್ನು ಕೇಳುವುದು ಸೂಕ್ತ: "ಈ ರೋಗ ಮೊದಲು ಕಾಣಿಸಿಕೊಂಡದ್ದು ಯಾವಾಗ?" ಅಥವಾ "ಈ ಸನ್ನಿವೇಶದಲ್ಲಿ ನಿಮ್ಮಲ್ಲೇನು ಸಂಭವಿಸುತ್ತಿದೆ?" ಅವರಲ್ಲಿ ರೋಗವು ಕಾಣಿಸಿಕೊಳ್ಳುವ ಮೊದಲು ಅವರನ್ನು ಗಾಯ (ವೇದನೆ) ಪಡಿಸುವ ಸಂಭವವೇನಾದರೂ ನಡೆದಿದ್ದಲ್ಲಿ ಅಂತಹವರನ್ನು ಕ್ಷಮಿಸುವಂತೆಯಾಗಲೀ ಅಥವಾ ತಮ್ಮಿಂದಲೇ ಅಂತಹ ಘಟನೆಗಳೇನಾದರೂ ಸಂಭವಿಸಿದ್ದಲ್ಲಿ ತಮ್ಮನ್ನೇ ಕ್ಷಮಿಸುವಂತೆ ದೇವರನ್ನು ಬೇಡಿಕೊಳ್ಳುವಂತೆ ಸಹಾಯಿಸಬಹುದಾಗಿದೆ. ಕ್ಷಮಿಸದಿರುವಿಕೆಯು ಸೌಖ್ಯವನ್ನೂ, ಪ್ರಾರ್ಥನೆಯ ಉತ್ತರವನ್ನೂ ತಡೆಯುತ್ತದೆ ***(ಮಾರ್ಕ 11:22–25)***. ಕ್ಷಮಿಸದಿರುವಿಕೆಯು ರೋಗ ಹಾಗೂ ವೇದನೆಗಳಿಗೂ ಕಾರಣವಾಗಿ ಮಾರ್ಪಡಬಲ್ಲದು ***(ಮತ್ತಾಯ 18:34–35)***. ಕ್ಷಮಿಸುವುದು ಮತ್ತು ಕ್ಷಮಿಸುವಂತೆ ಇತರರನ್ನು ಪ್ರೋತ್ಸಾಹಿಸುವುದು ಬಹಳ ಪ್ರಾಮುಖ್ಯವಾಗಿದೆ ಕಾರಣ ಕ್ಷಮಿಸುವಿಕೆಯು ಸೌಖ್ಯವನ್ನುಂಟುಮಾಡುತ್ತದೆ.

*[13] ಚಾರ್ಲ್ಸ್ ಮತ್ತು ಫ್ರಾನ್ಸಿಸ್‌ರವರ ಹೌಟು ಹೀಲ್ ದ ಸಿಕ್, 1981, ವ್ಹಿಟೇಕರ್ ಹೌಸ್ ಇವರಿಬ್ಬರ 7 ಗಂಟೆಗಳ ಪವರ್ ಪ್ಯಾಕ್ ಡಿವಿಡಿ ಸೆಟ್, ಹಂಟರ್ ಮಿನಿಸ್ಟ್ರೀಸ್ ಮೂಲಗಳಿಂದ ಪಡೆಯಲಾಗಿದೆ.*

ನಾವು ಪ್ರಾರ್ಥಿಸುತ್ತಿರುವಾಗಲೇ ಕೆಲವೊಮ್ಮೆ ಅವರಿಗೆ ಅಧಿಕ ಝುಳ ಅಥವಾ ನಡುಗುವಿಕೆ ಅಥವಾ ವಿದ್ಯುಚ್ಛಕ್ತಿಯೋಪಾದಿಯ ಅನುಭವಗಳುಂಟಾಗಬಹುದಾದ್ದರಿಂದ ಅವರಿಗೇನಾದರೂ ಅನುಭವ ಗಳಾಗುತ್ತಿದೆಯೋ ಎಂದು ಅವರನ್ನು ಕೇಳಬಹುದಾಗಿದೆ. ಈ ರೀತಿಯ ಅನುಭವಗಳಾಗುತ್ತಿದ್ದಲ್ಲಿ ನಾವು ಇನ್ನೂ ಅಧಿಕವಾದ ಉತ್ಸಾಹದಿಂದ ಅವರಿಗಾಗಿ ಪ್ರಾರ್ಥಿಸಬಹುದಾಗಿದೆ. ಈ ರೀತಿಯ ಗುರುತುಗಳು ಇದ್ದರೂ ಇಲ್ಲದಿದ್ದರೂ ಆತನನ್ನು ವಂದಿಸಿರಿ.

ಶರೀರದ ಭಾಗಗಳನ್ನು ಬಾಯಿಮಾತಿನಿಂದ ಗುಣಪಡಿಸುವ ಅಧಿಕಾರವನ್ನು ಯೇಸು ನಮಗೆ ಕೊಟ್ಟಿರುವನು. ಉದಾ: "ಯೇಸುವಿನ ನಾಮದಲ್ಲಿ ಕಾಲು ನೇರವಾಗಲಿ", "ಯೇಸುವಿನ ನಾಮದಲ್ಲಿ ರಕ್ತದಲ್ಲಿನ ಸಕ್ಕರೆಯ ಪ್ರಮಾಣವು ಸರಿಯಾದ ಮಟ್ಟಕ್ಕೆ ಇಳಿಯಲಿ". ವೇದನೆ ಅಥವಾ ರೋಗಕ್ಕೆ ಬಿಟ್ಟು ತೊಲಗುವಂತೆ ನಾವು ಹೇಳಬಹುದಾಗಿದೆ. ಉದಾ: "ಯೇಸುವಿನ ನಾಮದಲ್ಲಿ ತಲೆನೋವು ತೊಲಗಲಿ". ಇತರರ ಖಾಯಿಲೆಗಳ ಬಗ್ಗೆ ನಮಗೆ ಹೆಚ್ಚು ಮಾಹಿತಿಗಳಿರುವಷ್ಟು ನಿಖರವಾಗಿ ಅವರಿಗಾಗಿ ಪ್ರಾರ್ಥಿಸಬಹುದು. ಆ ವ್ಯಕ್ತಿಯು ಗುಣವಾಗದಿದ್ದಲ್ಲಿ ಪ್ರಾರ್ಥಿಸುವುದನ್ನು ನಿಲ್ಲಿಸಬೇಡಿ. ಇನ್ನೂ ಅಧಿಕ ಸಮಯ ಪ್ರಾರ್ಥಿಸಿರಿ. ಸಮಯ ಇನ್ನೂ ಇಲ್ಲದಿದ್ದಲ್ಲಿ ಅವರ ಸೌಖ್ಯಕ್ಕಾಗಿ ಅವರೇ ಪ್ರಾರ್ಥಿಸುವ ಸಲಹೆಯನ್ನೀಯಿರಿ. ಅವರ ಸೌಖ್ಯಕ್ಕಾಗಿ ನಾವು ಪ್ರಾರ್ಥಿಸುವವರಾಗಿರೋಣ. ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥಿಸಬೇಕೆಂದು ಯೇಸು ತನ್ನ ಶಿಷ್ಯರಿಗೆ ಕಲಿಸಿರುವನು ***(ಲೂಕ 18:1–8).***

> **ಸಾಕ್ಷಿ**
> **ಯೇಸು ಅವಳ ಕೈಯನ್ನು ಗುಣಪಡಿಸಿದ್ದು**
> *"ಸೌಖ್ಯಕ್ಕಾಗಿ ಪ್ರಾರ್ಥಿಸಬೇಕಾದ ವಿಧಾನವನ್ನು ವಯಸ್ಕಳಾದ ಹೆಂಗಸೊಬ್ಬಳಿಗೆ ಕಲಿಸಿಕೊಟ್ಟೆನು. ಆನಂತರ ಸೊಂಟದಲ್ಲಿ ನೋವಿದ್ದ ಯುವತಿಯೊಬ್ಬಳ ಭುಜದ ಮೇಲೆ ಕೈಯಿಟ್ಟು ಸೊಂಟದ ಕೀಲುಗಳು ಸರಿಯಾಗಿ ನೋವು ಇಲ್ಲವಾಗಲಿ ಎಂದು ಗದರಿಸಿ ಕೆಲವು ನಿಮಿಷಗಳ ಕಾಲ ಪ್ರಾರ್ಥಿಸಿದಳು. ಆನಂತರ ಏನಾಯಿತೆಂದು ಅವಳನ್ನು ವಿಚಾರಿಸಲಾಗಿ ಆ ಯುವತಿಯ ಸೊಂಟದ ನೋವು ನೀಗಲಿಲ್ಲ, ಆದರೆ ಆ ವಯಸ್ಕಳಾದ ಹೆಂಗಸಿನ 'ಕೈ' ಸಂಪೂರ್ಣವಾಗಿ ವಾಸಿಯಾಯಿತೆಂದಳು (ಕೆಲವು ವರ್ಷಗಳ ಹಿಂದೆ ಆ ಹೆಂಗಸು ತನ್ನ ಕೈಯಲ್ಲಿನ ಮೂಳೆಯೊಂದನ್ನು ಮುರಿದುಕೊಂಡಿದ್ದು ಬಹಳ ಸಂಕಟ ಅನುಭವಿಸುತ್ತಿದ್ದು ಈಗವಳು ಸಂಪೂರ್ಣ ಸೌಖ್ಯದಿಂದಿರುವಳು)."*

ನಮ್ಮ ಪ್ರಾರ್ಥನೆಗಳಿಗೆ ಪ್ರತ್ಯುತ್ತರವಾಗಿ ಯೇಸು ಮಾಡುತ್ತಿರುವ ಪ್ರತಿಯೊಂದು ಚಿಕ್ಕಪುಟ್ಟ ಸೌಖ್ಯಗಳಿಗಾಗಿಯೂ ಯೇಸುವನ್ನು ವಂದಿಸೋಣ. ದೇವರು ಜನರನ್ನು ತನ್ನ ಬಳಿಗೆ ಆಕರ್ಷಿಸುವ ಉದ್ದೇಶದಿಂದ ಅವರನ್ನು ಗುಣಪಡಿಸುವನು.

*"ದೇವರ ದಯೆಯು ನಿನ್ನನ್ನು ಮಾನಸಾಂತರಕ್ಕೆ ನಡೆಸುತ್ತದೆ"* ***(ರೋಮಾ 2:4).***

ಯೇಸು ತಾನು ಹೆಚ್ಚು ಅದ್ಭುತಗಳನ್ನು ನಡೆಸಿದ ಪಟ್ಟಣ ಹಾಗೂ ಊರುಗಳನ್ನು ಗದರಿಸಿರುವನು. *"ಕಾರಣ ಅವರು ತಮ್ಮ ಪಾಪಗಳನ್ನು ಬಿಟ್ಟು ದೇವರ ಕಡೆಗೆ ತಿರುಗಿರಲಿಲ್ಲ"* ***(ಮತ್ತಾಯ 11:20).***

ದೇವರು ನಮ್ಮ ಪ್ರಾರ್ಥನೆಗಳಿಗೆ ಉತ್ತರ ಕೊಡುವನು. ಪ್ರಾರ್ಥನೆಗಳಿಗೆ ಹೆಚ್ಚು ಉತ್ತರಗಳು ಸಿಗುತ್ತಿರುವುದನ್ನು ಗಮನಿಸಿದಾಗ ಇನ್ನೂ ಹೆಚ್ಚಿನ ಹಾಗೂ ಕಠಿಣ ವಿಷಯಗಳಿಗಾಗಿ ಪ್ರಾರ್ಥಿಸಲು ಪ್ರೋತ್ಸಾಹವುಂಟಾಗುತ್ತದೆ. ಉದಾ: – ಸಂಬಂಧಗಳಿಗಾಗಿ, ಕುಟುಂಬಗಳಿಗಾಗಿ, ಸಭೆಗಳಿಗಾಗಿ, ಪಟ್ಟಣಗಳಿಗಾಗಿ, ರಾಜ್ಯಗಳಿಗಾಗಿಯೂ, ದೇಶಗಳಿಗಾಗಿಯೂ, ವ್ಯಾಪಾರ ಹಾಗೂ ಕೃಷಿಕ್ಷೇತ್ರ ಹಾಗೂ ದೇವರ ಬಿಡುಗಡೆಯ (ಸೌಖ್ಯದ) ಹಸ್ತ ಅಗತ್ಯವೆಂದು ನಿಮಗೆ ತೋರುವ ಎಲ್ಲಾ ಕ್ಷೇತ್ರಗಳಿಗಾಗಿಯೂ ಪ್ರಾರ್ಥಿಸಿರಿ. ಇವೆಲ್ಲವುಗಳನ್ನು ನಿರ್ಮಿಸಿದವನು ದೇವರೇ ಆಗಿರುವುದರಿಂದ ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಶ್ರೇಷ್ಟವಾದ ರೀತಿಯಲ್ಲಿ ಆಶೀರ್ವದಿಸಿ ಸೌಖ್ಯಪಡಿಸಲು ಆತನು ಶಕ್ತನಾಗಿದ್ದಾನೆ ***(ಎಫೆಸ 3:20).***

# ಇತರರೊಂದಿಗೂ ದೇವರೊಂದಿಗೂ ಸರಿಯಾದ ಸಂಬಂಧ ಹೊಂದುವಿಕೆ

ಇತರರೊಂದಿಗೂ ದೇವರೊಂದಿಗೂ ಸರಿಯಾದ ಸಂಬಂಧ ಹೊಂದುವಿಕೆಯ ಬಗ್ಗೆ ಬೈಬಲ್ ಹೇಳುತ್ತಿರುವುದೇನೆಂಬುದನ್ನು ಅರಿಯಲು ಈ ಅಧ್ಯಯನವು ನಮಗೆ ಸಹಾಯಿಸುತ್ತದೆ. ಈ ಸತ್ಯವೇದ ಅಧ್ಯಯನವನ್ನು ನೀವು ವೈಯುಕ್ತಿಕವಾಗಿಯೂ ಅಥವಾ ಚಿಕ್ಕ ಗುಂಪುಗಳಲ್ಲಿಯೂ ನಡೆಸಬಹುದಾಗಿದೆ. ಕೊಟ್ಟಿರುವ ವಾಕ್ಯಭಾಗಗಳಿಗೆ ಅನುಗುಣವಾಗಿ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಿರಿ. ಇದನ್ನು ನಿಮ್ಮ ಜೀವಿತ ಹಾಗೂ ಸೇವೆಗಳಲ್ಲಿ ಹೇಗೆ ಕಾರ್ಯಗತಗೊಳಿಸಬಹುದೆಂಬುದನ್ನು ಅವಲೋಕಿಸಿರಿ.

1. ಯೇಸುಕ್ರಿಸ್ತನ ಸುವಾರ್ತೆಯ ಪ್ರಮುಖ (ಹೃದಯ) ಸಂದೇಶವೇನು?
   ***(ಲೂಕ 24:47; ಅ.ಕೃ. 26:18)***

2. ಕ್ಷಮಾಪಣೆ ಹೊಂದುವುದಕ್ಕಾಗಿ ನಾವು ಮಾಡಬೇಕಿರುವುದೇನು?
   ***(ಕೀರ್ತನೆ 32:1–5; 1 ಯೋಹಾನ 1:8–10)***

3. ಕ್ಷಮಾಪಣೆ ಹೊಂದುವುದರಿಂದ ಲಭ್ಯವಿರುವ ಲಾಭಗಳಾವುವು?
   ***(ರೋಮಾ 6:23; ಯಾಕೋಬ 5:16; ಅ.ಕೃ. 3:19–20)***

4. ನಮಗೆ ವಿರುದ್ಧವಾಗಿ ತಪ್ಪು ಮಾಡಿರುವವರನ್ನು ನಾವೇಕೆ ಕ್ಷಮಿಸಬೇಕು?
   ***(ಮತ್ತಾಯ 6:12, 14, 15; ಮತ್ತಾಯ 18:22–35)***

5. ನಮಗೆ ವಿರುದ್ಧವಾಗಿ ಸತತವಾಗಿ ಪಾಪ (ತಪ್ಪು) ಮಾಡುತ್ತಿರುವವರ ಬಗ್ಗೆ ನಮ್ಮ ಮನೋಭಾವವು ಹೇಗಿರಬೇಕು? ***(ಮತ್ತಾಯ 18:21–22; ಕೊಲೊಸ್ಸೆ 3:13)***

6. ಮಾನಸಾಂತರ ಎಂದರೇನು? ***(ಲೂಕ 3:8; 2 ಕೊರಿ 7:9–10)***

7. ವ್ಯಕ್ತಿಯೊಬ್ಬನು ತನ್ನ ಮನೋಭಾವ (ನಡವಳಿಕೆ) ಯನ್ನು ವಿನೂತನಪಡಿಸಿಕೊಳ್ಳುವುದು ಹೇಗೆ? ***(ರೋಮಾ 7:25 (18–25); ಇಬ್ರಿಯ 12:24)***

8. ಚಿಕ್ಕ ಗುಂಪಿಗೆ ಚರ್ಚೆಗಾಗಿ ಪ್ರಶ್ನೆ:
   ನಿಮ್ಮ ಸ್ನೇಹಿತ/ಗಂಡ/ಹೆಂಡತಿ ಯನ್ನು ನೋಯಿಸಿರುವ ನೀವು ಅವರಿಂದ ಕ್ಷಮಾಪಣೆಯನ್ನು ಹೇಗೆ ಬೇಡಿ (ಕೇಳಿ) ಕೊಳ್ಳಲಿರುವಿರಿ?

9. ಮೌನವಾಗಿ ನಿಮ್ಮಲ್ಲೇ ನೀವು ಅವಲೋಕಿಸಿಕೊಳ್ಳಬೇಕಾದ ವಿಷಯ:–
   ನೀವು ದೇವರನ್ನೇ ದುಃಖಪಡಿಸಿರಬಹುದಾದ ಅಥವಾ ವೇದನೆಪಡಿಸಿರಬಹುದಾದ ವಿಷಯಗಳಿಗಾಗಿ ಆತನಿಂದ ಕ್ಷಮಾಪಣೆಯನ್ನು ಹೇಗೆ ಕೇಳಿಕೊಳ್ಳುವಿರಿ?

# ಹಣದ ಬಗ್ಗೆ ಸತ್ಯವೇದ ಹೇಳುತ್ತಿರುವದೇನು

ಹಣದ ಬಗ್ಗೆ ಬೈಬಲ್ ಹೇಳುತ್ತಿರುವುದೇನೆಂಬುದನ್ನು ಅರಿಯಲು ಈ ಅಧ್ಯಯನವು ನಮಗೆ ಸಹಾಯಿಸುತ್ತದೆ. ಈ ಸತ್ಯವೇದ ಅಧ್ಯಯನವನ್ನು ನೀವು ವೈಯುಕ್ತಿಕವಾಗಿಯೂ ಅಥವಾ ಚಿಕ್ಕ ಗುಂಪುಗಳಲ್ಲಿಯೂ ನಡೆಸಬಹುದಾಗಿದೆ. ಕೊಟ್ಟಿರುವ ವಾಕ್ಯಭಾಗಗಳಿಗೆ ಅನುಗುಣವಾಗಿ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಿರಿ. ಇದನ್ನು ನಿಮ್ಮ ಜೀವಿತ ಹಾಗೂ ಸೇವೆಗಳಲ್ಲಿ ಹೇಗೆ ಕಾರ್ಯಗತಗೊಳಿಸಬಹುದೆಂಬುದನ್ನು ಅವಲೋಕಿಸಿರಿ.

1. ನಮ್ಮೆಲ್ಲಾ ಹಣಕಾಸಿನ ಸಮಸ್ಯೆಗಳಿಗೆ ಪರಿಹಾರವೇನು?
   ***(ಮತ್ತಾಯ 6:33; ಲೂಕ 12:33–34; 1 ತಿಮೊಥಿ 6:17–19)***

2. ನಾವು ದೇವರಿಗಿಂತಲೂ ಅಧಿಕವಾಗಿ ಹಣಕ್ಕಾಗಿಯೇ ತವಕಪಟ್ಟಲ್ಲಿ ಏನಾಗುತ್ತದೆ?
   ***(ಪ್ರಸಂಗಿ 5:10–11; 1 ತಿಮೊಥಿ 6:10; ಮತ್ತಾಯ 6:24; ಕೊಲೊಸ್ಸೆ 3:5; ವಿಮೋ 20:4–6)***

3. ದಶಮಭಾಗವೆಂದರೇನು? ನಮ್ಮ ದಶಮಭಾಗಗಳನ್ನು ಯಾರಿಗೆ ಸಲ್ಲಿಸಬೇಕಿರುತ್ತದೆ?
   ***(ಆದಿ 28:22; ಮಲಾಕಿ 3:8–12; ಮತ್ತಾಯ 22:21)***

4. ನಾವೇಕೆ ಲಂಚ ಕೊಡುವುದನ್ನು ನಿಲ್ಲಿಸಿಬಿಟ್ಟು ತೆರಿಗೆ ಪಾವತಿಸುವವರಾಗಬೇಕು?
   ***(ವಿಮೋ 23:8; ಜ್ಞಾನೋ 15:27; ಮತ್ತಾಯ 22:17–22; ರೋಮಾ 13:6–7)***

5. ಸಾಲದ ಬಗ್ಗೆ ಸತ್ಯವೇದ ಏನು ಹೇಳುತ್ತಿದೆ? ***(ರೋಮಾ 13:8; ಜ್ಞಾನೋ 22:7)***

6. ಬಡವರಿಗೆ ಸಹಾಯ ಮಾಡುವ ಬಗ್ಗೆ ಸತ್ಯವೇದ ಏನು ಹೇಳುತ್ತಿದೆ?
   ***(ಲೂಕ 6:34–36; ಧರ್ಮೋ 15:10; ಜ್ಞಾನೋ 19:17; ಲೂಕ 12:33–34; 2 ಕೊರಿ 9:6–12)***

7. ನಾವು ಹಣವನ್ನು ಎಲ್ಲಿ ತೊಡಗಿಸಿಕೊಳ್ಳಬೇಕೆಂದು ಸತ್ಯವೇದವು ಹೇಳುತ್ತಿದೆ?
   ***(ಲೂಕ 8:1–3; ಯಾಕೋಬ 5:1–4; 3 ಯೋಹಾನ 5–8)***

8. ಸಭಾನೇತಾರರು ಹಾಗೂ ಸೇವೆಯಲ್ಲಿರುವವರು ತಾವು ಪಡೆದುಕೊಳ್ಳುತ್ತಿರುವ ಕಾಣಿಕೆಗಳಿಂದ ದಶಮಭಾಗವನ್ನೇಕೆ ಸಲ್ಲಿಸಬೇಕು? ***(ಅರಣ್ಯ 18:26–29; 1 ತಿಮೊ 3:1–5)***

**ಕೀರ್ತನೆ 23:1** ನ್ನು ಓದಿ ಧ್ಯಾನಿಸಿರಿ. ತನ್ನ ವಾಕ್ಯದಲ್ಲಿ ದೇವರು ನಿಮಗೆ ತೋರ್ಪಡಿಸಿರುವದಕ್ಕನುಗುಣವಾಗಿ ಪ್ರಾರ್ಥಿಸಿ ಪ್ರತಿಕ್ರಿಯಿಸಿರಿ.